ಅಧ್ಯಕ್ಷರು.—ಚೀಫ್ ಮಿನಿಸ್ಟರ್ ಕೌನ್ಸಿಲ್‌ನಲ್ಲಿ ಇದ್ದಾರೆ, ಅವರು ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಮಾನ್ಯ ಸದಸ್ಯರಾದ ಅಡ್ಯಂತಾಯ್ಯವರಿಗೆ ಈ ದಿವಸ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದೆ. ದುರ್ದೈವದಿಂದ ಈ ಭೊರೂಕಾ ಮಿಲ್ ಏನು ಇದೆ, ಅಲ್ಲಿ ದುರ್ಘಟನೆ ನಡೆದು...

ಅಧ್ಯಕ್ಷರು.—ಸನ್ಮಾನ್ಯ ಬೊಮ್ಮಾಯಿಯವರೇ, ಅದು ಕಾಲಿಂಗ್ ಅಟೆನ್‌ಷನ್ನೋ, ಅಥವಾ ೩೭೨ರ ನಿಯಮವೋ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ೩೭೨ ಮೇಲೆ ಹೇಳುತ್ತಿರುವುದು.

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ಅವತ್ತು ಕೊಟ್ಟಿದ್ದು ಕಾಲಿಂಗ್ ಅಟೆನ್‌ಷನ್. ೩೭೨ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲಿಂಗ್ ಅಟೆನ್‌ಷನ್ ಆದರೆ ಲಿಖಿತವಾಗಿ ಉತ್ತರ ಕೊಟ್ಟಿಲ್ಲ. ನನ್ನ ಹತ್ತಿರ ಕಾಪಿ ಇಲ್ಲ, ನಾಳೆ ಕೊಡುತ್ತೇನೆ.

IV ಗೈರು ಹಾಜರಾಗಲು ಅನುಮತಿ

ಶ್ರೀ ಎಂ. ವೀರಪ್ಪ ಮೊಯಿಲಿರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

"ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ದಿನಾಂಕ ೧೧-೩-೧೯೮೭ ರಿಂದ ೨೩-೩-೧೯೮೭ ರವರೆಗೆ ಸದರಿ ವಿಧಾನ ಸಭಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ."

"ಶ್ರೀ ಎಂ. ವೀರಪ್ಪ ಮೊಯಿಲಿಯವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನ ಸಭೆಯ ಉಪವೇಶನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ" ?

(ಮಾನ್ಯ ಸದಸ್ಯರು ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ.)

ಅಧ್ಯಕ್ಷರು.—ಗೈರುಹಾಜರಾಗಲು ಶ್ರೀ ಎಂ. ವೀರಪ್ಪಮೊಯಿಲಿಯವರಿಗೆ ಅನುಮತಿ ನೀಡಲಾಗಿದೆ. ಈಗ ಬೇಡಿಕೆಯ ಮಂಡನೆ.

V ವಿತ್ತೀಯ ಕಾರ್ಯ ಕಲಾಪಗಳು.

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ ಅಭಿಯಾಚನೆ ಕ್ರಮಾಂಕ ೨೩ - ರಾಜ್ಯದ ಅಬಕಾರಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೨೬,೯೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು

(ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ. ಮತ್ತು ಅದೇ ರೀತಿ ಅಭಿಯಾಚನೆ ಕ್ರಮಾಂಕ ೨೯ ಮತ್ತು ೩೦ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ–೨೯ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ.

ಮಾನ್ಯರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬೭೭೧೩೬೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೦–ಜನಾರೋಗ್ಯ

ಮಾನ್ಯರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬,೮೩,೪೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ರೂ. ೧೨,೦೦,೨೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾಪಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಎಲ್ಲಾ ಬೇಡಿಕೆಗಳು ಸಭೆಯ ಮುಂದೆ ಇದೆ. ಈಗ ಮಾನ್ಯ ಸ್ವಾಮಿರಾವ್ ಅವರು ಚರ್ಚೆಯನ್ನು ಪ್ರಾರಂಭ ಮಾಡಬೇಕು. ೫ ಗಂಟೆಗೆ ಎಲ್ಲರದೂ ಮುಗಿಯಬೇಕು. ೫ ಗಂಟೆಗೆ ಮಾನ್ಯ ಮಂತ್ರಿಗಳಿಂದ ಉತ್ತರ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಮಂಡಿಸಿರತಕ್ಕ ೨೩, ೨೯ ಮತ್ತು ೩೦ನೇ ಬೇಡಿಕೆಯನ್ನು ವಿರೋಧಿಸುತ್ತಾ ನನಗೆ ತಿಳಿದ ಎರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ತಲೆಯ ಮೇಲೆ ಟೋಪಿ ಹಾಕಿಕೊಂಡಿದ್ದಾರೆ. ಅವರ ತಲೆಯ ಮೇಲೆ ಇರತಕ್ಕಂಥ ಟೋಪಿಯನ್ನು ಅವರು ತೆಗೆದಾಗ ಆರೋಗ್ಯ ಇಲಾಖೆ ಮತ್ತು ಟೋಪಿಯನ್ನು ಹಾಕಿದಾಗ ಅಬಕಾರಿಯ ಇಲಾಖೆ ಮಂತ್ರಿ ಎಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.—ಯಾಕೆ ಅವರು ನಿಮಗೆ ಟೋಪಿ ಹಾಕಬೇಕೋ ?

ಶ್ರೀ ಬಿ. ಸ್ವಾಮಿರಾವ್.—ಇವರು ಹಾಕಿರತಕ್ಕಂತಹ ಟೋಪಿ ನಮಗೆ ಮತ್ತು ನಿಮಗೆ ಸಹ ಇದೆಯೆಂದು ಭಾವಿಸುತ್ತೇನೆ. ತಾವು ಆಸ್ಪತ್ರೆಯಿಂದ ಇವೊತ್ತು ತಾನೆ ಬಂದಿದ್ದೀರಿ ಸ್ವಲ್ಪ ಸಂಧಾರಿಸಿಕೊಳ್ಳಿ. ಮಾನ್ಯ ಅಧ್ಯಕ್ಷರೇ, ಈ ಅಬಕಾರಿ ಇಲಾಖೆ ಕಳೆದ ೨-೩ ವರ್ಷಗಳಲ್ಲಿ ರಾಜ್ಯದಲ್ಲಿ ಒಂದು ದೊಡ್ಡ ಆಂಧೋಲನವನ್ನು ಎಬ್ಬಿಸಿತು. ಇದರಿಂದಾಗಿ ರಾಜ್ಯದ ಹಣಕಾಸಿನ ವ್ಯವಸ್ಥೆ, ರಾಜ್ಯದಲ್ಲಿ ಅಧಿಕಾರದ ವ್ಯವಸ್ಥೆ ಬಹಳ ಮಟ್ಟಿಗೆ ಕಡಿಮೆ ಆಯಿತು. ಇದರಿಂದಾಗಿ ಒಂದು ದೊಡ್ಡ ಆಂಧೋಲನ ನಡೆದಿದೆ. ಇದರಿಂದ ಮುಗ್ಗರಿಸಿ ಬಿಟ್ಟರೂ ಕೂಡ ಸುಧಾರಣೆ ಮಾತ್ರ ಆಗಲಿಲ್ಲ. ಇವೊತ್ತಿನ ದಿವಸ ಬೇಕಾದರ್ಷ್ಟು ಕೋರ್ಟ್ ತೀರ್ಪುಗಳು ಬಿದ್ದವು. ಹೈಕೋರ್ಟ್ ತೀರ್ಪಾಯಿತು, ಸುಪ್ರೀಂ ಕೋರ್ಟ್ ತೀರ್ಪು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಯಿತು. ಹೈ ಕೋರ್ಟ್ ತೀರ್ಪು ೩–೪ ಆಯಿತು. ಆದರೂ ಕೂಡ ಈ ಇಲಾಖೆಯಲ್ಲಿ ಒಂದು ಜವಾಬ್ದಾರಿ ಸುಧಾರಿಸಿಲ್ಲ. ಉದಾಹರಣೆಗೆ ಹೇಳುವುದಾದರೆ, ಮೊನ್ನೆ ಸುಪ್ರೀಂ ಕೋರ್ಟ್ ತೀರ್ಮಾನದಲ್ಲಿ ಬಾಟ್ಲಿಂಗ್ ಹಗರಣವನ್ನು ನಿಲ್ಲಿಸಬೇಕೆಂದು ತೀರ್ಪು ಮಾಡಿದ್ದರೂ ಕೂಡ ಈಗಲೂ ಲೂಸ್ ಅನ್ನು ಮಾರಾಟ ಮಾಡುತ್ತಿದ್ದಾರೆ.

(ಶ್ರೀ ವೈ. ಕೆ. ರಾಮಯ್ಯನವರು ಪೀಠವನ್ನಲಂಕರಿಸಿದರು)

ಬಾಟ್ಲಿಂಗ್ ನಿಲ್ಲಿಸಿ, ಲೂಸ್ ಅನ್ನು ಮಾರಾಟ ಮಾಡುತ್ತಿದ್ದಾರೆ. ಇದನ್ನು ಯಾಕೆ, ಯಾವ ಸಂದರ್ಭದಲ್ಲಿ ತೀರ್ಮಾನ ಮಾಡಿದರು. ಇದನ್ನು ಯಾಕೆ ಅನೌನ್ಸ್ ಮಾಡಿದರು, ಡೇಟ್ ನಿಗದಿ ಮಾಡಿದರೂ, ಯಾಕೆ ಇದನ್ನು ಕೊಟ್ಟರು, ಹರಾಜ್ ಅನ್ನು ಯಾವ ಅಡ್ರೆಸ್‌ಗೆ ಮಾಡಿದರು, ಇದರ ವಿಷಯವೇನೂ ಗೊತ್ತಿಲ್ಲ. ಹರಾಜಿನ ನಿಯಮವನ್ನು ಹರಾಜು ಹಾಕಿದ್ದಾರೆ. ಯಾವ ಶರತ್ತಿನ ಮೇಲೆ ಕೊಟ್ಟಿದ್ದಾರೆ, ಇದರಿಂದ ಎಷ್ಟು ಲುಕ್ಸಾನು ಆಗಿದೆ ಎಂಬುದು ಬಹಳ ದೊಡ್ಡ ವಿಚಾರ. ನಾನು ಅದಕ್ಕಾಗಿ ಹೇಳುತ್ತಿದ್ದೇನೆ. ಹರಾಜಿನ ನಿಯಮವನ್ನು ಹರಾಜು ಹಾಕಿದ್ದೀರಿ. ಆದ್ದರಿಂದ ಈ ವರ್ಷದಲ್ಲಿ ಇದರಿಂದ ಆದಾಯ ಕೂಡ ಬಹಳ ಕಡಿಮೆ ಆಗಿದೆ. ಈ ಪಾನ ನಿರೋಧವೆನ್ನತಕ್ಕದ್ದು ಈ ರಾಜ್ಯಕ್ಕೆ ಬಂದಿದ್ದು ೧೯೬೮ನೇ ಇಸವಿಯಲ್ಲಿ. ಆವೊತ್ತಿನ ದಿವಸ ಮಾನ್ಯ ಹಣಕಾಸಿನ ಮಂತ್ರಿಯಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಈ ರಾಜ್ಯಕ್ಕೆ ಪಾನನಿರೋಧವನ್ನು ತಂದರು. ಅಲ್ಲಿಂದ ಈ ಇಲಾಖೆಯಲ್ಲಿ ಹೆಚ್ಚು ಬೆಳವಣಿಗೆಯ ಬೆಳಕನ್ನು ಕಂಡಿದೆ. ೧೯೬೩ರಲ್ಲಿ ಈ ರಾಜ್ಯದಲ್ಲಿ ಒಂದು ಅಬಕಾರಿ ಇತ್ತು. ಈವೊತ್ತಿನ ದಿವಸ ಇದರ ೩–೪ ಪಟ್ಟು ಜಾಸ್ತಿ ಅಂಗಡಿಗಳು, ಬಾರ್‌ಗಳು ಜಾಸ್ತಿ ಆಗಿದೆ. ೧೯೬೧–೬೨ರಲ್ಲಿ ೧೭೧೫ ಬ್ರಾಂದಿ ಶಾಪ್‌ಗಳು ಇದ್ದರೆ, ಇವೊತ್ತಿನ ದಿವಸ ೩೦೮೭ ಬ್ರಾಂದಿ ಶಾಪ್‌ಗಳು ಇವೆ. ೧೯೬೧–೬೨ರಲ್ಲಿ ೫೮೯ ಬಾರ್‌ಗಳು ಇದ್ದರೆ, ಇವೊತ್ತಿನ ದಿವಸ ೧೦೮೬ ಬಾರ್‌ಗಳು ಇವೆ. ಇದನ್ನು ಹೆಚ್ಚಿಸಲು ಒಂದು ಮಿತಿ ಅಥವಾ ನಿಯಮವನ್ನು ಸರ್ಕಾರ ಇಟ್ಟುಕೊಂಡಿಲ್ಲ. ಇವೊತ್ತು ಬರಗಾಲ ಬಂದಿದೆ. ಅದಕ್ಕಾಗಿ ಜಾಸ್ತಿ ಮಾಡಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಈಗ ಕುಡಿಯುವ ನೀರನ್ನು ಒದಗಿಸತಕ್ಕ ವ್ಯವಸ್ಥೆಯಲ್ಲಿ ಇವರು ಫೇಲಾದರೂ ಕೂಡ ಈ ಬ್ರಾಂದಿ, ವಿಸ್ಕಿ ಕಾರ್ಯಕ್ರಮದಲ್ಲಿ ಹೆಚ್ಚು ಮುಂದೆ ಹೋಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಹೇಳುವುದಾದರೆ, ಈ ಅಬಕಾರಿ ಮತ್ತು ಆರೋಗ್ಯ ಇಲಾಖೆಗಳು ಜನರ ಆರೋಗ್ಯವನ್ನು ಕಾಪಾಡದೆ ಹಾಳುಮಾಡಿದೆ. ನಮ್ಮ ಮಾನ್ಯ ಕೃಷ್ಣಪ್ಪನವರ ಹತ್ತಿರ ಈ ಇಲಾಖೆಗಳು ಬಂದ ಮೇಲೆ ಮತ್ತಷ್ಟು ಹದಗೆಟ್ಟಿದೆ ಆರೋಗ್ಯ ಮತ್ತು ಅಬಕಾರಿ ಇಲಾಖೆಯಲ್ಲಿ ಹಲವಾರು ಭ್ರಷ್ಟಾಚಾರಗಳು ನಡೆಯುತ್ತಿವೆ. ಕಳ್ಳಭಟ್ಟಿ ಕಾರ್ಯಗಳು, ಡಿಸ್ಟಿಲರಿಗಳು ನಡೆಯುತ್ತಿವೆ. ಇವತ್ತು ಕಳ್ಳಭಟ್ಟಿ ತಡೆಗಟ್ಟತಕ್ಕಂಥ ಕೆಲಸವನ್ನು ಮಾಡಿಲ್ಲ. ಶೇಂದಿ ಸಾರಾಯಿಗೆ ಕೂಡ ಬರಗಾಲವಿಲ್ಲ. ಇವತ್ತಿನದಿವಸ ಶೇಂದಿ ಅಂಗಡಿಗಳನ್ನು ಆರಂಭಿಸಲು ಕೊಡಬೇಕಾದ ಹಣವನ್ನು ಏರಿಸಿರತಕ್ಕಂಥದ್ದನ್ನು ನೋಡಿದರೆ ಬಹಳೆ ಆಶ್ಚರ್ಯವಾಗುತ್ತದೆ. ಒಂದು ಬ್ರಾಂದಿ ಅಂಗಡಿಗೆ ೨೦–೩೦ ಸಾವಿರ ರೂಪಾಯಿಗಳಿಗೆ ಏರಿಸಿದ್ದಾರೆ. ಇವತ್ತು ಕೊಳಚೆ ಪ್ರದೇಶಗಳಲ್ಲಿ ೪೦–೫೦ ಜನ ಕಳ್ಳಭಟ್ಟಿ ಸಾರಾಯಿ ಅಂಗಡಿಗಳಿರುತ್ತವೆ. ಈ ಕಳ್ಳಭಟ್ಟಿಯಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ. ಆದರೆ ಏತಕ್ಕಾಗಿ ಸರ್ಕಾರದವರು ಈ ಕಳ್ಳಭಟ್ಟಿಗೆ ಏರಿಸಿಲ್ಲವೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ ? ಒಂದು ಲಕ್ಷ ಆದಾಯ ಮಾಡಿಕೊಳ್ಳುವ ಕಳ್ಳಭಟ್ಟಿಗರಿಗೆ ಒಂದು ರೂಪಾಯಿ ಹೆಚ್ಚು ದರವನ್ನು ಏರಿಸಿಲ್ಲ ಅದಕ್ಕೆ ಕಾರಣವೇನೆಂದು ಕೇಳುತ್ತಿದ್ದೇನೆ ಆದ್ದರಿಂದ ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿರತಕ್ಕಂಥವರಿಗೆ ಹೆಚ್ಚು ಆದಾಯ ಮಾಡಿಕೊಳ್ಳಲು ಮತ್ತು ದೊಡ್ಡವರಿಗೆ ಅನುಕೂಲ ಮಾಡಿಕೊಡುತ್ತಿದ್ದೀರೆಂದು ಈ ಒಂದು ಸಂದರ್ಭದಲ್ಲಿ ಆಪಾದನೆ ಮಾಡುತ್ತೇನೆ. ಈ ಒಂದು ಡಿಸ್ಟಿಲರಿಗಳಿಂದ ಅಬ್ಕಾರಿ ಇಲಾಖೆಯ ಸೂಪರಿಂಟೆಂಡೆಂಟ್, ಇನ್ಸ್‌ಪೆಕ್ಟರ್ ಸಬ್–ಇನ್ಸ್‌ಪೆಕ್ಟರ್‌ಗಳು ಉದ್ಧಾರವಾಗುತ್ತಿದ್ದಾರೆ. ಇವರುಗಳು ಡಿಸ್ಟಿಲರಿ ಕಂಟ್ರಾಕ್ಟರ್‌ಗಳೊಂದಿಗೆ ಸೇರಿ ಕೃಷ್ಣಲೆಕ್ಕವನ್ನಿಡಲು ಕಾರಣವಾಗುತ್ತಿದೆ. ಸರ್ಕಾರಕ್ಕೆ ಬರತಕ್ಕ ಆದಾಯವನ್ನು ಖೋತಾ ಮಾಡುತ್ತಿದ್ದಾರೆ. ಇವುಗಳಿಂದ ಸರ್ಕಾರಕ್ಕೆ ಬಹಳಷ್ಟು ನಷ್ಟವಾಗುತ್ತಿದೆ. ಇವತ್ತು ನಮ್ಮ ರಾಜ್ಯಕ್ಕೆ ಹೊರ ರಾಜ್ಯಗಳಿಂದ ಹೆಚ್ಚು ಕಳ್ಳಭಟ್ಟಿ ಸಾರಾಯಿ ಬರುತ್ತಿದೆ. ಮಹಾರಾಷ್ಟ್ರದಿಂದ ಬರುತ್ತಿದೆ. ಈ ಕಳ್ಳವ್ಯಾಪಾರದಿಂದ ಡಿಸ್ಟಿಲರಿಗಳು ಹಾಗೂ ಅಬ್ಕಾರಿ ಇಲಾಖಾ ಇನ್ಸ್‌ಪೆಕ್ಟರ್, ಸೂಪರಿಂಟೆಂಡೆಂಟ್ ಅವರು ಲಕ್ಷಾಂತರ ರೂಪಾಯಿಗಳಷ್ಟು ಲೂಟಿ ಮಾಡುತ್ತಿದ್ದಾರೆ. ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುತ್ತಿದ್ದಾರೆ. ಉದಾಹರಣೆಗೆ ನಮ್ಮ ಧಾರವಾಡದಲ್ಲಿ ಅಬ್ಕಾರಿ ಸೂಪರಿಂಟೆಂಡೆಂಟ್ ಶ್ರೀ ಹೊಸ

ಮನಿ ಅಂತಾ ಇದ್ದಾರೆ. ಅವರು ರಾಣೆಬೆನ್ನೂರಿನಲ್ಲಿ ೨೫ ಲಕ್ಷ ರೂಪಾಯಿಗಳಲ್ಲಿ ಹೊಸಮನೆ ಕಟ್ಟಿದ್ದಾರೆ. ಅದರಲ್ಲಿ ಆಧುನಿಕ ಸುಸಜ್ಜಿತ ವ್ಯವಸ್ಥೆಗಳೆಲ್ಲಾ ಇವೆ. ಹವಾನಿಯಂತ್ರಿತ ಕಾರನ್ನು ತೆಗೆದುಕೊಂಡಿದ್ದಾರೆ. ಈ ಡಿಸ್ಟಿಲರಿಗೆ ಬೇನಾಮಿ ಹೆಸರಿನಲ್ಲಿ ಪಾಲುದಾರರಾಗಿದ್ದಾರೆ. ಅವರು ಕಟ್ಟಿರ ತಕ್ಕಂಥ ಈ ಚಿಕ್ಕ ಮನೆಯನ್ನು ನೋಡಿದರೆ ಖಂಡಿತವಾಗಿ ಅವರು ಸುಧಾರಿಸಿದ್ದಾರೆ. ಆದರೆ ಮಂತ್ರಿಗಳು ಸುಧಾರಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಹೊಸಮನಿ ಅವರ ಬಗ್ಗೆ ಜಾಗೃತ ಆಯೋಗದಿಂದ ವಿಚಾರಣೆಯಾಗಿ ಅವರು ಏನೇನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಈ ಅಧಿಕಾರಿಯ ಬಗ್ಗೆ ಜಾಗೃತ ಆಯೋಗದಿಂದ ವಿಚಾರಣೆಯಾದರೂ ಇವರನ್ನು ಪ್ರಶ್ನೆ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತೇನೆ.

ಈ ಹೊಸಮನಿಯವರನ್ನು ಈ ಸರ್ಕಾರದವರು ಏನೂ ಮಾಡುವುದಕ್ಕಾಗಿಲ್ಲ. ಹೀಗೆ ಅವರನ್ನು ಯಾವ ಅಧಿಕಾರಿಗಳೂ ಸಹ ಪ್ರಶ್ನೆ ಮಾಡುವುದಕ್ಕಾಗುತ್ತಿಲ್ಲ. ವಿಜಿಲೆನ್ಸ್ ಎನ್‌ಕ್ವೈರಿಯವರು ಏನು ಮಾಡುವುದಕ್ಕಾಗಲಿಲ್ಲ ಅವರನ್ನು ಬಳ್ಳಾರಿಗೆ ವರ್ಗ ಮಾಡಿದರು ಮತ್ತೆ ಅಲ್ಲಿಂದ ಅವನೇ ವರ್ಗ ಮಾಡಿಸಿ ಕೊಂಡನು, ಏಕೆಂದರೆ ಅವನು ಹೇಳುತ್ತಾನೆ ಒಂದು ಅಥವಾ ಎರಡು ಲಕ್ಷ ಮಾಡಿ ನಂತರ ಬೇರೆ ಕಡೆಗೆ ಹೋದರೆ ಮತ್ತೆ ಅಲ್ಲಿ ದುಡ್ಡು ಮಾಡಬಹುದು ಎಂದು ಬಹಳ ಉದಾಸೀನವಾಗಿ ಹೇಳುತ್ತಾನೆ. ಆದ್ದರಿಂದ ಈ ಎಕ್ಸೈಸ್ ಅಧಿಕಾರಿಗಳು ಎಷ್ಟು ಹೆಚ್ಚಿಕೊಂಡಿದ್ದಾರೆ ಮತ್ತು ಹದ್ದುಮೀರಿದ್ದಾರೆ ಅಂತ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನವರಿಗೂ ಕೂಡ ಈ ಹೊಸಮನಿಯವರನ್ನು ನಿಮ್ಮ ಕೈಯಲ್ಲಿ ಏನು ಮಾಡುವುದಕ್ಕಾಗಿಲ್ಲ. ಇವತ್ತು ಅಲ್ಲಿ ಏನಾದರೂ ನಿಜಾಂಶವನ್ನು ಕಂಡು ಹಿಡಿಯಬೇಕಾದರೆ ನೀವು ಏನಾದರೂ ಅಧ್ಯಕ್ಷರ ಮೂಲಕ ಒಂದು ಅಧ್ಯಯನ ಸಮಿತಿಯನ್ನು ಮಾಡಿ ಕಳುಹಿಸಿ, ಅವರು ಎನ್‌ಕ್ವೈರಿ ಮಾಡಿ ವರದಿಯನ್ನು ಕೊಡಲಿ, ಇದರಿಂದ ಯಾರು ದುಡ್ಡನ್ನು ಹೊಡೆದಿದ್ದಾರೆ, ಯಾರು ಹೊಂಚು ಹಾಕಿದ್ದಾರೆ ಎಂಬುದು ತಿಳಿಯುತ್ತದೆ. ಇಲ್ಲದೇ ಹೋದರೆ ಈ ರಾಜ್ಯವನ್ನು ನೀವು ಉಳಿಸುವುದಕ್ಕಾಗುವುದಿಲ್ಲ ಮತ್ತೆ ದಿವಾಳಿಯ ರಾಜ್ಯವನ್ನಾಗಿ ಮಾಡುತ್ತೀರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಈ ಶಿವಮೊಗ್ಗ ಮತ್ತು ಇಡೀ ರಾಜ್ಯದಲ್ಲಿ ಇದು ಒಂದು ದೊಡ್ಡ ಕೆಟ್ಟ ವ್ಯವಹಾರವಾಗಿದೆ. ಇದಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕುತ್ತಿದೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಕೊಡೇಸ್ ಕಂಪನಿಯವರ ಡಿಸ್ಟಿಲರಿ ತಯಾರಾಗುತ್ತಿದೆ. ಈ ಡಿಸ್ಟಿಲರಿಗೆ ಸರ್ಕಾರದ ಯಾವ ಯಾವ ಇಲಾಖೆಯ, ಯಾವ ಯಾವ ಮಂತ್ರಿಗಳ ಹಾಗೂ ಶಾಸಕರ ಪ್ರೋತ್ಸಾಹ ಇದೆಯೋ ನನಗೆ ಗೊತ್ತಿಲ್ಲ. ಆದರೆ ಅಲ್ಲಿರತಕ್ಕ ರೈತರು ಬೆಳೆ ತೆಗೆಯಲು ನೀರಿನ ಅಣೆಕಟ್ಟು, ಕಟ್ಟಿರಿ ಎಂದರೆ ಅದನ್ನು ಮಾಡದೆ ಈ ಡಿಸ್ಟಿಲರಿಗೆ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಬೆಳೆ ತೆಗೆಯತಕ್ಕ ನೀರನ್ನು ಪಂಪ್‌ಸೆಟ್‌ಗೆ ಹಾಕಿ ಮತ್ತೆ ಯಾರಿಗೆ ಕೊಡಬಾರದು ಎಂದು ನೀರಾವರಿ ಕಾನೂನಿನಲ್ಲಿ ಹೇಳುತ್ತಾರೆ. ಆದರೆ ಈ ಡಿಸ್ಟಿಲರಿ ೧೦೦ ಹೆಚ್. ಪಿ. ಮೋಟಾರನ್ನು ಹಾಕಿ ಚಾನಲ್‌ನಲ್ಲಿ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿರುವ ರೈತರು, ಸಾರ್ವಜನಿಕರು ಮತ್ತು ರೈತ ಸಂಘದವರು ದೊಡ್ಡ ಪ್ರತಿಭಟನೆಯನ್ನು ಮಾಡಿದರು. ಆದರೂ ಕೂಡ ಅಲ್ಲಿನ ಜಿಲ್ಲಾ ಮಂತ್ರಿಗಳು ಅದಕ್ಕೆ ಏನು ಹೇಳಿದರೆಂದರೆ ನಾವು ಕೈಗಾರಿಕೆಗೆ ಪ್ರೋತ್ಸಾಹವನ್ನು ಕೊಡಬೇಕು, ಆದ್ದರಿಂದ ನಾವು ಈ ಕಾರ್ಯಕ್ರಮವನ್ನು ತಡೆಯುವುದಕ್ಕಾಗುವುದಿಲ್ಲವೆಂದೂ ಹಾಗೂ ಅವರಿಗೆ ಚಾನಲ್ ಮೂಲಕ ಮತ್ತೆ ಯಾವ ಮೂಲಕವಾದರೂ ನೀರನ್ನು ಒದಗಿಸುತ್ತೇವೆ ಎಂದು ಹೇಳಿದರು. ಆದ್ದರಿಂದ ಕೈಗಾರಿಕೆ ಮಾಡತಕ್ಕವರು ತುಂಗಾ ನದಿಯಿಂದ ನೀರನ್ನು ತರಬಹುದು ಮತ್ತೆ ಇನ್ನು ಯಾವುದೇ ಕಡೆಯಿಂದಾದರೂ ನೀರನ್ನು ತರಬಹುದು. ಆದರೆ ಈ ತರಹ ದೊಡ್ಡವರಿಗೆ ಅನುಕೂಲ ಮಾಡುವುದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ. ಇದು ಇನ್ನೂ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿದೆ ಹಾಗೂ ಪ್ರತಿಭಟನೆಗಳೂ ನಡೆಯುತ್ತಿವೆ. ರೈತರು ಪೈಪುಗಳನ್ನು ಬಲಾತ್ಕಾರವಾಗಿ ಕೀಳಬೇಕು ಮತ್ತು ನೀರಿನ ಸಂಪರ್ಕವನ್ನು ಕಡಿಸಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎಂದು ಹೇಳಿ, ಈ ಬಗ್ಗೆ ಕೈಗಾರಿಕಾ ಮಂತ್ರಿಗಳು ಮತ್ತು ಅಬಕಾರಿ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಈ ಇಲಾಖೆಗಳಲ್ಲಿ ಬಡ್ತಿಯನ್ನು ಕೊಡಬೇಕೆಂದು ಡೆಪ್ಯೂಟಿ ಸೂಪರಿಂಟೆಂಡೆಂಟ್‌ಗಳು ಒಂದು ಯೋಜನೆಯನ್ನು ಹಾಕಿದ್ದಾರೆ. ಇದು ಈಗಾಗಲೇ ಪತ್ರಿಕೆಗಳಲ್ಲೂ ಬಂದಿದೆ ಮತ್ತು ನನ್ನ ಹತ್ತಿರ ವರದಿಯೂ ಇದೆ. ಇದು ಅವಶ್ಯಕ ಎಂದು ನಮಗೆ ಏನು ಕಂಡು

ಬರುತ್ತಿಲ್ಲ. ನನಗೆ ತಿಳಿದ ಹಾಗೆ ೬೪ ಜನ ಡೆಪ್ಯೂಟಿ ಸೂಪರಿಂಟೆಂಡೆಂಟ್‌ಗಳು ಸೇರಿ ತಲಾ ೫೦ ಸಾವಿರ ರೂಪಾಯಿಯನ್ನು ಕೊಟ್ಟು ಅವರ ಬಡ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಈಗಾಗಲೇ ವ್ಯವಸ್ಥೆ ಮಾಡಿದ್ದಾರೆ. ಇದರಲ್ಲಿ ಒಬ್ಬ ಶಾಸಕರೂ ಕೂಡ ಸೇರಿದ್ದಾರೆ, ಮತ್ತೆ ಒಬ್ಬ ರಾಮಲಿಂಗಮ್ ಅಂತ ಇನ್ಸ್‌ಪೆಕ್ಟರ್ ಇದ್ದಾರೆ ಇವರಿಗೆ ಕಾಲಿಲ್ಲ. ಇವರು ಕಾಲಿಲ್ಲದೇ ಹೋದರೂ ಇನ್ಸ್‌ಪೆಕ್ಟರ್ ಕೆಲಸವನ್ನು ಬಹಳ ಚೆನ್ನಾಗಿ ನಿರ್ವಹಿಸಿ ಬಹಳ ಜನ ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ಕಂಡು ವ್ಯವಸ್ಥೆಯನ್ನು ಬಹಳ ಯಶಸ್ವಿಯಾಗಿ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟೋ ವರ್ಷಗಳಿಂದ ಖಾಲಿ ಬಿದ್ದಿರತಕ್ಕ ಈ ಹುದ್ದೆಗಳಿಗೆ ಬಡ್ತಿ ಕೊಡುವ ಬದಲು ಒಬ್ಬ ಬಡ ವಿದ್ಯಾರ್ಥಿಗೆ, ಹಿಂದುಳಿದವರಿಗೆ ಕೆಲಸವನ್ನು ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆಂದು ನಂಬಿದ್ದೇನೆ ಮತ್ತು ಒಬ್ಬರಿಗೆ ಕೊಡತಕ್ಕಂತಹ ಸಂಬಳದಲ್ಲಿ ಇಬ್ಬರಿಗೆ ಸಂಬಳ ಕೊಡುವುದರಿಂದ ಇಬ್ಬರೂ ಜೀವನ ಮಾಡಲು ಅನುಕೂಲವಾಗುತ್ತದೆ. ಆದ್ದರಿಂದ ಈ ವಾದವನ್ನು ತಮ್ಮ ಮುಂದಿಟ್ಟು ಈ ೬೪ ಜನರ ಬಡ್ತಿಯನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೊನ್ನೆ ದಾಸಪ್ಪನವರಿಗೆ ಯಾವುದೇ ಕಾಂಟ್ರಾಕ್ಟ್ ಕೊಡಬಾರದು ಯಾವುದೇ ಬಾಬನ್ನು ಕೊಡಬಾರದು ಎಂದು ಹೇಳಿರುವುದರಿಂದ ಸರ್ಕಾರ ಯಾವ ಕೆಲಸವನ್ನು ಕೂಡ ಇದುವರೆಗೆ ಕೈಗೊಂಡಿಲ್ಲ ಇವೊತ್ತಿನ ದಿವಸ ಪ್ರತಿಯೊಂದು ದಿನಕ್ಕೆ ೧೫ ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆ. ಅದರ ಬದಲಿಗೆ ಸರ್ಕಾರ ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಈ ಬಗ್ಗೆ ಅಬಕಾರಿ ಮಂತ್ರಿ ಯವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಒಂದು ದಿನಕ್ಕೆ ೧೫ ಲಕ್ಷ ನಷ್ಟವಾದರೆ, ಒಂದು ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಎಷ್ಟಾಗಬಹುದು ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳಲಿಷ್ಟಪಡುತ್ತೇನೆ: ಮತ್ತೆ ಅಬಕಾರಿ ಬಾಕಿದಾರರು ಯಾರಿದ್ದಾರೆ, ಅವರಲ್ಲಿ ದಾಸಪ್ಪನವರನ್ನು ಬಿಟ್ಟು, ಉಳಿದ ೨೫-೩೦ ಜನರಿಂದ ಬಾಕಿಯನ್ನು ಏಕೆ ವಸೂಲಿ ಮಾಡಿಲ್ಲ? ದಾಸಪ್ಪನವರಿಗೆ ಮಾಡಿದಂತೆ ಉಳಿದವರಿಗೆ ಏಕೆ ಮಾಡಿಲ್ಲ? ಮತ್ತೆ ಅವರ ಬಾಬನ್ನು ಇದುವರೆಗೂ ಮುಂದುವರಿಸಿ ಕೊಂಡು ಹೋಗಲು ಅವಕಾಶ ಕೊಟ್ಟಿರುವುದು ಏಕೆ? ಇಲ್ಲಿ ಒಬ್ಬರಿಗೆ ಒಂದು ಕಾಯಿದೆ, ಮತ್ತೊಬ್ಬರಿಗೆ ಇನ್ನೊಂದು ಕಾಯಿದೆ. ಸರ್ಕಾರದ ಈ ಪಕ್ಷಪಾತ ನೀತಿ ಸರಿಯಲ್ಲವೆಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಸಾರಾಯಿ ವ್ಯಾಪಾರ ನಡೆಯುತ್ತಿದೆ. ಇಲ್ಲಿ ಎಷ್ಟು ಸೇಂದಿ ಮರಗಳಿವೆ, ಎಷ್ಟು ಮರಗಳಿಗೆ ನೀವು ಪರವಾನಗಿಯನ್ನು ಕೊಟ್ಟಿದ್ದೀರಿ? ಎಷ್ಟು ಲೀಟರ್ ಸೇಂದಿಯನ್ನು ನೀವು ಬೆಂಗಳೂರಿಗೆ ಸರಬರಾಜು ಮಾಡುತ್ತಿದ್ದೀರಿ? ಅಥವಾ ಕಾಂಟ್ರಾಕ್ಟರ್‌ಗಳು ಸಾಗಿಸುತ್ತಿದ್ದಾರೆ? ಎಷ್ಟು ವ್ಯಾಪಾರವಾಗುತ್ತಿದೆ? ಇವೆಲ್ಲದರ ಬಗ್ಗೆ ಪೂರ್ಣ ವಿವರಗಳನ್ನು ನಾನು ಕೇಳಲಿಚ್ಛೆಪಡುತ್ತೇನೆ. ಯಾಕೆಂದರೆ ಇವೊತ್ತಿನ ದಿವಸ ಎಲ್ಲೂ ಈಚಲು ಮರಗಳೇ ಇಲ್ಲ. ರಸ್ತೆಗಳ ಪಕ್ಕದಲ್ಲಿ ಕೆಲವು ಮರ ಗಳಿದ್ದರೂ, ಅವುಗಳು ಸತ್ತು ಹೋಗಿರುತ್ತವೆ. ಇಲ್ಲವೇ ಒಣಗಿಹೋಗಿರುತ್ತವೆ. ಅವುಗಳಿಂದ ಸೇಂದಿ ಬರತಕ್ಕ ನಿರೀಕ್ಷೆಯಂತೂ ನನಗಿಲ್ಲ. ಆದರೆ ಸೇಂದಿ ಮರಗಳೇ ಇಲ್ಲದಿರುವ ಸಂಧರ್ಭದಲ್ಲಿ, ಬೆಂಗಳೂರು ನಗರದಲ್ಲಿ ೧೦ ರಿಂದ ೨೦ ಲಕ್ಷ ಲೀಟರ್‌ಗಳಷ್ಟು ವ್ಯಾಪಾರವಾಗುತ್ತಿದೆ ಎಂದು ಹೇಳುತ್ತಾರೆ. ಇದು ಹೇಗೆ ಸಾಧ್ಯ? ಇದು ಸರ್ಕಾರಕ್ಕೆ, ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಎಲ್ಲರಿಗೂ ಗೊತ್ತಿದ್ದರೂ, ಕಣ್ಣಿಗೆ ಕಂಡರೂ ಸಹ ಜನಕ್ಕೆ ಈ ವಿಷ ಕುಡಿಸುವಂತಹ ಕಾರ್ಯದಲ್ಲಿ ತಾವೆಲ್ಲರೂ ಕಣ್ಣು ಮುಚ್ಚಿಕೊಂಡು ಕುಳಿತಿರುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಕ್ಲೋರಲ್ ಹೈಡ್ರೇಟ್ ಅನ್ನು ತಯಾರು ಮಾಡಿ ಜನಗಳಿಗೆ ಕೊಡುತ್ತಿದ್ದಾರೆ. ಇದು ಬಹಳ ಅನ್ಯಾಯ. ಇದನ್ನು ಉಪಯೋಗಿಸಿದರೆ, ಇದು ಕ್ರಮೇಣ ವಿಷವಾಗಿ ಪರಿಣಮಿಸುತ್ತದೆ ಮತ್ತು ಇದನ್ನು ಬಳಸುವವರು ಕ್ರಮೇಣ ಕಣ್ಣುಗಳನ್ನು ಕಳೆದುಕೊಳ್ಳುತ್ತಾರೆ ಎಂದು ವೈದ್ಯರು ಹೇಳುತ್ತಿದ್ದಾರೆ. ಇವೆಲ್ಲಾ ತಮಗೆ ಗೊತ್ತಿದ್ದು ಕೂಡ, ಇನ್ನು ಯಾಕೆ ಏನೂ ಮಾಡಿಲ್ಲ? ಇವುಗಳನ್ನು ಪಡೆಯಲು ಎಷ್ಟು ಸಾರಿ ರೈಡ್ ಮಾಡಿದ್ದೀರಿ? ಇಂತಹ ಎಷ್ಟು ಸೆಂಟರ್‌ಗಳನ್ನು ಮಂತ್ರಿಗಳು ಭೇಟಿ ಮಾಡಿದ್ದಾರೆ ಇದು ನಿಮಗೆ ಗೊತ್ತಿದೆಯೆ? ಅಥವಾ ಇಲ್ಲವೇ, ಗೊತ್ತಿಲ್ಲದಿದ್ದರೆ ನೀವು ಈ ಖಾತೆಯನ್ನು ಏಕೆ ವಹಿಸಿಕೊಂಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ ಇನ್ನು ರಾಜ್ಯದಲ್ಲಿ ಬಡವರಿಗೆ, ಹಿಂದುಳಿದವರಿಗೆ ಮತ್ತು ಹಣ ಇಲ್ಲದಿರತಕ್ಕಂಥವರಿಗೆ ಸಹಾಯ ಮಾಡತಕ್ಕಂಥ ಒಂದು ರೀತಿಯನ್ನು ವಿಧಾನಸಭೆಯಲ್ಲಿ ಎಲ್ಲಾ ಸದಸ್ಯರೂ ಹೇಳಿದ್ದಾರೆ. ಷಾಪ್‌ವೈಸ್‌ನಲ್ಲಿ ಹರಾಜು ಮಾಡುವುದರಿಂದ, ಸಣ್ಣ ಸಣ್ಣ ಹಿಡುವಳಿದಾರರಿಗೆ ಮತ್ತು ಸ್ವಲ್ಪ ದುಡ್ಡು ಇರುವವರಿಗೆ ಅನುಕೂಲ ವಾಗುತ್ತದೆ. ಆದರೆ ಇದನ್ನು ಇನ್ನು ಯಾಕೆ ಮಾಡಿಲ್ಲ? ಈ ಸಾಲಿನಿಂದಾದರೂ ಏಕೆ ಮಾಡಬಾರದು

ಎಂಬುದಾಗಿ ನಾನು ಕೇಳುತ್ತೇನೆ. ಇನ್ನು ರಾಜ್ಯದಲ್ಲಿ ಏನೂ ಕಾನೂನು ಇದೆ, ಅಥವಾ ದೇಶದಲ್ಲಿ ಇರತಕ್ಕಂಥ ಕಾನೂನು ರೀತ್ಯಾ ಹಿಂದುಳಿದವರಿಗೆ ಏನೂ ಸೌಲಭ್ಯ ಕೊಡಬೇಕಾಗಿದೆ, ಅದು ಈ ಅಬಕಾರಿಯಲ್ಲಿ ಮಾತ್ರ ಅವರಿಗೆ ಪಾಲು ಸಿಕ್ಕಿಲ್ಲ. ಇದರಲ್ಲಿ ಎಲ್ಲರಿಗೂ ಪಾಲು ಕೊಟ್ಟಿದ್ದಾರೆ ಅನುಕೂಲಸ್ಥರಿಗೆ, ಶ್ರೀಮಂತರಿಗೆ ಪಾಲನ್ನು ಕೊಡುತ್ತಿದ್ದಾರೆ. ಈಗ ಯಾವುದಾದರೂ ಅರಾಕ್ ಶಾಪ್ ಆಗಲಿ, ಹೋಲ್‌ಸೇಲ್ ಶಾಪ್ ಆಗಲಿ, ಡಿಸ್ಟಿಲರ್ ಕೊಡುವುದಾಗಲಿ ಮತ್ತೆ ಈ ಅಂಗಡಿಗಳನ್ನು ಕೊಡುವಾಗಲೂ ಸಹ ಈ ರೀತಿ ಅನುಕೂಲಸ್ಥರಿಗೇ ಲಾಭವಾಗುತ್ತದೆ. ಆದ್ದರಿಂದ ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದವರಿಗೆ ಕೊಡತಕ್ಕಂಥ ಒಂದು ನೀತಿಯನ್ನು ಮುಂದಿನ ಸಾಲಿನಲ್ಲಾದರೂ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

೧-೦೦ ಪಿ.ಎಂ.

ಹಾಗೆಯೇ ಎಲ್ಲಾ ಇಲಾಖೆಗಳೂ ಕೂಡ ತಮ್ಮದೇ ಆದಂಥ ಭವನವನ್ನು ಕಟ್ಟಿದ್ದಾರೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯವರು ಕಟ್ಟಿದ್ದಾರೆ, ಅರಣ್ಯ ಇಲಾಖೆಯವರು ಕಟ್ಟಿದ್ದಾರೆ, ಅದೇ ರೀತಿಯಾಗಿ ಅಬ್ಕಾರಿ ಇಲಾಖೆಯವರನ್ನು ಒಂದು ಭವನವನ್ನು ಮಾಡಿದರೆ ತಪ್ಪೇನೂ ಇಲ್ಲ ಅವರು ಮಾಡಿದರೆ ಅದು ಕೇಂದ್ರವಾಗಿ ಇರುತ್ತದೆ. ಈಗ ಇರತಕ್ಕಂಥಾ ಅಬ್ಕಾರಿ ಆಫೀಸು ಹಿಂದಿನ ಕಾಲದಲ್ಲಿ ಕಟ್ಟಿರತಕ್ಕಂಥಾ ಒಂದು ಹಳೇ ಕಟ್ಟಡದಲ್ಲಿ ಇದೆ. ಈ ಅಬ್ಕಾರಿ ಇಲಾಖೆಯಲ್ಲಿ ಹೆಚ್ಚು ವರಮಾನ ಇರುವುದರಿಂದ ಇದಕ್ಕೊಂದು ಎಕ್ಸೈಜ್ ಭವನವನ್ನು ನಿರ್ಮಿಸುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಇದರಲ್ಲಿ ಇನ್ನೊಂದು ವಿಷಯ ಏನೆಂದರೆ ಈ ಅಬ್ಕಾರಿ ಇಲಾಖೆಯಲ್ಲಿ ಹೆಚ್ಚು ದುರುಪಯೋಗ, ವಂಚನೆ ಮತ್ತು ಭ್ರಷ್ಟಾಚಾರ ಮುಂತಾದ ಹಲವಾರು ಪ್ರಕರಣಗಳು ಇದ್ದರೂ ಕೂಡ ಅದನ್ನು ಸುಧಾರಣೆ ಮಾಡುವುದರಲ್ಲಿ ನಮ್ಮ ಸರ್ಕಾರ ಹಾಗೂ ಮಂತ್ರಿಗಳು ಕ್ರಮ ಕೈಗೊಂಡಿಲ್ಲ. ಇದಕ್ಕೆ ಕಾರಣ ಏನು ಅನ್ನುವುದು ತಿಳಿಯದು. ಈ ಪಾನನಿರೋಧ ಬಂದ ಮೇಲೆ ರಾಜಕೀಯ ಬೆಳವಣಿಗೆ ಹೆಚ್ಚಾಗುತ್ತಾ ಬಂದಿದೆ. ಈವೊತ್ತಿನ ದಿವಸ ರಾಜ್ಯದ ಜನರ ಆರೋಗ್ಯ ಬಹಳ ಹದಗೆಟ್ಟಿದೆ. ಈ ಇಲಾಖೆಯಲ್ಲಿ ಹಣ ಬಹಳ ಸೋರಿ ಹೋಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ಸರಿಯಾಗಿ ಗಮನಿಸಿ ತಕ್ಕ ಕ್ರಮಗಳನ್ನು ತೆಗೆದುಕೊಂಡರೆ ಈ ಇಲಾಖೆಯಲ್ಲಿ ಇನ್ನೂ ಹೆಚ್ಚು ಸುಧಾರಣೆ ಮಾಡುವುದಕ್ಕೆ ಸಾಧ್ಯತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಏನು ಇದೆ, ಇದು ಬಹಳ ಪ್ರಾಮುಖ್ಯವಾದ ಇಲಾಖೆ ರಾಜ್ಯದ ಜನರ ಆರೋಗ್ಯವನ್ನು ಗಮನಿಸತಕ್ಕಂಥ ಈ ಇಲಾಖೆ ಆರೋಗ್ಯವೇ ಭಾಗ್ಯ ಆಗಿರತಕ್ಕಂಥಾ ಈ ಇಲಾಖೆಗೆ ಇನ್ನೂ ಹೆಚ್ಚು ಖರ್ಚಾದರೂ ಪರವಾಗಿಲ್ಲ, ಈ ಇಲಾಖೆಗೆ ಇನ್ನೂ ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಹೇಳುವುದಾದರೆ, ಎಷ್ಟೋ ಕಡೆಗಳಲ್ಲಿ ಆಸ್ಪತ್ರೆಗಳು ಸುಧಾರಣೆಯಾಗಿಲ್ಲ. ಬೆಂಗಳೂರು ನಗರದಲ್ಲಿರುವ ಬೌರಿಂಗ್ ಆಸ್ಪತ್ರೆಯನ್ನು ಈಗ್ಗೆ ಎರಡು ತಿಂಗಳಿಂದ ಈಚೆಗೆ ಮಾತ್ರ ಅದನ್ನು ಆಸ್ಪತ್ರೆ ಅಂತ ಕರೆಯಬಹುದು. ಏತಕ್ಕೆಂದರೆ ಮೊದಲು ಆಸ್ಪತ್ರೆ ಅಂತಹ ಒಂದು ಪರಿಸ್ಥಿತಿಯಲ್ಲಿ ಇರಲಿಲ್ಲ. ಕೇಂದ್ರ ಸರ್ಕಾರದ ಹಾಗೂ ಶನ್ಮಾನ್ಯ ರಾಜೀವ್ ಗಾಂಧೀ ಆಶೀರ್ವಾದದಿಂದ, ಅವರ ಅಮೃತ ಹಸ್ತದಿಂದ ಕೊಟ್ಟಂಥಾ ಕೊಡುಗೆಯಿಂದ ಈ ಬೌರಿಂಗ್ ಆಸ್ಪತ್ರೆ ಒಂದು ಒಳ್ಳೆಯ ಸ್ಥಿತಿಗೆ ಬಂದಿದೆ. ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದಿಂದಾಗಿ ಈ ಆಸ್ಪತ್ರೆ ಸ್ವಲ್ಪ ಸುಧಾರಿಸಿತು. ಮೊದಲು ಈ ಆಸ್ಪತ್ರೆಯ ಸ್ಥಿತಿಯನ್ನು ನೋಡುವುದಕ್ಕಾಗುತ್ತಿರಲಿಲ್ಲ. ಈವೊತ್ತಿನ ದಿವಸ ಬಳ್ಳಾರಿ ಆಸ್ಪತ್ರೆಯಲ್ಲಿ ರೋಗಿಗಳು ಮತ್ತು ಹಂದಿಗಳೂ ಒಟ್ಟಿಗೆ ಮಲಗಿಕೊಳ್ಳುತ್ತಾ ಇವೆ ಎಂದು ಮಾನ್ಯ ರಾಮಪ್ಪನವರು ಹೇಳಿದರು. ಹಾಗೆಯೇ ಉಡುಪಿಯ ಆಸ್ಪತ್ರೆಯೂ ಸಹ ಬಹಳ ಕೆಟ್ಟ ಸ್ಥಿತಿಯಲ್ಲಿದೆ. ನಾನು ಇದರ ಬಗ್ಗೆ ೩೩೪ ರ ನಿಯಮದ ಮೇರೆಗೆ ಒಂದು ನೋಟೀಸ್ ಕಳುಹಿಸಿದ್ದೇನೆ ನಮ್ಮ ಭಾಗದ ೮ ಆಸ್ಪತ್ರೆಗಳಲ್ಲಿ ೭ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲ. ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇವೆ. ಅಲ್ಲದೆ ಶಾಸಕನಾದ ನನ್ನ ಊರಿನಲ್ಲಿರುವ ಆಸ್ಪತ್ರೆಯಲ್ಲೇ ಡಾಕ್ಟರ್ ಇಲ್ಲ. ಇದರ ಬಗ್ಗೆ ಎರಡು ವರ್ಷದಿಂದ ಹೇಳಿದರೂ ಸಹ ಪ್ರಯೋಜನವಾಗಲಿಲ್ಲ. ಈ ಅಬ್ಕಾರಿ ಇಲಾಖೆ ಎಷ್ಟರ ಮಟ್ಟಿಗೆ ಕೆಟ್ಟು ಹೋಗಿದೆಯೋ ಈ ಆರೋಗ್ಯ ಇಲಾಖೆಯೂ ಸಹ ಅಷ್ಟರಮಟ್ಟಿಗೆ ಹೊಲಸಾಗಿದೆ. ಇದರ ಬಗ್ಗೆ ಯಾರೂ ಕೂಡ ಗಮನಹರಿಸುತ್ತಾ ಇಲ್ಲ. ಇನ್ನೊಂದು ವಿಚಾರ ಏನೆಂದರೆ. ಹೊಸನಗರ ತಾಲ್ಲೂಕಿನ ನಿಟ್ಟೂರ್, ಸೋನ್ಸ್ ಈ ಭಾಗಗಳಲ್ಲಿ

ಮಂಗನ ಕಾಯಿಲೆ ತುಂಬಿ ಹೋಗಿವೆ. ಇದರ ಜೊತೆಗೆ ಅಲ್ಲಿ ಹಂದಿಗೂಡಿನ ಖಾಯಿಲೆಯೂ ಇದೆ. ಈ ಹಂದಿಗೂಡಿನ ಖಾಯಿಲೆಗೆ ಔಷಧಿಯನ್ನು ಕಂಡು ಹಿಡಿದಿದ್ದಾರೆ ಆದರೆ ಮಂಗನ ಕಾಯಿಲೆಗೆ ಔಷಧಿಯನ್ನು ಕಂಡುಹಿಡಿದಿಲ್ಲ, ಇನ್ನೊಂದು ವಿಚಾರ ಏನೆಂದರೆ, ಶಿವಮೊಗ್ಗದಲ್ಲಿ ಲಸಿಕೆ ತಯಾರು ಮಾಡುವಂಥಾ ಒಂದು ಸಂಸ್ಥೆ ಇತ್ತು ಈಗ ಅದು ಎಲ್ಲಿ ಹೋಯಿತೋ ಗೊತ್ತಿಲ್ಲ. ಈ ಪುಸ್ತಕದಲ್ಲಿ ಇದರ ಬಗ್ಗೆ ಎಲ್ಲಿ ತಿರುವು ಹಾಕಿದರೂ ಕನ್ನಡಕ ಹಾಕಿಕೊಂಡು ಎಲ್ಲಿ ನೋಡಿದರೂ ಕೂಡ ಸಿಕ್ಕಲಿಲ್ಲ. ನಾನು ಮೊದಲೇ ಹೇಳಿದ ಹಾಗೆ ೮ ಆಸ್ಪತ್ರೆಗಳಲ್ಲಿ ೭ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲವಲ್ಲಾ ಇದನ್ನು ನೋಡಿದರೆ ಈ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿರುವವರನ್ನು ಏನಾದರೂ ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಲೀನ್ ಏನಾದರೂ ಕೊಟ್ಟಿದ್ದಾರೋ ಏನೋ ಅನ್ನುವ ಹಾಗೆ ಕಾಣುತ್ತದೆ. ಈ ಮಂಗನ ಕಾಯಿಲೆಯಿಂದ ಹೊನ್ನಾವರದಲ್ಲಿ ಸಾವಿರಾರು ಜನ ಸತ್ತಿದ್ದಾರೆ. ಹಾಗೆಯೇ ಬೆಳ್ತಂಗಡಿಯಲ್ಲಿ ನೋಡಿದರೆ ಈ ಖಾಯಿಲೆಯಿಂದ ಸಾಲುಗಟ್ಟಲೆ ಸತ್ತು ಹೋಗಿದ್ದಾರೆ

ಈ ಕಾಯಿಲೆಗೆ ಔಷಧವನ್ನು ಕಂಡುಹಿಡಿಯುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿಲ್ಲ. ಅಲ್ಲಿರುವ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಾದರೂ ಇದ್ದಿದ್ದರೆ, ಅವರು ಇಂತಹ ರೋಗಿಗಳಿಗೆ ಏನಾದರೂ ಮಾತ್ರೆಗಳನ್ನು ಕೊಡುತ್ತಿದ್ದರು. ಮಾತ್ರೆಗಳನ್ನು ತೆಗೆದುಕೊಂಡರೆ ಕಾಯಿಲೆ ವಾಸಿಯಾಗುತ್ತದೆಂದು ಈ ರೋಗಿಗಳು ಮಾನಸಿಕವಾಗಿಯಾದರೂ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಆದರೆ ಅಲ್ಲಿ ಡಾಕ್ಟರ್‌ಗಳೇ ಇಲ್ಲ. ಅಲ್ಲಿ ಇತರೇ ಸಿಬ್ಬಂದಿವರ್ಗವಾಗಲೀ, ಔಷಧಗಳಾಗಲೀ ಇಲ್ಲ, ನಮ್ಮ ಹೊಸನಗರ ತಾಲ್ಲೂಕ್‌ನಲ್ಲಿರುವ ತಾಲ್ಲೂಕ್ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಮಾಡಿದ್ದಾರೆ. ಆದರೆ ಅಲ್ಲಿ ಒಬ್ಬರೆ ಡಾಕ್ಟರ್ ಇದ್ದಾರೆ. ಲೇಡಿ ಡಾಕ್ಟರ್ ಸಹ ಇಲ್ಲ. ಇ. ಎನ್. ಟಿ. ತಜ್ಞರು ಇಲ್ಲ. ಇರುವ ಒಬ್ಬರೇ ಡಾಕ್ಟರ್ ಹೆರಿಗೆ ಮಾಡಿಸಬೇಕು, ಆಪರೇಷನ್ ಮಾಡಬೇಕು, ಪಿ. ಎಚ್. ಇ. ಸೆಂಟರ್‌ಗಳಿಗೆ ಹೋಗಿ ನೋಡಬೇಕು, ಗಾಯವಾದವರಿಗೆ ಬ್ಯಾಂಡೇಜ್ ಕಟ್ಟಬೇಕು. ಅಪಘಾತಗಳಲ್ಲಿ ಸತ್ತವರ ದೇಹಗಳನ್ನು ಪೋಸ್ಟ್ ಮಾರ್ಟಮ್ ಮಾಡಬೇಕು. ಈಗ ಅಲ್ಲಿ ಯಾರಾದರು ಅಪಘಾತದಿಂದ ಸತ್ತರೆ ಎರಡು ದಿವಸಗಳಾದರೂ ಪೋಸ್ಟ್‌ಮಾರ್ಟಮ್ ಮಾಡುವುದಿಲ್ಲ. ಈಗ ೮-೧೦ ದಿವಸಗಳ ಹಿಂದೆ ಒಬ್ಬರು ಬೆಂಕಿ ಅಪಘಾತದಲ್ಲಿ ಸತ್ತರು. ಎರಡು ದಿವಸವಾದರೂ ಪೋಸ್ಟ್‌ಮಾರ್ಟಮ್ ಮಾಡಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಒಂದು ಮಗುವಿನ ಜೀವ ಉಳಿಸಲು ಡ್ರಿಪ್ ಹಾಕಿದ್ದೇನೆ, ಆ ಮನುಷ್ಯ ಹೇಗೂ ಸತ್ತಿದ್ದಾನೆ, ಆದರೆ ಈ ಮಗು ಸಾಯಬಾರದೆಂದು ನನ್ನ ಆಶೆ. ಆದ್ದರಿಂದ ಡ್ರಿಪ್ ಹಾಕಿ ಕಾಯುತ್ತಿದ್ದೇನೆ ಎಂದು ಹೇಳಿದರು. ಇಲ್ಲಿ ಒಬ್ಬರೇ ಡಾಕ್ಟರ್ ಇದ್ದರೆ ಅವರು ಎಲ್ಲ ಕೆಲಸಗಳನ್ನು ಯಾವ ರೀತಿ ಮಾಡಲು ಸಾಧ್ಯ ? ನಮ್ಮ ಮಲೆನಾಡಿನ ಭಾಗದಲ್ಲಿ ಮಂಗನಕಾಯಿಲೆಯಿಂದ ಮತ್ತು ಹಂದಿಗೋಡ್ ಕಾಯಿಲೆಯಿಂದ ಹೆಚ್ಚಿನ ಜನರು ನರಳುತ್ತಿದ್ದಾರೆ. ಆದರೆ ಈ ಕಾಯಿಲೆಗೆ ಇನ್ನೂ ಔಷಧವನ್ನೇ ಕಂಡುಹಿಡಿದಿಲ್ಲ. ಅದೇ ಮಾನ್ಯ ಹೆಗಡೆಯವರಿಗೆ ಬೆನ್ನು ನೋವು ಬಂದರೆ ಮತ್ತು ಶ್ರೀ ರಘುಪತಿ ಅವರಿಗೆ ಹಲ್ಲುನೋವು ಬಂದರೆ ಕೂಡಲೇ ರಷ್ಯಾ ಮತ್ತು ಅಮೇರಿಕಾಕ್ಕೆ ಹೋಗುತ್ತಾರೆ. ಆದರೆ ಈ ಜನರು ಎಲ್ಲಿಗೆ ಹೋಗಬೇಕು ? ಈ ಕಾಯಿಲೆ ವಾಸಿ ಮಾಡಲು ಸರ್ಕಾರ ಸರಿಯಾದ ಔಷಧವನ್ನು ಕಂಡುಹಿಡಿಯದಿದ್ದರೆ ಮತ್ತು ಈ ಕಾಯಿಲೆ ಜನರಿಗೆ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡದಿದ್ದರೆ ಜನರು ಸಾಯಬೇಕಾಗುತ್ತದೆ. ಸರ್ಕಾರದ ಅಸಮರ್ಥತೆಯಿಂದ ಈ ಜನರು ಸತ್ತರೆ, ಅವರ ಕುಟುಂಬದವರಿಗೆ ಸರ್ಕಾರದವರು ಸೂಕ್ತ ಪರಿಹಾರ ಕೊಡಬೇಕು. ಇಲ್ಲದಿದ್ದರೆ ಸರ್ಕಾರದ ಕಡೆಯಿಂದ ಕರ್ತವ್ಯಲೋಪವಾಗುತ್ತದೆ ಎಂದು ಹೇಳುತ್ತೇನೆ. ಈ ಹಂದಿಗೋಡು ಕಾಯಿಲೆ ಮತ್ತು ಮಂಗನಕಾಯಿಲೆಗೆ ಸರ್ಕಾರದವರು ಲಸಿಕೆ ಇಲ್ಲವೇ ಔಷಧವನ್ನು ಕಂಡುಹಿಡಿದಿರುವುದು ಸುಳ್ಳು. ಡಾ॥ ಮುರಂಗೇಂದ್ರಪ್ಪ ಎಂಬುವರು ಈ ಕಾಯಿಲೆಯನ್ನು ವಾಸಿ ಮಾಡುವುದರಲ್ಲಿ ಒಳ್ಳೆಯ ತಜ್ಞರಾಗಿದ್ದಾರೆ. ಆದ್ದರಿಂದ ಇವರನ್ನು ಬೆಳ್ತಂಗಡಿಗೆ ಕಳುಹಿಸಿಕೊಡಬೇಕೆಂದು ಶ್ರೀ ವಸಂತಬಂಗೇರಾ ಅವರು ಕೇಳಿಕೊಂಡರೂ ಸಹ ಅಲ್ಲಿಗೆ ಕಳುಹಿಸಿಕೊಡಲಿಲ್ಲ. ಇದರಿಂದ ಬೆಳ್ತಂಗಡಿಯಲ್ಲಿ ೨೦೦-೩೦೦ ಜನರು ಈ ಕಾಯಿಲೆಗಳಿಂದ ಸತ್ತರು. ಈ ಸಾವುಗಳಿಗೆ ಸರ್ಕಾರವೇ ಕಾರಣವೆಂದು ಹೇಳುತ್ತೇನೆ ಈಗಲಾದರೂ ಸರ್ಕಾರದವರು ಈ ಎರಡು ಕಾಯಿಲೆಗಳಿಗೆ ಸಂಬಂಧಪಟ್ಟಂತೆ ನರಳುತ್ತಿರುವ ಜನರಿಗೆ ಸೂಕ್ತ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ಡಾಕ್ಟರ್‌ಗಳಿಗೆ ವಾಸ ಮಾಡಲು ಸರಿಯಾದಂತಹ ಮನೆಗಳು ಇಲ್ಲ. ಈ ಹಿಂದಿನ ಆರೋಗ್ಯ ಸಚಿವರು ಹುಡ್ಕೋ ನೆರವಿನಿಂದ ಎಲ್ಲ ಕಡೆಯೂ ಡಾಕ್ಟರ್‌ಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಹೇಳಿದ್ದರು. ಆದರೆ ಇಲ್ಲಿಯವರೆಗೆ ಎಲ್ಲಿಯೂ ಸಹ ಮನೆ

ಗಳಾಗಿಲ್ಲ. ಇದೇ ಕಾರಣದಿಂದ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗುತ್ತಿಲ್ಲ. ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರೆ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗುತ್ತಾರೆ. ಹಳ್ಳಿಗಳ ಸ್ಥಿತಿ ಈ ರೀತಿಯಾದರೆ, ಸಿಟಿಗಳಲ್ಲಿ ಈಗ ಇರುವಂಥ ಮನೆಗಳನ್ನು ಅವಶ್ಯಕತೆ ಇರುವವರಿಗೆ ಕೊಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಎಸೆನ್ಷಿಯಲ್ ಸರ್ವಿಸ್‌ನಲ್ಲಿರುವವರಿಗೆ ಸರ್ಕಾರದ ಮನೆಯನ್ನು ಕೊಡದೆ ಅಂಬೇಡ್ಕರ್ ಮೆಡಿಕಲ್ ಕಾಲೇಜ್‌ನಲ್ಲಿ ಕೆಲಸ ಮಾಡುತ್ತಿರುವ ಡಾ॥ ಇಂದಿರಾನರಸಿಂಹನ್ ಎಂಬುವರಿಗೆ ಅಲಾಟ್ ಮಾಡಿದ್ದಾರೆ. ಇದಕ್ಕೆ ಯಾರು ಕಾರಣಕರ್ತರು ? ಈ ಡಾಕ್ಟರ್‌ಗೂ ಮಂತ್ರಿಗಳಿಗೂ ಮತ್ತು ಇತರೇ ದೊಡ್ಡದೊಡ್ಡ ಅಧಿಕಾರಿಗಳಿಗೂ ಏನು ಸಂಬಂಧವಿದೆ ? ಇವರಿಗೆ ಸರ್ಕಾರದ ಮನೆಯನ್ನು ಏತಕ್ಕೆ ಕೊಟ್ಟರು ? ಇದರ ಹೊಣೆಗಾರಿಕೆಯನ್ನು ಯಾರ ಮೇಲೆ ಹೊರಿಸಬೇಕು ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಹಾಗೇ ಎಸೆನ್ಷಿಯಲ್ ಸರ್ವೀಸ್‌ನಲ್ಲಿ ಇರತಕ್ಕವರು ಅಂದರೆ ಡಾಕ್ಟರ್. ಸರ್ಜನ್ ಮುಂತಾದವರಿಗೆ ಆಸ್ಪತ್ರೆ ಪಕ್ಕದಲ್ಲೇ,ಆಸ್ಪತ್ರೆಯ ಹತ್ತಿರದಲ್ಲೇ ಕ್ವಾರ್ಟರ್ಸ್ ಮನೆಗಳನ್ನು ಕೊಡಬೇಕು,ಬೇರೆಯಾರೋ ಖಾಸಗಿಯವರಿಗೆ ಕೊಟ್ಟಿದ್ದಾರೆಂದರೆ ನಾಚಿಕೆಗೇಡಿನ ವಿಷಯ. ಇದರ ಬಗ್ಗೆ ತಕ್ಷಣ ಎನ್‌ಕ್ವೈರಿ ಮಾಡಿ ಆ ಮನೆಯನ್ನು ಬಿಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಎಲ್ಲಾ ಆಸ್ಪತ್ರೆಯಲ್ಲೂ ಕೂಡ ವೈದ್ಯರು ಇದ್ದರೆ ವಾಹನಗಳಿಲ್ಲ. ವಾಹನಗಳಿದ್ದರೆ ಅದಕ್ಕೆ ಪೆಟ್ರೋಲ್ ಇಲ್ಲ ಪೆಟ್ರೋಲ್ ಇದ್ದರೂ ಕೂಡ ಅದಕ್ಕೆ ರಿಪೇರಿ ಇರುವುದಿಲ್ಲ. ಇಂತಹ ಒಂದು ವ್ಯವಸ್ಥೆ ನಡೆದಿದೆ. ಹಾಗೆಯೇ ರಾಜ್ಯದಲ್ಲಿರತಕ್ಕಂಥ ವೈದ್ಯರುಗಳಿಗೆ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಇವತ್ತು ಎಲ್ಲಾ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರುವ ವೈದ್ಯರುಗಳು ಹೊಸದಾಗಿ ಬೋರ್ಡ್ ಹಾಕಿಕೊಂಡು ಬೀದಿಯಲ್ಲಿ ಮಳಿಗೆಗಳನ್ನು ತೆಗೆದುಕೊಂಡು ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾ ಇದ್ದಾರೆ. ಅನೇಕ ವೈದ್ಯರು ಗಗನಚುಂಬಿ ಕಟ್ಟಡಗಳನ್ನು ಕಟ್ಟಿ ನರ್ಸಿಂಗ್‌ಹೋಂಗಳನ್ನು ನಡೆಸುತ್ತಾ ಇದ್ದಾರೆ. ಇವರಿಗೆ ಆಸ್ಪತ್ರೆ ಮೇಲೆ ಆಸಕ್ತಿ ಇಲ್ಲ ರೋಗಿಗಳ ಮೇಲೆ ಆಸಕ್ತಿ ಇಲ್ಲ ತಮ್ಮ ಖಾಸಗಿ ನರ್ಸಿಂಗ್ ಹೋಂಗಳಿಗೆ ರೋಗಿಗಳನ್ನು ಕರೆಯುತ್ತಾರೆ. ಯಾರೋ ಒಬ್ಬರು ಒಳ್ಳೆಯವರು ಇರಬಹುದು. ಹೆಚ್ಚಿನ ವೈದ್ಯರುಗಳು ಖಾಸಗಿಯಾಗಿ ಸಂಪಾದನೆ ಮಾಡತಕ್ಕ ಕೆಲಸದಲ್ಲಿ ತೊಡಗಿದ್ದಾರೆ. ಇವತ್ತು ಆಸ್ಪತ್ರೆಗಳಲ್ಲಿರತಕ್ಕ ರೋಗಿಗಳನ್ನು ನೋಡಲಿಕ್ಕೆ ಇವರಿಗೆ ಇಚ್ಛೆ ಇಲ್ಲ. ದೊಡ್ಡ ದೊಡ್ಡ ಗಗನಚುಂಬಿ ಕಟ್ಟಡಗಳನ್ನು ಕಟ್ಟಿದ್ದಾರೆ ಶಿವಮೊಗ್ಗ ತೆಗೆದುಕೊಳ್ಳಿ ಬೆಂಗಳೂರು ತೆಗೆದುಕೊಳ್ಳಿ ಎಲ್ಲಾ ಕಡೆಯೂ ಈ ದೊಡ್ಡ ದೊಡ್ಡ ವೈದ್ಯರುಗಳು ನರ್ಸಿಂಗ್‌ಹೋಂಗಳನ್ನು ಕಟ್ಟಿದ್ದಾರೆ. ಆಸ್ಪತ್ರೆಯಿಂದ ಟೈಮಿಗೆ ಸರಿಯಾಗಿ ಹೊರಟು ಬರುತ್ತಾರೆ ಕೊನೇ ಘಳಿಗೆಯಲ್ಲಿ ರೋಗಿ ಬಂದರೆ ನಮ್ಮ ನರ್ಸಿಂಗ್‌ಹೋಂಗೆ ಬಂದುಬಿಡಿ ಎನ್ನುವ ಮಾತನ್ನು ಎಷ್ಟೋ ಜನರು ಹೇಳಿದ್ದಾರೆ. ನಮ್ಮ ಸ್ನೇಹಿತರೊಬ್ಬರು ಹೇಳಿದರು ಆಸ್ಪತ್ರೆಗೆ ಬಂದವರನ್ನೆಲ್ಲಾ ನರ್ಸಿಂಗ್‌ಹೋಂಗೆ ಬಾದುಬಿಡಿ ಎಂದು ಒಬ್ಬರು ಹೇಳಿದರಂತೆ. ಇದು ಬಹಳ ಅನ್ಯಾಯ. ಈ ವ್ಯವಸ್ಥೆಯನ್ನು ನಿಲ್ಲಿಸಬೇಕು. ಮೊನ್ನೆ ನರ್ಸಿಂಗ್ ಸೂಪರಿಂಟೆಂಡೆಂಟ್ ವಿಚಾರ ಬಂದಿತ್ತು, ರವಾಬಂಧಾರಿಯವರ ಕೇಸ್ ಕೂಡ ಬಂದಿದೆ ಕೇವಲ ೩೭೦೦ ಜನರಿಗೋಸ್ಕರ ಒಂದು ಡೈರೆಕ್ಟೊರೇಟ್ ತೆಗೆಯಬೇಕು ಎನ್ನತಕ್ಕಂಥ ಮಾತು ಇದರಲ್ಲಿ ಬಂದಿದೆ. ಅದು ಅನಾವಶ್ಯಕ, ಸುಮಾರು ೫೦ ಸಾವಿರ ಇರತಕ್ಕಂಥ ನೌಕರರಿಗೆ ಒಂದು ಡೈರೆಕ್ಟೊರೇಟ್ ಆದರೆ ೩ ಸಾವಿರ ಚಿಲ್ಲರೆ ಜನರು ಇರತಕ್ಕಂಥದ್ದಕ್ಕೆ ಒಂದು ಡೈರೆಕ್ಟೊರೇಟ್ ಮಾಡಿರುವುದು ಬಹಳ ಅರ್ಥಹೀನ, ಈ ವ್ಯವಸ್ಥೆಯನ್ನು ತಪ್ಪಿಸಬೇಕು. ಮತ್ತು ಅಧಿಕಾರಿಗಳ ಸಮಿತಿಯಲ್ಲೂ ಕೂಡ ಈ ಒಂದು ಡೈರೆಕ್ಟೊರೇಟ್ ಆವಶ್ಯಕತೆ ಇಲ್ಲ ಆರ್ಥಿಕ ವ್ಯವಸ್ಥೆಯಿಂದ ನೋಡಿದರೂ ಕೂಡ ಇದು ಅಷ್ಟೊಂದು ಸರಿಯಲ್ಲ ಎಂದು ಹೇಳಿದರೂ ಕೂಡ ಇದನ್ನು ಉದ್ದೇಶಪೂರ್ವಕವಾಗಿ ಯಾರನ್ನೋ ಡೈರೆಕ್ಟರ್ ಮಾಡುವುದಕ್ಕೋಸ್ಕರ,ಯಾರನ್ನೋ ಪದವಿಗೋಸ್ಕರ ಡೈರೆಕ್ಟರನ್ನಾಗಿ ನೇಮಿಸಿರತಕ್ಕ ವ್ಯವಸ್ಥೆಯನ್ನು ಮಾಡಿರುವುದನ್ನು ನಾನು ತೀವ್ರವಾಗಿ ವಿರೋಧಿಸುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ

ಎರಡನೆಯದಾಗಿ ಆಸ್ಪತ್ರೆಗಳಲ್ಲಿರತಕ್ಕಂಥ ಔಷಧಿ ಸರಬರಾಜು ಏನು ಇದೆ ಇದರಲ್ಲಿ ಕೋಟಾ ಔಷಧಿಗಳೇ ಹೆಚ್ಚಾಗುತ್ತಿದೆ. ಒಂದು ಅನುಭವದ ಮಾತನ್ನು ಹೇಳುವುದಾದರೆ, ನಾನು ಮತ್ತು ಮಾನ್ಯ ಮಲ್ಲಾರಿಗೌಡ ಪಾಟೀಲರು ಪ್ರವಾಸಕ್ಕೆ ಹೋದಾಗ ಹಾಸನದ ಮೈಸೂರು ಮಿನರಲ್ಸ್ ಕಾರ್ಖಾನೆಗೆ ಹೋಗಿದ್ದೆವು. ಅಲ್ಲಿ ಮಣ್ಣಿನ ಕೆನೆ ತಯಾರು ಮಾಡತಕ್ಕಂಥ ಫ್ಯಾಕ್ಟರಿ ಇದೆ ಇದನ್ನು ತಯಾರು ಮಾಡುತ್ತಿದ್ದಾಗ ನಾವು ಇದು ಏತಕ್ಕೆ ಬರುತ್ತದೆ ಎಂದು ವಿಚಾರಿಸಿದಾಗ ಪಿಂಗಾಣಿ ಸಾಮಾನು

ಮಾಡುವುದಕ್ಕೆ ಬರುತ್ತದೆ, ಮತ್ತೆ ಹೆಚ್ಚಾಗಿ ಡ್ರಗ್ ಕಂಪೆನಿಯವರು ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳಿದರು. ಮಣ್ಣು ತಿನ್ನಬೇಕಲ್ಲಾ ಎಂದು ನಾನು ಅವತ್ತಿನಿಂದ ಮಾತ್ರೆ ನುಂಗುವುದನ್ನು ಬಿಟ್ಟಿದ್ದೇನೆ ತಲೆನೋವು ಬಂದರೂ, ಹೊಟ್ಟೆನೋವು ಬಂದರೂ ಮಾತ್ರೆ ನುಂಗುವುದನ್ನು ಬಿಟ್ಟಿದ್ದೇನೆ ಡ್ರಗ್ ಕಂಪೆನಿಯವರು ರಾಜಾರೋಷವಾಗಿ ಆ ಕಾರ್ಖಾನೆಯಿಂದ ಮಣ್ಣಿನ ಕೆನೆಯನ್ನು ಕೊಂಡು ಕೊಂಡು ಹೋಗಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾತ್ರೆಯನ್ನು ತಿಂದಿದ್ದರೆ ಬಹುಶಃ ಅವರಿಗೆ ಇರತಕ್ಕ ಕಾಯಿಲೆ ಗುಣವಾಗುತ್ತಿತ್ತೇನೋ.

ನನಗೆ ಕಾಯಿಲೆನೇ ಇಲ್ಲ, ನಿಮಗೇನಾದರೂ ಇದ್ದರೆ ಇರಬಹುದು. ಮಣ್ಣಿನ ಕೆನೆಯನ್ನು ಡ್ರಗ್ಸ್ ಕಂಪನಿಗಳವರು ತೆಗೆದುಕೊಂಡು ಹೋಗಿ ಮಾತ್ರೆಗಳನ್ನು ಅಚ್ಚು ಹಾಕಿ, ಸೀಲ್ ಮಾಡಿ ಕೊಡುತ್ತಾರೆ. ಇಂಥ ಒಂದು ವ್ಯವಹಾರ, ಈ ಸರ್ಕಾರಕ್ಕೆ ಗೊತ್ತಿಲ್ಲ ಅಂದರೆ ಆಶ್ಚರ್ಯವಾಗುತ್ತದೆ. ನಾನು ಮತ್ತು ಮಾನ್ಯ ಮಲ್ಲಾರಿಗೌಡ ಪಾಟೀಲರು ಅಲ್ಲಿಗೆ ಹೋದಾಗ ಹೇಳಿದ್ದಾರೆ. ಇವತ್ತು ಲೋಡುಗಟ್ಟಲೆ ಎಲ್ಲಾ ಕಂಪನಿಗಳವರು ತೆಗೆದುಕೊಂಡು ಹೋಗುತ್ತಿದ್ದಾರೆ, ಕೋಡೇಸ್ ಫ್ಯಾಕ್ಟರಿಯವರು ನೀರು ಕೊಟ್ಟ ಹಾಗೆ, ಡ್ರಗ್ಸ್ ಕಂಪನಿಗಳವರು ಔಷಧಿಯನ್ನು ಕೊಡುತ್ತಿದ್ದಾರೆ. ಈ ಒಂದು ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಆಸ್ಪತ್ರೆಗಳಿಗೆ ಒದಗಿಸತಕ್ಕ ಔಷಧಿಗಳು ಪೂರಾ ಖೋಟಾ ಮಾಲುಗಳಾಗಿವೆ. ಇವತ್ತು ಎಲ್ಲಾ ಔಷಧಿಗಳನ್ನು ಮಾರ್ವಾಡಿಗಳೇ ಕೊಡುತ್ತಿದ್ದಾರೆ. ಕೆನ್‌ಷಾ ಎನ್ನುವ ಒಂದು ಕಂಪನಿ ರಾಜ್ಯದಲ್ಲಿ ಒಟ್ಟು ೪೯ ಜಾತಿಯ ಔಷಧಿಗಳನ್ನು ಕೊಡುತ್ತಿದೆ. ಇದು ಒಳ್ಳೆಯದನ್ನು ಕೊಡುತ್ತಿದೆಯೋ ಕೆಟ್ಟದ್ದನ್ನು ಕೊಡುತ್ತಿದೆಯೋ ಗೊತ್ತಿಲ್ಲ.

ಚೇರ್ಮನ್.—ಮಾನ್ಯ ಸ್ವಾಮಿರಾಯರೇ ೩೫ ನಿಮಿಷ ಆಯಿತು,

ಶ್ರೀ ಐ. ಬಿ. ಶಂಕರ್.—ಅವರು ಅಬ್ಕಾರಿ ಮತ್ತು ಆರೋಗ್ಯದಂಥ ಪ್ರಮುಖ ಇಲಾಖೆಯ ಮೇಲೆ ಚರ್ಚೆ ಪ್ರಾರಂಭ ಮಾಡಿದ್ದಾರೆ.

ಚೇರ್ಮನ್.—ನಾನು ಅವರಿಗೆ ಜ್ಞಾಪಿಸಿದೆ.

ಶ್ರೀ ಬಿ. ಸ್ವಾಮಿರಾವ್.—ಇವತ್ತು ಕೆನ್‌ಷಾ ಸಂಸ್ಥೆ, ಸುಮಾರು ೪೯ ಜಾತಿಯ ಔಷಧಿಗಳನ್ನು ಸರಬರಾಜು ಮಾಡತಕ್ಕ ಒಂದು ಚಮತ್ಕಾರವನ್ನು, ವ್ಯವಹಾರವನ್ನು ಇಲಾಖೆಯೊಂದಿಗೆ ಹಾಗೂ ಸರ್ಕಾರದೊಂದಿಗೆ ಇಟ್ಟುಕೊಂಡಿದೆ. ಇದು ಸರ್ಕಾರೀ ಆಸ್ಪತ್ರೆಗಳಿಗೆ ಮಾತ್ರ ಸರಬರಾಜು ಮಾಡುತ್ತಿದೆ ಕಳಪೆ ಔಷಧಿಗಳನ್ನು ಮಾತ್ರ ಸರಬರಾಜು ಮಾಡುತ್ತಿದೆ. ಹೊಸನಗರದಲ್ಲಿ ಒಂದು ದೊಡ್ಡ ಕಥೆ ಆಯಿತು, ಒಂದು ಮಗುವಿಗೆ ಟೆಸ್ಟ್ ಡೋಜ್ ಕೊಟ್ಟಿದ್ದಕ್ಕೆ ಮಗು ಸತ್ತುಹೋಯಿತು. ಇಂಥ ಔಷಧಿಗಳನ್ನು ಯಾರು ಕೊಟ್ಟಿದ್ದು? ಯಾರು ಸರಬರಾಜು ಮಾಡಿದ್ದರು? ಇವತ್ತು ಅಲ್ಲಿನ ಜನಗಳಲ್ಲಿ ಟೆಸ್ಟ್ ಡೋಜ್ ಬೇಡ ಯಾವುದೂ ಬೇಡ, ಆಸ್ಪತ್ರೆಗೆ ಹೋಗದಿದ್ದರೆ ಬದುಕಿಕೊಳ್ಳುತ್ತೇವೆ ಎನ್ನುವ ನಂಬಿಕೆ ಇದೆ. ಮಣ್ಣಿನ ಮಾತ್ರೆಗಳು, ಕಳಪೆ ಟೆಸ್ಟ್ ಡೋಜ್‌ಗಳನ್ನು ನಿಲ್ಲಿಸುವುದಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಕಾರ್ಪೊರೇಷನ್ ಆಸ್ಪತ್ರೆಗಳಲ್ಲಿ ಕೂಡ ಕಳಪೆ ಔಷಧಿಗಳನ್ನು ಕೊಡುತ್ತಿದ್ದಾರೆ. ಕೆಲವು ದಿವಸಗಳ ಹಿಂದೆ, ನಿಮ್ಮ ಪಕ್ಷದ ಕಾರ್ಪೊರೇಟರಾದ ಮಾನ್ಯ ಶೇಷಾದ್ರಿಯವರು ಲಕ್ಷಾಂತರ ರೂಪಾಯಿಗಳು ಔಷಧಿ ಕೊಳ್ಳುವುದರಲ್ಲಿ ದುರುಪಯೋಗವಾಗಿರುವುದನ್ನು ರುಜುವಾತು ಮಾಡಿದರು. ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಕಾರಣ ನಮಗೆ ಗೊತ್ತಿಲ್ಲ. ಕ್ರಮ ತೆಗೆದುಕೊಳ್ಳುತ್ತಾರೋ ಬಿಡುತ್ತಾರೋ ನೋಡಬೇಕು. ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುತ್ತೀರಿ, ಮೆಡಿಕಲ್ ಕಾಲೇಜುಗಳನ್ನು ಕೊಡುತ್ತಲೇ ಇದ್ದೀರಿ. ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುವ ದಿಕ್ಕಿನಲ್ಲಿ ಯಾವ ಪ್ರಯತ್ನವನ್ನೂ ಮಾಡಿದಂತೆ ಕಾಣುತ್ತಿಲ್ಲ. ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡುತ್ತಿಲ್ಲವೆಂದು ಹೇಳುತ್ತಲೇ ಜಾತಿಗೊಂದು ಕಾಲೇಜುಗಳನ್ನು ಕೊಡುತ್ತಿದ್ದೀರಿ? ಶಿವಮೊಗ್ಗ ಜಿಲ್ಲೆಯವರು ಕೂಡ ಕಳೆದ ೨೫ ವರ್ಷಗಳಿಂದ ಒಂದು ಮೆಡಿಕಲ್ ಕಾಲೇಜು ಕೊಡಬೇಕೆಂದು ಬೇಡಿಕೆ ಇಡುತ್ತಾ ಬಂದಿದ್ದಾರೆ. ನಾವು ಯಾವ ಜಾತಿಯ ಹೆಸರು ಇಟ್ಟುಕೊಳ್ಳಬೇಕು. ಬ್ರಾಹ್ಮಣರ ಮೆಡಿಕಲ್ ಕಾಲೇಜು ಎಂದು ಹೆಸರು ಇಟ್ಟುಕೊಂಡರೆ ಕೊಡುತ್ತೀರಾ? ಮೆಡಿಕಲ್ ಕಾಲೇಜು ಕೊಡುವುದನ್ನು ಇವರು ವಿರೋಧಿಸುತ್ತಿದ್ದರು. ಇವೊತ್ತು ಎಲ್ಲಾ ಜನಾಂಗದವರಿಗೂ

ಮೆಡಿಕಲ್ ಕಾಲೇಜು ಕೊಟ್ಟಿರುವುದನ್ನು ನೋಡಿದರೆ ನಾಚಿಕೆಗೇಡಿನ ವಿಷಯ. ಇನ್ನು ಕ್ಯಾಪಿಟೇಷನ್ ವಿಷಯ ಗಗನಕ್ಕೆ ಹೋಗಿದೆ, ಇದರಿಂದ ಬಡವರ ಮಕ್ಕಳು, ರೈತರ ಮಕ್ಕಳು ಓದಲಿಕ್ಕೆ ಆಗುವುದಿಲ್ಲ. ಮೆಡಿಕಲ್ ಕಾಲೇಜಿನಲ್ಲಿ ವ್ಯಾಪಾರ ಆಗುತ್ತಿದೆ. ನಾನು ೯೪ ಪರ್‌ಸೆಂಟ್ ತೆಗೆದುಕೊಂಡಿರತಕ್ಕ ಒಬ್ಬ ಹುಡುಗನನ್ನು ದಾವಣಗೆರೆಗೆ ಕರೆದುಕೊಂಡು ಹೋದೆ. ಅಲ್ಲಿ ಕೇಳಿದರೆ, ನಿಮ್ಮ ಹುಡುಗನಿಗೆ ಸೀಟು ಸಿಕ್ಕುವುದಿಲ್ಲ ಎಂದು ಹೇಳಿದರು. ನಮ್ಮ ಹುಡುಗ ೯೪ ಪರ್‌ಸೆಂಟ್ ತೆಗೆದುಕೊಂಡಿದ್ದಾನೆ ಎಂದು ಹೇಳಿದೆ. ಆಗ ಅವರು ಈ ದಾವಣಗೆರೆಯಲ್ಲಿ ೯೪ ಪರ್‌ಸೆಂಟ್ ತೆಗೆದುಕೊಂಡಿರತಕ್ಕವರು ೩೪ ಜನರು ಇದ್ದಾರೆ ಎಂದು ಹೇಳಿದರು. ಕಡೆಗೂ ಆ ಹುಡುಗನಿಗೆ ಸೀಟು ಸಿಕ್ಕಲಿಲ್ಲ, ಆ ಹುಡುಗ ಅಳುತ್ತಾ ಕುಳಿತುಕೊಂಡ, ಅನಂತರ ಸಮಾಧಾನ ಮಾಡಿ ಆ ಹುಡುಗನನ್ನು ವಾಪಸ್ಸು ಕರೆದುಕೊಂಡು ಹೋಗಿ ಅವರ ಮನೆಗೆ ಕಳುಸಿದೆ. ೫೦ ಪರ್‌ಸೆಂಟ್ ಮೇಲೆ ಯಾರು ಯಾರು ತೆಗೆದುಕೊಂಡಿರುತ್ತಾರೋ ಅವರೆಲ್ಲಾ ಪ್ರತಿ ನಂಬರಿಗೆ ೨೦೦ ರೂಪಾಯಿನಂತೆ ಸೇರಿಸಿ ೯೪ ಪರ್‌ಸೆಂಟಿಗೆ ನಿಲ್ಲಿಸಿಕೊಂಡಿರುತ್ತಾರೆ. ಅದೆಲ್ಲಾ ಅಲ್ಲಿರತಕ್ಕ ಅಧಿಕಾರವರ್ಗದವರು ಹೇಳಿದ್ದರಿಂದ ಗೊತ್ತಾಯಿತು. ಆಗ ನಾನು ಕೈಮುಗಿದು ನಿಮ್ಮ ಸೀಟು ಬೇಡ ಎಂದು ಹೇಳಿ ವಾಪಸ್ಸು ಬಂದೆ. ಇವೊತ್ತು ಇವರು ಕ್ಯಾಪಿಟೇಷನ್ ಫೀ ತೆಗೆಯುತ್ತೇವೆಂದು ಹೇಳಿ ಒಂದು ಲಕ್ಷದಿಂದ ಐದು ಲಕ್ಷರೂಪಾಯಿವರೆಗೆ ಹೋಗಿದೆ. ಇನ್ನು ಎಂ. ಡಿ. ಸೀಟು ಸರ್ಕಾರಿ ಕೋಟಾ ಪ್ರಕಾರ ತೆಗೆದುಕೊಳ್ಳಬೇಕೆಂದು ಖಾಸಗಿ ಕಾಲೇಜುಗಳಿಗೆ ಆದೇಶ ಕೊಟ್ಟಿದ್ದೀರಿ ಅವರು ತೆಗೆದುಕೊಂಡಿಲ್ಲ, ನೀವು ಕಳುಹಿಸಿಲ್ಲ. ಮೆಡಿಕಲ್ ಕಾಲೇಜಿನಲ್ಲಿ ಎರಡು ಲಕ್ಷರೂಪಾಯಿಗೆ ಮಾರಾಟ ಮಾಡಿ ಕೊಟ್ಟಿದ್ದಾರೆ. ಮುಂದಿನ ಸಾಲಿಗೆ ತೆಗೆದುಕೊಳ್ಳಬೇಕೆಂದು ಹೇಳಿದರೆ, ನಮ್ಮ ಕಾಲೇಜಿಗೆ ಎರಡು ಸೀಟು ಕೊಡಿ, ಗವರ್ನ್‌ಮೆಂಟಿಗೆ ಎರಡು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರಂತೆ ಅದಕ್ಕೆ ನೀವು ಮನ್ನಣೆ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. ಈ ವ್ಯವಸ್ಥೆ ಸರಿಯಿಲ್ಲ ಕ್ಯಾಪಿಟೇಷನ್ ವ್ಯವಸ್ಥೆ ಬಹಳ ಕೆಟ್ಟದ್ದು ಈ ವ್ಯಾಪಾರ ಒಳ್ಳೆಯದು ಅಲ್ಲ. ಎಲ್ಲಾ ಆಸ್ಪತ್ರೆಗಳಲ್ಲೂ ಹೆಚ್ಚು ಭ್ರಷ್ಟಾಚಾರ ನಡೆದಿದೆ. ಇವೊತ್ತು ಒಳ್ಳೆಯ ಡಾಕ್ಟರಿಗೆ ಒಳ್ಳೆಯ ಮಾನ್ಯತೆ ಕೊಡುತ್ತಿಲ್ಲ. ಇನ್ನು ಮೊನ್ನೆ ಸಿರಗುಪ್ಪದ ಬಗ್ಗೆ ಮಾನ್ಯ ರಾಮಪ್ಪನವರು ಮತ್ತು ನಮ್ಮ ಸ್ನೇಹಿತರು ಹೇಳುತ್ತಿದ್ದರು. ಒಳ್ಳೆಯ ಸೇವೆ ಮಾಡತಕ್ಕ ಒಬ್ಬ ಡಾಕ್ಟರಿಗೆ ಅಲ್ಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್ ಹೊಡೆದು ಬಡಿದು ಗಲಾಟೆ ಮಾಡಿದ್ದಾರೆ. ಆ ಬಗ್ಗೆ ಅಲ್ಲಿಯ ಡಾಕ್ಟರು ಮೆಡಿಕಲ್ ಆಫೀಸರ್ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬರವಣಿಗೆಯ ಮೂಲಕ ಕಳುಹಿಸಿಕೊಟ್ಟರು. ಕಡೆಗೆ ಏನಾಯಿತು ಅಂದರೆ ಅಲ್ಲಿ ಬಾರ್ ಮತ್ತು ಕ್ಲಬ್ ನಡೆಸಿಕೊಂಡಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್ ಈ ಡಾಕ್ಟರಿಗ ಟ್ರಾನ್ಸ್‌ಫರ್ ಮಾಡಿಸಿ ಕ್ಲಬ್ ನಡೆಸಿಕೊಂಡು ಚೆನ್ನಾಗಿದ್ದಾರೆ. ಇವೊತ್ತು ಒಳ್ಳೆಯ ಸೇವೆ ಮಾಡತಕ್ಕವರಿಗೆ ಮರ್ಯಾದೆ ಕೊಡುತ್ತಿಲ್ಲ. ರಕ್ಷಣೆಯನ್ನು ಕೊಡುತ್ತಿಲ್ಲ ಈ ಒಂದು ಸ್ಥಿತಿ ಕೂಡ ಹೋಗಬೇಕಾಗುತ್ತದೆ ಈ ವಿಷಯವನ್ನು ನಾನು ಬಹಳ ಕಟುವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇನ್ನು ಈ ಆರೋಗ್ಯ ಇಲಾಖೆ ಎಷ್ಟೊಂದು ಕೆಟ್ಟ ಸ್ಥಿತಿಯಲ್ಲಿದೆ ಎಂಬುದರ ಬಗ್ಗೆ ೬ ತಿಂಗಳ ಹಿಂದೆ ಮೂರು ನಾಲ್ಕು ವಾರಗಳ ಕಾಲ ಕಂಟಿನ್ಯುಯಸ್ ಆಗಿ ಲಂಕೇಶ್ ಪತ್ರಿಕೆಯಲ್ಲಿ ಬಂದಿದೆ ಅವರು ಬಹಳ ಚೆನ್ನಾಗಿ ಬರೆದಿದ್ದರು. ಯಾವ ಯಾವ ಆಸ್ಪತ್ರೆ ಯಾವ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಒಂದೊಂದು ಇಷ್ಯೂನಲ್ಲೂ ಒಂದೊಂದು ವಿಭಾಗದ ಆಸ್ಪತ್ರೆಯ ಬಗ್ಗೆ ಬರೆದಿದ್ದರು. ತಮಗೆ ಅದನ್ನು ಯಾರಾದರೂ ತಂದು ತೋರಿಸಿದರೋ ಏನೋ ಗೊತ್ತಾಗಲಿಲ್ಲ. ಬೇರೆಯವರ ಬಗ್ಗೆ ಬೈದು ಬರೆದರೆ ಅದನ್ನು ಓದುತ್ತೀರಿ, ನಿಮಗೆ ಬೈದು ಬರೆದಿದ್ದರೆ ಅದನ್ನು ನೀವು ಓದುವುದು ಇಲ್ಲ, ಅದನ್ನು ನೋಡಲಿಕ್ಕೆ ಹೋಗುವುದಿಲ್ಲ. ಆಸ್ಪತ್ರೆಗಳ ಸ್ಥಿತಿಗತಿಗಳ ಬಗ್ಗೆ ಬಹಳ ಚೆನ್ನಾಗಿ ಚಿತ್ರ ಸಹಿತ ಹಾಕಿದ್ದರು. ನಿಮ್ಮ ಇಲಾಖೆಯಲ್ಲಿಯೂ ಸಹ ಪತ್ರಿಕೆಯಲ್ಲಿ ಬಂದಿರತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತರತಕ್ಕ ಸಿಬ್ಬಂದಿ ಇದೆ. ಆ ವಿಷಯ ನಿಮಗೆ ತಿಳಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ, ಈಗಲಾದರೂ ತರಿಸಿ ನೋಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೆಲವು ಮೆಡಿಕಲ್ ಕಾಲೇಜುಗಳಿಗೆ ೧೦೦, ಇನ್ನು ಕೆಲವು ಮೆಡಿಕಲ್ ಕಾಲೇಜುಗಳಿಗೆ ೧೫೦, ಇನ್ನು ಬೇರೆ ಮೆಡಿಕಲ್ ಕಾಲೇಜುಗಳಿಗೆ ಕೇವಲ ೮೦, ಮತ್ತೆ ಬೇರೆ ಮೆಡಿಕಲ್ ಕಾಲೇಜುಗಳಿಗೆ ೩೦೦-೩೦೦ ಸೀಟುಗಳನ್ನು ಕೊಟ್ಟಿದ್ದೀರಿ ಇದು ಯಾವ ಸಿದ್ಧಾಂತ, ಯಾವ ನೀತಿ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕು, ಎರಡು ಕಾಲೇಜುಗಳಿಗೆ ೩೦೦-೩೦೦ ಸೀಟುಗಳನ್ನು ಯಾವ ಕಾರಣದ ಮೇಲೆ ಕೊಟ್ಟಿದ್ದೀರಿ? ದಾವಣಗೆರೆ ಮತ್ತು ಮಂಗಳೂರು ಮೆಡಿಕಲ್ ಕಾಲೇಜುಗಳಿಗೆ ೩೦೦-೩೦೦

ಸೀಟುಗಳನ್ನು ಈ ರೀತಿ ಮನಸ್ಸಿಗೆ ಬಂದಷ್ಟು ಕೊಡುವುದರ ಬದಲು ನಮ್ಮ ಶಿವಮೊಗ್ಗಾಕ್ಕೆ ೮೦ ಸೀಟುಗಳನ್ನು ಕೊಟ್ಟಿದ್ದರೆ ಸಾಕಾಗುತ್ತಿತ್ತು. ನೀವು ಏತಕ್ಕೆ ಈ ರೀತಿ ತಾರತಮ್ಯ ಮಾಡುತ್ತೀರಿ? ಇಲ್ಲಿರತಕ್ಕ ಖಾಸಗೀ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆಗಳನ್ನು ಏತಕ್ಕೆ ಬಿಟ್ಟುಕೊಟ್ಟಿದ್ದೀರಿ? ಬೌರಿಂಗ್ ಆಸ್ಪತ್ರೆ ಮತ್ತು ಕೆ.ಸಿ.ಜಿ. ಆಸ್ಪತ್ರೆಗಳನ್ನು ಬಿಟ್ಟು ಕೊಟ್ಟಿರುವುದು ನ್ಯಾಯವೇ? ಯಾವುದೇ ಮೆಡಿಕಲ್ ಕಾಲೇಜಾಗಲಿ, ಅದು ಸ್ಥಾಪನೆಯಾದ ೩ ವರ್ಷದೊಳಗೆ ತನ್ನ ಸ್ವಂತ ಆಸ್ಪತ್ರೆಯನ್ನು ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಕಾನೂನನ್ನೇ ಮಾಡಿದಿರಿ. ಆದರೆ ಅದರಂತೆ ನೀವು ನಡೆದುಕೊಳ್ಳುತ್ತಿಲ್ಲ. ಮೆಡಿಕಲ್ ಕಾಲೇಜುಗಳವರು ಚೆನ್ನಾಗಿ ಸಂಪಾದನೆ ಮಾಡಿಕೊಳ್ಳುವುದಕ್ಕೆ ಇದನ್ನು ಒಂದು ಕಾರ್ಖಾನೆ ಮಾಡಿಕೊಂಡಿದ್ದಾರೆ. ದುಡ್ಡನ್ನು ಪ್ರಿಂಟ್ ಮಾಡಿಕೊಂಡಂತೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಇದು ಸರಿಯೇ? ಇದನ್ನು ನೀವು ಯಾವಾಗ ಸರಿಪಡಿಸುತ್ತೀರೆಂದು ನಾನು ಕೇಳಬಯಸುತ್ತೇನೆ.

ಇನ್ನು ಇಲ್ಲಿಯ ನೇಮಕಾತಿಯ ಬಗ್ಗೆ ಕೂಡ ಅದೇ ಅವ್ಯವಸ್ಥೆ ಇದೆ. ಕ್ರಮವಾಗಿ ನೇಮಕಾತಿಗಳು ನಡೆಯುತ್ತಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಶಿವಮೊಗ್ಗಾದಲ್ಲಿ "ಡಿ" ದರ್ಜೆ ನೌಕರರ ಆಯ್ಕೆ ನಡೆಯುತ್ತಿತ್ತು. ಈ ಆಯ್ಕೆಯನ್ನು ಅಲ್ಲಿದ್ದ ಡಿ.ಹೆಚ್.ಓ.ರವರು ಮಾಡಿದರು. ನಾವು ಶಾಸಕರಾದ್ದರಿಂದ ಜನರಿಂದ ಮತವನ್ನು ತೆಗೆದುಕೊಂಡು ಗೆದ್ದು ಬಂದಿರುತ್ತೇವೆ ಕೆಲವು ಜನರು ಬಂದು ಸ್ವಾಮಿ, ನಾವು ನಿಮ್ಮ ಕ್ಷೇತ್ರದವರು ನಾವು ನಿಮಗೆ ಮತ ಕೊಟ್ಟವರು. ನಮಗೂ ಒಂದು ಹುದ್ದೆಯನ್ನು ಕೊಡಿಸಿ, ನಮ್ಮ ಮಕ್ಕಳಿಗೂ ಒಂದು ಹುದ್ದೆಯನ್ನು ಕೊಡಿಸಿ ಎಂದು ಬಂದು ಕೇಳಿದರು. ಅಲ್ಲಿ ನಡೆಯುತ್ತಿದ್ದದು "ಡಿ" ದರ್ಜೆಯ ಹುದ್ದೆಗಾಗಿ ನಾನೂ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು, ಮಾನ್ಯ ರತ್ನಾಕರ್‌ರವರೂ ಕೆಲವರಿಗೆ ಕೆಲಸವನ್ನು ಕೊಡುವಂತೆ ಒಂದೆರಡು ಕಾಗದಗಳನ್ನು ಕೊಟ್ಟೆವು ಆದರೆ ಆ ಡಿ.ಹೆಚ್.ಓ. ರವರು ನಮ್ಮ ಕಡೆಯವರಿಗೆ ಒಬ್ಬರಿಗೂ ಒಂದೇ ಒಂದು ಸೀಟನ್ನೂ ಕೊಡಲಿಲ್ಲ. ನಮ್ಮ ಕಾಗದಗಳನ್ನೆಲ್ಲಾ ಹರಿದು ಬುಟ್ಟಿಗೆ ಬಿಸಾಡಿದರೆಂದು ಕಾಣುತ್ತದೆ. ಇದು ಏತಕ್ಕೆ ಹೀಗಾಯಿತು ಎಂದು ಕೇಳಿದಾಗ ಆ ಡಿ.ಹೆಚ್ ಓ ಯಾರಿದ್ದಾರೆ ಅವರು ಒಂದೊಂದು ಸೀಟಿಗೆ ೧೦ ಸಾವಿರ ರೂಪಾಯಿಗಳಂತೆ ದುಡ್ಡನ್ನು ತೆಗೆದುಕೊಂಡು ಕೆಲಸವನ್ನು ಕೊಟ್ಟಿದ್ದಾರೆ. ಅವರು ಕೈ ತುಂಬಾ ದುಡ್ಡನ್ನು ಮಾಡಿಕೊಂಡು ಮನೆಗೆ ಹೋದರು ಇದು ಗೊತ್ತಾದಾಗ ನಾವೆಲ್ಲಾ ಒಟ್ಟಿಗೆ ಸೇರಿ ಈ ರೀತಿ ಒಬ್ಬ ಡಿ.ಹೆಚ್ ಓ. ಒಂದೊಂದು ಸೀಟಿಗೆ ೧೦ ಸಾವಿರ ರೂಪಾಯಿಯಂತೆ ತೆಗೆದುಕೊಂಡು ಕೆಲಸ ಕೊಟ್ಟಿದ್ದಾರೆ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ನಮ್ಮ ಜಿಲ್ಲೆಯ ಮಂತ್ರಿಗಳಾದ ಮಾನ್ಯ ಜೆ.ಹೆಚ್. ಪಟೇಲ ರವರಿಗೆ ಕಾಗದ ಕೊಟ್ಟೆವು. ನಮ್ಮ ಜೊತೆಗೆ ಮಾನ್ಯ ಬಸವಣ್ಣಗೌಡರೂ ಕೂಡ ಇದ್ದರು ಆದರೆ ಆ ಅರ್ಜಿ ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ನಾವು ಬರೆದ ಕಾಗದಕ್ಕೆ ಮಂತ್ರಿಗಳಿಂದ ಉತ್ತರವೂ ಬರಲಿಲ್ಲ. ಮತ್ತು ಆ ಡಿ.ಹೆಚ್.ಓ. ವಿರುದ್ಧ ಎನ್‌ಕ್ವೈರಿಯೂ ಆಗಲಿಲ್ಲ. ಸ್ವಾಮಿ, ರೆಡ್ ಹ್ಯಾಂಡ್ ಅದಂಥ ಪ್ರಕರಣದ ಬಗ್ಗೆ ಶಾಸಕರಾದ ನಾವುಗಳು ಮಂತ್ರಿಗಳಿಗೆ ಕೊಟ್ಟಂಥ ಅರ್ಜಿ ಎಲ್ಲಿ ಹೋಯಿತೋ ಎಂಬುದೇ ಗೊತ್ತಾಗಲಿಲ್ಲ. ನಮಗೆ ತಿಳಿದುಬಂದ ಪ್ರಕಾರ ಆ ಡಿ.ಹೆಚ್.ಓ ಗೆ ಬಡ್ತಿ ನೀಡಿದ್ದಾರಂತೆ. ಇದು ಒಂದು ಸಂತೋಷದ ವಿಚಾರವೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಅಧಿಕಾರಿಗಳು ಈ ರೀತಿ ಅನ್ಯಾಯ ಮಾಡುತ್ತಿರುವುದರಿಂದ ದುರ್ಬಲ ವರ್ಗದವರು ಬದುಕುವುದಕ್ಕೆ ಅವಕಾಶ ಎಲ್ಲಿದೆ? ನಾನು ಸರ್ಕಾರದವರಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಇಂಥ ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕು, ಅಷ್ಟೇ ಅಲ್ಲ ಇಂಥವರನ್ನು ಇಲಾಖೆಯಿಂದಲೇ ತೆಗೆದುಹಾಕಬೇಕು. ನಾನು ಈಗಾಗಲೇ ಹೇಳಿದಂತೆ ಬಳ್ಳಾರಿ ಮೆಡಿಕಲ್ ಕಾಲೇಜು ಬಹಳ ಹೀನ ಸ್ಥಿತಿಯಲ್ಲಿದೆ. ಇದನ್ನು ಉತ್ತಮ ಸ್ಥಿತಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳ ಬಯಸುತ್ತೇನೆ. ನಾನು ಇನ್ನೂ ಅನೇಕ ವಿಷಯಗಳ ಬಗ್ಗೆ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಬೇಕಾಗಿತ್ತು. ಆದರೆ ಸಮಯದ ಅಭಾವವಿರುವ ಕಾರಣದಿಂದ ಹೆಚ್ಚು ಹೇಳುವುದಕ್ಕೆ ಆಗುತ್ತಿಲ್ಲ. ಇಲಾಖೆಗಳಲ್ಲಿರತಕ್ಕ ಲೋಪದೋಷಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆಂದು ತಿಳಿದಿದ್ದೇನೆ. ಈ ಬೆಂಗಳೂರು ನಗರದ ರಾಜಾಜಿನಗರದಲ್ಲಿರುವ ಇ.ಎಸ್.ಐ. ಆಸ್ಪತ್ರೆ ಹೀನಸ್ಥಿತಿಯಲ್ಲಿದೆ. ಭಟ್ಕಳದಲ್ಲಿ ಲೈಸನ್ಸ್ ಇಲ್ಲದ ಬ್ರಾಂದಿ ಷಾಪ್ ಮತ್ತು ಬಾರ್‌ಗಳನ್ನು ನಡೆಸುತ್ತಿದ್ದಾರೆ ಇದರಲ್ಲಿ ಅಲ್ಲಿನ ಎಕ್ಸೈಸ್ ಇನ್‌ಸ್ಪೆಕ್ಟರ್‌ಗಳು ಮತ್ತು ಅಧಿಕಾರಿಗಳು ಶಾಮೀಲಾಗಿದ್ದಾರೆ. ಸೆಕೆಂಡ್ಸನ್ನು ಯಾರ ಹೆದರಿಕೆ ಅಂಜಿಕೆಗಳಿಲ್ಲದೆ ಅವರು ವ್ಯಾಪಾರ ಮಾಡುತ್ತಿದ್ದಾರೆ. ಇದಕ್ಕೆ ಸೇರಿಸಿರತಕ್ಕ ಕೆಟ್ಟ ಗುಣಮಟ್ಟದ ಪದಾರ್ಥಗಳಿಂದಾಗಿ ಜನರ ಆರೋಗ್ಯ ಹಾಳಾಗುತ್ತಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

೧.೩೦ ಪಿ.ಎಂ.

ಶ್ರೀ ಆರ್. ಎನ್. ನಾಯಕ್.— ಸ್ವಾಮಿ, ಭಟ್ಕಳದಲ್ಲಿ ಲೈಸನ್ಸ್‌ನ್ನು ತೆಗೆದುಕೊಂಡು ಸಿ.ಎಲ್. ೨ ಬಾರ್‌ಗಳನ್ನು ನಡೆಸುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದರೆ, ಇದುವರೆ ವಿಗೂ ಉತ್ತರವನ್ನು ಕೊಟ್ಟಿಲ್ಲ. ಎಕ್ಸೈಸ್ ಸೂಪರಿಂಡೆಂಟ್‌ಗೂ ಮತ್ತು ಡಿ.ಸಿ.ಯವರಿಗೂ ಪತ್ರ ಬರೆದಿರುತ್ತೇವೆ. ಯಾರಿಗೆ ಬರೆದರೂ ಉತ್ತರವನ್ನು ಕೊಟ್ಟಿಲ್ಲ ಹೀಗೆ ಬಾರ್‌ನ್ನು ತೆಗೆದು ನಡೆಸುತ್ತಿರು ವವರಲ್ಲಿ ಜನತಾ ಪಕ್ಷದವರೇ ಇರುತ್ತಾರೆ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಉತ್ತರವನ್ನು ಕೊಡಲಿಲ್ಲ, ಮತ್ತೆ ನಮಗೆ ರಕ್ಷಣೆಯನ್ನು ಕೊಡಲಿಲ್ಲ.

ಶ್ರೀ ಎಂ. ಮಲ್ಲಪ್ಪ.— ನೀವು ಅವರ ಸಹಕಾರವನ್ನು ಕೇಳಿರಬಹುದು, ಅವರು ಕೊಟ್ಟಿಲ್ಲದೆ ಇರಬಹುದು?

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಪ್ಪನವರು ಏನಾದರೂ ಹೇಳುವುದಿದ್ದರೆ ಎದ್ದು ನಿಂತು ಗಟ್ಟಿಯಾಗಿ ಹೇಳಲಿ, ಅವರು ಕುಳಿತುಕೊಂಡೇ ಈ ರೀತಿ ಮಾತನಾಡು ವುದು ಸರಿಯಲ್ಲ.

ಶ್ರೀ ಆರ್. ಎನ್. ನಾಯಕ್.— ನಾವು ಏತಕ್ಕೆ ಅವರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳ ಬೇಕು? ನಿಮ್ಮ ಪಕ್ಷದವರು ಸಾರಾಯಿ ಅಂಗಡಿಗಳನ್ನು, ಹೆಂಡದ ಅಂಗಡಿಗಳನ್ನು ತೆರೆದಿರುವುದು. ಕಾನೂನು ಬದ್ಧವಾಗಿರುವುದರಿಂದ ನಿಮಗೆ ಹೇಳಿದ್ದೇನೆ. ನಿಮಗೆ ಬಂದ್ ಮಾಡುವುದಕ್ಕೆ ತಾಕತ್ತು ಇಲ್ಲವೇ ಹೇಳಿ. ನಿಮ್ಮ ಪಕ್ಷದವರೇ ಇದ್ದಾರೆ. ಡಿ.ಸಿ. ಲಕ್ಷ ಕೊಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಲಕ್ಷ ಕೊಡುವುದಿಲ್ಲ. ಏತಕ್ಕೆ ನಿಮ್ಮ ಪಕ್ಷದವರು ಇದ್ದಾರೆಂದು ಈ ರೀತಿಯಾದ ಅಲಕ್ಷವೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ — ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರುಗಳಿಗೆ ಸರ್ಕಾರ ಮಾಡಿರತಕ್ಕಂಥ ತಪ್ಪುಗಳೇನಾದರೂ ಇದ್ದರೆ ಅದರ ಮೇಲೆ ಬೆಳಕನ್ನು ಚೆಲ್ಲುವ ಹಕ್ಕು ಇರುತ್ತದೆ, ಆಧಾರವಿಲ್ಲದೆ ತಪ್ಪುಗಳನ್ನು ಹೊರಿಸುವಾಗ ತಾವು ಅವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳ ಬೇಕು. ರುಜುಮಾತು ಮಾಡತಕ್ಕಂಥ ಶಕ್ತಿ ಸಾಮರ್ಥ್ಯವಿದ್ದರೆ ಆರೋಪಗಳನ್ನು ಮಾಡಬೇಕು.

ಶ್ರೀ ಆರ್. ಎನ್. ನಾಯಕ್.— ತಾವು ಬನ್ನಿ ತಮಗೆ ಬೇಕಾದರೆ ತೋರಿಸುತ್ತೇನೆ. ಈಗಲೇ ಟೆಲೆಕ್ಸ್ ಹಚ್ಚಿ.

ಶ್ರೀ ಬಿ ಎಸ್. ಯಡಿಯೂರಪ್ಪ. ಮಾನ್ಯ ಅಧ್ಯಕ್ಷರೇ, ಅರಕ್ ಕಾಂಟ್ರಾಕ್ಟ್‌ನಲ್ಲಿ ಶಾಮೀಲಾಗಿ ರತಕ್ಕಂಥದ್ದು ದೇಶಕ್ಕೆ ಗೊತ್ತಿರತಕ್ಕಂಥ ವಿಚಾರ. ಅವರು ಏನು ಪ್ರಶ್ನೆಯನ್ನು ಮಾಡುತ್ತಿದ್ದಾರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಡಿ.

ಶ್ರೀ ಆರ್. ಎನ್. ನಾಯಕ್.— ಅದನ್ನು ಸ್ಟಾಪ್ ಮಾಡಲು ಏನೇನು ಶಕ್ತಿ ಇಲ್ಲ.

ಶ್ರೀ ಪಟವರ್ಧನ್ ರತ್ನಾಕರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರು ಏನಾದರೂ ಆಪಾದನೆ ಮಾಡಿದಾಗ ಸಂಬಂಧಪಟ್ಟ ಮಂತ್ರಿಗಳು ಏತಕ್ಕೆ ಸಿಟ್ಟು ಮಾಡಿಕೊಳ್ಳಬೇಕು?

ಛೇರ್ಮನ್.— ಮಾನ್ಯ ರತ್ನಾಕರ್‌ರವರೇ, ತಮ್ಮ ಹೆಸರು ಕೂಡ ಪಟ್ಟಿಯಲ್ಲಿ ಇದೆ. ತಾವು ಅವಕಾಶ ಬಂದಾಗ ತಾವು ಮಾತನಾಡಬಹುದು.

ಶ್ರೀ ಪಟವರ್ಧನ್ ರತ್ನಾಕರ್.— ಗೌರವಾನ್ವಿತ ಸದಸ್ಯರು ಆಪಾದನೆ ಮಾಡಿದಾಗ ಅದನ್ನು ಮಾನ್ಯ ಸಚಿವರು ನೋಟ್ ಮಾಡಿಕೊಂಡು, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಕೊಂಡು ಪರಿಹಾರವನ್ನು ಕಂಡುಹಿಡಿಯತಕ್ಕಂಥ ಸೌಜನ್ಯ ಇರಬೇಕು.

ಶ್ರೀ ಆರ್. ಎನ್. ನಾಯಕ್.— ನಿಮಗೆ ಶಕ್ತಿ ಇದ್ದರೆ ಅದನ್ನು ಸ್ಟಾಪ್ ಮಾಡಿಸಿ. ಇಲ್ಲದಿದ್ದರೆ ಹೇಳಿ ನಾವು ಜನರನ್ನು ಕರೆದುಕೊಂಡು ಹೋಗಿ ಅಂಗಡಿಯನ್ನು ಸ್ಟಾಪ್ ಮಾಡಿಸುತ್ತೇವೆ. ಅದಕ್ಕಾ ದರೂ ಒಪ್ಪಿಕೊಳ್ಳುತ್ತೀರಾ? ನೀವು ಸಿಟ್ಟು ಮಾಡಿಕೊಳ್ಳುವುದಕ್ಕೆ ನಮಗೆ ಏನು ಶಕ್ತಿಯನ್ನು ಕೊಟ್ಟಿದ್ದೀರಿ? ನಿಮಗೆ ಇರತಕ್ಕಂಥ ಶಕ್ತಿಯನ್ನು ಉಪಯೋಗಿಸಿಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.— ಇಲಾಖೆಯಲ್ಲಿರತಕ್ಕಂಥ ಅನೇಕ ಜನ ನೌಕರರಿಗೆ ವರ್ಗ ಮಾಡುವುದು ಮತ್ತೆ ಕ್ಯಾನ್ಸಲ್ ಮಾಡುವುದು. ಕ್ಯಾನ್ಸಲ್ ಮಾಡಿದ್ದನ್ನು ಮತ್ತೆ ವರ್ಗ ಮಾಡುವುದು ಇದು ಒಂದು ರೀತಿ ನಾಚಿಕೆ ಪಡತಕ್ಕಂಥ ಕೆಲಸ. ಅಧಿಕಾರಿಗಳನ್ನು ವರ್ಗ ಮಾಡಿ ಮತ್ತೆ ಕ್ಯಾನ್ಸಲ್ ಮಾಡತಕ್ಕಂಥದ್ದು ಒಂದು ರೀತಿ ಅಸಹ್ಯವಾಗಿರುತ್ತದೆ. ನಾನು ಕೆಲವು ಸಾರಿ ಡೈರೆಕ್ಟರೇಟ್ ಆಫೀಸಿಗೆ ಹೋದಾಗ ಅಲ್ಲಿ ಜಾತ್ರೆ ನಡೆಯುತ್ತಿರುತ್ತದೆ ಅಲ್ಲಿ ವರ್ಗ ಮಾಡಿಸತಕ್ಕವರು ಮತ್ತು ಕ್ಯಾನ್ಸಲ್ ಮಾಡತಕ್ಕ ಏಜೆಂಟರು ಇದ್ದಾರೆ. ಅವರ ಹತ್ತಿರ ಯಾರ್ಯಾರು ಹೋಗುತ್ತಾರೋ ಗೊತ್ತಿಲ್ಲ. ನೌಕರಿಯಲ್ಲಿರುವವರಿಗೆ ಸೇವೆ ಮಾಡುವುದಕ್ಕೆ ಅವಕಾಶ ಇಲ್ಲದೆ ಒಂದು ತಿಂಗಳಲ್ಲಿ ೨-೩ ಸಾರಿ ವರ್ಗ ಮಾಡುವುದು ಅಸಹ್ಯಕರವಾಗಿದೆ. ಇದನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತೇನೆ

ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿ ಮಾಡಿದರೆ ವೈದ್ಯರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಸ್ವಲ್ಪ ಹೆದರಿಕೆ ಬರುತ್ತದೆಂಬ ಮಾತನ್ನು ಹೇಳುತ್ತೇನೆ. ಮಂತ್ರಿಗಳು ಸಮಿತಿಗಳನ್ನು ಮಾಡುತ್ತೇವೆಂದರು ಆದರೆ ಇದುವರೆಗೆ ಮಾಡಲಿಲ್ಲ. ಇನ್ನು ಮುಂದಾದರೂ ಸಂದರ್ಶನ ಸಮಿತಿಗಳನ್ನು ಮಾಡಬೇಕು ಮತ್ತು ಅದಕ್ಕೆ ಯೋಗ್ಯರಾಗಿರತಕ್ಕವರನ್ನು ಆರಿಸಬೇಕು ಮತ್ತು ತಾವು ಯೋಚನೆ ಮಾಡದ ಹಾಗೆ ತಮ್ಮ ಪಕ್ಷದವರನ್ನೇ ಮಾಡುವುದಕ್ಕಿಂತ ಬೇರೆ ಬೇರೆ ಪಕ್ಷದವರನ್ನು ಆ ಸಮಿತಿಗೆ ನೇಮಿಸಬೇಕು. ಈ ವಿಷಯದಲ್ಲಿ ಇನ್ನೂ ಹೆಚ್ಚು ಮಾತನಾಡಬೇಕಾಗಿದ್ದರೂ ಸಮಯದ ಅಭಾವದಿಂದ ಇನ್ನು ನನ್ನ ಮಾತನ್ನು ಬೆಳೆಸದೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅಧ್ಯಕ್ಷರಾಗಿ ತಾವು ಅಪ್ಪಣೆ ಕೊಡಿಸಿದ್ದೀರಿ. ಅದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ಮತ್ತೊಮ್ಮೆ ೨೩—೨೯—೩೦ರ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಅಬ್ಕಾರಿ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಇವತ್ತಿನ ದಿವಸ ಈ ಒಂದು ಸರ್ಕಾರ ಆರೋಗ್ಯ ಇಲಾಖೆಯಲ್ಲಿ ವ್ಯಾಪಾರ ಮಾಡಿರತಕ್ಕ ಕೆಲವು ವಿಷಯಗಳನ್ನು ಹೇಳುತ್ತಾ ನನ್ನ ಕೆಲವು ಅನಿಸಿಕೆಗಳನ್ನು ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಬಂದ ಮೇಲೆ ಆರೋಗ್ಯ ಇಲಾಖೆಯಲ್ಲಿ ಹೆಲ್ತ್ ಇನ್‌ಶ್ಯೂರೆನ್ಸ್ ಸ್ಕೀಂ ಜಾರಿಗೆ ತಂದಿರತಕ್ಕದ್ದು ಬಹುಶಃ ದೇಶದಲ್ಲೇ ಪ್ರಥಮ ಆ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆಂದು ಅಂದುಕೊಂಡಿದ್ದೇನೆ. ೨೦೦೦ ಇಸವಿಯ ಹೊತ್ತಿಗೆ ಸರ್ವರಿಗೂ ಆರೋಗ್ಯ ಕೊಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ವೇಳೆಗೆ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬರಿಗೂ ಆರೋಗ್ಯ ಸೌಲಭ್ಯ ದೊರಕಿಸತಕ್ಕ ಉದ್ದೇಶ ಇದೆ. ೨ನೇ ಸ್ತುತ್ಯಾರ್ಹವಾದ ಕೆಲಸವೆಂದರೆ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದು. ಇದು ಪ್ರಪ್ರಥಮವಾಗಿ ರಾಜ್ಯದಲ್ಲಿ ಹೊಸದಾಗಿ ಯೋಜನೆ ಆಗತಕ್ಕ ವಿಷಯ. ಇದರ ಜೊತೆಗೆ ಇತ್ತೀಚೆಗೆ ಆರೋಗ್ಯ ಇಲಾಖೆಯಲ್ಲಿ ಇ. ಎಸ್. ಐ. ಅನ್ನು ಬೇರೆ ಮಾಡಿ ಪ್ರತ್ಯೇಕ ಡೈರೆಕ್ಟರೇಟ್ ಸೃಷ್ಟಿ ಮಾಡಿರತಕ್ಕದ್ದನ್ನು ಸ್ವಾಗತಿಸುತ್ತೇನೆ. ಇತ್ತೀಚೆಗೆ ಮುಖ್ಯ ಮಂತ್ರಿಗಳು ರಾಜ್ಯದಲ್ಲಿರತಕ್ಕ ೧೭೫ ತಾಲ್ಲೂಕುಗಳಿಗೂ ಒಂದೊಂದು ಆಸ್ಪತ್ರೆಗಳನ್ನು ಕೊಡುತ್ತೇವೆಂದು ಹೇಳಿರತಕ್ಕದ್ದನ್ನು ಸ್ವಾಗತಿಸುತ್ತೇನೆ. ಇವೆಲ್ಲ ನಮ್ಮ ಸರ್ಕಾರದ ಸಾಧನೆಗಳು. ಅವನ್ನು ಸ್ವಾಗತ ಮಾಡತಕ್ಕ ಕರ್ತವ್ಯ ನಮ್ಮದಾಗಿದೆ. ಆಸ್ಪತ್ರೆಗಳ ಬಗ್ಗೆ ಕೆಲವು ಸಲಹೆಗಳನ್ನು ತಮ್ಮ ಮೂಲಕ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಕೆಲವು ಆಸ್ಪತ್ರೆಗಳಲ್ಲಿ ರೆಫರಲ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳುತ್ತಿದ್ದೇವೆ, ಪಟ್ಟಣಗಳಲ್ಲಿ ಏನಾಗುತ್ತಿದೆ ಎಂದರೆ ಸಣ್ಣ ಸಣ್ಣ ಕಾಯಿಲೆಗಳಿಗೆ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ತೋರಿಸತಕ್ಕ ಪರಿಸ್ಥಿತಿ ಇದೆ. ಸಣ್ಣ ಪುಟ್ಟ ಕಾಯಿಲೆಗಳಿಗೆ ಸುಲಭವಾದ ಔಷಧಿಗಳು ಹತ್ತಿರದಲ್ಲಿ ಸಿಕ್ಕಿದರೆ ಅನುಕೂಲವಾಗುತ್ತದೆ. ಅದಕ್ಕೆ ರೆಫರಲ್ ಪದ್ಧತಿಯನ್ನು ಅನುಸರಿಸಬೇಕು. ಅನೇಕ ದೇಶಗಳಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಇದು ಹಿತಕಾರಿ ಸೂಚನೆಯೆಂದು ಭಾವಿಸಿ ಆರೋಗ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಈಗತಾನೆ ಮಾನ್ಯ ಸ್ವಾಮಿರಾವ್ ಅವರು ಆಸ್ಪತ್ರೆಗಳ ಬಗ್ಗೆ ಮಾತನಾಡಿದಾಗ ಅವರು ಪಟ್ಟಣದ ಆಸ್ಪತ್ರೆಗಳ ಬಗ್ಗೆ ಅದರಲ್ಲೂ ಶಿವಮೊಗ್ಗ, ಬಳ್ಳಾರಿ ಆಸ್ಪತ್ರೆಗಳ ಬಗ್ಗೆ ಮಾತ್ರ ಹೇಳಿದ್ದಾರೆ ನಮ್ಮ ದೇಶದಲ್ಲಿ ಆಸ್ಪತ್ರೆಗಳು ಬೆಳೆದಷ್ಟು, ವೈಜ್ಞಾನಿಕವಾಗಿ ಬೆಳೆದಷ್ಟು ಹೊಸ ಹೊಸ ಖಾಯಿಲೆಗಳು ಹುಟ್ಟಿಕೊಂಡಿರುವ ಪರಿಸ್ಥಿತಿ ಬಂದಿದೆ

ಪಟ್ಟಣದಲ್ಲಿ ಇವತ್ತಿನ ದಿವಸ ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ಬಿಟ್ಟರೆ ಪ್ರೈವೇಟ್ ನರ್ಸಿಂಗ್ ಹೋಮ್‌ಗಳು ನಾಯಿಕೊಡೆಗಳಂತೆ ಅಲ್ಲಲ್ಲಿ ಉದ್ಭವವಾಗುತ್ತಿವೆ. ಮಧ್ಯಮ ವರ್ಗದ ಜನ ಸರ್ಕಾರಿ ಆಸ್ಪತ್ರೆಗೆ ಹೋಗದೆ ನರ್ಸಿಂಗ್ ಹೋಮ್‌ಗೆ ಹೋಗುವ ಪರಿಸ್ಥಿತಿಗೆ ಅವಕಾಶ ಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ನರ್ಸಿಂಗ್ ಹೋಂಗಳ ಬಗ್ಗೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಲೇಖನ ಬಂದಿತು. ಜನರನ್ನು ಅವರು ಯಾವರೀತಿ ಶೋಷಣೆ ಮಾಡುತ್ತಾರೆ ಎಂಬುದನ್ನು ಅದರಲ್ಲಿ ಹೇಳಿದ್ದಾರೆ. ಹೆಣ್ಣು ಮಗಳಾಗಿ ನಾನು ಹೇಳಬೇಕಾದರೆ ಸರ್ವೇಸಾಮಾನ್ಯವಾಗಿ ನಡೆಸತಕ್ಕ ಹೆರಿಗೆಯಿಂದ್ದರೂ ಕೂಡ ತಡ ಮಾಡದೆ ಆಪರೇಷನ್ ಮಾಡಿ ಎರಡು ಸಾವಿರ ರೂಪಾಯಿ, ಮೂರು ಸಾವಿರ ರೂಪಾಯಿ, ನಾಲ್ಕು ಸಾವಿರ ರೂಪಾಯಿ ಕಿತ್ತುಕೊಳ್ಳುತಕ್ಕ ಕೆಲಸ ಮಾಡುತ್ತಿದ್ದಾರೆ. ಇದು ಸರಿಯಾದುದಲ್ಲ. ಲೈಸೆನ್ಸ್ ಕೊಡುವುದರಲ್ಲಾಗಲಿ ಮತ್ತಿತರ ಸಂದರ್ಭಗಳಲ್ಲಾಗಲಿ ನರ್ಸಿಂಗ್ ಹೋಂಗಳ ಬಗ್ಗೆ ಹಿಡಿತ ಇಟ್ಟು ಕೊಳ್ಳಬೇಕು. ನಮಗೆ ಆಶ್ಚರ್ಯವಾಗುತ್ತಿದೆ. ನರ್ಸಿಂಗ್ ಹೋಂಗಳಲ್ಲಿ ಕನ್‌ಸಲ್ಟೇಷನ್‌ಗೆ ಹೋದರೆ ಒಂದು ಸಾರಿಗೆ ೭೫ ರೂಪಾಯಿ ೧೦೦ ರೂಪಾಯಿ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಅದರ ಗಾಳಿ ಯನ್ನು ಸರ್ಕಾರಿ ಆಸ್ಪತ್ರೆಗಳಲ್ಲೂ ಕಾಣಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ ಸಾಯಂಕಾಲದ ಹೊತ್ತು ಅಥವಾ ಬೆಳಗಿನ ಹೊತ್ತು ಪ್ರೈವೇಟ್ ಪ್ರಾಕ್ಟೀಸ್ ಮಾಡು ವುದಕ್ಕೆ ಅವಕಾಶ ಮಾಡಿಕೊಟ್ಟಿರುವುದನ್ನು ತಪ್ಪಿಸಿದರೆ ಒಳ್ಳೆಯದು. ಮೂರನೇ ವೇತನ ಆಯೋಗ ದಲ್ಲಿ ಸಂಬಳ ಚೆನ್ನಾಗಿ ಬರುತ್ತಿರುವುದರಿಂದ ಪ್ರೈವೇಟ್ ಪ್ರಾಕ್ಟೀಸ್ ತಪ್ಪಿಸಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದ್ದರಿಂದ ಆರೋಗ್ಯ ಮಂತ್ರಿಗಳು ೧೫ ಕೋಟಿ ರೂಪಾಯಿ ಏನು ಬೇಡಿಕೆ ನಮ್ಮ ಮುಂದಿಟ್ಟಿದ್ದಾರೆ ಅದು ಕಡಿಮೆ ಇನ್ನೂ ಹೆಚ್ಚು ಇಡಬೇಕಾಗಿತ್ತು. ೧೯೮೫—೮೬ ರಲ್ಲಿ ಸುಮಾರು ೧೪೪ ಕೋಟಿ ರೂಪಾಯಿ ಇತ್ತು. ೧೯೮೬—೮೭ ರಲ್ಲಿ ೧೫೯ ಕೋಟಿ ರೂಪಾಯಿ ಇತ್ತು ೧೯೮೭—೮೮ಕ್ಕೆ ಕೇವಲ ೫.೮೫ ಕೋಟಿ ರೂಪಾಯಿ ಮಾತ್ರ ಹೆಚ್ಚಳ ಇದೆ. ಇದು ಬೆಳೆಯುತಕ್ಕ ರೋಗಿಗಳಿಗೆ ಹಾಗೂ ರೋಗಿಗಳಿಗೆ ಕೊಡುವ ಅನೇಕ ಸೌಲಭ್ಯಗಳಿಗೆ ಈ ಹಣ ಕಡಿಮೆ. ಇನ್ನೂ ಹೆಚ್ಚಿಗೆ ಇಟ್ಟಿದ್ದರೆ ಚೆನ್ನಾಗಿತ್ತು. ಇಷ್ಟು ಈ ೧೫ ಕೋಟಿ ಹಣದಲ್ಲಿ ನಾಲ್ಕು ಕೋಟಿ ಜನಸಂಖ್ಯೆಗೆ ತಲಾ ವೆಚ್ಚ ೫೨ ರೂಪಾಯಿ ಬರುತ್ತದೆ. ಅಂದರೆ ಒಂದು ದಿನಕ್ಕೆ ಒಬ್ಬ ಮನುಷ್ಯನಿಗೆ ೧೫ ಪೈಸೆ ಸಿಗುತ್ತದೆ. ಅದರಲ್ಲಿ ಒಂದು ಅನಾಸಿನ್ ಮಾತ್ರೆ ಕೂಡ ಬರುವುದಿಲ್ಲ ೧೫ ಪೈಸೆಗೆ ತಲೆನೋವಿನ ಮಾತ್ರೆಯೂ ಬರದೇ ಇರುವಾಗ ಹೆಚ್ಚಿನ ಗಮನವನ್ನು ಆರೋಗ್ಯ ಮಂತ್ರಿಗಳು ಕೊಡಬೇಕು. ಆರೋಗ್ಯದ ಮುಂದೆ ಯಾವ ಭಾಗ್ಯವೂ ಇಲ್ಲ ಹಣ ಇದ್ದರೂ ಆರೋಗ್ಯ ಇರುವುದಿಲ್ಲ. ಅನ್ನ ಇದ್ದರೂ ಆರೋಗ್ಯ ಇರುವುದಿಲ್ಲ. ಮನುಷ್ಯನಿಗೆ ಆರೋಗ್ಯ ಭಾಗ್ಯವೇ ಹಿರಿದಾದುದು. ಆದ್ದರಿಂದ ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಆಸ್ಪತ್ರೆಗಳ ಬಗ್ಗೆ ನಾನು ಹೇಳಬೇಕಾಗುತ್ತದೆ. ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ ''. ಹಲ್ಲಿದ್ದರೆ ಕಡಲೆ ಇಲ್ಲ. ಕಡಲೆ ಇದ್ದರೆ ಹಲ್ಲಿಲ್ಲ'' ಎಂದು. ಹಾಗೆ ಆಸ್ಪತ್ರೆ ಇದ್ದ ಕಡೆ ಡಾಕ್ಟರು ಇಲ್ಲ. ಡಾಕ್ಟರು ಇದ್ದ ಕಡೆ ಆಸ್ಪತ್ರೆ ಇಲ್ಲ ಎರಡೂ ಇದ್ದರೆ ಔಷಧಗಳು ಇಲ್ಲ. ಈ ಏರು ಪೇರಿಗೆ ಅರ್ಥವಾಗುತ್ತಿಲ್ಲ.

ಶ್ರೀ ಮಲ್ಲನಗೌಡ ಎಸ್. ಪಾಟೀಲ್.—ಮೂರೂ ಇದ್ದರೆ ಪೇಷೆಂಟ್ಸ್ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪೇಷಂಟ್‌ಗಳಿಗೇನೂ ಕಡಿಮೆ ಇಲ್ಲ. ಹೊಸ ಹೊಸ ರೋಗಗಳು ಸಾಕಷ್ಟು ಉದ್ಭವವಾಗುತ್ತಿದೆ.

ಶ್ರೀ ಆರ್. ಎನ್. ನಾಯಕ್.—೨೦೦೦ ಇಸವಿಯ ನಂತರ ನಿಮ್ಮ ಯೋಜನೆ ಪ್ರಕಾರ ಪೇಷೆಂಟ್ಸೇ ಇರುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ನಾಯಕ್ ಅವರಿಗೆ ಒಂದು ಚಟ ಇದೆ. ಯಾರು ಮಾತನಾಡಿದರೂ ಎದ್ದು ನಿಲ್ಲುತ್ತಾರೆ, ಹಳ್ಳಿಗಳಲ್ಲಿ ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ ಡಾಕ್ಟರುಗಳ ಕೊರತೆ ಹೆಚ್ಚಾಗಿದೆ. ನಮ್ಮ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಮ್ಮ ಸಂಸ್ಕೃತಿ ಪ್ರಕಾರ ನಮ್ಮ ಹೆಣ್ಣು ಮಕ್ಕಳು ಹೆರಿಗೆಗೆ ಗಂಡಸು ಡಾಕ್ಟರನ್ನು ಸ್ವಾಗತ ಮಾಡುವುದಿಲ್ಲ. ಪಟ್ಟಣದಲ್ಲೇನೋ ಸರಿ. ಆದರೆ ಹಳ್ಳಿಯಲ್ಲಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಗಂಡಸು ಡಾಕ್ಟರಿದ್ದರೆ ಹೆಣ್ಣು ಮಕ್ಕಳು ಹೆರಿಗೆಗೆ ಹೋಗುವುದಕ್ಕೆ ಹಿಂದೆ ಮುಂದೆ ನೋಡತಕ್ಕ ಕಾಲ ಇನ್ನೂ ಇದೆ ಇದರ ಬಗ್ಗೆ ಮಹಿಳೆಯರ ಅಂಥವರ ಅನೇಕ ಬಾರಿ ಆರೋಗ್ಯ ಮಂತ್ರಿಗಳ ಹತ್ತಿರ ಚರ್ಚೆ ಮಾಡಿದಾಗ ಹೆಣ್ಣುಮಕ್ಕಳು ಹಳ್ಳಿಗಳಿಗೆ ಪೋಸ್ಟ್ ಮಾಡಿದರೂ ಹೋಗುವುದಿಲ್ಲ ಎಂಬುದಾಗಿ ಹೇಳಿದರು. ಇದು

ನನಗೆ ಅರ್ಥವಾಗುವುದಿಲ್ಲ. ಇವತ್ತಿನ ದಿವಸ ಒಬ್ಬ ವಿದ್ಯಾರ್ಥಿಯನ್ನು ಡಾಕ್ಟರನ್ನಾಗಿ ಪರಿವರ್ತಿಸಬೇಕಾದರೆ ಅವರು ಹೆಣ್ಣುಮಗಳು ಇರಲಿ, ಗಂಡುಮಕ್ಕಳು ಇರಲಿ, ಸಾಮಾನ್ಯವಾಗಿ ಕ್ಯಾಪಿಟೇಷನ್ ಶುಲ್ಕವನ್ನು ಬಿಟ್ಟು ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರದ ವೆಚ್ಚ ಹಾಗೂ ಆ ವಿದ್ಯಾರ್ಥಿಯ ತಂದೆ ತಾಯಿಂಗಳ ವೆಚ್ಚ ಎರಡನ್ನೂ ಸೇರಿಸಿಕೊಂಡರೆ. ಈ ಐದೂವರೆ ವರ್ಷಗಳಲ್ಲಿ ಒಬ್ಬೊಬ್ಬ ವಿದ್ಯಾರ್ಥಿಗೂ ೪ ಲಕ್ಷಕ್ಕಿಂತ ಹೆಚ್ಚು ಖರ್ಚು ಆಗುತ್ತಿದೆ. ಇದರಲ್ಲಿ ಕ್ಯಾಪಿಟೇಷನ್ ಶುಲ್ಕ ಬಿಟ್ಟು ಇಷ್ಟು ಖರ್ಚಾಗುತ್ತದೆ. ಒಬ್ಬ ವಿದ್ಯಾರ್ಥಿಗೆ ಇಷ್ಟೊಂದು ವೆಚ್ಚವನ್ನು ಮಾಡಿ ಡಾಕ್ಟರನ್ನಾಗಿ ತಯಾರು ಮಾಡಿದ ಮೇಲೆ ಸೇವಾ ಮನೋಭಾವದಿಂದ ಹಳ್ಳಿಗಳಿಗೆ ಹೋಗಿ ಕೆಲಸ ಮಾಡದಿದ್ದರೆ ವೆಚ್ಚ ಮಾಡಿರತಕ್ಕ ಹಣ ವ್ಯರ್ಥವಾಗುತ್ತದೆ. ಇದರಿಂದ ಏನು ಅರ್ಥವಾಗುತ್ತದೆಂದರೆ. ಡಾಕ್ಟರ್ ಆದ ಮೇಲೆ ಜನರ ಸೇವೆಯನ್ನು ಮಾಡಬೇಕೆಂಬ ಸೇವಾ ಮನೋಭಾವನೆಯೇ ಬದಲಾವಣೆಯಾಗುತ್ತಿದೆ. ಇದನ್ನು ಯಾವ ರೀತಿಯಿಂದಲಾದರೂ ಸರಿಪಡಿಸಬೇಕು. ಮಾನ್ಯ ಮಂತ್ರಿಗಳು ಆ ಬಗ್ಗೆ ಡಾಕ್ಟರುಗಳು ಕಡ್ಡಾಯವಾಗಿ ೩ ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕು ಎಂದು ಮಾಡಿದ್ದಾರೆ. ಇದೇ ಸಮಯದಲ್ಲಿ ವರ್ಗಾವಣೆಯ ಬಗ್ಗೆ ಹೇಳುವುದಾದರೆ, ಎಂ.ಡಿ. ಆದಂತಹವರನ್ನು ತೆಗೆದುಕೊಂಡು ಹೋಗಿ ಪ್ರೈಮರಿ ಹೆಲ್ತ್ ಸೆಂಟರ್‌ಗೆ ಹಾಕುವುದು. ಸರ್ಜನ್ ಆಗಿರುವಂತಹವರನ್ನು ತೆಗೆದುಕೊಂಡು ಹೋಗಿ ಆಪರೇಷನ್ ಮಾಡುವುದಕ್ಕೆ ಅವಕಾಶವೇ ಇಲ್ಲದಂತಹ ಯಾವುದೋ ಒಂದು ಮೂಲೆಯಲ್ಲಿರತಕ್ಕ ಆಸ್ಪತ್ರೆಗೆ ಹಾಕುವುದು. ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುವಂತಹವರನ್ನು ತೆಗೆದುಕೊಂಡು ಹೋಗಿ ಆಸ್ಪತ್ರೆಗಳಿಗೆ ಹಾಕುವುದು. ಈ ರೀತಿ ಮಾಡುವುದರಿಂದ ಅವರು ಹೇಗೆ ತಾನೆ ಕೆಲಸ ಮಾಡಬೇಕು ? ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಕಡ್ಡಾಯವಾಗಿ ಡಿಸ್ಟ್ರಿಕ್ಟ್ ಹೆಲ್ತ್ ಸೆಂಟರ್‌ಗೆ ಹಾಕುತ್ತಿದ್ದಾರೆ ಎಂದು ಕೆಲವು ಡಾಕ್ಟರ್‌ಗಳು ಹೇಳುತ್ತಾರೆ. ಈ ರೀತಿ ಮಾಡುವುದರಿಂದ ಅವರು ಕಲಿತಿರುವಂತಹದ್ದನ್ನೆಲ್ಲಾ ಮರೆತೇ ಹೋಗುವಂತಹ ಅವಕಾಶಗಳು ಜಾಸ್ತಿ ಇರುತ್ತದೆ. ಅವನನ್ನು ಪುನಃ ಆಸ್ಪತ್ರೆಗೆ ಹಾಕಿದಾಗ ಆತ ಆಪರೇಷನ್‌ನ್ನು ಮಾಡುವುದನ್ನೇ ಮರೆತುಬಿಟ್ಟಿರುತ್ತಾನೆ. ಈ ರೀತಿ ಮಾಡುವುದು ಸರಿಯಲ್ಲ. ಯಾವ್ಯಾವ ಡಾಕ್ಟರ್ ಯಾವ್ಯಾವ ವಿಷಯದಲ್ಲಿ ಪರಿಣಿತರಾಗಿದ್ದಾರೆ ಆಯಾ ಕೆಲಸಗಳಿಗೇ ಅವರನ್ನು ಹಾಕುವಂತಹ ಕೆಲಸ ಮಾಡಿದರೆ ಅವರು ತಾನೇ ತಾನಾಗಿ ಕೆಲಸ ಮಾಡಿಕೊಂಡು ಹೋಗುತ್ತಾನೆ. ಇದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕು.

ಇನ್ನು ಆಯುರ್ವೇದದ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇತ್ತೀಚೆಗೆ ಭಾರತ ದೇಶದಲ್ಲಿ ಆ ಒಂದು ಹೊಸ ಪದ್ಧತಿ ಜಾರಿಗೆ ಬಂದಿದೆ. ನಮ್ಮಲ್ಲಿರತಕ್ಕ ಒಳ್ಳೆಯ ಗುಣಗಳನ್ನು ನಮ್ಮಲ್ಲಿರತಕ್ಕ ಒಳ್ಳೆಯ ಅಂಶಗಳನ್ನು ನಮ್ಮಲ್ಲಿರತಕ್ಕ ಒಳ್ಳೆಯ ಔಷಧಿಗಳ ಶಕ್ತಿಗಳ ಬಗ್ಗೆ ಪರದೇಶದವರು ಹೇಳಿದ ಮೇಲೆ ಅದರ ಬಗ್ಗೆ ಕಲ್ಪನೆ ನಮಗೆ ಬಂದಿದೆ. 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯಂತೆ, ಇದನ್ನು ಜರ್ಮನಿಯವರು ತೆಗೆದುಕೊಂಡು ಹೋಗಿ ಅಲ್ಲಿ ಈ ಆಯುರ್ವೇದದ ಬಗ್ಗೆ ಸಮೀಕ್ಷೆ ನಡೆಸಿ ಅದರ ಬಗ್ಗೆ ಸಂಸ್ಕೃತ ಹಾಗೂ ಜರ್ಮನಿಯಲ್ಲಿ ಪುಸ್ತಕವನ್ನು ಬರೆದರು. ಜರ್ಮನಿಯಿಂದ ಪ್ರಕಟವಾದ ಪುಸ್ತಕಗಳು ಆಯುರ್ವೇದ ಉತ್ಕೃಷ್ಟ ಔಷಧಿ ಅಂದ ಮೇಲೆ ನಮ್ಮ ಜನ ಕಣ್ಣು ತೆರೆದಿದ್ದಾರೆ. ಹಿಂದಿನ ಸರ್ಕಾರ ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ಕೊಟ್ಟಿರಲಿಲ್ಲ. ಅಲ್ಲಿರತಕ್ಕ ಡೈರೆಕ್ಟರ್ ಏನು ಇದ್ದಾರೆ, ಅವರು ಈವತ್ತಿಗೂ ಇನ್‌ಚಾರ್ಜ್ ಡೈರೆಕ್ಟರ್ ಆಗೇ ಇದ್ದಾರೆ. ಅವರನ್ನು ಫುಲ್ ಫ್ಲೆಡ್ಜ್ ಡೈರೆಕ್ಟರ್‌ನ್ನಾಗಿ ಇದುವರೆಗೂ ಮಾಡಿಲ್ಲ. ಅವರನ್ನು ಫುಲ್ ಫ್ಲೆಡ್ಜ್ ಡೈರೆಕ್ಟರನ್ನಾಗಿ ಕೂಡಲೇ ನೇಮಕ ಮಾಡಬೇಕು. ಆಯುರ್ವೇದದ ವಿಷಯದ ಬಗ್ಗೆ ವ್ಯಾಸಂಗ ಮಾಡಲು ಐದೂವರೆ ವರ್ಷ ಬೇಕಾಗುತ್ತದೆ. ಎಂ.ಬಿ.ಬಿ.ಎಸ್. ಓದುವುದಕ್ಕೂ ಐದೂವರೆ ವರ್ಷಗಳಾಗುತ್ತವೆ. ಅದರಿಂದಾಗಿ ಎಂ.ಬಿ.ಬಿ.ಎಸ್. ಓದಿದವರಿಗೆ ಯಾವ್ಯಾವ ಸೌಲಭ್ಯಗಳನ್ನು ಕೊಟ್ಟಿದ್ದೀರೊ ಅದೇ ಸೌಲಭ್ಯಗಳನ್ನು ಆಯುರ್ವೇದದಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ವಿದ್ಯಾರ್ಥಿಗಳಿಗೂ ಹಾಗೂ ಡಾಕ್ಟರ್‌ಗಳಿಗೂ ಕೊಡಬೇಕೆಂದು ಮೊದಲಿನಿಂದಲೂ ಕೇಳುತ್ತಲೇ ಬರುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆಯುರ್ವೇದ ಕಾಲೇಜಿನಲ್ಲಿ ಕೆಲಸ ಮಾಡತಕ್ಕ ಡಾಕ್ಟರ್ ಹಾಗೂ ಸಿಬ್ಬಂದಿಗೆ ಸಂಬಳವನ್ನು ಚೆಕ್ ಸಿಸ್ಟಂನ್ನು ಜಾರಿಗೆ ತಂದಿದೆ. ಆ ಒಂದು ಕೀರ್ತಿ ಜನತಾ ಸರ್ಕಾರಕ್ಕೆ ಹೋಗುತ್ತದೆ. ಆಯುರ್ವೇದ ಕಾಲೇಜಿನಲ್ಲಿ, ಹಾಗೂ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕವರ ಪರಿಸ್ಥಿತಿ ಇದರಿಂದ ಸುಧಾರಿಸಿದೆ. ಕನ್ನಡ ಶಾಲಾ ಮಾಸ್ತರಿಗೆ ಚೆಕ್ ಸಿಸ್ಟಂನ್ನು ಜಾರಿಗೆ ತಂದಿದ್ದಾರೆ. ಅದೇ ರೀತಿಯ

ವ್ಯವಸ್ಥೆ ನಮಗೂ ತರಬೇಕೆಂದು ಕೇಳುತ್ತಲೇ ಇದ್ದರು. ಇದನ್ನು ಮನಗಂಡು ನಮ್ಮ ನಾಯಕರು ಇತ್ತೀಚೆಗೆ ೩-೪ ತಿಂಗಳಿಂದ ಅಲ್ಲಿರತಕ್ಕಂತಹ ಸಿಬ್ಬಂದಿಗೆ ಹಾಗೂ ಡಾಕ್ಟರ್ ಗಳಿಗೆ ಚೆಕ್ ಸಿಸ್ಟಂ ಮುಖಾಂತರ ಸಂಬಳವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಇದರ ಜೊತೆಯಲ್ಲಿ ಆಯುರ್ವೇದ ಡ್ರಗ್ಸ್ ಬಗ್ಗೆ ಹೇಳುವುದಾದರೆ, ನಾವು ಅನೇಕ ರೀತಿಯಲ್ಲಿ ಅರಣ್ಯಗಳನ್ನು ಬೆಳೆಸುವುದಕ್ಕೆ ಯೋಜನೆಗಳನ್ನು ಮಾಡುತ್ತಿದ್ದೇವೆ. ಅದು ಪತ್ರಿಕೆಗಳಲ್ಲಿಯೂ ಸಹ ಬರುತ್ತಿದೆ. ಆಯುರ್ವೇದ ಕಾಲೇಜುಗಳ ಮತ್ತು ಆಸ್ಪತ್ರೆಗಳ ಅಕ್ಕಪಕ್ಕದಲ್ಲಿ ಗಿಡಮೂಲಿಕೆಗಳನ್ನು ಬೆಳೆಯುತಕ್ಕ ವ್ಯವಸ್ಥೆಯನ್ನು ಮಾಡಬೇಕು. ಗಿಡಮೂಲಿಕೆಗಳ ತೋಟಗಳು ಬಹಳ ಕಡಿಮೆ ಇವೆ. ಅರಣ್ಯ ಇಲಾಖೆಯವರು ಇವತ್ತಿನ ದಿವಸ ಕಾಲೇಜುಗಳ ಮತ್ತು ಸರ್ಕಾರಿ ಶಾಲಾ ಕಾಲೇಜುಗಳ ಆವರಣದಲ್ಲಿ ನೀಲಗಿರಿ ಗಿಡಗಳನ್ನು ಹಚ್ಚುವುದಕ್ಕೆ ಬದಲಾಗಿ ಸುಮಾರು ಎಕರೆ ಪ್ರದೇಶಗಳಲ್ಲಿ ಗಿಡ ಮೂಲಿಕೆಗಳನು ಅವರೇ ಬೆಳೆಸತಕ್ಕ ವ್ಯವಸ್ಥೆಯನ್ನು ಮಾಡಿದರೆ ಬಹುಶಃ ಆಯುರ್ವೇದಕ್ಕೆ ಹೆಚ್ಚಿನ ಸಹಾಯವಾಗುತ್ತದೆ. ಆರೋಗ್ಯ ಸಚಿವರು ಮತ್ತು ಅರಣ್ಯ ಸಚಿವರು ಒಟ್ಟಿಗೆ ಅರಣ್ಯ ಬೆಳೆಸುವುದಕ್ಕೆ ಅದರಲ್ಲಿಯೂ ಆಯುರ್ವೇದಕ್ಕೆ ಅನುಕೂಲವಾಗುವ ಗಿಡಮೂಲಿಕೆ ಗಿಡಮರಗಳನ್ನು ಬೆಳೆಸುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ತಾಲ್ಲೂಕು ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ನನ್ನ ವಂತದಾರ ಕ್ಷೇತ್ರವಾದ ಅಥಣಿ ತಾಲ್ಲೂಕು ಮಹಾರಾಷ್ಟ್ರ ರಾಜ್ಯದ ಗಡಿಯಲ್ಲಿದೆ. ತಮಗೆ ಆಶ್ಚರ್ಯವಾಗಬಹುದು, ಅಲ್ಲಿ ಒಂದೂ ಸರ್ಕಾರಿ ಆಸ್ಪತ್ರೆಯೂ ಇಲ್ಲ. ಮಾನ್ಯ ಸಿದ್ಧಾರ್ಥರವರು ಆರೋಗ್ಯ ಸಚಿವರಾಗಿದ್ದಾಗ ಆಸ್ಪತ್ರೆ ಬೇಕೆಂದು ಕೇಳಿದಾಗ, ಜಾಗ ಕೊಡಿಯೆಂದು ಕೇಳಿದ್ದರು. ಈಗ ೧೦ ಎಕರೆ ಜಾಗವನ್ನು ಮಾಡಿಕೊಟ್ಟಿದ್ದೇವೆ. ಈಗ ಅಲ್ಲಿ ಲೋಕಲ್ ಬೋರ್ಡ್ ಆಸ್ಪತ್ರೆ ಇದೆ. ಅದು ಒದ್ದರೆ ಬಿದ್ದುಹೋಗುತ್ತದೆ. ಮಾನ್ಯ ಆರೋಗ್ಯ ಸಚಿವರಾದ ಕೃಷ್ಣಪ್ಪನವರು ಒದ್ದರೆ ಆ ಕಟ್ಟಡ ಬಿದ್ದುಹೋಗುತ್ತದೆ. ಅವರು ಜೋರಾಗಿ ನಡೆದರೂ ಬಿದ್ದುಹೋಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ —ಮಾನ್ಯ ಕೃಷ್ಣಪ್ಪನವರು ಯಾವ ಹೊತ್ತಿನಲ್ಲಿ ಒದೆಯಬೇಕು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅವರು ಯಾವಾಗ ಒದ್ದರೂ ಬಿದ್ದುಹೋಗುತ್ತದೆ. ಯಾವಾಗ ನಡೆದರೂ ಬಿದ್ದುಹೋಗುತ್ತದೆ. ಅಥಣಿ ಊರಿನಲ್ಲಿ ೩೦-೩೫ ಸಾವಿರ ಜನಸಂಖ್ಯೆ ಇದೆ. ಅಲ್ಲಿ ೫೪ ಜನ ಪ್ರೈವೇಟ್ ಪ್ರಾಕ್ಟೀಸ್ ನಡೆಸುತ್ತಿದ್ದಾರೆ. ೧೨ ಔಷಧಿ ಅಂಗಡಿಗಳಿವೆ. ಅಥಣಿಯಿಂದ ಮಹಾರಾಷ್ಟ್ರದ ಮೀರಜ್ ಮಿಷನ್ ಆಸ್ಪತ್ರೆ ಕೇವಲ ೫೦ ಕಿಲೋಮೀಟರ್ ದೂರವಿದೆ. ಒಬ್ಬ ಮನುಷ್ಯನಿಗೆ ಏನಾದರೂ ಅಪಘಾತವಾದರೆ ಅಥವಾ ಬಿದ್ದರೆ ಮಹಾರಾಷ್ಟ್ರಕ್ಕೆ ಹೋಗಿ ಚಿಕಿತ್ಸೆ ಪಡೆಯುತಕ್ಕ ಪರಿಸ್ಥಿತಿ ಇದೆ. ಕಳೆದ ೪೦ ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ.

ಒಬ್ಬ ಮಾನ್ಯ ಸದಸ್ಯರು —ಕಳೆದ ನಾಲ್ಕು ವರ್ಷಗಳಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆಸ್ಪತ್ರೆ ಕಟ್ಟಲಿಕ್ಕೆ ೧೦ ಎಕರೆ ಭೂಮಿಯನ್ನು ರಿಸರ್ವ್ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಆಸ್ಪತ್ರೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಎರಡು ವರ್ಷಗಳಲ್ಲಿ ಆಸ್ಪತ್ರೆಯನ್ನು ಕಟ್ಟೇ ಕಟ್ಟುತ್ತೇವೆ. ೪೦ ವರ್ಷಗಳಲ್ಲಿ ಆಗದೇ ಇದ್ದುದನ್ನು ಇವತ್ತು ಮಾಡುತ್ತಿದ್ದೇವೆ. ಪ್ರಾಥಮಿಕ ಆರೋಗ್ಯ ಘಟಕಗಳನ್ನು ಕೊಡುತ್ತೇವೆಂದು ತಮಗೆಲ್ಲಾ ಗೊತ್ತಿರುವ ಹಾಗೆ ಒಂದು ಬೇಡಿಕೆ ಬಂತು. ಅದೇನೆಂದರೆ ಯಾವ ಹಳ್ಳಿಯಲ್ಲಿ ನಾಲ್ಕು ಎಕರೆ ಭೂಮಿ ೨೫ ಸಾವಿರ ಡಿಪಾಸಿಟ್ ಕೊಟ್ಟರೆ ಅಲ್ಲಿಗೊಂದು ಆರೋಗ್ಯ ಘಟಕವನ್ನು ಕೊಡುತ್ತೇವೆಂದು ಹೇಳಿದರು. ನನ್ನ ಕ್ಷೇತ್ರದ ನಾಲ್ಕು ಎಕರೆ ಭೂಮಿ ಮತ್ತು ೨೫ ಸಾವಿರ ರೂಪಾಯಿ ಡಿಪಾಸಿಟ್ ಕೊಟ್ಟರೂ ಕೂಡ ಅದು ಕೇಂದ್ರ ಸರ್ಕಾರದ ಯೋಜನೆ ಆಗಿದ್ದರಿಂದ ಅವರು ಹಣ ಕೊಡುವಾಗ ಕಡಿತ ಮಾಡಿದ್ದರಿಂದ ಆಸ್ಪತ್ರೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರ ಏತಕ್ಕೆ ಈ ರೀತಿ ಮಾಡುತ್ತಿದೆಯೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಇನ್ನು ಕುಟುಂಬ ಕಲ್ಯಾಣದ ಬಗ್ಗೆ ಹೇಳುವುದಾದರೆ, ಕುಟುಂಬ ಕಲ್ಯಾಣ ದೊಡ್ಡದಾದ ವಿಷಯ. ನಮ್ಮ ಸರ್ಕಾರಕ್ಕೆ ಕುಟುಂಬ ಕಲ್ಯಾಣ ಯೋಜನೆಯಲ್ಲಿ ಸಾಧನೆಗಾಗಿ ಒಂದು ಕೋಟಿ ರೂಪಾಯಿ ಬಹುಮಾನ ಬಂದಿದೆ. ಇದು ಬಹಳ ಮೆಚ್ಚಿಗೆಯನ್ನು ಪಡತಕ್ಕ ವಿಚಾರ. ನಮ್ಮ ಗುರಿ ಸಾಧನೆ ಮಾಡಿರುವುದಕ್ಕೆ ಕೇಂದ್ರ ಸರ್ಕಾರದವರು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಒಂದು ಕೋಟಿ ರೂಪಾಯಿ ಬಹುಮಾನ ಕೊಟ್ಟಿದ್ದಾರೆ. ಕುಟುಂಬ ಕಲ್ಯಾಣಕ್ಕೆ ಕಳೆದವರ್ಷಕ್ಕಿಂತ ೧೩ ಕೋಟಿ ರೂಪಾಯಿಗಳನ್ನು ಮಾತ್ರ ಈ ವರ್ಷ ಹೆಚ್ಚು ಮಾಡಲಾಗಿದೆ.

ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಎರಡನೇ ದೊಡ್ಡ ಜಿಲ್ಲೆಯಾದ ಬೆಳಗಾಂಗೆ ೧.೫ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇಷ್ಟು ಕಡಿಮೆ ಏಕೆ ಕೊಟ್ಟಿದ್ದಾರೆ? ಉದಾರ ಮನಸ್ಸಿನಿಂದ ಹೆಚ್ಚಿ ಹಣ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕುಟುಂಬ ಕಲ್ಯಾಣದ ಪಟ್ಟಿ ನೋಡಿದಾಗ ಬರೀ ಆಪರೇಷನ್ ಮಾಡಿಸಿಕೊಂಡಿರುವವರ ಸಂಖ್ಯೆ ಕೊಟ್ಟಿದ್ದಾರೆಯೇ ಹೊರತು ಇದರಲ್ಲಿ ಪುರುಷರು ಎಷ್ಟು ಮಹಿಳೆಯರು ಎಷ್ಟು ಎಂಬ ಬಗ್ಗೆ ವಿವರ ಕೊಟ್ಟಿಲ್ಲ. ಹಳ್ಳಿಗಳ ಕಡೆ ಕುಟುಂಬ ಕಲ್ಯಾಣದ ಬಗ್ಗೆ ಪ್ರಚಾರ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರಿಗೇ ಆಪರೇಷನ್ ಮಾಡಿಸುತ್ತಿದ್ದಾರೆ. ಮುಂದಿನ ವರ್ಷದಲ್ಲಿ ಎಷ್ಟು ವ್ಯಾಸೆಕ್ಟಮಿ, ಎಷ್ಟು ಟ್ಯೂಬೆಕ್ಟಮಿ ಆಪರೇಷನ್ ಮಾಡಲಾಯಿತು ಇದರಲ್ಲಿ ಗಂಡಸರು ಹಾಗೂ ಮಹಿಳೆಯರು ಎಷ್ಟು ಎಂಬುದನ್ನು ತಿಳಿಸಬೇಕು. ಇವತ್ತು ಗಂಡಸರಿಗೆ ಆಪರೇಷನ್ ಮಾಡಲು ಸುಲಭ ಇದ್ದರೂ ಹೆಂಗಸರಿಗೆ ಏಕೆ ಹೆಚ್ಚು ಮಾಡಿಸಲು ಕಾರಣ ಏನು? ಇವತ್ತು ಹೆಚ್ಚು ಹೆಚ್ಚು ಹೆಣ್ಣುಮಕ್ಕಳಿಗೆ ಜವಾಬ್ದಾರಿ ವಹಿಸುತ್ತಿರುವುದು ಸರಿಯಲ್ಲ. ಇವತ್ತು ಎಷ್ಟು ಜನ ಹೆಣ್ಣುಮಕ್ಕಳಿಗೆ ಆಪರೇಷನ್ ಮಾಡಿಸಲು ಆಗುತ್ತದೋ ಅಷ್ಟೇ ಜನ ಗಂಡಸರಿಗೂ ಆಪರೇಷನ್ ಮಾಡಿಸುವ ವ್ಯವಸ್ಥೆಯಾಗಬೇಕು. ಇವತ್ತು ಆಪರೇಷನ್ ಮಾಡಿಸಿಕೊಳ್ಳುವವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಇನ್‌ಸೆಂಟೀವ್ ಕೊಡುತ್ತಿವೆ. ಇವತ್ತು ಸರ್ಕಾರಿ ನೌಕರರಿಗೆ ೨ ಮಕ್ಕಳಾದ ಮೇಲೆ ಆಪರೇಷನ್ ಮಾಡಿಸಿಕೊಂಡರೆ ಒಂದು ಇಂಕ್ರಿಮೆಂಟ್ ಕೊಡಲಾಗುತ್ತಿದೆ. ಆದರೆ ಇವತ್ತು ರಾಜ್ಯದಲ್ಲಿ ಸರ್ಕಾರಿ ನೌಕರಿಯಲ್ಲಿ ಇರತಕ್ಕ ಜನ ಕೇವಲ ೪ ಪರ್ಸೆಂಟ್ ಶೇಕಡಾ ೭೦ ಭಾಗ ಹಳ್ಳಿಗಳಲ್ಲಿ ಇರತಕ್ಕ ಜನರಿಗೆ ಕೊಡತಕ್ಕ ಪ್ರೋತ್ಸಾಹ ಏನು? ಈ ಇನ್‌ಸೆಂಟೀವ್ ಕೊಡತಕ್ಕದ್ದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಒಬ್ಬ ಸರ್ಕಾರಿ ನೌಕರ ಖಾಸಗೀ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿಸಿಕೊಂಡರೆ ಆತನಿಗೆ ಇನ್‌ಕ್ರಿಮೆಂಟ್ ಇಲ್ಲ, ಅಷ್ಟೇ ಅಲ್ಲ ರಾಜ್ಯದ ಹೊರಗಡೆ ಆಪರೇಷನ್ ಮಾಡಿಸಿಕೊಂಡಿದ್ದರೆ ಇನ್‌ಕ್ರಿಮೆಂಟ್ ಇಲ್ಲ. ನಮ್ಮ ಜಿಲ್ಲೆಯ ಒಬ್ಬ ಹೆಣ್ಣುಮಗಳು ತೌರುಮನೆಗೆ ಅಂದರೆ ಮಹಾರಾಷ್ಟ್ರದ ಮಿರಜ್‌ಗೆ ಹೋಗಿ ಅಲ್ಲಿ ಹೆರಿಗೆಯಾದ ಮೇಲೆ ಆಪರೇಷನ್ ಮಾಡಿಸಲಾಗಿದೆ. ಅಲ್ಲಿಯ ಸರ್ಟಿಫಿಕೇಟ್ ತಂದು ಇಲ್ಲಿ ಇನ್‌ಕ್ರಿಮೆಂಟ್ ಕೇಳಲು ಹೋದರೆ ಇದು ಬೇರೆ ರಾಜ್ಯದ ಸರ್ಟಿಫಿಕೇಟ್ ಆದ್ದರಿಂದ ಇಂಕ್ರಿಮೆಂಟ್ ಕೊಡಲು ಆಗುವುದಿಲ್ಲವೆಂದು ಹೇಳಿದ್ದಾರೆ. ಇದು ಯಾವ ನ್ಯಾಯ? ಇವತ್ತು ಸರ್ಕಾರಿ ಆಸ್ಪತ್ರೆ ಇರಲಿ, ಅಥವಾ ಪ್ರೈವೇಟ್ ಆಸ್ಪತ್ರೆ ಇರಲಿ, ಅದು ಯಾವ ರಾಜ್ಯದಲ್ಲೇ ಇರಲಿ, ಮಹಾರಾಷ್ಟ್ರದಲ್ಲೇ ಇರಲಿ, ಕರ್ನಾಟಕದಲ್ಲೇ ಇರಲಿ, ತಮಿಳುನಾಡಿನಲ್ಲೇ ಇರಲಿ ಆಪರೇಷನ್ ಆದಮೇಲೆ

(ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಅವರಿಗೆ ಬರಬೇಕಾದ ಇಂಕ್ರಿಮೆಂಟನ್ನು ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಹಳ್ಳಿಗಾಡಿನಲ್ಲಿ ಇರತಕ್ಕ ೭೦ ಪರ್ಸೆಂಟ್ ಜನರಿಗೆ ತಟ್ಟೆಗೆಂದು ೧೦೦ ರೂಪಾಯಿ, ಬಟ್ಟೆಗೆಂದು ೫೦ ರೂಪಾಯಿ ಕೊಟ್ಟರೆ ಅದರಲ್ಲಿ ಎಷ್ಟು ಹಣ ಅವರಿಗೆ ತಲುಪುತ್ತದೆ ಸ್ವಾಮಿ? ಅದೂ ಹಣವನ್ನು ಗಂಡ ಕುಡುಕನಾಗಿದ್ದರೆ ಆಕೆಗೆ ತಲುಪಿಸುವ ಪ್ರಶ್ನೆಯೇ ಇಲ್ಲ. ಮಿತ ಕುಟುಂಬದ ಬಗ್ಗೆ ಚೈನಾದಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅಲ್ಲಿಯ ಮಿತಕುಟುಂಬಕ್ಕೆ ಶಿಕ್ಷಣದಲ್ಲಿ ಕೆಲವೊಂದು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಉದ್ಯೋಗದಲ್ಲಿ ಪ್ರಿಫರೆನ್ಸ್, ಸಾಲದಲ್ಲಿ ರಿಯಾಯಿತಿ, ಹೆಚ್ಚು ರೇಷನ್ ಕೊಡುವುದು ಇದೆಲ್ಲಾ ಅಲ್ಲಿ ಇದೆ. ಅದೇ ರೀತಿಯ ಒಂದು ಸೌಕರ್ಯಗಳನ್ನು ನಮ್ಮಲ್ಲೂ ಅಳವಡಿಸಿದರೆ ಇದರಿಂದ ನಮ್ಮ ಜನರಿಗೆ ಅನುಕೂಲವಾಗುತ್ತದೆ. ಮಿತ ಕುಟುಂಬ ಹೊಂದಿರುವವರಿಗೆ ಗ್ರೀನ್ ಕಾರ್ಡ್ ಕೊಡುವುದು, ಕೋ ಆಪರೇಟಿವ್ ಸೊಸೈಟಿಗಳಲ್ಲಿ ಸಾಲ ಕೊಡಿಸುವುದು, ಮನೆ ಇಲ್ಲದವರಿಗೆ ಮನೆ ಕೊಡಿಸುವುದು, ಇಂತಹ ವ್ಯವಸ್ಥೆ ಮಾಡಿದರೆ ಇವತ್ತು ದೇಶದ ಹಳ್ಳಿ ಗಾಡಿನಲ್ಲಿ ೭೦ ಪರ್ಸೆಂಟ್ ಜನಸಂಖ್ಯೆ ಏನು ಬೆಳೆಯುತ್ತಿದೆ, ಕೊಳಚೆ ಪ್ರದೇಶದಲ್ಲಿರತಕ್ಕ ಜನಸಂಖ್ಯೆ ಏನು ಬೆಳೆಯುತ್ತಿದೆ ಅದನ್ನು ತಡೆಗಟ್ಟಬಹುದು.

ಶ್ರೀ ಎಂ. ಎನ್. ಅಡ್ಯಂತಾಯ.—ಮಾನ್ಯ ಸದಸ್ಯರು ಸ್ವಲ್ಪ ಈಲ್ಡ್ ಆಗುವುದಾದರೆ ಒಂದು ವಿಷಯ ಹೇಳುತ್ತೇನೆ.

೨-೦೦ ಪಿ. ಎಂ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ —ಸರ್ಕಾರಿ ನೌಕರರಿಗೆ ಇನ್‌ಸೆಂಟೀವ್ ಸಿಗುತ್ತದೆ. ಆದರೆ ಹಳ್ಳಿಗಳಲ್ಲಿ ಇರತಕ್ಕಂಥ ೭೦ ಪರ್ಸೆಂಟ್ ಜನರಿಗೆ ಅನುಕೂಲವಾಗುವಂಥ ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕು. ಆಗ ಮಾತ್ರ ಇನ್ನೂ ಹೆಚ್ಚಾಗಿ ಈ ಕುಟುಂಬ ಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಈ ಸಲಹೆಯನ್ನು ಮಾನ್ಯ ಆರೋಗ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ಇದರ ಬಗ್ಗೆ ಅವರು ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಆರೋಗ್ಯದ ವಿಷಯವಾಗಿ ನಾನು ಸಾಕಷ್ಟು ಮಾತನಾಡಿದ್ದೇನೆ ಎಂದು ಕೊಂಡಿದ್ದೇನೆ. ಇನ್ನು ಎಕ್ಸೈಸ್ ಅಂದರೆ ಅಬ್ಕಾರಿ ಮೇಲೆ ಮಾತನಾಡಬೇಕಾಗಿದೆ. ನನಗೆ ಬಹಳ ಪಶ್ಚಾತ್ತಾಪ ಆಗುತ್ತದೆ...

ಶ್ರೀ ಆರ್. ಎನ್. ನಾಯಕ್.—ಹೆಂಡ ಕುಡಿಯುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ.

ಅಧ್ಯಕ್ಷರು.—ಮಾನ್ಯ ನಾಯಕರೇ, ನೀವು ಮಧ್ಯೆ ಮಾತನಾಡಬೇಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೆ, ಅಬ್ಕಾರಿ ಇಲಾಖೆಯಿಂದ ೧೯೮೭–೮೮ನೇ ಸಾಲಿಗೆ ೧೦ ಕೋಟಿ ರೂಪಾಯಿ ಹೆಚ್ಚಳ ಆದಾಯ ಬರತಕ್ಕ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಬಹುಶಃ ಇವತ್ತು ಮಾರಾಟ ತೆರಿಗೆ ಬಿಟ್ಟರೆ ಎರಡನೇ ದೊಡ್ಡ ಮೊತ್ತ ಸರ್ಕಾರದ ಬೊಕ್ಕಸಕ್ಕೆ ಬರುವುದು ಈ ಅಬ್ಕಾರಿಯಿಂದ ಇವತ್ತು ಅಬ್ಕಾರಿಯಿಂದ ೧೯೮೫–೮೬ರಲ್ಲಿ ೧೮೦ ಕೋಟಿ, ೧೯೮೬–೮೭ರಲ್ಲಿ ೨೩೮ ಕೋಟಿ ಮತ್ತು ೧೯೮೭–೮೮ರಲ್ಲಿ ೨೬೦ ಕೋಟಿ ರೂಪಾಯಿಗಳನ್ನು ನಿರೀಕ್ಷಿಸಲಾಗಿದೆ. ಅಂದರೆ ಹೋದ ವರ್ಷಕ್ಕಿಂತ ೨೦ ಕೋಟಿ ಮಾತ್ರ ಹೆಚ್ಚಳವಾಗಿದೆ. ಈ ಟೋಟಲ್‌ನ್ನು ನೋಡಿದಾಗ ಹತ್ತು ಪರ್ಸೆಂಟ್‌ನಷ್ಟು ಮಾತ್ರ ಹೆಚ್ಚಾಗಿದೆ. ಮಾರಾಟ ತೆರಿಗೆಯಿಂದ ೩೦ ಪರ್ಸೆಂಟ್, ವಾಹನ ತೆರಿಗೆಯಿಂದ ೬೦ ಪರ್ಸೆಂಟ್ ಹೆಚ್ಚಳ ಆದಾಗ, ಅಬ್ಕಾರಿಯಿಂದ ಮಾತ್ರ ೧೦ ಪರ್ಸೆಂಟ್ ಏಕೆ ಮಾಡಿದರು. ವಾಹನ ತೆರಿಗೆ ಮತ್ತು ಮಾರಾಟ ತೆರಿಗೆಯಿಂದ ೩೦–೬೦ ಪರ್ಸೆಂಟ್ ಹೆಚ್ಚು ಬರುವುದರಿಂದ ಇದನ್ನು ಕೂಡ ಹೆಚ್ಚು ಮಾಡಿದರೆ, ಕುಡಿಯುವವರಿಗೆ ಎಷ್ಟು ಹಣ ಕೊಟ್ಟರೂ ಗೊತ್ತಾಗುವುದಿಲ್ಲ. ಇದನ್ನು ಹೆಚ್ಚು ಮಾಡಬಹುದು. ಇದನ್ನು ೩೦ ಪರ್ಸೆಂಟಿಗಾದರೂ ಹೆಚ್ಚು ಮಾಡಬಹುದು ಎಂದು ಹೇಳುತ್ತೇನೆ. ಇದರ ಜೊತೆಗೆ ಇವತ್ತಿನ ದಿವಸ ಟೆಂಪರೆನ್ಸ್ ಬೋರ್ಡ್ ಅಂತ ಇದೆ. ಒಂದೊಂದು ಸಲ ಈ ಟೆಂಪರೆನ್ಸ್ ಬೋರ್ಡ್ ಏನೆಂದು ನನಗೆ ಅರ್ಥವಾಗುವುದಿಲ್ಲ. ಈ ಬೋರ್ಡಿನ ಕೆಲಸ ಏನೆಂದೇ ತಿಳಿಯುವುದಿಲ್ಲ. ಇದು ಬಹಳ ವರ್ಷಗಳಿಂದ ಇದೆ. ಇದರಲ್ಲಿ ಮಹಿಳಾ ಸೋದರಿಯೊಬ್ಬರು ಅಧ್ಯಕ್ಷರಾಗಿದ್ದರು. ಮಿತವಾಗಿ ಕುಡಿಯಬೇಕು, ಕೆಲವೇ ಸ್ಥಳಗಳಲ್ಲಿ ಹಿತವಾಗಿ ಕುಡಿಯಬೇಕು ಎಂದರೆ, ನನ್ನ ದೃಷ್ಟಿಯಲ್ಲಿ ಕುಡಿಯುವುದನ್ನು ಕಂಟ್ರೋಲ್ ಮಾಡುವುದಕ್ಕೆ ಅಧಿಕಾರವನ್ನು ಈ ಬೋರ್ಡಿಗೆ ಕೊಟ್ಟಿದ್ದೀರಾ? ಇದರ ಸ್ಯಾಂಕ್ಷನ್ ಏನು ಸ್ಟ್ಯಾಟ್ಯೂಟರಿ ಅಧಿಕಾರ ಏನು? ಇದರ ಇತಿಮಿತಿಗಳೇನು? ಯಾರನ್ನು ತೃಪ್ತಿಪಡಿಸುವುದಕ್ಕೆ ಯಾರಿಂದ ಶಹಭಾಸ್‌ಗಿರಿಯನ್ನು ಪಡೆಯುವುದಕ್ಕೆ ಈ ಬೋರ್ಡ್ ಇದೆಯೆಂದು ನನಗೆ ಅರ್ಥವಾಗುವುದಿಲ್ಲ. ದಯವಿಟ್ಟು ಇದನ್ನು ಬಲಪಡಿಸಿ, ಇಲ್ಲದಿದ್ದರೆ ಇದನ್ನು ತೆಗೆದುಹಾಕಿ, ಏಕೆಂದರೆ ಪಾಪ, ಶ್ರೀಮತಿ ಎಂ. ಆರ್ ಲಕ್ಷ್ಮಮ್ಮನವರು ಬಹಳ ಕಷ್ಟಪಟ್ಟರು ಹಳ್ಳಿಹಳ್ಳಿಗೆ ಹೋಗಿ ಕುಡಿಯುವುದನ್ನು ಕಡಿಮೆ ಮಾಡಬೇಕೆಂದು ಹೇಳುತ್ತಾ ಹೋದರು. ಈಗ ಆ ಬೋರ್ಡಿನ ಉದ್ದೇಶ ಏನೆಂಬುದೇ ಅರ್ಥವಾಗುವುದಿಲ್ಲ. ಆದ್ದರಿಂದ ಒಂದೋ ಅದಕ್ಕೆ ಹೆಚ್ಚು ಅಧಿಕಾರವನ್ನು ಕೊಡಿ ಇಲ್ಲದಿದ್ದರೆ, ಅದನ್ನು ತೆಗದು ಹಾಕಿ. ಇದರ ಜೊತೆಯಲ್ಲಿ ಇವತ್ತಿನ ದಿವಸ ವೈನ್‌ಷಾಪ್ ಹತ್ತು ಸಾವಿರ ಪಾಪ್ಯುಲೇಶನ್‌ಗೆ ಒಂದು ಅಂಗಡಿ ಎಂದು ಇದ್ದಂತಹ ಕಾನೂನನ್ನು ಏಳು ಸಾವಿರದ ಐನೂರು ಪಾಪ್ಯುಲೇಶನ್‌ಗೆ ಒಂದಂತೆ ಇಳಿಸಿದ್ದೀರಿ. ಇದು ಬಹಳ ಅನ್ಯಾಯ. ಇದನ್ನು ಹತ್ತು ಸಾವಿರದ ಬದಲು ಹದಿನೈದು–ಇಪ್ಪತ್ತು ಸಾವಿರ ಜನರಿಗೆ ಒಂದು ಷಾಪ್‌ನಂತೆ ಮಾಡಿ ಹೋಬಳಿ ಒಂದೊಂದು ಅಂಗಡಿ ಕೊಟ್ಟರೂ ಸಾಕು. ಹಳ್ಳಿಹಳ್ಳಿಗೂ ಬೇಡ ಆದ್ದರಿಂದ ಈ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ತಮ್ಮ ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾ ಸಹಕಾರ ಸಂಘಗಳಲ್ಲಿ ಹಾಗೂ ಆಹಾರ ನಿಗಮದ ಅಂಗಡಿಗಳಲ್ಲಿ ಮದ್ಯ ಮಾರಾಟವನ್ನು ಕೈಬಿಡುವುದಾಗಿ ಹೇಳಿದರು ಇದಕ್ಕಾಗಿ ನಾನು ಅವರಿಗೆ ಈ ಸಂದರ್ಭದಲ್ಲಿ

ಕೃತಜ್ಞತೆಗಳನ್ನು ತಿಳಿಸುತ್ತೇನೆ. ಹಾಗೆಯೇ ಮದ್ಯ ಮಾರಾಟ ಜನತಾ ಬಜಾರುಗಳಲ್ಲಿ ಮಾಡಲು ಅವಕಾಶ ಕೊಡುವುದಾಗಿ ಹೇಳಿದ್ದಾರೆ. ರೇಷನ್ ಅಕ್ಕಿ, ಬೇಳೆ ಅಲ್ಲಿ ಕೇಳಿದಾಗ, ಸಿಗದೇ ಹೋದಾಗ ಆ ಮನುಷ್ಯ ಸೀದಾ ಬಾಟಲು ಹಿಡಿದುಕೊಂಡು ಮನೆಗೆ ಬರತಕ್ಕಂಥ ಪರಿಸ್ಥಿತಿ ಆಗಬಾರದು.

ಅಲ್ಲಿಯೂ ತೆಗೆದುಹಾಕಬೇಕು. ಕುಡಿಯುವವರಿಗೆ ಪ್ರತ್ಯೇಕವಾದ ಸ್ಥಳ ಇದೆ, ಪ್ರತ್ಯೇಕವಾದ ಜಾಗ ಇದೆ. ಅಕ್ಕಿ, ಬೇಳೆ ಮಾರತಕ್ಕಂಥ ಮಳಿಗೆಗಳಲ್ಲಿ ಇದನ್ನು ನಿಲ್ಲಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ....

ಅಧ್ಯಕ್ಷರು.—ಸಾಕು ಮುಗಿಸಿ...

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸ್ವಾಮಿ, ನಾವು ನಿಂತುಕೊಂಡು ಮಾತನಾಡುವಾಗ ಸ್ವಲ್ಪ ಸಮಯ ಕೊಡಿ. ಇನ್ನೊಂದು ಹತ್ತು ನಿಮಿಷ. ಇದರ ಜೊತೆಗೆ ಬೀರ್ ಶಾಪ್‌ಗಳನ್ನು ತೆರೆಯುತಕ್ಕಂತಾದ್ದು ಆಕ್ಟ್‌ನಲ್ಲಿದೆ. ಶಾಲೆಗಳ ಸಮೀಪದಲ್ಲಿ ತೆರೆಯಬಾರದು, ದೇವಸ್ಥಾನಗಳ ಪಕ್ಕದಲ್ಲಿ ತೆರೆಯಬಾರದು ಎಂದು ಇದೆ. ಇವತ್ತು ಎಷ್ಟೋ ಕಡೆ ಶಾಲೆಗಳ ಪಕ್ಕದಲ್ಲಿಯೇ ಬೀರ್ ಶಾಪ್ ಇದೆ, ದೇವಸ್ಥಾನಗಳ ಪಕ್ಕದಲ್ಲಿಯೇ ಬೀರ್ ಶಾಪ್ ಇದೆ. ಇವತ್ತು ಹೆಣ್ಣು ಮಕ್ಕಳು ದೇವಸ್ಥಾನಕ್ಕೆ ಹೋಗಬೇಕಾದರೆ ಹೆದರುವ ಪರಿಸ್ಥಿತಿ ಇದೆ. ಆದ್ದರಿಂದ ಇಂತಹ ಪರಿಸ್ಥಿತಿ ಆಗಬಾರದು. ಇವುಗಳಿಗೆಲ್ಲಾ ಸರಿಯಾಗಿ ಕಾನೂನು ತಂದು, ಅದನ್ನು ಜಾರಿಗೆ ಕೊಡಬೇಕು. ಬ್ರಾಂದಿ, ಬೀರ್ ಈ ಹೆಸರುಗಳನ್ನೇ ಹೇಳುವುದಕ್ಕೆ ನಮಗೆ ಬರುವುದಿಲ್ಲ. ಇದಕ್ಕಿಂತ ಕ್ಲಿಷ್ಟ ಪದ್ಧತಿ ನಮ್ಮಲ್ಲಿ ಇದೆಯೆಂಬುದನ್ನು ಯಾರೂ ಮರೆಯಬಾರದು. ಈ ಡ್ರಗ್ ಅಂದರೆ ಮಾದಕ ವ್ಯಸನಿಗಳು. ಇದು ಎಲ್ಲಿಂದ ಬಂತು ನಮ್ಮ ದೇಶಕ್ಕೆ ? ನನಗೆ ಇದರಿಂದ ಮಹಾಭಾರತದ ಕತೆ ನೆನಪಾಗುತ್ತದೆ. ಅಧ್ಯಕ್ಷರು ಅವಕಾಶ ಕೊಟ್ಟರೆ ಹೇಳುತ್ತೇನೆ...

ಅಧ್ಯಕ್ಷರು.—ಇನ್ನೂ ೨೧ ಜನ ಮಾತನಾಡುವವರು ಇದ್ದಾರೆ, ಬೇಗ ಮುಗಿಸಿ

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಮಾಯಣದ ಕತೆಯನ್ನು ಹೆಣ್ಣುಮಕ್ಕಳಿಂದ ಕೇಳಿದರೆ ಚೆನ್ನಾಗಿರುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸ್ವಾಮಿ, ಅಜಮೀಢಾ ಎಂಬ ಒಬ್ಬ ಋಷಿ ಪುತ್ರ ಸ್ವರ್ಗದಿಂದ ಭೂಮಿಗೆ ಬಂದ. ಭೂಮಿ ಮೇಲೆ ಗಾಂಜಾ ಬೆಳೆದಿತ್ತು. ಆಗ ಅವರನ್ನು ಒಬ್ಬ ಕೇಳಿದ. ನೀವು ಸ್ವರ್ಗದಲ್ಲಿ ಸುರಪಾನ ಮಾಡುತ್ತೀರಿ. ಆದರೆ ಇಲ್ಲಿ ಗಾಂಜಾ ಸೇವನೆ ಮಾಡಿದರೆ, ಸಂಪೂರ್ಣವಾಗಿ ೫ ನಿಮಿಷದಲ್ಲಿ ದೇವರ ಹತ್ತಿರ ಹೋಗಬಹುದು ಎಂದು ಹೇಳಿದನಂತೆ. ಹೀಗೆ ಒಬ್ಬ ಋಷಿಯನ್ನು, ಆಧ್ಯಾತ್ಮಿಕವಾಗಿ ತಿಳಿದುಕೊಂಡಿರುವವರೂ ಇದರ ಸೇವನೆಯಿಂದ ಪ್ರಪಂಚವನ್ನು ಮರೆತು, ದೇವರ ಕಡೆಗೆ ಹೋಗಲೆಂದು ಈ ರೀತಿ ಹೇಳುತ್ತಿದ್ದರಂತೆ. ಇತ್ತೀಚೆಗೆ ಈ ಗಾಂಜಾ ಸೇವನೆಯು ಲೈಂಗಿಕ ಕ್ರಿಯೆಗೆ ಅಡ್ಡಿ ಬಂದು, ನಪುಂಸಕರನ್ನಾಗಿ ಮಾಡಿದೆ. ನಮ್ಮ ಬೆಂಗಳೂರಿನ ಬ್ರಿಗೇಡ್ ರೋಡ್‌ನಲ್ಲಿ "ಫಾಸ್ಟ್ ಫುಡ್" ಎಂದು ಇದೆ ಇದರ ಒಳಗಡೆ ಹೋದರೆ ಅಲ್ಲಿ ಗಾಂಜಾ ಮಾರುತ್ತಾರೆ. ಹೊರಗಡೆ ಮಾತ್ರ ಏನೇನೂ ಕಾಣುವುದಿಲ್ಲ. ಅದೇ ರೀತಿ ಇವತ್ತಿನ ದಿವಸ ಕಾಲೇಜಿಗೆ ಹೋಗತಕ್ಕಂಥ ಮಕ್ಕಳು, ಆಸ್ಪತ್ರೆಗೆ ಹೋಗಿ ಇಂಜೆಕ್ಷನ್ ತೆಗೆದುಕೊಳ್ಳಬೇಕಾದರೆ, ತಡವಾಗುತ್ತದೆಂದು, ಸಿರಿಂಜನ್ನು ಬಿಸಿ ನೀರಿನಲ್ಲೂ ಕಾಯಿಸದೇ, ಮೇಣದ ಬತ್ತಿ ಹಚ್ಚಿ, ಅದರಲ್ಲಿ ಹಿಡಿದು ಇಂಜೆಕ್ಷನ್ ತೆಗೆದುಕೊಳ್ಳುತ್ತಾರೆ. ಇದನ್ನು ಯಾವ ರೀತಿ ತಡೆಹಿಡಿಯುತ್ತೀರಿ, ಯಾವ ರೀತಿ ಉಗ್ರ ಕ್ರಮ ತೆಗೆದುಕೊಳ್ಳುತ್ತೀರಿ ? ಇವತ್ತು ಗಂಡು ಮಕ್ಕಳು ಮಾತ್ರ ಇದನ್ನು ಸೇವನೆ ಮಾಡುತ್ತಿಲ್ಲ. ಹೆಣ್ಣು ಮಕ್ಕಳೂ ಕೂಡ ಕಬ್ಬನ್ ಪಾರ್ಕ್‌ನಲ್ಲಿ ಸೇವನೆ ಮಾಡುವುದನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಮುಂದಿನ ಜನಾಂಗ ಏನಾಗುತ್ತದೆ ಎಂದರೆ, ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡತಕ್ಕಂಥ ಮಕ್ಕಳು ಏನಾದರೂ ಆಸ್ಪತ್ರೆಗೆ ಹೋದರೆ, ಅಲ್ಲಿನ ಡಾಕ್ಟರು ಆಪರೇಷನ್ ಥಿಯೇಟರಿಗೆ ಹೋಗುವ ಮೊದಲು ಮದ್ಯವನ್ನು ಸೇವನೆ ಮಾಡಿ ಹೋಗುವ ಪರಿಸ್ಥಿತಿ ಬರುತ್ತದೆ. ವಿಮಾನ ಚಾಲಕ ಮೊದಲನೇ ದಿವಸ ಕುಡಿಯಬಾರದೆಂದು ಆಕ್ಟ್‌ನಲ್ಲಿ ಇದೆ. ಆದರೆ, ಒಬ್ಬ ಡಾಕ್ಟರು ಆಪರೇಷನ್ ಥಿಯೇಟರ್‌ಗೆ ಹೋಗುವಾಗ ಕುಡಿದು ಹೋದರೆ ಆ ಜೀವದ ಗತಿ ಏನು ? ಒಂದು ಸಾರಿ ಒಬ್ಬರು ಅಜ್ಜಿಯನ್ನು ಕಣ್ಣು ನೋವಾಗಿತ್ತು ಎಂದು ತೋರಿಸಲು ಒಂದು ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆ ಅಜ್ಜಿಗೆ ಕಣ್ಣು ನೋವಾಗಿತ್ತು. ಬಲಗಡೆ ಕಣ್ಣಿಗೆ ನೋವಾಗಿತ್ತು. ಎಡಗಡೆ ಕಣ್ಣು ಚೆನ್ನಾಗಿತ್ತು. ನಾನು ಆಸ್ಪತ್ರೆಗೆ

ಕರೆದುಕೊಂಡು ಹೋದಾಗ ಅಲ್ಲಿಯು ಡಾಕ್ಟರ್ ಎಡಗಡೆಯು ಕಣ್ಣನ್ನು ಪರೀಕ್ಷೆ ಮಾಡುತ್ತಿದ್ದ. ಸರ್ಕಾರಿ ಡಾಕ್ಟರ್ಸ್ ಇವತ್ತಿನ ದಿವಸ ಈ ರೀತಿ ಆಗಿದ್ದಾರೆ. ಬಲಗಡೆ ಕಣ್ಣನ್ನು ಬಿಟ್ಟು ಎಡಗಡೆ ಕಣ್ಣನ್ನು ಏನಾದರೂ ಆಪರೇಷನ್ ಮಾಡಿದರೆ ಆ ರೋಗಿಯ ಕಥೆ ಏನು ಎಂದು ನನಗೆ ಭಯ ಆಯಿತು. ತಕ್ಷಣ ನಾನು ಅವರನ್ನು ವಾಪಸ್ ಕರೆದುಕೊಂಡು ಬರಬೇಕಾಯಿತು. ಇವತ್ತು ನಮ್ಮ ಸರ್ಕಾರಿ ಡಾಕ್ಟರ್ಸ್ ಕುಡಿದುಕೊಂಡು ಹೋಗಿ ಆಪರೇಷನ್ ಮಾಡ ತ್ತಾರೆ, ಕತ್ತರಿ ಒಳಗಡೆ ಬಿಡುತ್ತಾರೆ, ಸೂಜಿಯನ್ನೇ ಒಳಗೆ ಬಿಡುತ್ತಾರೆ, ಎಲ್ಲೋ ಹೊಲಿಗೆ ಹಾಕುತ್ತಾರೆ, ಎಲ್ಲೋ ಆಪರೇಷನ್ ಮಾಡುತ್ತಾರೆ. ಆದುದರಿಂದ ಇದರ ಬಗ್ಗೆ ಸೂಕ್ತ ಗಮನ ಕೊಡಬೇಕು. ಇವತ್ತು ಡ್ರಗ್ ಅಡಿಕ್ಷನ್ ಬಗ್ಗೆ ಬಹಳ ನಿಷ್ಠೂರವಾಗಿ ಹೇಳುತ್ತೇನೆ, ಇವತ್ತು ಎಲ್ಲೆಲ್ಲಿ ಮಕ್ಕಳು, ಕಾಲೇಜಿಗೆ ಹೋಗತಕ್ಕಂಥ ಹುಡುಗರು ಬೀದಿಯಲ್ಲಿ ಡ್ರಗ್ ಅಡಿಕ್ಟ್ ಆಗಿ ತಿರುಗಾಡುತ್ತಿದ್ದರೆ, ಅವರು ಡ್ರಗ್ ಅಡಿಕ್ಟ್ ಆಗಿದ್ದಾರೆ ಎಂದು ಗೊತ್ತಾದರೆ ತಕ್ಷಣ ಅವರನ್ನು ನಿರ್ದಾಕ್ಷಿಣ್ಯವಾಗಿ ಕರೆದುಕೊಂಡು ಬಂದು ಪೋಲೀಸ್ ಸ್ಟೇಷನ್‌ನಲ್ಲಿ ಇಡಿ. ಈ ಒಂದು ದುಶ್ಚಟದಿಂದ ಅವರನ್ನು ಬಿಡಿಸಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಇವತ್ತು ಆಪರೇಷನ್ ಮಾಡುವ ಮೊದಲನೇ ದಿವಸ ಡಾಕ್ಟರ್ ಕುಡಿಯಬಾರದು. ಕುಡಿದು ಬಿಟ್ಟು ಆಪರೇಷನ್ ಮಾಡಿ, ಎಲ್ಲೋ ಕತ್ತರಿಸುವುದಕ್ಕೆ ಹೋಗಿ ಎಲ್ಲೋ ಕತ್ತರಿಸಿ ಬಿಟ್ಟರೆ ಏನು ಮಾಡು ವುದು ? ಡಾಕ್ಟರುಗಳು ಕುಡಿಯದೇ ಇರುವಂತೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಏತಕ್ಕೆ ನಮ್ಮ ದೇಶದಲ್ಲಿ ಈ ರೀತಿ ಆಗುತ್ತಿದೆ ಎಂದರೆ, ಡಾಕ್ಟರುಗಳು ಕುಡಿದುಬಿಟ್ಟು ಹೋಗಿ ಆಪರೇಷನ್ ಮಾಡುತ್ತಿದ್ದಾರೆ, ಇದು ಆಗಬಾರದು. ಇದನ್ನು ಕೂಡಾ ಯಾವ ರೀತಿಯಾದರೂ ಕಡ್ಡಾಯವಾಗಿ ರಿಸ್ಟ್ರಿಕ್ಟ್ ಮಾಡಬೇಕು. ಪರಿಣಾಮಕಾರಿಯಾದ ರೀತಿಯಲ್ಲಿ ಆರೋಗ್ಯ ಇಲಾಖೆಯು ಸುಧಾರಣೆಯಾಗ ಬೇಕೆಂದರೆ ಇದರ ಬಗ್ಗೆ ಆರೋಗ್ಯ ಮಂತ್ರಿಗಳು ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕು. ನಮಗೆ ಆರೋಗ್ಯ ಬಹಳ ಮುಖ್ಯ. ನಮಗೆ ಎಕ್ಸೈಸ್‌ನಿಂದ ಹಣ ಬರಲಿ ಬಿಡಲಿ, ಅದರಿಂದ ನಮಗೆ ದುಃಖ ಇಲ್ಲ. ಆದರೆ ಆರೋಗ್ಯ ರಕ್ಷಣೆಗೆ ಸರಿಯಾದಂಥ ಒಂದು ವ್ಯವಸ್ಥೆ ಆಗಬೇಕು. ಆಸ್ಪತ್ರೆಗಳಲ್ಲಿ ಒಳ್ಳೆಯ ಡಾಕ್ಟರ್ಸ್ ಇರುವಂತೆ ನೋಡಿಕೊಳ್ಳಬೇಕು, ಹಳ್ಳಿಗಳಲ್ಲಿ ಡಾಕ್ಟರ್ಸ್ ಸಿಗಬೇಕು. ಒಳ್ಳೆಯ ಔಷಧಿ ಗಳನ್ನು ಸರಬರಾಜು ಮಾಡಬೇಕು. ಇವತ್ತಿನ ದಿವಸ ಯೋಗ್ಯವಾದಂಥ ಔಷಧಿಗಳು ಕಡಿಮೆಯಾಗು ತ್ತಿವೆ. ಜನಗಳು ಔಷಧಿ ಮಾತ್ರೆಗಳನ್ನು ತೆಗೆದುಕೊಳ್ಳಲು ಹೆದರುತ್ತಿದ್ದಾರೆ. ಒಂದು ಔಷಧಿ ತೆಗೆದು ಕೊಂಡರೆ ತಕ್ಷಣ ಇನ್ನೇನೋ ಆಗುತ್ತದೆ. ಒಂದು ಮಾತ್ರೆ ತೆಗೆದುಕೊಂಡರೆ ಇನ್ನೊಂದು ಏನೋ ಅಲರ್ಜಿ ಯಾಗುತ್ತದೆ. ಇದರ ಜೊತೆಗೆ ಈಗ ಬಂದಿರತಕ್ಕಂಥ 'ಏಡ್ಸ್' ಕಾಯಿಲೆಯ ಬಗ್ಗೆ ಈಗಲೇ ಎಚ್ಚರ ವಹಿಸಬೇಕು. ಇದು ಇವತ್ತು ನಮ್ಮ ಭಾರತ ದೇಶಕ್ಕೆ ಅಮೇರಿಕಾ ಮುಂತಾದ ಹೊರ ದೇಶಗಳಿಂದ ಬಂದಿರತಕ್ಕಂಥ ಕಾಯಿಲೆಯಾಗಿದೆ. ಇದು ನಮ್ಮ ದೇಶಕ್ಕೆ ಸಂಪೂರ್ಣವಾಗಿ ಬರುವ ಮೊದಲೇ ಇದನ್ನು ಸಂಪೂರ್ಣವಾಗಿ ಬಾರದ ರೀತಿಯಲ್ಲಿ ನೋಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಆರೋಗ್ಯ ಇಲಾಖೆಯವರು ಹೆಚ್ಚು ಕಾಳಜಿಯನ್ನು ತೆಗೆದುಕೊಂಡಿಲ್ಲ. ಪ್ರಿವೆನ್‌ಷನ್ ಈಸ್ ಬೆಟರ್ ದೆನ್ ಕ್ಯೂರ್ ಎಂದು ಹೇಳುವಂತೆ ಇದರ ಬಗ್ಗೆ ಎಚ್ಚರಿಕೆ ವಹಿಸಿದರೆ, ನಮ್ಮ ಜನಗಳ ಆರೋಗ್ಯ ಸುಧಾರಣೆಯಾಗುತ್ತದೆ. ಜನತೆಯ ಆರೋಗ್ಯವೇ ದೇಶದ ಆರೋಗ್ಯ ಎಂದು ಹೇಳುವಂತೆ, ಜನತೆಯ ಆರೋಗ್ಯ ಸುಧಾರಣೆಯಾದರೆ, ದೇಶದ ಆರೋಗ್ಯವೂ ಸುಧಾರಿಸುತ್ತದೆ, ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ, ಇಷ್ಟು ಹೊತ್ತಿನವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇನ್ನು ಹತ್ತೊಂಬತ್ತು ಜನ ಸದಸ್ಯರು ಮಾತನಾಡುವವರು ಇದ್ದಾರೆ. ೧೯ ಜನಕ್ಕೂ ಒಬ್ಬೊಬ್ಬರಿಗೆ ಹತ್ತು ಮಿನಿಟ್ ಎಂದರೆ ೧೯೦ ಮಿನಿಟ್ ಆಗುತ್ತದೆ. ಅಂದರೆ ಮೂರು ಘಂಟೆ ಹತ್ತು ಮಿನಿಟ್ ಆಗುತ್ತದೆ. ಈಗ ೨ ಘಂಟೆ ೧೫ ನಿಮಿಷ ಎಂದೂ ಹಿಡಿದರೂ, ಚರ್ಚೆ ಮುಗಿಯ ಬೇಕಾದರೆ ೫ ಘಂಟೆ ೨೫ ನಿಮಿಷ ಆಗುತ್ತದೆ. ಆದುದರಿಂದ ಒಬ್ಬೊಬ್ಬರು ಕರೆಕ್ಟ್ ಆಗಿ ಹತ್ತು ಮಿನಿಟ್ ಮಾತನಾಡಿದರೂ, ಮುಗಿಯಬೇಕಾದರೆ ೫ ಘಂಟೆ ೨೫ ಮಿನಿಟ್ ಆಗುತ್ತದೆ. ಐದು ಘಂಟೆಗೆ ಮಾನ್ಯ ಮಂತ್ರಿಯವರಿಗೆ ಉತ್ತರ ಕೊಡುವುದಕ್ಕೆ ಆಸ್ಪದ ಮಾಡಿಕೊಡಬೇಕು. ಕೊನೆ ಪಕ್ಷ ಅವರು ೫ ಘಂಟೆ ೧೦ ಮಿನಿಟಿಗಾದರೂ ಉತ್ತರ ಕೊಡಬೇಕು. ಆದುದರಿಂದ ಒಬ್ಬೊಬ್ಬರು ೧೦ ಮಿನಿಟ್‌ಗಿಂತ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಇಲ್ಲ. ಒಂಬತ್ತು ಮಿನಿಟ್ ಆದ ತಕ್ಷಣ ನಾನು ಬೆಲ್ ಬಾರಿಸುತ್ತೇನೆ, ಹತ್ತು ಮಿನಿಟ್‌ಗೆ ತಾವು ಮುಗಿಸಬೇಕು.

ಶ್ರೀ ಎನ್. ಎಂ. ಅಡ್ಯಂತಾಯ.— ನಾವೆಲ್ಲರೂ ಮಾತನಾಡುವುದಕ್ಕಿಂತ ತಾವು ಮಾತನಾಡುವುದೇ ಜಾಸ್ತಿ ಇದೆ, ತಾವೇ ಜಾಸ್ತಿ ಮಾತನಾಡುತ್ತೀರಿ.

ಅಧ್ಯಕ್ಷರು.— ಈ ರೀತಿ ಮಾತನಾಡುವುದು ಸರಿಯಲ್ಲ. ನೀವೇ ಜಾಸ್ತಿ ಮಾತನಾಡುತ್ತೀರಿ ಎಂದರೆ ಯದ್ವಾತದ್ವಾ ಮಾತನಾಡಿದ ಹಾಗೆ ಆಗುತ್ತದೆ. ನಾನು ಯಾವ ರೀತಿ ಸಭೆಯನ್ನು ಕಂಟ್ರೋಲ್ ಮಾಡಬೇಕು ? How should I guide the House. ಇನ್ನೂ ೧೯ ಜನ ಸ್ಪೀಕರ್ಸ್ ಇದ್ದಾರೆ, ನೀವೇ ೧೯ನೆಯವರು, ಆಮೇಲೆ ನಿಮಗೇ ಅವಕಾಶ ಸಿಗುವುದಿಲ್ಲ.

SRI K. H. PATIL.— I apologise for what has been said. They are after l juniors. We should not rub against the Speaker. Only he has requested. He is a new comer. We request you to excuse.

ಶ್ರೀ ಎನ್. ಎಂ. ಅಡ್ಯಂತಾಯ.— ಅಧ್ಯಕ್ಷರೇ, ಯದ್ವಾತದ್ವಾ ಮಾತನಾಡುವುದಲ್ಲ.

ಅಧ್ಯಕ್ಷರು.— ಮತ್ತೆ ನೀವೆ ಮಾತನಾಡುತ್ತೀರಿ ಎಂದರೆ ಏನು ಅರ್ಥ?

SRI H. K PATIL.— He is a new comer. We request you to excuse.

ಅಧ್ಯಕ್ಷರು — ನೀವೇ ೧೯ನೆಯವರು, ನಿಮಗೂ ಅವಕಾಶ ಕೊಡಬೇಕೆಂಬ ಕಳಕಳಿ ನನಗೆ ಇದೆ, ಎಲ್ಲರೂ ಹೆಚ್ಚು ಮಾತನಾಡಿ, ಕೊನೆಯಲ್ಲಿ ಇರುವ ಐದು ಮಂದಿಯನ್ನು ಬಿಟ್ಟರೆ ನಿಮಗೇ ಅವಕಾಶ ಹೋಗುತ್ತದೆ. ನಿಮಗೂ ಕೂಡಾ ಟೈಮ್ ಸಿಗಲಿ ಎಂದು ನಾನು ಹೇಳುತ್ತಿದ್ದೇನೆ. ನಾನು ಎಲ್ಲರಿಗೂ ಹೇಳುತ್ತಿದ್ದೇನೆ. ೯ ಮಿನಿಟ್ ಆದ ಕೂಡಲೇ ಗಂಟೆ ಹೊಡೆಯುತ್ತೇನೆ. ಹತ್ತು ಮಿನಿಟ್ ಆದ ಕೂಡಲೇ ಮುಗಿಸಬೇಕು.

SRI N. M, ADYANTHAYA,— As a token of protest ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು. — ಈ ರೀತಿ ನಾನು ಹೇಳಲಿಲ್ಲ ಎಂದು ಇಟ್ಟುಕೊಳ್ಳಿ, ಅವರು ಹತ್ತು ನಿಮಿಷ, ಇನ್ನೊಬ್ಬರು ೧೫ ನಿಮಿಷ ಈ ರೀತಿ ಹೆಚ್ಚು ಸಮಯ ಮಾತನಾಡುತ್ತಾ ಹೋದರೆ, ಕಡೆಯಲ್ಲಿ ಇರುವವರನ್ನು ಬಿಡಲೇಬೇಕಾಗುತ್ತದೆ ಆದುದರಿಂದ ದಯವಿಟ್ಟು ೧೦ ಮಿನಿಟ್‌ಗಿಂತ ಹೆಚ್ಚು ಮಾತನಾಡುವ ಹಾಗೆ ಇಲ್ಲ.

ಶ್ರೀ ಯು. ಭೂಪತಿ. (ಸಂಡೂರು) — ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂಥ ಅಬ್ಕಾರಿ ಮತ್ತು ಆರೋಗ್ಯ ಇಲಾಖಾ ಬೇಡಿಕೆಗಳ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎರಡು ಇಲಾಖೆಗಳು ಜನತೆಗೆ ಅತಿ ಮುಖ್ಯವಾದಂಥ ಇಲಾಖೆಗಳು. ಇದರಲ್ಲಿ ಜನತೆಗೆ ಬೇಕಾಗಿರುವುದು ಆರೋಗ್ಯ ಇಲಾಖೆ. ಇನ್ನೊಂದು ಇಲಾಖೆ ಸರ್ಕಾರಕ್ಕೆ ಅತಿ ಮುಖ್ಯವಾಗಿರತಕ್ಕಂಥ ಇಲಾಖೆ. ವೈದ್ಯಕೀಯ ಇಲಾಖೆ ಜನರಿಗೆ ಅನುಕೂಲವಾಗತಕ್ಕಂಥ ಇಲಾಖೆ ಅಬ್ಕಾರಿ ಇಲಾಖೆ ಸರ್ಕಾರಕ್ಕೆ ಸಾಕಷ್ಟು ಆದಾಯವನ್ನು ತರತಕ್ಕಂಥ ಇಲಾಖೆ. ಈ ಒಂದು ಅರ್ಥದಲ್ಲಿ ನಾನು ಈ ಮಾತನ್ನು ಹೇಳಿದೆ. ಈ ವೈದ್ಯಕೀಯ ಇಲಾಖೆಯ ಬಗ್ಗೆ ನಾವು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಅನೇಕ ವಿಚಾರಗಳು ನೆನಪು ಬರುತ್ತವೆ. ಅದರಲ್ಲಿ ಬಹಳ ಮುಖ್ಯವಾಗಿರತಕ್ಕ ವಿಚಾರಗಳೇದರೆ ಈ ಮೆಡಿಕಲ್ ಕಾಲೇಜುಗಳನ್ನು ಖಾಸಗಿಯವರಿಗೆ ಕೊಟ್ಟಿರುವುದು ಈ ಸರ್ಕಾರ ಅಧಿಕಾರಕ್ಕೆ ಬರುವಾಗ ಯಾವ ಒಂದು ವಚನವನ್ನು ಜನತೆಗೆ ಕೊಟ್ಟಿದ್ದರೋ ಆ ವಚನಕ್ಕೆ ವಿರುದ್ಧವಾಗಿ ಇವತ್ತು ನಡೆದುಕೊಳ್ಳುತ್ತಿದ್ದಾರೆ. ಈ ಆರೋಪವನ್ನು ನಾನು ಅನಿವಾರ್ಯವಾಗಿ ಮಾಡಬೇಕಾಗಿದೆ. ಚುನಾವಣಾ ಸಂದರ್ಭದಲ್ಲಿ ತಮ್ಮ ಪಕ್ಷದ ಹೇಳಿಕೆಗಳನ್ನು ನಾವು ನೋಡಿದಾಗ ಖಾಸಗಿಯವರಿಗೆ ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡುವುದಿಲ್ಲವೆಂದು ಹೇಳಿ ಇವತ್ತು ತಾವು ಖಾಸಗಿಯವರಿಗೇ ಹೆಚ್ಚು ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ಕೊಟ್ಟು ಅದನ್ನು ಡಿಪೆಂಡ್ ಮಾಡಿಕೊಳ್ಳುತ್ತಿರುವುದನ್ನು ನಾವು ಪ್ರತಿ ದಿವಸ ಈ ಸದನದಲ್ಲಿ ನೋಡಿದ್ದೇವೆ. ಇದಕ್ಕೆ ತಾವು ಕೊಡುವ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳನ್ನು ತಯಾರು ಮಾಡಿ ಪರ ರಾಷ್ಟ್ರಗಳಿಗೆ ರಫ್ತು ಮಾಡುವ ದಿಸೆಯಲ್ಲಿ ನಾವು

ಕೆಲಸ ಮಾಡುತ್ತಿದ್ದೇವೆಂದೂ ಸಹ ತಾವು ಹೇಳಿಕೆಗಳನ್ನು ಕೊಟ್ಟಿದ್ದೀರಿ. ಆದರೆ ಇವತ್ತು ಪರ ರಾಷ್ಟ್ರಗಳಲ್ಲಿ ನಮ್ಮ ರಾಜ್ಯದಿಂದ ಹೋದ ವೈದ್ಯಕೀಯ ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳುವಂತಹ ಅವಶ್ಯಕತೆ ಇಲ್ಲ. ಅವರು ಈಗಾಗಲೇ ತಮ್ಮ ಬಾಗಿಲುಗಳನ್ನು ಬಂದು ಮಾಡಿಕೊಂಡಿದ್ದಾರೆ. ಅದು ಒಂದು ಕಡೆ ಇದ್ದರೂ ಸಹ ತಾವು ಚುನಾವಣೆ ಸಂದರ್ಭದಲ್ಲಿ ಈ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆಂದು ಹೇಳಿದರೂ ಕೂಡ ಇವತ್ತು ಕ್ಯಾಪಿಟೇಷನ್ ಶುಲ್ಕ ಕೊಟ್ಟು ಬಹಳಷ್ಟು ಜನ ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜುಗಳಿಗೆ ಬರುತ್ತಿದ್ದಾರೆ. ಆ ವಿದ್ಯಾರ್ಥಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಉದ್ಯೋಗವಿಲ್ಲದೆ ಅಲೆಯಬೇಕಾದಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ತಾವು ಚುನಾವಣೆ ಸಂದರ್ಭದಲ್ಲಿ ಏನೊಂದು ವಚನವನ್ನು ಜನತೆಗೆ ಕೊಟ್ಟಿದ್ದೀರೋ ಆ ವಚನಕ್ಕೆ ವಿರುದ್ಧವಾಗಿ ಇವತ್ತು ನಡೆದುಕೊಳ್ಳುತ್ತಿದ್ದೀರಿ. ಇದರ ಜೊತೆಗೆ ಸರ್ಕಾರ ಇವತ್ತು ಕೆಲವು ಪ್ರಭಾವಿ ವ್ಯಕ್ತಿಗಳಿಗೆ ಮಣಿಯುತ್ತಿದೆ. ಪ್ರಭಾವೀ ವ್ಯಕ್ತಿಗಳಿಗೆ ಮಣಿದು ಮೆಡಿಕಲ್ ಕಾಲೇಜುಗಳನ್ನು ಕೊಡುತ್ತಿದ್ದೀರಿ. ಈ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ ಕಸ್ತೂರಬಾ ಮೆಡಿಕಲ್ ಕಾಲೇಜ್ ಮಣಿಪಾಲ್ ಇವರು ಒಂದು ಮೆಡಿಕಲ್ ಕಾಲೇಜು ನಡೆಸುತ್ತಿದ್ದರು. ಆದರೆ ಇವರು ಮೆಡಿಕಲ್ ಕಾಲೇಜನ್ನು ನಡೆಸುವುದಕ್ಕೆ ಸರ್ಕಾರದಿಂದಲೂ ಅನುಮತಿಯನ್ನು ತೆಗೆದುಕೊಂಡಿರಲಿಲ್ಲ. ಯೂನಿವರ್ಸಿಟಿಯಿಂದಲೂ ಸಹ ಅನುಮತಿಯನ್ನು ತೆಗೆದುಕೊಂಡಿರಲಿಲ್ಲ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರಿಂದಲೂ ಸಹ ಅನುಮತಿಯನ್ನು ತೆಗೆದುಕೊಂಡಿರಲಿಲ್ಲ. ಹಾಗೆಯೇ ನಡೆಸುತ್ತಿದ್ದರು. ಈ ಹಿಂದೆ ಇವರು ತಮ್ಮ ಪ್ರಭಾವವನ್ನು ಉಪಯೋಗಿಸಿ ಆ ಮೆಡಿಕಲ್ ಕಾಲೇಜನ್ನು ರೆಗ್ಯುಲರೈಜ್ ಮಾಡಿಸಿಕೊಂಡಿದ್ದಾರೆ. ಇವರೇ ಈಗ ಮಂಗಳೂರಿನಲ್ಲಿ ಒಂದು ಡೆಂಟಲ್ ಶಾಖೆಯನ್ನು ತೆರೆದಿದ್ದಾರೆ. ಇವರ ಮೆಡಿಕಲ್ ಕಾಲೇಜು ಇರುವುದು ಮಣಿಪಾಲ್‌ನಲ್ಲಿ. ಮಣಿಪಾಲ್‌ದಂತ ಕಾಲೇಜು ಹೆಸರಿನಲ್ಲಿ ಮಂಗಳೂರಿನಲ್ಲಿ ಇದರ ಶಾಖೆಯನ್ನು ತೆರೆದಿದ್ದಾರೆ. ಇದಕ್ಕೆ ಸರ್ಕಾರದವರು ಅನುಮತಿ ಕೊಟ್ಟಿಲ್ಲ. ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದವರು ಸಹ ಅನುಮತಿಯನ್ನು ಕೊಟ್ಟಿಲ್ಲ. ಮಂಗಳೂರು ವಿಶ್ವವಿದ್ಯಾನಿಲಯದವರು ಸಹ ಅನುಮತಿ ಕೊಟ್ಟಿಲ್ಲ. ಅವರು ಕೊಟ್ಟ ಅಪ್ಲಿಕೇಶನ್ ಕಾಪಿ ನನ್ನ ಬಳಿ ಇದೆ. ಆದನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಟೈಮ್ ಆಗುತ್ತದೆ. ಈ ಕಾಪಿಯಲ್ಲಿ ಡೈರೆಕ್ಟರ್‌ರವರ ಸಹಿ ಕೆಳಗಡೆ ಇದೆ. ಅದರಲ್ಲಿ ಒಂದು ನೋಟ್ ಇದೆ ಅದು ಈ ರೀತಿ ಇದೆ.

"Please note that your admission is for the Mangalore Section of the College."

ಇದರಿಗೆ ಮಂಗಳೂರಲ್ಲಿ ಡೆಂಟಲ್ ಕಾಲೇಜು ಸೆಕ್ಷನ್ ತೆರೆಯಲು ಯಾರು ಅನುಮತಿ ಕೊಟ್ಟರು? ಅಲ್ಲಿ ಅಡ್ಮೀಷನ್ ಮಾಡಿಕೊಳ್ಳಲು ಫಾರಮ್ ಸಹ ಇದೆ. ೧೯೮೬–೮೭ನೇ ಸಾಲಿನ ಕೋರ್ಸನ್ನು ದಿನಾಂಕ ೧೯–೧-೮೭ರಿಂದ ಪ್ರಾರಂಭ ಮಾಡಿದ್ದಾರೆ. ಈ ಬಗ್ಗೆ ನಾನು ಎರಡು ಮೂರು ಪ್ರಶ್ನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಕಳುಹಿಸಿದ್ದೇನೆ. ಇದುವರೆವಿಗೂ ನನಗೆ ಉತ್ತರ ಬರಲಿಲ್ಲ. ಈ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದನ್ನು ತಾವು ತನಿಖೆ ಮಾಡಿಸಿ ಸರಿಯಾಗಿಲ್ಲವೆಂದರೆ ಆಗ ನಾನು ಒಪ್ಪಿಕೊಳ್ಳುತ್ತೇನೆ. ಸರಿಯಾಗಿದ್ದರೆ ತಾವು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಿ. ಇನ್ನು ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆಸ್ಪತ್ರೆಗಳ ಬಗ್ಗೆ ನಾನು ಹೇಳುವುದಾದರೆ ಅದು ಒಂದು ದೊಡ್ಡ ಕತೆ. ಅದರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ, ನಮ್ಮ ಬಳ್ಳಾರಿಯಲ್ಲಿ ಒಂದು ಟಿ. ಬಿ. ಸೆಂಟರ್ ಇದೆ. ಅದು ಬ್ರಿಟಿಷರ ಕಾಲದಲ್ಲಿ ಕಟ್ಟಿದಂತಹ ಒಂದು ದೊಡ್ಡ ಕಟ್ಟಡ. ಅದು ಕಟ್ಟಡವಲ್ಲ. ಜೈಲು ಎಂದು ಹೇಳಬಹುದು. ಆ ಟಿ.ಬಿ. ಸೆಂಟರ್ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದರೆ ರೋಗವಿಲ್ಲದೆ ಇರುವವರು ಯಾರಾದರೂ ಅಲ್ಲಿಗೆ ಹೋಗಿ ಒಂದೆರಡು ವಾರಗಳ ಕಾಲ ರೋಗ ಬಂದಿರುವವರ ಜೊತೆಯಲ್ಲಿ ಇದ್ದರೆ, ಅವರಿಗೂ ಸಹ ಏನೇನು ರೋಗಗಳು ಬೇಕೋ ಆ ರೋಗಗಳೆಲ್ಲಾ ಬರುತ್ತವೆ. ಆ ರೀತಿಯ ಒಂದು ಪರಿಸರ ಆ ಆಸ್ಪತ್ರೆಯ ಸುತ್ತಮುತ್ತಲೂ ಇದೆ. ಆ ಆಸ್ಪತ್ರೆಯಲ್ಲಿ ಸರಿಯಾದ ಡ್ರೈನೇಜ್ ಇಲ್ಲ. ಹಂದಿಗಳೆಲ್ಲಾ ಅಲ್ಲಿ ಮಲಗಿಕೊಳ್ಳುತ್ತವೆ. ಸರಿಯಾದ ಕಾಂಪೌಂಡ್ ಇಲ್ಲ. ಆರೋಗ್ಯ ಇಲಾಖೆಯವರು ಎಷ್ಟು ಹಣವನ್ನು ಖರ್ಚು ಮಾಡಿದರೂ ಈ ಇಲಾಖೆಯಲ್ಲಿ ಸುಧಾರಣೆ ಎನ್ನುವುದು ಇಲ್ಲವೇ ಇಲ್ಲ.

ಅದೇ ರೀತಿಯಾಗಿ ಅಲ್ಲಿ ಕುಡಿಯುವುದಕ್ಕೆ ನೀರು ಸಹ ಇಲ್ಲ. ಕೆಲವು ದಿನಗಳಿಂದ ರೋಗಿಗಳಿಗೆ ಊಟವನ್ನು ಕೊಡುವುದಕ್ಕೆ ಅಕ್ಕಿಯೂ ಸಹ ಇಲ್ಲವಾಗಿದೆಂದು ಹೇಳುತ್ತಾರೆ. ಊಟ ಕೊಡುವುದಕ್ಕೆ ಅಕ್ಕಿ ಇಲ್ಲ ಎಂದರೆ ಹೇಗೆ ? ಔಷಧಿಗಳಿಗೆಂದು ಇಟ್ಟ ಹಣವನ್ನು ಆಹಾರಕ್ಕೆ, ಆಹಾರಕ್ಕೆ ಇಟ್ಟ ಹಣವನ್ನು ಔಷಧಕ್ಕೆ ಉಪಯೋಗಿಸತಕ್ಕ ರೀ-ಪ್ರೊಪ್ರೋರ್ಷನ್ ಮಾಡತಕ್ಕ ಪದ್ಧತಿ ಹಿಂದೆ ಇತ್ತು. ಆ ಪದ್ಧತಿಯನ್ನು ತೆಗೆದುಹಾಕುವುದಕ್ಕಾಗಿ ಈಗ ಈ ಅಧಿಕಾರವನ್ನು ಅಲ್ಲಿನ ಡೈರೆಕ್ಟರ್‌ರವರಿಂದ ತೆಗೆದುಕೊಂಡಿದ್ದೀವೆಂದು ನಾನು ಕೇಳಿದ್ದೇನೆ. ಈಗ ಆ ಅಧಿಕಾರ ಇಲ್ಲ. ಔಷಧಿಗಳಿಗೆಂದು ಮೀಸಲಾಗಿಟ್ಟಿದ್ದ ಹಣದಲ್ಲಿ ಆಹಾರ ಕಡಿಮೆಯಾದಾಗ ತರಿಸಿಕೊಳ್ಳುವುದಕ್ಕೆ ಅವಕಾಶ ಇರಬೇಕು. ಅದೇ ರೀತಿ ಆಹಾರಕ್ಕೆಂದು ಮೀಸಲಾಗಿಟ್ಟಿರುವ ಹಣದಲ್ಲಿ ಔಷಧಿಗಳು ಕಡಿಮೆ ಬಿದ್ದಾಗ ಔಷಧಿಗಳನ್ನು ತರಿಸಿಕೊಳ್ಳುವ ಅಧಿಕಾರ ಇರಬೇಕು. ಆದರೆ, ಹಣವನ್ನು ಆ ರೀತಿ ವರ್ಗಾವಣೆ ಮಾಡಿ ಖರ್ಚು ಮಾಡತಕ್ಕ ವ್ಯವಸ್ಥೆಯನ್ನು ತೆಗೆದುಹಾಕುವುದಕ್ಕೆ ತಾವು ಆದೇಶವನ್ನು ಕಳುಹಿಸಿದ್ದೀರಿ. ಒಂದು ವೇಳೆ ಆ ರೀತಿಯ ಆದೇಶವನ್ನು ಕೊಟ್ಟಿದಿದ್ದೇ ಆದರೆ, ದಯಮಾಡಿ ಆ ಆದೇಶವನ್ನು ವಾಪಸ್ ತೆಗೆದುಕೊಳ್ಳಿ. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಊಟ ಕೊಡುವುದಕ್ಕೆ ಹಣ ಇಲ್ಲವೆಂದರೆ ರೋಗಿಗಳ ಪಾಡು ಏನಾಗಬೇಕು ? ಯಾವ ವಸ್ತುಗಳು ಆಸ್ಪತ್ರೆಯಲ್ಲಿ ಕೊರತೆ ಬರುತ್ತದೋ ಅದನ್ನು ಕೊಂಡುಕೊಳ್ಳಲು ಅಲ್ಲಿನ ಡೈರೆಕ್ಟರ್‌ಗಳಿಗೆ ಅಧಿಕಾರವನ್ನು ಕೊಡಬೇಕು. ಇನ್ನು ಮಾನ್ಯ ಅಧ್ಯಕ್ಷರೇ, ಸರ್ಕಾರಿ ವೈದ್ಯಕೀಯ ಕಾಲೇಜುಗಳ ಶಿಕ್ಷಕರ ಸಿಬ್ಬಂದಿ ಬಗ್ಗೆ ಮಾತನಾಡುವುದಾದರೆ, ಬಳ್ಳಾರಿಯಲ್ಲಿ ಒಂದು ದೊಡ್ಡ ಮೆಡಿಕಲ್ ಕಾಲೇಜ್ ಇದೆ. ಈ ಕಾಲೇಜಿಗೆ ಹೊಸ ಕಟ್ಟಡವೂ ಇಲ್ಲ ಮೆಡಿಕಲ್ ಕಾಲೇಜಿನಲ್ಲಿ ಒಂದೊಂದು ಡಿಪಾರ್ಟ್‌ಮೆಂಟಿನಲ್ಲೂ ಡಿಪಾರ್ಟ್‌ಮೆಂಟಲ್ ಹೆಡ್ ಇಲ್ಲ. ಲೆಕ್ಚರರ್‌ಗಳು ಇಲ್ಲ. ರೀಡರ್‌ಗಳು ಇಲ್ಲ. ಇದರ ಬಗ್ಗೆ ನಾನು ಈಗಾಗಲೇ ಒಂದು ಪ್ರಶ್ನೆಯನ್ನು ಕೇಳಿದ್ದೆ. ಇನ್ನು ೬ ತಿಂಗಳಿನಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ೬ ತಿಂಗಳು ಆಗಿ ಹೋಯಿತು. ಡಿಪಾರ್ಟ್‌ಮೆಂಟ್‌ಗಳ ಹೆಡ್ಡು ಇಲ್ಲ, ಲೆಕ್ಚರರ್‌ಗಳೂ ಇಲ್ಲ. ಪ್ರೊಫೆಸರ್‌ಗಳೂ ಇಲ್ಲ. ರೀಡರ್‌ಗಳೂ ಇಲ್ಲ. ಇವರು ಯಾವ ರೀತಿ ಪೋಸ್ಟಿಂಗ್ಸ್ ಮಾಡುತ್ತಾರೆಂದು ಒಂದು ಉದಾಹರಣೆಯನ್ನು ಕೊಡುತ್ತೇನೆ. ಡೆಂಟಲ್ ಡಿಪಾರ್ಟ್‌ಮೆಂಟಿಗೆ ಎಂ. ಎಸ್ ಮಾಡಿರುವ ಸರ್ಜರಿ ವೈದ್ಯರನ್ನು ಹಾಕಿದ್ದಾರೆ. ಅಲ್ಲಿ ಅವರು ಕತ್ತರಿ ತೆಗೆದುಕೊಂಡು ಏನು ಮಾಡಬೇಕು ? ಅವರು ಹಲ್ಲನ್ನು ಹ್ಯಾಗೆ ಕೀಳಬೇಕು ? ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಯಾವ ಯಾವ ಕ್ವಾಲಿಫಿಕೇಶನ್‌ಗೆ ಯಾವ ಯಾವ ಪೋಸ್ಟಿಂಗ್ ಮಾಡಬೇಕೋ ಅದನ್ನು ಮಾತ್ರ ಕೊಡಬೇಕು. ಬೇರೆ ಬೇರೆ ಕೆಲಸಗಳನ್ನು ಕೊಟ್ಟರೆ ಅವರು ಹೇಗೆ ಮಾಡಬೇಕು. ಈ ಆಸ್ಪತ್ರೆಯ ದುಸ್ಥಿತಿಯನ್ನು ನೋಡಿದರೆ ಮಾತ್ರ ಗೊತ್ತಾಗುತ್ತದೆ, ಈ ಆಸ್ಪತ್ರೆಯ ಹತ್ತಿರ ಪರಿಸರ ಯಾವ ರೀತಿಯಲ್ಲೂ ಸರಿಯಾಗಿ ಇಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಂತ್ರಿಗಳಾಗಿದ್ದಾಗ ಈ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಅದರ ಫೋಟೋ ಕೂಡ ಎಲ್ಲಾ ಪತ್ರಿಕೆಗಳಲ್ಲೂ ಬಂದಿತ್ತು. ದೊಡ್ಡ ಸರ್ಕಾರಿ ಆಸ್ಪತ್ರೆಯ ಒಳಗೆ ಹಾಸಿಗೆ ಮೇಲೆ ನಾಯಿ ಮಲಗಿತ್ತು. ನಾಯಿ ಫೋಟೋವನ್ನು ಪ್ರಜಾವಾಣಿ ಪೇಪರ್‌ನವರೂ ಹಾಕಿದ್ದರು ಹಾಗೂ ಬೇರೆ ಪತ್ರಿಕೆಗಳವರೂ ಹಾಕಿದ್ದರು. ತಾವು ಇನ್ನೂ ಆರೋಗ್ಯ ಮಂತ್ರಿಗಳಾಗಿರಲಿಲ್ಲ ಅದು ವೆಟರ್‌ನರಿ ಆಸ್ಪತ್ರೆ ಏನಾಗಿರಲಿಲ್ಲ. ಮನುಷ್ಯರ ಆಸ್ಪತ್ರೆಯೇ ಆಗಿತ್ತು. ಆಮೇಲೆ ಮೆದುಳು ಜ್ವರದ ಬಗ್ಗೆ ಹೇಳಬೇಕಾದರೆ, ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿ ಈ ಮೆದುಳು ಜ್ವರವು ಸಾಕಷ್ಟು ಬಂದು ಬಹಳ ಜನರು ಸತ್ತರು. ಈ ಕಾಯಿಲೆಗೆ ಔಷಧಿಯೇ ಇಲ್ಲವೆಂದು ಹೇಳಿದರು. ಬೇರೆ ಔಷಧಿಗಳನ್ನು ಕೊಟ್ಟು ಜನರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದರು. ಆದರೂ ಬಹಳ ಜನ ಸತ್ತು ಹೋದರು. ಹಿಂದೆ ಕ್ಷಯ, ಕಾಲರ ಮುಂತಾದ ರೋಗಗಳು ಬಂದು ಬಹಳ ಜನ ತೀರಿಕೊಂಡು ಹೋಗುತ್ತಿದ್ದರು. ಉದಾಹರಣೆಗೆ. ನನ್ನ ತಾಯಿಯವರ ತಾಯಿ ತಂದೆ ಮತ್ತು ಅಜ್ಜಿಯವರು ಕಾಲರದಿಂದ ಒಂದೇ ದಿನ ಸತ್ತುಹೋಗಿಬಿಟ್ಟರು. ಆಗ ಔಷಧಿಗಳು ಪರಿಣಾಮಕಾರಿಯಾಗಿ ಇರಲಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈ ಮೆದುಳು ಜ್ವರವನ್ನು ತಡೆಗಟ್ಟಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಕ್ರಮಗಳನ್ನು ನೀವು ಸೂಕ್ತವಾಗಿ ತೆಗೆದುಕೊಳ್ಳಲಿಲ್ಲ. ಹಂದಿಗಳನ್ನು ದೂರ ಪ್ರದೇಶಗಳಿಗೆ ಸಾಗಿಸುವ ಕೆಲಸ ಸರಿಯಾಗಿ ನಡೆಯಲಿಲ್ಲ. ಹಂದಿಗಳನ್ನು ಕೊಲ್ಲಿ ಎಂದು ಪೋಲೀಸರಿಗೆ ಹೇಳಿದರೆ, ನೀವು ಪರ್‌ಮಿಷನ್ ತೆಗೆದುಕೊಂಡು ಬನ್ನಿ. ಒಂದು ಬುಲೆಟ್ಟಿಗೆ ೫೦ ಪೈಸೆ ೬೦ ಪೈಸೆ ಆಗುತ್ತದೆ ನಾವು ಪರ್ಮಿಷನ್ ಇಲ್ಲದೆ ಕೊಲ್ಲುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಬಳ್ಳಾರಿ ಮುನಿಸಿಪಾಲಿಟಿಯವರು ಹಂದಿ

ಗಳನ್ನು ಕೊಲ್ಲದೆ ಅವುಗಳನ್ನು ಹತ್ತಿರದ ಹಳ್ಳಿಗಳ ಕಡೆ ತೆಗೆದುಕೊಂಡು ಹೋಗಿಬಿಟ್ಟರು. ಆರೋಗ್ಯದ ದೃಷ್ಟಿಯಿಂದ ಪರಿಸರವನ್ನು ಸರಿಯಾಗಿ ಮೈನ್‌ಟೈನ್ ಮಾಡಲಿಲ್ಲ. ಇನ್ನು ಮುಂದಾದರೂ ಸೂಕ್ತ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಮೆಡಿಕಲ್ ಎಜುಕೇಷನ್ ಎಲ್ಲಿಯವರಿಗೆ ಬಂದಿದೆ ಎಂದರೆ ಇತ್ತೀಚೆಗೆ ನಡೆದ ವಿಷಯ ತಮಗೂ ಗೊತ್ತಿದೆ. ಧಾರವಾಡ ಜಿಲ್ಲೆಯಲ್ಲಿ ನರ್ಸಿಂಗ್ ಕಾಲೇಜಿನ ಪ್ರಕರಣ ಏನಾಯಿತು ? ರಮಾಭಂಡಾರಿ ಅವರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲೂ ದೊಡ್ಡ ದೊಡ್ಡ ಆರ್ಟಿಕಲ್ಲೇ ಬಂತು. ಅದರ ವಿಷಯ ದೊಡ್ಡ ಇಷ್ಯೂನೇ ಆಯಿತು. ಮಹಿಳೆಯರನ್ನು ನರ್ಸಿಂಗ್ ಕಾಲೇಜಿನಲ್ಲಿ ಯಾವ ರೀತಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನತಕ್ಕ ವಿಷಯ ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿತ್ತು.

ಈ ರೀತಿಯಾದಂತಹ ಒಂದು ಪ್ರಸಂಗದಲ್ಲಿ, ಅಲ್ಲಿಯೂ ಕೂಡ ತತ್‌ಕ್ಷಣ ಕ್ರಮವನ್ನು ತೆಗೆದುಕೊಂಡಿಲ್ಲ. ಸಂಬಂಧಪಟ್ಟವರು ಸ್ಟ್ರೈಕ್ ಮಾಡಿ, ಧರಣಿಕುಳಿತು, ಸಾಕಷ್ಟು ಗಮನ ಸೆಳೆದ ಮೇಲೆ ಮಾತ್ರ ಬಹಳಷ್ಟು ಒತ್ತಾಯ ಮಾಡಿದ ಮೇಲೆ, ಕೇಳಿಕೊಂಡ ಮೇಲೆ, ಕ್ರಮವನ್ನು ತೆಗೆದುಕೊಂಡಿದ್ದಾರೆ. ಇಂತಹ ಒಂದು ಜರೂರು ವಿಚಾರದಲ್ಲಿ ಕೂಡ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ! ರಾಜ್ಯದಲ್ಲಿ ಇಂತಹ ಒಂದು ಕೃತ್ಯಗಳು ನಡೆಯದ ರೀತಿಯಲ್ಲಿ ತಡೆಹಾಕಬೇಕು.

ಅಧ್ಯಕ್ಷರು.—ಮಾನ್ಯ ಭೂಪತಿಯವರು, ಮುಕ್ತಾಯ ಮಾಡಿ.......

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ನಾನು ಪ್ರಾರಂಭವನ್ನಷ್ಟೇ ಮಾಡಿದ್ದೇನೆ. ತಾವುಗಳು ಮುಕ್ತಾಯ ಮಾಡಿ ಎಂದು ಹೇಳುತ್ತಿದ್ದೀರಿ. ಇನ್ನು ರಾಜ್ಯ ಸರಕಾರಕ್ಕೆ ಕುಟುಂಬ ಕಲ್ಯಾಣ ಯೋಜನೆಯ ವಿಚಾರದಲ್ಲಿ ಕೇಂದ್ರ ಸರಕಾರದಿಂದ ಪುರಸ್ಕಾರ ಬಂದಿದೆ. ಅದಕ್ಕೋಸ್ಕರ ರಾಜ್ಯವನ್ನು ಅಭಿನಂದಿಸಬೇಕಾಗುತ್ತದೆ. ಆದರೆ ಈ ಕುಟುಂಬ ಯೋಜನೆಯನ್ನು ಅನುಷ್ಠಾನಕ್ಕೆ ತರತಕ್ಕಂಥ ವಿಧಾನಗಳನ್ನು ನಾವು ವಿರೋಧಿಸಬೇಕಾಗುತ್ತದೆ. ಈಗ ಅನುಸರಿಸುತ್ತಿರುವ ವಿಧಾನಗಳಲ್ಲಿ, ಅದರಲ್ಲಿಯೂ ಸರಕಾರಿ ನೌಕರರಿಗೆ, ತೀರಾ ಕೆಳಮಟ್ಟದಲ್ಲಿ ಕೇಸ ಮಾಡತಕ್ಕಂಥವರಿಗೆ, ಇದೊಂದು ರೀತಿಯಲ್ಲಿ ಶಾಪವಾಗಿ ಪರಿಣಮಿಸಿದೆ ಎಂದು ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಕೆಲವು ಕಛೇರಿಗಳಲ್ಲಿನ ನೌಕರರಿಗೆ ಇಂತಿಷ್ಟೇ ಕೇಸ್‌ಗಳನ್ನು ಕೊಡದಿದ್ದರೆ, ಪ್ರಮೋಷನ್ ಕೊಡುವುದಿಲ್ಲ ಎಂದು ಇತ್ಯಾದಿಯಾಗಿ ಮೇಲಧಿಕಾರಿಗಳು ಒತ್ತಾಯವನ್ನು ಮಾಡುತ್ತಿದ್ದಾರೆ. ಈ ರೀತಿಯಾಗಿ ಸರಕಾರಿ ನೌಕರರನ್ನು ಹಿಂಸೆ ಮಾಡಬಾರದು. ಈ ಕಾರ್ಯಕ್ರಮವು ಒಂದು ಒಳ್ಳೆಯ ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಇದನ್ನು ಸೂಕ್ತ ರೀತಿಯಲ್ಲಿ ಯಶಸ್ವಿ ಆಗುವಂತೆ ಮಾಡಬೇಕಾಗುತ್ತದೆ. ಒತ್ತಾಯ ಮಾಡದೇ ಸೂಕ್ತ ರೀತಿಯಲ್ಲಿ ಮನವೊಲಿಸಿ, ಸರಕಾರಿ ನೌಕರರು ಈ ದಿಶೆಯಲ್ಲಿ ಭಾಗಿಗಳಾಗುವಂತೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ತಮಗೆ ಇನ್ನೂ ಸಮಯವನ್ನು ಕೊಡುವುದಕ್ಕಾಗುವುದಿಲ್ಲ. ತಮಗೆ ಮೊದಲೇ ಹೇಳಿದ್ದೇನೆ, ೧೦ ನಿಮಿಷಗಳು ಮಾತ್ರ ಎಂದು ಹೀಗೆ ಎಲ್ಲರಿಗೂ ಹೆಚ್ಚಿಗೆ ಸಮಯ ಕೊಡುವುದಕ್ಕಾಗುವುದಿಲ್ಲ. ೧೦ ನಿಮಿಷಗಳಂತೆ ಹೋದರೂ ಕೂಡ ಚರ್ಚೆ ಮುಗಿಯಲಿಕ್ಕೆ ೫–೬ ಗಂಟೆಯಾಗುತ್ತದೆ. ತಮಗೆ ಒಬ್ಬರಿಗೆ ಹೆಚ್ಚಿಗೆ ಸಮಯ ಕೊಡುವುದಕ್ಕಾಗುವುದಿಲ್ಲ. ಹಾಗೆ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಆರ್. ವೆಂಕಟರಾಮಯ್ಯನವರೇ, ನೀವು ಈಗ ಮಾತನಾಡಿ ಹೀಗೆ ಮಾಡುತ್ತಾ ಹೋದರೆ ಸಭೆ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಈ ರೀತಿಯಾಗಿ ಮಾತನಾಡುವಾಗ ಅವಸರ ಮಾಡಿದರೆ ನಾವು ವಿಷಯಗಳ ಮೇಲೆ ಚರ್ಚೆಯಾದರೂ ಏತಕ್ಕೆ ಮಾಡಬೇಕು ? ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡದೇ ಉತ್ತರವನ್ನು ಕೊಟ್ಟು ಮುಗಿಸುತ್ತೀರಾ ?

ಅಧ್ಯಕ್ಷರು.—ಎಲ್ಲರೂ ಹೀಗೆ ಹೇಳುತ್ತಾರೆ. ಹೀಗೆ ಅವಕಾಶ ಕೇಳಿ ಮಾತನಾಡುವುದರಲ್ಲಿ ಈಗಾಗಲೇ ಎರಡು ನಿಮಿಷ ಮುಗಿಯಿತು. ನಿಯಮದಂತೆ

Every group in the House cannot insist on being given an opportunity to take part in every debate. "

ಎಲ್ಲ ಪಕ್ಷದವರಿಗೂ ಎಲ್ಲಾ ಬೇಡಿಕೆಗಳ ಮೇಲಿನ ಚರ್ಚೆಗಳಲ್ಲಿಯೂ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ತಾವುಗಳು ದಯಮಾಡಿ ಕುಳಿತುಕೊಳ್ಳಬೇಕು. ಇಲ್ಲದಿದ್ದರೆ, ಕಲಾಪಗಳನ್ನು ನಡೆಸುವುದು ಕಷ್ಟವಾಗುತ್ತದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾಡಿದ ನಿರ್ಧಾರದಂತೆ ಆವೊತ್ತಿನ ದಿವಸದ ಬೇಡಿಕೆಯ ಮೇಲಿನ ಚರ್ಚೆಯನ್ನು ಆವೊತ್ತಿನ ದಿವಸವೇ ಮುಗಿಸಬೇಕೆಂದು ನಿರ್ಧಾರ ಮಾಡಿದ್ದೇವೆ. ನಿರ್ಧಾರ ಮತ್ತು ನಿಯಮಗಳಂತೆ ನಡೆಯಬೇಕಾಗುತ್ತದೆ. ಸಮಯ ಮುಗಿದ ಕೂಡಲೇ, ನಾನು ಗಂಟೆ ಹೊಡೆದರೂ ತಮಗೆ ಕೇಳುವುದಿಲ್ಲ. ಈಗ ನಿಮಗೆ ೧೫ ನಿಮಿಷಗಳ ಸಮಯ ಕೊಟ್ಟರೆ ಇತರರಿಗೂ ಕೊಡಬೇಕಾಗುತ್ತದೆ. ಆದುದರಿಂದ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ. ಬಿ. ಶಾಣಪ್ಪ.—ಎರಡು ಬೇಡಿಕೆಗಳ ಮೇಲಿನ ಚರ್ಚೆ ನಡೆದಿದೆ. ತಾವುಗಳು ದಯಮಾಡಿ ಸ್ವಲ್ಪ ಅವಕಾಶವನ್ನು ಕೊಡಬೇಕು. ನಿಮ್ಮ ಅಧಿಕಾರವನ್ನು ನಾವು ಪ್ರಶ್ನಿಸುತ್ತಿಲ್ಲ.

ಶ್ರೀ ಯು. ಭೂಪತಿ.—ಮುಖ್ಯವಾದಂತಹ ಬೇಡಿಕೆಗಳ ಮೇಲೆ ಮಾತನಾಡುವಾಗ ೨೦ ನಿಮಿಷಗಳ ಅವಕಾಶವನ್ನು ಕೂಡ ಕೊಡುವುದಿಲ್ಲವೇ ?

ಅಧ್ಯಕ್ಷರು.—ನೀವು ಈ ರೀತಿ ಹೇಳುತ್ತಿದ್ದರೆ, ನಾನು ಬೇರೆ ರೂಲ್‌ಸ್ನು ಹೇಳಬೇಕಾಗುತ್ತದೆ. ತಾವು ಕುಳಿತುಕೊಳ್ಳಬೇಕು. ಸಮಯ ಕೊಡಲು ಸಾಧ್ಯವಿಲ್ಲ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ ....

ಅಧ್ಯಕ್ಷರು.—ನಾನು ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರು ಪ್ರಾರಂಭಿಸಬೇಕು. ೧೦ ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು.

ಶ್ರೀ ಯು. ಭೂಪತಿ.—ಎರಡು ಇಲಾಖೆಗಳ ಮೇಲಿನ ಚರ್ಚೆ ಆಗುವಾಗ ೧೦ ನಿಮಿಷಗಳಲ್ಲಿ ಮುಗಿಸಬೇಕೆಂದರೆ ಹೇಗೆ ?

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ನನಗೆ ಪಾರ್ಲಿಮೆಂಟ್ ರೂಲ್ಸ್, ಆಲ್ ಇಂಡಿಯಾ ಪ್ರೊಸೀಜರ್ಸ್ ಬಗ್ಗೆ, ವರ್ಲ್ಡ್ ಪ್ರೊಸೀಜರ್ಸ್ ಬಗ್ಗೆ ಎಲ್ಲಾ ಗೊತ್ತಿದೆ. ನಾನು ಆ ನಿಯಮಗಳನ್ನು ನೋಡಿದ್ದೇನೆ. ನಿಮಗೆ ಈಗ ಅವಕಾಶ ಕೊಡುವುದಿಲ್ಲ. ತಮ್ಮ ಅವಧಿ ೧೦ ನಿಮಿಷಗಳ ಕಾಲದ್ದು, ಅದು ಮುಗಿದಿದೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಲಿಸ್ಟ್‌ನಲ್ಲಿ ಇರುವವರು ಮುಗಿದ ಮೇಲೆ, ಮಾನ್ಯ ಸದಸ್ಯರಿಗೆ ಅವಕಾಶವನ್ನು ಕೊಡಿ.

ಅಧ್ಯಕ್ಷರು.—ಸಾಧ್ಯವಾಗುವುದಿಲ್ಲ. ಇನ್ನೂ ೨೦ ಜನ ಸದಸ್ಯರು ಮಾತನಾಡಲಿದ್ದಾರೆ. ಒಬ್ಬೊಬ್ಬರಿಗೆ ೧೦ ನಿಮಿಷಗಳಂತೆ ಕೊಟ್ಟರೂ ಕೂಡ ೫-೬ ಗಂಟೆ ಆಗುತ್ತದೆ. ಹೀಗಾದರೆ ನಾಲ್ಕೈದು ಜನ ಸದಸ್ಯರನ್ನು ಮಾತನಾಡುವ ಅವಕಾಶವಿಲ್ಲದೆ ಬಿಡಬೇಕಾಗುತ್ತದೆ.

೨-೩೦ ಪಿ.ಎಂ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಯಾರು ಇಲ್ಲಿ ಮಾತನಾಡುವುದಕ್ಕೂ ಆತಂಕ ಇಲ್ಲ. ಬೇಕಾದಷ್ಟು ಅವಕಾಶ ಕೊಡಲಾಗಿದೆ. ಇಲ್ಲಿ ಹಠ ಮಾಡಿದರೆ ಆಗುವುದಿಲ್ಲ. ಚರ್ಚೆ ಪ್ರತಿ ದಿವಸ ಆಗುತ್ತಿದೆ. ಎಷ್ಟು ನಿಮಿಷ ನೀಡಲಾಗಿರುತ್ತೋ ಅಷ್ಟರಲ್ಲಿ ಮುಗಿಸಬೇಕು. ಇಲ್ಲದಿದ್ದರೆ ಸಭೆ ನಡೆಸುವುದು ಹೇಗೆ ?

ಶ್ರೀ ಯು. ಭೂಪತಿ.—ಪ್ರಮುಖ್ಯವಾದದ್ದನ್ನು ಹೇಳುತ್ತಿದ್ದೇನೆ. ಅವಕಾಶ ಕೊಡಿ.

ಅಧ್ಯಕ್ಷರು.—ದಯವಿಟ್ಟು ಕೂರ್ರಿ ಹೇಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಎಕ್ಸೈಜ್ ಮೇಲೆ ಮಾತನಾಡಿದಾಗಲೆಲ್ಲಾ ಕೂಡ್ರಿ ಎನ್ನುತ್ತೀರಿ ನೀವು.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸ್ವಾಮಿ, ಹೆಲ್ತ್ ಮತ್ತು ಮೆಡಿಕಲ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿ ಸ್ವಲ್ಪ ಜಾಸ್ತಿ ಎಕ್ಸೈಜ್ ಬಗ್ಗೆ ಮಾತನಾಡುತ್ತೇನೆ. ಅದಕ್ಕಾಗಿ ಸ್ವಲ್ಪ ಸಮಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ದೊಡ್ಡ ದುರದೃಷ್ಟ ಎಂದರೆ ಫ್ಯೂರಿಯಸ್ ಡ್ರಗ್ಸ್‌ದು. ಅದೇನೋ ಡಬಲ್ ಸ್ಟ್ರೆಂಗ್ತ್ ಎಂದು ಯಾರೋ

ಮಾಡಿದ್ದಾರೆ. ಅದರಲ್ಲಿ ಸ್ಟ್ರೆಂಗ್ತ್ ಇರುವುದಿಲ್ಲ. ಅದರಲ್ಲಿ ಮಣ್ಣು ಸೇರಿಸಿರುತ್ತಾರಂತೆ. ಮಾನ್ಯ ಕೃಷ್ಣಪ್ಪನವರು ಇದನ್ನು ಸರಿಪಡಿಸಬೇಕು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಂತೂ ಆಸ್ಪತ್ರೆಗಳಿದ್ದರೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಆಸ್ಪತ್ರೆಗಳಿಲ್ಲ. ಅಲ್ಲಿಗೆ ನೀವು ಕಳುಹಿಸುವ ಡ್ರಗ್ಸ್ ಕೋಟಾ ಒಂದು ತಿಂಗಳಿಗೆ ಆಗುವುದಿಲ್ಲ. ಹಾಗೆ ಕೊಟ್ಟಿದ್ದನ್ನು ಅಲ್ಲಿರತಕ್ಕ ಮಹಾನುಭಾವರು ಮಾರಿಬಿಟ್ಟು ಸಪ್ಲೈ ಇಲ್ಲ ಎಂದು ಹೇಳಿ ದಿನವೂ ಬಡ ರೋಗಿಗಳಿಗೆ ಅಂಗಡಿಗಳಿಂದ ತೆಗೆದುಕೊಳ್ಳಬೇಕೆಂದು ಚೀಟಿ ಬರೆದುಕೊಡುತ್ತಾರೆ. ಆದ್ದರಿಂದ ರೂರಲ್ ಕಡೆಗೆ ಜಾಸ್ತಿ ಡ್ರಗ್ಸ್ ಕೊಡಿಸಿ. ಇನ್ನೊಂದು ದುರದೃಷ್ಟವೆಂದರೆ ಈ ಬೇಡ್‌ಪುಟ್ ಸಹಾಯಕರು ಎಂದು ತೆಗೆದುಕೊಂಡಿರುವವರಿಗೆ ತಿಂಗಳಿಗೆ ಬರೀ ೫೦ ರೂ ಕೊಡುತ್ತಿದ್ದೀರಿ ಇದು ಬಹಳ ಅನ್ಯಾಯ. ಇದನ್ನು ಜಾಸ್ತಿ ಮಾಡಿ ಇನ್ನೊಂದು ಎಂದರೆ ಮೆಡಿಕಲ್ ಕಾಲೇಜ್‌ಗಳು ಮಾಡಿಕೊಳ್ಳಿರುವುದೆಲ್ಲವನ್ನೂ ಲೆಕ್ಕಹಾಕಿದೆ. ಅವರು ೪೫ ಕೋಟಿ ಲೂಟಿ ಹೊಡೆದು ಎಕ್ಸೆಸ್ ಸೀಟ್‌ಗೆಂದು ೫ ಕೋಟಿ ರೂ. ಹೆಚ್ಚಾಗಿ ಮತ್ತೆ ಲೂಟಿ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ.

ಎಕ್ಸೈಜ್ ಬಗ್ಗೆ ಹೇಳುವುದಾದರೆ, ಮುಖ್ಯ ಮಂತ್ರಿಗಳು ಇರುವುದರಿಂದ ಒಂದು ವಿಷಯವನ್ನು ತಿಳಿಸುತ್ತೇನೆ ಈ ಡಿಪಾರ್ಟ್‌ಮೆಂಟ್ ಯಾವರೀತಿ ನಡೆಯುತ್ತಿದೆ ಎಂದರೆ ಪೇಜ್ ೧೨ರಲ್ಲಿ ಆದಾಯ ೮೩-೮೪ರಲ್ಲಿ ೬೩ ಕೋಟಿ, ೮೪-೮೫ರಲ್ಲಿ ೧೯೦ ಕೋಟಿ, ೮೫-೮೬ರಲ್ಲಿ ೨೯೬ ಕೋಟಿ ಹಾಗೆಯೇ ೮೬-೮೭ರಲ್ಲಿ ೨೩೦ ಕೋಟಿ, ಅಂದರೆ ಈ ಸಲ ೬೬ ಕೋಟಿ ಕಡಿಮೆಯಾಗಿದೆ. ಇದಕ್ಕೆ ಯಾರು ಕಾರಣರೆಂದು ಕೇಳುತ್ತೇನೆ. ಹೆಂಡದ ಬಗ್ಗೆ ರಿಪೋರ್ಟಿನಲ್ಲಿ ಏನೂ ಹೇಳಿಲ್ಲ. ಎಲ್ಲೋ ಬ್ರಾಂದಿ ಕುಡಿದು ಹೆಂಡದ ಬಗ್ಗೆ ಡಿಟೇಲ್ಸ್ ಕೊಡುವುದನ್ನು ಮರೆತುಹೋಗಿರಬೇಕು. ಹೆಂಡ ಅನ್ನೋದು ಸದ್ಯಕ್ಕೆ ಇಲ್ಲವೇ ಇಲ್ಲ. ಕ್ಲೋರಲ್ ಹೈಡ್ರೇಟ್ ಹಾಕಿ ಕುಡಿಸುತ್ತಿದ್ದಾರೆ. ಅದು ವಿಷ.

ಇನ್ನೊಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕು. ಇದರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಡಿಸೆಂಬರ್ ೭, ೧೯೮೬ರ ಲಂಕೇಶ್ ಪತ್ರಿಕೆಯಲ್ಲಿ ಡಿಟೇಲ್ಸ್ ಬಂದಿದೆ ಸ್ವಾಮಿ. ನಾನು ಅದನ್ನು ಓದುವುದಕ್ಕೆ ತಾವು ಸಮಯ ಕೊಡದಿರುವುದರಿಂದ ಹೋಗುವುದಿಲ್ಲ. ಅದರಲ್ಲಿ ಮಾಮೂಲು ಯಾರು ಎಷ್ಟೆಷ್ಟು ಯಾರ್ಯಾರಿಗೆ ಕೊಡುತ್ತಾರೆಂದು ತೋರಿಸಿದ್ದಾರೆ. ಇದರ ಬಗ್ಗೆ ಹೋದಸಲ ಡಿಟೈಲ್ಡ್ ಡಿಸ್ಕಷನ್ ಆಗಿ ಕಡೆಗೆ ಹೈಕೋರ್ಟ್ ತೀರ್ಮಾನ ಬಂತು. ಆಗ ಹೆಗಡೆಯವರು ಒಂದು ಮಾತು ಹೇಳಿದ್ದರು, ನಾನು ಮಾನ್ಯ ಕೃಷ್ಣಪ್ಪನವರ ಅಥವಾ ಮಾನ್ಯ ಹೆಗಡೆಯವರ ಬಗ್ಗೆ ವ್ಯಕ್ತಿಗತವಾಗಿ ಹೇಳುವುದು ಏನೂ ಇಲ್ಲ. ಅದೇನಂದರೆ, ನೂರು ಕೋಟಿ ಲೂಟಿ ಮಾಡಿದ್ದಾರೆ. ಇದರ ಬಗ್ಗೆ ಏನೂ ಮಾಡಿಲ್ಲ. ಇದರ ಬಗ್ಗೆ ಜುಡಿಶಿಯಲ್ ಎನ್‌ಕ್ವಯರಿ ಮಾಡಿಸುತ್ತೇವೆ, ತಪ್ಪಿತಸ್ಥರು ಯಾರಿದ್ದಾರೆ ಅವರನ್ನು ಬಲಿ ಹಾಕುತ್ತೇವೆ ಎಂದು ಸ್ಪಷ್ಟವಾಗಿ ಸರ್ಕಾರ ಹೇಳಬೇಕು. ಏಪ್ರಿಲ್ ೨೫, ೧೯೮೭ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರತಕ್ಕ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಅದರಲ್ಲಿ ಏನು ಹೇಳಿದ್ದಾರೆಂದರೆ, Lapses admits Mr. Hegde. But no need to punish anybody. It would have been an entirely different matter if either of the courts had used the words "Mala fide". Mr. Hegde admitted and then he would have take action. ಇದರ ಬಗ್ಗೆ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿದೆ. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಸ್ವಲ್ಪ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಆ ಮೇಲೆ ಅಧ್ಯಕ್ಷತೆಯವರಿಗೆಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಯಾರ್ಯಾರಿಗೆ ಕೊಟ್ಟಿದ್ದಾರೆಂಬುದನ್ನು ಹೇಳಿದ್ದಾರೆ. ಅದನ್ನು ಯಾರ್ಯಾರಿಗೆ ಬಾಟ್ಲಿಂಗ್ ಕೊಟ್ಟಿದ್ದಾರೆಂದರೆ ಮೈಸೂರು ಷುಗರ್ ಕಂಪನಿ, ಮಂಡ್ಯ, ದಾಸಪ್ಪ ಅಂಡ್ ಸನ್ಸ್ ಜೆಮಿನಿ ಡಿಸ್ಟಿಲರಿಸ್. ಖೋಡೆ ಒಡೆತನದ ಶಿವಮೊಗ್ಗ ಕಂಪೆನಿಗೆ, ಹೆಚ್. ಸಿ. ಶ್ರೀಕಂಠಯ್ಯ ಅಂಡ್ ಸನ್ಸ್ ಅಂದರೆ ರವೀಂದ್ರ ಅಂಡ್ ಕಂಪನಿ, ಇವರಿಗೆ ಕೊಟ್ಟಿದ್ದಾರೆ. Adiseshaiah & Sons ಬಿಜಾಪುರ and Sea Shell Rotting Company. have been given ಇದರಿಂದ ೨೦ ಕೋಟಿ ರೂಪಾಯಿ ನಷ್ಟವಾಗುತ್ತದೆ. ಇದರ ಜೊತೆಯಲ್ಲಿ ಒಬ್ಬ ದೊಡ್ಡ ಅಧಿಕಾರಿಗಳ ಬಗ್ಗೆ ರೆಫರ್ ಮಾಡಿದ್ದಾರೆ. ಕೇರಳವನ್ನು ಮುಳುಗಿಸಿ ತಮಿಳುನಾಡನ್ನು ವಶಪಡಿಸಿಕೊಂಡು ಕರ್ನಾಟಕವನ್ನು ಹಿಡಿದುಕೊಂಡು ನಂತರ ಡಿಲ್ಲಿಗೆ ಹೋಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮೂರು ಸ್ಟೋರಿಡ್ ಬಿಲ್ಡಿಂಗ್ ಕಟ್ಟುವುದರ ಬಗ್ಗೆ ಮೋಸ ಮಾಡಿದ್ದಾರೆಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದಾರೆ. ಅನೇಕ ಹೈಕೋರ್ಟ್ ಜಡ್ಜ್‌ಮೆಂಟ್ ಇದ್ದರೂ ಕೂಡ ಈ ಮಹಾನುಭಾವರು ಯಾರಿದ್ದಾರೆ, ಇವರು ಅದನ್ನು

ಲೆಕ್ಕಕ್ಕೆ ಇಟ್ಟುಕೊಳ್ಳದೆ ನಡೆದುಕೊಂಡಿದ್ದಾರೆ ಇಂತಹ ಅಧಿಕಾರಿಗಳಿದ್ದರೆ ಈ ಸರಕಾರಕ್ಕೆ ಮಾನ ಬರುತ್ತದೆಯೇ ? ಈ ಸರಕಾರಕ್ಕೆ ೧೦೦ ಕೋಟಿ ರೂಪಾಯಿ ನಷ್ಟವಾಗುತ್ತಿದೆ, ಇದರಿಂದ ಜನತೆಗೆ ನಷ್ಟವಾಗುತ್ತದೆ. ಕಾಫಿ ಮೇಲೆ, ಪೆಟ್ರೋಲ್, ಡೀಸೆಲ್ ಮೇಲೆ ತೆರಿಗೆ ಹಾಕುತ್ತೀರಿ, ಇದರಲ್ಲಿ ೧೦೦ ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಖೋಡೆಯುವನು ಮಾಡುತ್ತಿದ್ದಾನೆ, ಈಗ ಮ್ಯಾಕ್‌ಡೊವೆಲ್ ಕೂಡ ಸೇರಿಕೊಂಡಿದ್ದಾರೆ ಇವರು ಏನು ಮಾಡುತ್ತಾರೆಯೋ ನನಗಂತೂ ಗೊತ್ತಿಲ್ಲ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಏತಕ್ಕೆಂದರೆ ನನಗೆ ಕೊಟ್ಟಿರುವ ಸಮಯ ಬಹಳ ಕಡಿಮೆ ಇದೆ. ಮಾನ್ಯ ಇವರನ್ನು ಬಿಟ್ಟರೆ ನಿಜವಾಗಿಯೂ ಸರಕಾರಕ್ಕೆ ಹಾಗೂ ಈ ರಾಜ್ಯದ ಜನತೆಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ ಎಂಬುದನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿರುವ ಒಂದೆರಡು ವಾಕ್ಯಗಳನ್ನು ಇಲ್ಲಿ ಕೋಟ್ ಮಾಡುತ್ತೇನೆ. This is the judgement of the High Court in Writ Petition No. 2160 and 2161/86. The judgement is dated 5th December, 1986 from which I quote the following.—

> "A person who is a defaulter is, under the the rules, ineligible to participate and the State cannot afford and should not entrust the right of distribution of toddy valued over Rs. 6 crores. It is averred that auction held is not in conformity with the rules."

Further, he is a defaulter and that a sum of Rs. 7 crores 81 lakhs is due as Excise Duty and Rs. 12 crores 50 lakhs is due as Sales Tax. It is a violation of Rule-7. ಬಹಳ ವಿವರವಾಗಿ ಹೋಗಿ ಕಂಡೆಮ್ ಮಾಡಿ ಕೊನೆಗೆ ಏನು ಹೇಳುತ್ತಾರೆಂದರೆ ಹತ್ತು ಗಂಟೆಗೆ ೫೩ ಲಕ್ಷ ರೂಪಾಯಿಯ ಡ್ರಾಫ್ಟ್ ತಂದು ಕೊಟ್ಟಿದ್ದಾರೆ ಅಂದು ರಜಾ ದಿನವಾಗಿತ್ತು ಅಂದು ೩೭ ಲಕ್ಷ ರೂಪಾಯಿಯ ಡ್ರಾಫ್ಟ್ ತಂದು ಕೊಟ್ಟಿದ್ದಾರೆ. ಜಡ್ಜ್‌ಮೆಂಟ್‌ನಲ್ಲಿ ಹೇಳಿದ ಒಂದೆರಡು ವಾಕ್ಯವನ್ನು ಇಲ್ಲಿ ಹೇಳಬಯಸುತ್ತೇನೆ.

> "Para No. 4 —violation of what magnitude? When viewed in this context, the problem posed raised many questions. Who have violated this law; violation of what magnitude and under what consequences?"

ಇದರಿಂದ ನೂರು ಕೋಟಿ ನಷ್ಟವಾಗಿದೆ. ಮಾನ್ಯ ಕೃಷ್ಣಪ್ಪನವರು ಇಲ್ಲಿಯೇ ಇದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದ್ದಾರೆ ಇದರಲ್ಲಿ ಯಾವ ಅಧಿಕಾರಿಗಳು ಸಂಬಂಧಪಟ್ಟಿದ್ದಾರೆ ಎಂಬುದನ್ನು ಹೇಳಬೇಕು ಮತ್ತು ಇದನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಒಪ್ಪಿಸುತ್ತೇವೆಂದು ಹೇಳಬೇಕು ಇಲ್ಲದಿದ್ದರೆ ನಿಜವಾಗಿಯೂ ಈ ರಾಜ್ಯದ ಜನರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ. The Court has observed, "The Court in the circumstances cannot be a party to the arbitary, capricious and malafide exercise of powers wholly in contravention of law."

ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದರು. ಅವರೇನಾದರೂ ಮಾಲಫೈಡ್ ಎಂದು ಹೇಳಿದ್ದರೆ it would have been entirely a different matter if either of the used the word "Mala-fide". ಎಂದು ಹೇಳಿದರು. Admittedly they have stated that there is mala-fide, there is contravention and misuse. ಇಷ್ಟಾಗಿದ್ದರೂ ಕೂಡಾ ಬಿಡಿಲಿಲ್ಲ ಈ ಮನೋಪಲಿಸ್ಟ್‌ಗಳು. ಅವರು ಏನು ಮಾಡಿದರು? ಒಂದು ಜಡ್ಜ್‌ಮೆಂಟ್ ಇದೆ. ಅದನ್ನು ಓದಿ ಬಿಡುತ್ತೇನೆ. ೩ನೇ ಮಾರ್ಚಿಯಲ್ಲಿ ೮೭ರಲ್ಲಿ ಒಂದು ಜಡ್ಜ್‌ಮೆಂಟ್ ಬಂತು, ಅದನ್ನು

ನೋಡಿದರೆ ತಮಗೆ ಗೊತ್ತಾಗುತ್ತದೆ. Even some judges in the lower side have concluded. ಆಮೇಲೂ ಕೂಡಾ ಜಡ್ಜ್‌ಮೆಂಟ್ ಕೊಟ್ಟಮೇಲೂ ಅವರಿಗೆ ಪೆಂಡಿಂಗ್ ಕೊಟ್ಟರು. ಈ ಕನ್‌ಫ್ಯೂಷನ್‌ನಿಂದ ೬೦ ಕೋಟಿ ರೂಪಾಯಿ ನಷ್ಟ ಆಯಿತು. ನೂರು ಕೋಟಿ ರೂಪಾಯಿ ಹೋಗಿದೆ. ಈ ಜಡ್ಜ್‌ಮೆಂಟನ್ನು ಓದಿ ತಮಗೆ ಬಿಡುತ್ತೇನೆ. ಮಾನ್ಯ ಹೆಗಡೆಯವರು ಇದ್ದಾರೆ, ಮಾನ್ಯ ಕೃಷ್ಣಪ್ಪನವರು ಇಲ್ಲ. ಇದರ ಬಗ್ಗೆ ಜುಡಿಸಿಯಲ್ ಎನ್‌ಕ್ವೈರಿ ಮಾಡಿಸಲು ತಾವು ಒಪ್ಪಿಕೊಳ್ಳಬೇಕು. ಇಲ್ಲದೇ ಹೋದರೆ ದೇಶಕ್ಕೆ ಮೋಸ ಮಾಡಿದ ಹಾಗೆ ಆಗುತ್ತದೆ. ಇದನ್ನು ಜುಡಿಷಿಯಲ್ ಎನ್‌ಕ್ವೈರಿಮಾಡಲಿ. The observation of the Court is that all is not well in theExcise Department...

MR. SPEAKER.—Please conclude.

SRI R. VENKATARAMAIAH.—The Court has said. "It is shocking. It is true the confirmation was not given. But it is shocking that the procedure adopted by the Tribunal is a matter of grave concern to the State and excise laws." ಮಾನ್ಯ ಹೆಗಡೆಯವರು ಇದ್ದಾರೆ. ಇದರಿಂದ ಸ್ಟೇಟ್‌ಗೆ ನೂರು ಕೋಟಿ ರೂಪಾಯಿ ಲಾಸ್ ಆಗಿದೆ. ಆದ್ದರಿಂದ ಇದನ್ನು ತಾವು ದಯವಿಟ್ಟು ಜುಡಿಸಿಯಲ್ ಎನ್‌ಕ್ವೈರಿ ಮಾಡಿಸುವುದಕ್ಕೆ ಒಪ್ಪಿಕೊಳ್ಳಬೇಕು. ಇದರ ಬಗ್ಗೆ ನಾನು ಪ್ರೊಟೆಸ್ಟ್ ಮಾಡುತ್ತೇನೆ.

(The Hon-Member squatted in the Well of the House)

ಅಧ್ಯಕ್ಷರು.—ಇನ್ನು ೨೦ ಜನ ಮಾತನಾಡುವವರು ಇದ್ದಾರೆ. ಸಮಯವನ್ನು ಹಾಳು ಮಾಡುವುದು ಬೇಡ. ಎಲ್ಲರೂ ಕೂಡಾ ಸ್ಟಡಿ ಮಾಡಿಕೊಂಡು ಬಂದಿದ್ದಾರೆ...

ಶ್ರೀ ಆರ್. ವೆಂಕಟರಾಮಯ್ಯ.—ನಾನು ಇದನ್ನು ಒಪ್ಪುವುದಿಲ್ಲ. ನೂರು ಕೋಟಿ ರೂಪಾಯಿ ಲಾಸ್ ಆಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಜುಡಿಸಿಯಲ್ ಎನ್‌ಕ್ವೈರಿ ಮಾಡಿಸುವುದಕ್ಕೆ ಒಪ್ಪಿಕೊಳ್ಳಬೇಕು.

MR. SPEAKER.—Nothing will go on record.

* * * *

ತಾವು ಅಲ್ಲಿ ಕೂತು ಮಾತನಾಡುವುದಕ್ಕೆ ಬರುವುದಿಲ್ಲ. ನೀವು ಏನೂ ಹೇಳಿದರೂ ಕೂಡಾ ಅದು ಎಕ್ಸ್‌ಪಂಜ್ ಆಗುತ್ತದೆ. ಈಗ ನೀವು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಅಲ್ಲಿ ಕೂತು ಮಾತನಾಡಿದರೆ ಎಕ್ಸ್‌ಪಂಜ್ ಆಗುತ್ತದೆ.

(ಗೊಂದಲ)

SRI K. B. SHANAPPA.—The House is not in order.

MR. SPEAKER.—The House is in order

SRI K. B. SHANAPPA.—How can it be ? Please convince us.

(Interruption)

ಶ್ರೀ ಧರ್ಮಸಿಂಗ್.—ನೀವು ಅದನ್ನು ಸರಿಪಡಿಸಿ ಎಂದು ಮುಖ್ಯಮಂತ್ರಿಗಳಿಗೆ ಹೇಳಿ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ದಯವಿಟ್ಟು ಎದ್ದು ನಿಮ್ಮ ಸೀಟಿಗೆ ಬನ್ನಿ. ಸಾಯಂಕಾಲ ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ನಷ್ಟ ಆಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಲಿ...

(Not recoarded as ordered by the Chair)

ಅಧ್ಯಕ್ಷರು.—ಈಗ ಅವರು ಉತ್ತರ ಹೇಳುವುದಕ್ಕಾಗುವುದಿಲ್ಲ. ಅವರು ಸಾಯಂಕಾಲ ಐದೂವರೆ ಗಂಟೆಗೆ ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಉತ್ತರ ಕೊಡುವುದಕ್ಕೆ ಮಾನ್ಯ ಕೃಷ್ಣಪ್ಪನವರು ಇದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

ಅಧ್ಯಕ್ಷರು.—ಉತ್ತರ ಕೊಡುವ ಪದ್ಧತಿ ಇದೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಿ ಮುಗಿದ ಮೇಲೆ ಅವರು ಉತ್ತರವನ್ನು ಸಾಯಂಕಾಲ ಐದೂವರೆ ಗಂಟೆಗೆ ಹೇಳುತ್ತಾರೆ. ಇವೊತ್ತು ಇನ್ನೂ ೨೧ ಜನ ಮಾತನಾಡುವುದಿದೆ. ಆದ್ದರಿಂದ ನೀವು ನಿಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಿ. ಸಾಯಂಕಾಲ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಮಗೆ ಶ್ರೀ ಕೃಷ್ಣಪ್ಪನವರ ಉತ್ತರದ ಮೇಲೆ ನಂಬಿಕೆ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಹೇಳಲಿ. ನಂತರ ನಾನು ಹೋಗುತ್ತೇನೆ.

ಅಧ್ಯಕ್ಷರು.—ನೀವು ಏನು ಹೇಳಿದರೂ ಅದೆಲ್ಲಾ ಎಕ್ಸ್‌ಪಂಜ್ ಆಗುತ್ತದೆ. 'Dharna or squatting by members on the floor of the House doesn't make the House out of order.'.

ಶ್ರೀ ಯು. ಭೂಪತಿ.—ಕಾನೂನು ಪ್ರಕಾರ ಹೌಸ್ ಆರ್ಡರ್‌ನಲ್ಲಿದೆ, ಆದರೆ ಇದು ಸತ್ಸಂಪ್ರದಾಯ ಆಗುವುದಿಲ್ಲ.

ಅಧ್ಯಕ್ಷರು.—ಪಾರ್ಲಿಮೆಂಟರಿ ಪ್ರೊಸೀಜರ್ ಡಿಬೇಟ್ ಇದ್ದಾಗ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.—ತಾವು ರಿಕ್ವೆಸ್ಟ್ ಮಾಡಿದರೆ ಅವರು ಕುಳಿತುಕೊಳ್ಳುಕೊಳ್ಳುತ್ತಾರೆ.

ಅಧ್ಯಕ್ಷರು.—ಹತ್ತು ಸಾರಿ ರಿಕ್ವೆಸ್ ಮಾಡಿದ್ದೇನೆ. ಮೆಂಬರ್ಸ್‌ಗಳು ಎಲ್ಲಾ ಮಾಸ್ಟರ್ಸ್‌ಗಳು ಆಗಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರೆಲ್ಲರೂ ಕೊಟ್ಟ ಎಲ್ಲಾ ಮಾತುಗಳೂ ಹೊಂದಾಣಿಕೆ ಆಗುವುದಿಲ್ಲ. ಆದರೆ ಒಂದು ಮಾತು ಮಾತ್ರ ನಿಜ. ಒಂದು ಸತ್ಸಂಪ್ರದಾಯ, ಸತ್ ಪರಂಪರೆ ಪ್ರಕಾರ ಇದು ಆರ್ಡರ್‌ನಲ್ಲಿ ಇದೆ. ಹೊಸದಾಗಿ ಪ್ರಿಸಿಡೆಂಟ್ ಕ್ರಿಯೇಟ್ ಆಗುವುದು ಇವೊತ್ತು ಸರಿಯಲ್ಲ. ಇದರಿಂದ ಕೆಟ್ಟ ಪರಿಣಾಮ ಆಗುತ್ತದೆ. ಹೌಸಿನ ಲೀಡರ್ ಇದ್ದರೆ ಅವರು ಆಕ್ಷನ್ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಹೇಳಬೇಕು. ಮತ್ತು ತಮ್ಮ ಉಪದೇಶ ಪೂರಕ ವಾದ ಮಾತನ್ನು ಹೇಳಿದರೆ ಇವರು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳುತ್ತಾರೆ. ಇದು ವಿಹಿತವಾಗುತ್ತದೆ. ಇಲ್ಲದಿದ್ದರೆ ಇದು ಸತ್ ಸಂಪ್ರದಾಯವಾಗುವುದಿಲ್ಲ. ಈ ಸದನದಲ್ಲಿ ಇಂತಹ ಘಟನೆಗಳಿಗೆ ಅವಕಾಶ ಕೊಡಬಾರದು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ ಕುಳಿತು ಕೊಳ್ಳಿ

ಶ್ರೀ ಆರ್. ವೆಂಕಟರಾಮಯ್ಯ.—ಸಂಬಂಧಪಟ್ಟವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಲಿ, ನಾನು ಹೋಗುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಅವರು ಹೇಳಲಿ. ಈಗಾಗಲೇ ಹೌಸ್ ಡಿಸ್ ಆರ್ಡರ್ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಲೀಡರ್ ಆಫ್ ದಿ ಹೌಸ್ ಇರಲಿ, ಇಲ್ಲದಿರಲಿ, ಸದನದ ವೆಲ್‌ನಲ್ಲಿ ಕುಳಿತ ತಕ್ಷಣ ಹೌಸ್ ಡಿಸ್ ಆರ್ಡರ್ ಆಗುವುದಿಲ್ಲ. ನನಗೆ ಏನು ಆಶ್ಚರ್ಯವೆಂದರೆ ಶ್ರೀ ವೆಂಕಟರಾಮಯ್ಯನವರು ಬಹಳ ಮೇಧಾವಿಗಳು, ಉತ್ತಮ ವಕೀಲರು. ಅವರು ಏನು ಮಾಡುತ್ತಿದ್ದಾರೆ ? ನಮ್ಮ ಸದನದ ನಡವಳಿಕೆ ಹೇಗಿರಬೇಕು ಎಂದು ಗೊತ್ತಿರತಕ್ಕ ವ್ಯಕ್ತಿ ಅವರು ಕಾಯಿದೆ ಓದಿದಾ ರೆ, ನಿಯಮಾವಳಿಯನ್ನು ಓದಿದ್ದಾರೆ. ಅವರು ಒಂದು ಪ್ರಶ್ನೆ ಕೇಳಲಿ. ಆದರೆ ಅದಕ್ಕೆ ತಕ್ಷಣ ಉತ್ತರ ಕೊಡುವುದಕ್ಕೆ ಬರುತ್ತದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಈ ಸದನದ

ಗಮನಕ್ಕೆ ತಂದಂತಹ ಪ್ರಶ್ನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ಇದು ಸಾಧುವಾದ ವಿಚಾರ. ಇದು ಇವರಿಗೆ ಗೊತ್ತಿಲ್ಲವೇ ? ನೂರು ಕೋಟಿ ರೂಪಾಯಿ ಲುಕ್ಸಾನು ಆಗಿದೆ ಎಂದು ಇವರು ಹೇಳಿದ ತಕ್ಷಣ ಇದು ನೂರಕ್ಕೆ ನೂರು ಸಿಂಧುವಾಗುವುದಿಲ್ಲ. ಒಂದು ಆರೋಪ ಆಯಿತು. ೯೯ ಕೋಟಿ ರೂಪಾಯಿ ನಷ್ಟ ಆಗಿದೆ ಎಂದು ಆ ರೆಕ್ಟಿಫೈಡ್ ಸ್ಪಿರಿಟ್ ಹಗರಣದಲ್ಲಿ ನಾವು ನ್ಯಾಯಾಂಗ ತನಿಖೆ ಮಾಡಿದ್ದೇವೆ. ಮಾತು ಮಾತಿಗೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ದಿವಸದಿಂದ ಈ ರಾಜ್ಯದಲ್ಲಿ ಲೋಕಾಯುಕ್ತದ ರಚನೆ ಆಗಿದೆ ಅಂದಿನಿಂದ ಜುಡಿಷಿಯಲ್ ಎನ್‌ಕ್ವೈರಿ ಆಗುವುದಿಲ್ಲ. ಒಂದು ವರದಿಯಲ್ಲಿ ಸರ್ಕಾರಕ್ಕೆ ೧೩ ಕೋಟಿ ರೂಪಾಯಿ ಲಾಭ ಬಂದಿದೆ ಎಂದರೆ ನಾನಾದರೂ ಅದನ್ನು ನ್ಯಾಯಾಂಗ ತನಿಖೆ ಮಾಡಿಸುವುದಕ್ಕೆ ಬರುತ್ತದೆಯೇ ? ರಿಪೋರ್ಟ್ ಕೊಟ್ಟಾಯಿತು. ಹೈ ಕೋರ್ಟ್ ಇದೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ. ತಮಗೆ ಮತ್ತೆ ಸಂದೇಹ ಇದ್ದರೆ ಲೋಕಾಯುಕ್ತ ಇದೆ, ಅದರಲ್ಲಿ ತಾವು ಕೇಳಬಹುದು, ಅದನ್ನೆಲ್ಲ ಬಿಟ್ಟು ಈ ರೀತಿ ನೀವು ಅಗ್ರಹ ಮಾಡುವುದು ಸರಿಯಲ್ಲ. ನೀವು ಹೋಗಿ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸಂಬಂಧಪಟ್ಟ ಆಫಿಷಿಯಲ್ಸ್‌ಗಳಿಗೆ ಪನಿಷ್‌ಮೆಂಟ್ ಮಾಡುತ್ತೇವೆಂದು ಹೇಳಿ, ನಾನು ಹೋಗಿ ಕುಳಿತುಕೊಳ್ಳುತ್ತೇನೆ.

(ಶ್ರೀ ಆರ್. ವೆಂಕಟರಾಮಯ್ಯನವರು ಸ್ವಸ್ಥಾನಕ್ಕೆ ಹಿಂತಿರುಗಿದರು)

ಶ್ರೀ ರಾಮಕೃಷ್ಣ ಹೆಗಡೆ.—ಯಾವುದೇ ವ್ಯಕ್ತಿ ಇರಲಿ, ಅವರು ಚಿಕ್ಕವರೋ ದೊಡ್ಡವರೋ, ಯಾವುದೇ ಆಫೀಸರ್ ವಿರುದ್ಧ ಆರೋಪ ಸಾಬೀತು ಆದರೆ ಅತಿ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ಅಂಥವರನ್ನು ಡಿಸ್‌ಮಿಸ್ ಮಾಡುತ್ತೇವೆಂದು ಹೇಳುತ್ತೇನೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂದರೆ ಯಾವ ಅಧಿಕಾರಿಯಲ್ಲಿ ಡಿಸ್‌ಹಾನೆಸ್ಟಿ, ಇದೆಯೋ ಅಥವಾ ಇಂಟೆಗ್ರಿಟಿ ಇಲ್ಲವೋ ಅವನಿಗೆ ಕನಿಷ್ಟ ಪಕ್ಷ ಕಡೆಯ ಕ್ರಮದ ಶಿಕ್ಷೆ ಅಂದರೆ ಅತನನ್ನು ಸೇವೆಯಿಂದ ತೆಗೆದುಹಾಕುವುದು.

ಶ್ರೀ ಆರ್. ವೆಂಕಟರಾಮಯ್ಯ.—೩೮ ಕೋಟಿ ಡಿಫಾಲ್ಟ್ ಆಯಿತು. ಹೈ ಕೋರ್ಟ್ ಹೇಳುತ್ತದೆ, ಡಿಫಾಲ್ಟ್ ಆಗಬಾರದು ಎಂದು. ಒಬ್ಬ ಆಫೀಸರ್ ಹಾಗೂ ಕಮೀಷನರ್ ಮೂರು ವರ್ಷಗಳಿಂದ ಅನ್ಯಾಯ ಮಾಡಿದ್ದಾರೆ. ಅಂಥವರ ಮೇಲೆ ಏನೂ ಕ್ರಮ ಕೈಗೊಂಡಿಲ್ಲ. ಆ ಅಧಿಕಾರಿ ಮೇಲೆ ಮೂರು ವರ್ಷಗಳಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ? Will it not inferred that this Government will be a party to it ? ಅವರ ಮೇಲೆ ಈಗಲೇ ಆಕ್ಷನ್ ತೆಗೆದುಕೊಳ್ಳಿ. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ಬೇಡಿಕೆಯನ್ನು ವಿರೋಧ ಮಾಡುತ್ತಾ, ಬಹುಶಃ ಹಿಂದಿನಿಂದ ಬಂದಂತಹ ಅನೇಕ ಒಳ್ಳೆಯ ಸಂಪ್ರದಾಯಗಳನ್ನು ಈ ಸರ್ಕಾರ ಕೈಬಿಟ್ಟು ಹೋಗುತ್ತಿದೆಯೆಂದು ಹೇಳುತ್ತೇನೆ. ಉದಾಹರಣೆಗೆ, ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಜನರಲ್ ಆಸ್ಪತ್ರೆಗಳಲ್ಲಿ, ಕಂಬೈನ್ಡ್ ಆಸ್ಪತ್ರೆಗಳಲ್ಲಿ ಪ್ರಮುಖರನ್ನು ಒಳಗೊಂಡ ಒಂದು ಶಾಸಕ ಸಮಿತಿಯನ್ನು ಹಿಂದೆ ಮಾಡುತ್ತಿದ್ದರು. ಈ ಸಮಿತಿ ಸಭೆಗಳಲ್ಲಿ ಹೋದಾಗ ತಿಂಗಳಿಗೊಮ್ಮೆ ಆಸ್ಪತ್ರೆ ಸ್ವಚ್ಛತೆ ಬಗ್ಗೆ ಹಾಗೂ ಡಾಕ್ಟರ್ ದಿನನಿತ್ಯ ಬರುತ್ತಿದ್ದಾರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುತ್ತಿದ್ದೆವು. ಅಂತಹ ಸಮಸ್ಯೆಗಳು ಏನಾದರೂ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದು ಪರಿಹರಿಸುವಂತೆ ಮಾಡುತ್ತಿದ್ದರು. ಬಹುಶಃ ನಾನು ಶಾಸಕನಾದಮೇಲೆ ಕಳೆದ ಮೂರು ವರ್ಷಗಳಿಂದ ನೋಡುತ್ತಿದ್ದೇನೆ, ಇದುವರೆಗೂ ಇಂತಹ ಒಂದು ಸಮಿತಿಯನ್ನು ಮಾಡಿಲ್ಲ, ತಾಲ್ಲೂಕು ಮಂಡಳಿ ಸಮಿತಿಯನ್ನು ಮಾಡಿದರೂ ಸಹ ಇದುವರೆಗೂ ಒಂದು ಸಭೆಯನ್ನು ಕರೆಯಲಿಲ್ಲ. ಹೀಗಾಗಿ ಇವತ್ತು ಆಸ್ಪತ್ರೆಗಳಲ್ಲಿ ಹೇಳುವವರು ಕೇಳುವವರು ಯಾರು ಇಲ್ಲ. ಹಿಂದೆ ಉನ್ನತ ಮಟ್ಟದ ಅಧಿಕಾರಿಗಳು ತಾಲ್ಲೂಕುಗಳಿಗೆ ಬಂದು ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಆದರೆ ಇವತ್ತು ಯಾವ ಮೇಲಾಧಿಕಾರಿಗಳೂ ಬರುತ್ತಿಲ್ಲ. ಉದಾಹರಣೆಗೆ, ಶಿವಮೊಗ್ಗ ಜಿಲ್ಲೆ ಬಗ್ಗೆ ಹೇಳುವುದಾದರೆ, ಇವತ್ತು ಶಿಕಾರಿಪುರದ ಒಂದು ಸಮಿತಿಗೆ ನಾನು ಶಾಸಕನಾಗಿ ಸಮಯಕ್ಕೆ ಬಂದರೂ ಸಹ ಜಿಲ್ಲಾ ವೈದ್ಯಾಧಿಕಾರಿಯವರು ಸಮಯಕ್ಕೆ ಬಂದಿದ್ದು ನಾನು ಕಾಣಲಿಲ್ಲ. ನಾನು ಜವಾಬ್ದಾರಿಯುತ ಶಾಸಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇಂತಹ ಒಂದು ಬೇಜವಾಬ್ದಾರಿಯುತ ವ್ಯವಸ್ಥೆ ಈವತ್ತು ಇದೆ. ಮತ್ತೆ ನಾನು ಒಂದೆರಡು ಆಸ್ಪತ್ರೆಗಳಿಗೆ ಹೋದಾಗ ಅಲ್ಲಿ ಅತ್ಯಾವಶ್ಯಕವಾದ ಔಷಧಿಗಳು ಇರಲಿಲ್ಲ. ಒಬ್ಬ ಬಡ ರೋಗಿ ಮರಣಾವಸ್ಥೆಯಲ್ಲಿ

ಬಿದ್ದಿರುತ್ತಾನೆ. ಅವನಿಗೆ ಔಷಧಿ ಕೊಳ್ಳುವ ಶಕ್ತಿ ಇರುವುದಿಲ್ಲ ಅಂತಹ ಬಡವನಿಗೆ ತುರ್ತು ಸಂದರ್ಭದಲ್ಲಿಯಾದರೂ ಅಗತ್ಯ ಔಷಧಿ ಒದಗಿಸಲು ತಾಲ್ಲೂಕು ಮಟ್ಟದಲ್ಲಿ ಒಬ್ಬ ಡಾಕ್ಟರ್‌ಗೆ ಒಂದೆರಡು ಸಾವಿರ ರೂ. ನಗದು ರೂಪದಲ್ಲಿ ಇಟ್ಟುಕೊಳ್ಳಲು ಅವಕಾಶ ಕೊಟ್ಟರೆ ಅವನು ಔಷಧಿಯನ್ನು ಕೊಂಡು ಆ ರೋಗಿಯನ್ನು ಉಳಿಸುವಂತಹ ಅವಕಾಶವಾಗುತ್ತದೆ. ತಾವು ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ನೀವು ಇದಕ್ಕೆ ಉತ್ತರ ಕೊಡುವುದಿಲ್ಲ. ನಿಮ್ಮ ಸರ್ಕಾರಕ್ಕೆ ಯಾರು ಸಾಲ ಕೊಡುತ್ತಾರೆ ? ಸ್ವಾಮಿ, ಲೋಕೋಪಯೋಗಿ ಇಲಾಖೆಯವರನ್ನು ಜೀಪ್ ಕೇಳಿದಾಗ ಡೀಸೆಲ್ ಪಡೆಯುವುದಕ್ಕೆ ಕಷ್ಟವಾಗಿದೆಯೆಂದು ಹೇಳುತ್ತಾರೆ. ಬಡವನ ಪ್ರಾಣ ಉಳಿಸುವುದಕ್ಕೆ ಅಗತ್ಯವಿರುವಂತಹ ಸಣ್ಣಪುಟ್ಟ ವಿಷಯದ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹೊಸದಾಗಿ ಸಾರ್ವಜನಿಕ ಆರೋಗ್ಯ ಘಟಕ ಮತ್ತು ಕೇಂದ್ರಗಳನ್ನು ಪ್ರಾರಂಭಿಸುವುದಿರಲಿ, ಇರತಕ್ಕಂಥ ಸಾರ್ವಜನಿಕ ಆರೋಗ್ಯ ಘಟಕ ಮತ್ತು ಕೇಂದ್ರಗಳಿಗೆ ವೈದ್ಯರನ್ನು ನೇಮಿಸಬೇಕೆಂದು ಕಳೆದ ಮೂರು ವರ್ಷಗಳಿಂದ ಕಾಡಿಬೇಡಿದ್ದೇನೆ. ಇದುವರೆಗೂ ಸಹ ಇವತ್ತು ಈ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಯಾವುದಾದರೊಂದು ಕಾರಣಗಳನ್ನು ಹೇಳಿ ಮುಂದೂಡುತ್ತಿದ್ದಾರೆ. ಹೋದಸಾರಿ ಕಳೆದ ಆರುತಿಂಗಳ ಹಿಂದೆ ಸೇರಿದ ಅಧಿವೇಶನದಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ಇದೇ ಸದನದಲ್ಲಿ ಡಾಕ್ಟರ್‌ಗಳನ್ನು ನೇಮಿಸಲು ವಿನಂತಿಸಿದ್ದೆ ಹಾಗೂ ಕ್ರಮ ಕೈಗೊಳ್ಳದಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಯವರ ಮನೆ ಮುಂದೆ ಉಪವಾಸ ಕುಳಿತುಕೊಳ್ಳುತ್ತೇನೆಂದು ಹೇಳಿದ್ದೆ. ನನ್ನ ತಾಲ್ಲೂಕಿನಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರ ಇದೆ. ಅಲ್ಲಿ ವೈದ್ಯರುಗಳಿಲ್ಲ ಶಿರಾಳಕೊಪ್ಪದಂತಹ ಪ್ರದೇಶದಲ್ಲಿ ಒಬ್ಬರೂ ಮಹಿಳಾ ವೈದ್ಯಾಧಿಕಾರಿಗಳು ಇಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಹಿಳಾ ವೈದ್ಯಾಧಿಕಾರಿಯವರನ್ನು ನೇಮಿಸುತ್ತೇನೆಂದು ಎಲ್ಲರ ಎದುರಿಗೂ ಹೇಳಿದ್ದರು ಆಗ ಸದನದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರೂ ಸಹ ಇದ್ದರು. ಅಲ್ಲಿ ರಾಣಿಯಮ್ಮ ಎನ್ನುವವರನ್ನು ಮಹಿಳಾ ವೈದ್ಯಾಧಿಕಾರಿಯನ್ನಾಗಿ ನೇಮಿಸಿದ್ದೀರಿ. ಅವರು ಇದುವರೆಗೂ ಸಹ ಕೆಲಸಕ್ಕೆ ಹಾಜರಾಗಿಲ್ಲ. ವೈದ್ಯಾಧಿಕಾರಿಗಳಿಲ್ಲದೆ ಜನ ತತ್ತರಿಸಿ ಹೋಗುತ್ತಿದ್ದಾರೆ. ಒದ್ದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಇದೊಂದೇ ಕಡೆ ಇಲ್ಲ. ಎಲ್ಲ ಕಡೆಯೂ ಇದೆ. ನಾನು ಮೊನ್ನೆ ಮಾನ್ಯ ಚೌಲಪ್ಪ ಅವರ ಕ್ಷೇತ್ರದಲ್ಲಿರತಕ್ಕ ಜನರಲ್ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ವೈದ್ಯರಿಲ್ಲ. ಸರಿಯಾದ ಸಿಬ್ಬಂದಿವರ್ಗ ಇಲ್ಲ. ಒಬ್ಬ ಮಂತ್ರಿಯವರ ಕ್ಷೇತ್ರದಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ನಮ್ಮಲ್ಲಿ ವೈದ್ಯಕೀಯ ಪದವೀಧರರ ಕೊರತೆ ಇಲ್ಲ. ಮಹಿಳಾ ವೈದ್ಯಾಧಿಕಾರಿಗಳ ಕೊರತೆ ಇಲ್ಲ. ಆದಕಾರಣ, ಎಲ್ಲಾ ಆಸ್ಪತ್ರೆಗಳಿಗೂ ವೈದ್ಯಾಧಿಕಾರಿಗಳನ್ನು ನೇಮಿಸಲು ದಯವಿಟ್ಟು ಗಮನಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಈ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬ ಕಳಕಳಿ ನಿಮಗೆ ಇದೆಯೋ ಇಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಆದರಿಂದ ದಯವಿಟ್ಟು ಇದರ ಕಡೆ ತಮ್ಮ ಗಮನವನ್ನು ಹರಿಸಬೇಕೆಂದು ಕೇಳುತ್ತೇನೆ. ಸ್ವಾಮಿ, ನಾನು ಹತ್ತಾರು ಬಾರಿ ಗವರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ಗೆ ಹೋಗಿದ್ದೆ, ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇನೆ ಅಲ್ಲಿ ಹೋಗಿ ನೋಡಿದರೆ ಔಷಧಿಗಳು ಕಸ ಬಿದ್ದಿರುವ ರೀತಿಯಲ್ಲಿ ರಾಶಿ ರಾಶಿಯಾಗಿ ಬಿದ್ದಿರುತ್ತದೆ, ಯಾವುದು ಬೇಡ, ಯಾವುದು ದಿನನಿತ್ಯದ ಬಳಕೆಗೆ ಬೇಕು ಎಲ್ಲವೂ ಕೂಡ ಅಲ್ಲಿ ಬಿದ್ದು ಕೊಳೆಯುತ್ತಿವೆ. ಕಳೆದ ಎರಡು ಮೂರು ವರ್ಷಗಳಿಂದ ಇದೇ ಪರಿಸ್ಥಿತಿ ಇದೆ. ಒಳ್ಳೆಯ ಮೆಡಿಕಲ್ ಸ್ಟೋರ್ಸ್‌ನ್ನು ಪ್ರಾರಂಭ ಮಾಡುವುದರಿಂದ ನಿಮಗೂ ಸಹಾಯವಾಗುತ್ತದೆ, ಭಾರ ಕಡಿಮೆಯಾಗುತ್ತದೆ, ಜನಗಳಿಗೂ ಅನುಕೂಲವಾಗುತ್ತದೆ. ಇದರ ಬಗ್ಗೆ ನೀವು ಏಕೆ ಚಿಂತನೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ? ಆದ್ದರಿಂದ ಇನ್ನು ಮೇಲಾದರೂ ದಯಮಾಡಿ ಇರತಕ್ಕಂತಹ ಆಸ್ಪತ್ರೆಗಳನ್ನು ಸ್ವಚ್ಛವಾದ ರೀತಿಯಲ್ಲಿ ಶುಚಿ ಮಾಡಿ, ವೈದ್ಯರುಗಳು ಸಮಯಕ್ಕೆ ಸರಿಯಾಗಿ ಬರುವಂತೆ ಮಾಡಿ, ಹಳ್ಳಿಯ ಜನರಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆಯನ್ನು ಮಾಡದಿದ್ದರೆ ನೀವು ಈ ರಾಜ್ಯದ ಜನತೆಗೆ ದ್ರೋಹ ಮಾಡಿದಂತಾಗುತ್ತದೆಂದು ನನ್ನ ಭಾವನೆ.

ಇನ್ನು ನರ್ಸಿಂಗ್ ಹೋಂಗಳ ಬಗ್ಗೆ ಹೇಳುವುದಾದರೆ, ಅಲ್ಲಿ ಕೊಡತಕ್ಕಂತಹ ಟ್ರೀಟ್‌ಮೆಂಟ್, ಅಲ್ಲಿನ ವ್ಯವಸ್ಥೆ ಇವೆಲ್ಲವನ್ನೂ ನೋಡಿದಾಗ, ಈ ರೀತಿಯ ಒಂದು ವ್ಯವಸ್ಥೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡುವುದಕ್ಕೆ ಏತಕ್ಕೆ ಸಾಧ್ಯವಿಲ್ಲವೆಂದು ನಮಗೆ ಅನ್ನಿಸುತ್ತದೆ. ಆದ್ದರಿಂದ ಇನ್ನು ಮೇಲೆ ಸರ್ಕಾರಿ ಆಸ್ಪತ್ರೆಗಳ ಡಾಕ್ಟರ್‌ಗಳು ಏನು ಕೇಳುತ್ತಾರೆ ಆ ಔಷಧಿಗಳನ್ನು ಸರಿಯಾದ ಸಮಯಕ್ಕೆ ಒದಗಿಸಿ ಅವರಿಗೆ ಅನುಕೂಲ ಮಾಡಿಕೊಡತಕ್ಕಂತಹ ಕಳಕಳಿ ನಿಮ್ಮ ಸರ್ಕಾರಕ್ಕೆ ಇರಬೇಕು. ಈಗ

ಸಮಯದ ಅಭಾವ ಇರುವುದರಿಂದ ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ಈ ಕಡೆ ಸರಿಯಾದ ಕ್ರಮವನ್ನು ತೆಗೆದುಕೊಂಡು ಜನತೆಯ ಸಮಸ್ಯೆಯನ್ನು ಪರಿಹರಿಸ ಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಬಹಳ ಚರ್ಚೆಯಲ್ಲಿರುವ ಇಲಾಖೆ ಎಂದರೆ ಅಬಕಾರಿ ಇಲಾಖೆ. ಹಿಂದೆಂದೂ ಕಾಣದಷ್ಟು ಭ್ರಷ್ಟಾಚಾರ ಈ ಇಲಾಖೆಯಲ್ಲಿ ತಾಂಡವವಾಡುತ್ತಿದೆ, ಕೊಳೆತು ನಾರುತ್ತಿದೆ. ನೀವು ಹೇಳುತ್ತೀರಿ ಆದಾಯದಲ್ಲಿ ಇದು ಎರಡನೆಯ ಇಲಾಖೆಯೆಂದು. ನಾನು ಹೇಳುತ್ತೇನೆ ಆದಾಯದಲ್ಲಿ ಹೇಗೆ ಎರಡನೆ ಇಲಾಖೆಯೋ ಹಾಗೆಯೇ ಭ್ರಷ್ಟಾಚಾರದಲ್ಲಿ ಮೊದಲನೆಯ ಇಲಾಖೆಯೆಂದು. ಸ್ವಾಮಿ ತಾವು ಇತ್ತೀಚೆಗೆ ಇದ್ದಕ್ಕಿದ್ದ ಹಾಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಡಿನೇಚರ್ ಸ್ಪಿರೀಟ್ ಆಗಿ ಬದಲಾವಣೆ ಮಾಡಿದ್ದೀರಿ. ಇದನ್ನು ನೀವು ಯಾವ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಿದ್ದೀರಿ ? ಇದರ ಹಿನ್ನಲೆ ಏನು ? ಏನು ಮ್ಯಾಕ್‌ಡೆವಲ್‌ಗೆ ಬಿಸನೆಸ್ ಆಗುತ್ತಿದೆ ಅಂತ, ಕೋಡೆಸ್‌ಗೆ ಅನುಕೂಲವಾಗಲಿ ಅಂತ ಈ ಬದಲಾವಣೆಯನ್ನು ತಂದರಾ ಅಥವಾ ಬೇರೆ ಏನಾದರೂ ಸೆಕೆಂಡ್ಸ್ ತಯಾರು ಮಾಡಿ ಹಣ ವನ್ನು ಲೂಟಿ ಮಾಡುವುದಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಏನಾದರು ಇದನ್ನು ತಂದರಾ ? ಇದು ನನಗೆ ಅರ್ಥವಾಗುತ್ತಿಲ್ಲ, ಇದನ್ನು ಲೀಟರ್‌ಗೆ ೫೦ ಪೈಸೆಯಂತೆ ಮಾರುತ್ತಿದ್ದೀರಿ. ಸ್ವಾಮಿ, ಇಡೀ ರಾಜ್ಯದಲ್ಲಿ ನನಗೆ ಗೊತ್ತಿರುವ ಪ್ರಕಾರ ಲೈಸನ್ಸ್‌ನ್ನು ಕೋಡೆಸ್‌ಗೆ ಕೊಟ್ಟಿದ್ದೀರಿ. ಕೋಡೆಸ್‌ಗೆ ಕೊಡುವುದಕ್ಕೆ ಕಾರಣವೇನು ? ಕೋಡೆಸ್‌ಗೂ ಸರ್ಕಾರಕ್ಕೂ ಏನು ಸಂಬಂಧ ? ಇದು ನನಗೆ ಒಂದು ಸ್ವಲ್ಪವೂ ಅರ್ಥವಾಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಲಾಭವೇನು ? ಅಥವಾ ಬೇರೆ ಏನಾದರೂ ಅನುಕೂಲವಾಗುತ್ತದೆಯೆ ? ಇದನ್ನು ತಾವು ದಯಮಾಡಿ ತಿಳಿಸಬೇಕು. ಇನ್ನು ಮದ್ಯಪಾನ ಪ್ರಧಾನ ಕೈಗಾರಿಕೆಗಳಿಗೆ ಪಿ.ಹೆಚ್.ಇ., ಡಿ.ಹೆಚ್.ಓ. ಮುಂತಾದವರಿಗೆ ಲೀಟರ್ ಒಂದಕ್ಕೆ ೫೦ ಪೈಸೆಯಂತೆ ಮಾರುತ್ತಿದ್ದೀರಿ. ನನಗೆ ಗೊತ್ತಿರುವ ಹಾಗೆ ಶಿರಾಲಿಕೊಪ ಮತ್ತು ರಾಣಿಯಮ್ಮ ಪ್ರದೇಶದಲ್ಲಿ ೧೫ ಲಕ್ಷ ಲೀಟರನ್ನು, ಲೀಟರ್ ಒಂದಕ್ಕೆ ೫೦ ಪೈಸೆಯಂತೆ ಮಾರುತ್ತಿದ್ದಾರೆ. ಇಷ್ಟೊಂದು ಭ್ರಷ್ಟಾಚಾರ ಈ ಇಲಾಖೆಯಲ್ಲಿ ತಾಂಡವವಾಡುತ್ತಿದರೂ ಸಹ ಇದನ್ನು ಸರಿಮಾಡುವುದಕ್ಕೆ ತಾವು ಏಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ ? ನನಗೆ ಈಗ ಹೆಚ್ಚು ಸಮಯವಿಲ್ಲ, ವಿವರವಾಗಿ ಹೇಳಿದರೂ ನಿಮಗೆ ಅರ್ಥವಾಗುವುದಿಲ್ಲ. ಹೈಕೋರ್ಟಿನಲ್ಲಿ ಕಳೆದ ೨–೩ ವರ್ಷಗಳಿಂದ ಸಾಕಷ್ಟು ಚರ್ಚೆಯಾಗಿದೆ ಈಗ ಲಾದರೂ ಈ ತರಹದ ನಿಲುವನ್ನು ಬಿಟ್ಟು ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಆದರೆ, ತಾವು ಇದನ್ನು ಮಾಡುವುದಿಲ್ಲ, ಕಾರಣ ಇದರಿಂದ ಸರ್ಕಾರಕ್ಕೂ ಆದಾಯ ಇದೆ, ಬೇರೆಯವರಿಗೂ ಆದಾಯವಿದೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲವೆಂದು ನನಗೆ ಗೊತ್ತಿದೆ. ಇನ್ನು ಪಾಂಡಿಚೇರಿಯಲ್ಲಿರುವ ಮಾಹೆ ಎಂಬ ಗ್ರಾಮದಿಂದ ಪೂನಗೆ ಹೈವ್ಯಾಟ್ಸ್, ಮ್ಯಾಕ್‌ಡ್ವಲ್, ಈ ತರಹದ ಮದ್ಯಪಾನಗಳು ಹೋಗುತ್ತವೆ. ಆದರೆ ಪಾಂಡಿಚೇರಿಯಿಂದ ೧೦ ಲೋಡ್ ಬಂದರೆ ಸುಮಾರು ೫ ಲೋಡಷ್ಟು ನಮ್ಮ ರಾಜ್ಯದಲ್ಲೇ ಇಳಿಯುತ್ತದೆ. ಅಲ್ಲಿ ಎಲ್ಲರೂ ದುಡ್ಡನ್ನು ಹೊಡೆಯು ತ್ತಿದ್ದಾರೆ, ಆದರೆ ಇದರ ಬಗ್ಗೆ ತಾವು ಯಾವುದೇ ವ್ಯವಸ್ಥಿತವಾದ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ಸರಿಯಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ದಯಮಾಡಿ ತಾವು ಸ್ವಲ್ಪ ಯೋಚನೆ ಮಾಡಿ. ತಮಗೆ ಗೊತ್ತಿರುವಂತೆ ನಮ್ಮ ಸರ್ಕಾರ ಓವರ್‌ಡ್ರಾಫ್ಟ್‌ನಲ್ಲಿ ಓಡುತ್ತಿದೆ. ಈ ಓವರ್‌ಡ್ರಾಫ್ಟ್‌ಗೆ ನೀವು ಏನಾದರೂ ಬಡ್ಡಿಯನ್ನು ಕಟ್ಟುತ್ತೀರಾ ಈಗಾಗಲೇ ಅಬಕಾರಿ ಗುತ್ತಿಗೆದಾರರಿಂದ ಸುಮಾರು ೩೨–೩೭ ಕೋಟಿ ರೂಪಾಯಿಗಳಷ್ಟು ಕಂತುಗಳ ರೂಪದಲ್ಲಿ ವಾಪಸ್ಸು ಬರಬೇಕೆಂದು ತಾವು ಒಪ್ಪಿಕೊಂಡಿದ್ದೀರಿ.

೩–೦೦ ಪಿ.ಎಂ.

ಅಬಕಾರಿ ಕಂಟ್ರಾಕ್ಟರ್‌ಗಳಿಂದ ಕಿಸ್ತು ಬರತಕ್ಕದ್ದು ಈಗ ಸುಮಾರು ೩೭ ಕೋಟಿ ಇದೆ. ಇದಕ್ಕೆ ೫ ಪರ್ಸೆಂಟ್ ರೀತಿ ಬಡ್ಡಿ ಹಾಕಿದರೂ ಅದು ಸುಮಾರು ೨ ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಅಬಕಾರಿ ಇಲಾಖೆಯ ಕಂಟ್ರಾಕ್ಟರ್‌ಗಳು ಒಮ್ಮೆ ಮುನಿಸಿಪಾಲಿಟಿಯಲ್ಲಿ ಡಿಫಾಲ್ಟರ್ ಆದರೆ ಬೇರೆ ಯಾವುದೇ ಇಲಾಖೆಯೂ ಅವರಿಗೆ ಟೆಂಡರ್‌ಗಳನ್ನು ಕೊಡುವುದಿಲ್ಲ. ಆದರೆ ಪಿಡಬ್ಲ್ಯೂಯನಲ್ಲಿ ಒಮ್ಮೆ ಡಿಫಾಲ್ಟರ್ ಆದರೂ ಕೂಡ ಅವರಿಗೆ ಮತ್ತೊಮ್ಮೆ ಟೆಂಡರ್‌ಗಳನ್ನು ಕೊಡುತ್ತಿದ್ದೀರಿ. ೧೯೮೦ರಲ್ಲಿನ ಆಡಳಿತದ ಕಾಲದಲ್ಲಿ ಸ್ವಲ್ಪ ದಾಕ್ಷಿಣ್ಯ ಇತ್ತು, ಈಗ ನಿಮ ಕಾಲದಲ್ಲಿಯೂ ಅದು ಮಾಮೂಲಿ

ಯಾಗಿದೆ. ಇಂತಹ ಪರಿಸ್ಥಿತಿ ಏಕೆ ? ಅವರಿಂದ ನಿಮಗೆ ಏನು ಲಾಭ ? ಯಾವುದಕ್ಕೋಸ್ಕರ ನೀವು ಈ ಅವ್ಯವಸ್ಥೆಯನ್ನು ಕಂಡೂ ಕಾಣದಂತೆ ಇದ್ದೀರಿ ? ದಾಸಪ್ಪ ಅಂಡ್ ಕಂಪನಿ ಒಮ್ಮೆ ಕಂತುಗಳನ್ನು ಕಟ್ಟದೆ ಹೋದರು, ನೀವು ಮತ್ತೆ ಅವರಿಗೆ ಕಾಂಟ್ರಾಕ್ಟನ್ನು ಕೊಟ್ಟಿದ್ದು ಏಕೆ ? ಇವತ್ತು ಹೈಕೋರ್ಟ್ ನಿಮ್ಮ ಅಧಿಕಾರಿಗಳನ್ನು ಕರೆದು ಛೀಮಾರಿ ಹಾಕುತ್ತಿದೆ, ಹೈಕೋರ್ಟ್ ಇಲ್ಲದಿದ್ದರೆ, ನೀವು ಇನ್ನು ಏನೇನೂ ಮಾಡುತ್ತಿದ್ದಿರೋ ಗೊತ್ತಿಲ್ಲ. ಈ ವಿಷಯದಲ್ಲಿ ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳಬೇಕೋ ತಿಳಿಯದೆ, ಜಡ್ಜ್‌ಗಳು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಈ ವಿಷಯ ಸದನದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಹಾಗಿದ್ದರೂ ಸಹ ಇಷ್ಟೊಂದು ಧೈರ್ಯವಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟೊಂದು ಅವ್ಯವಹಾರ ನಡೆಯುತ್ತಿದ್ದರೂ ಸಹ ಏತಕ್ಕೆ ಅದನ್ನು ಬೆಳಕಿಗೆ ತರುತ್ತಿಲ್ಲ ? ನೀವು ಈ ಗೊಂದಲವನ್ನು ಬೆಳಕಿಗೆ ತರುವುದಕ್ಕೂ, ನಾವು ಅದನ್ನು ಬೆಳಕಿಗೂ ತರುವುದಕ್ಕೂ ಬಹಳ ವ್ಯತ್ಯಾಸ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇವರು ಮಾತನಾಡುವ ಬರದಲ್ಲಿ ತಾವು ಏನು ಮಾತನಾಡುತ್ತಿದ್ದಾರೆ ಎಂದು ತಿಳಿಯದೆಯೇ ಸುಮ್ಮನೆ ಮಾತನಾಡಿದರೆ ಏನು ಪ್ರಯೋಜನ ? ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದಾರೆ. ಅದನ್ನು ಯಾಕೆ ಬೆಳಕಿಗೆ ತರುತ್ತಿಲ್ಲ ? ಎಂದು ಕೇಳುವುದಕ್ಕೆ ನಮಗೂ, ಅವರಿಗೂ ಏನು ಸಂಬಂಧ ?

ಶ್ರೀ ಬಿ. ಎಸ್ ಯಡಿಯೂರಪ್ಪ.—ಇನ್ನು ರಾಜ್ಯದಲ್ಲಿ ಸಾರಾಯಿ ತಯಾರು ಮಾಡುವ ಕೆಲಸವನ್ನು ಮೈಸೂರಿನ ಶುಗರ್ ಕಂಪನಿಗೆ ಕೊಡುತ್ತಿದ್ದೀರಿ. ಈಗ ಅದನ್ನು ಖೋಡೆ ಕಂಪನಿಗೆ ಕೊಟ್ಟಿದ್ದೀರಿ. ಇದಕ್ಕೆ ಕಾರಣ ಏನು ? ಅವರು ಅದನ್ನು ತಯಾರು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೇ ಅಥವಾ ಸರ್ಕಾರದ ಬೇರೆ ಕಂಪನಿಗಳು ಇರಲಿಲ್ಲವೇ, ಈ ರೀತಿ ನೀವು ಬೇನಾಮಿ ಸಂಸ್ಥೆಗಳನ್ನು ಮಾಡಿಕೊಂಡು ಅವ್ಯವಹಾರ ನಡೆಯುವಂತಹ ಪ್ರಯತ್ನ ಸರ್ಕಾರದ ಮೂಲಕ ಆಗುತ್ತಿದೆ. ದಯಮಾಡಿ ಇದನ್ನು ಅಂತ್ಯ ಮಾಡಬೇಕು. ಈಗಾಗಲೇ ಇರತಕ್ಕಂಥ ೩೦ ಕೋಟಿ ರೂಪಾಯಿಗಳನ್ನು ಗುತ್ತಿಗೆದಾರರಿಂದ ವಸೂಲು ಮಾಡಬೇಕು. ಕಳ್ಳಭಟ್ಟಿಯವರ ಬಗ್ಗೆ ಮತ್ತು ಅವರ ಪರವಾಗಿ ವಿಧಾನ ಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲೂ ಕೂಡ ಸರ್ಕಾರ ಮಾತನಾಡುವ ಪ್ರಯತ್ನವನ್ನು ಮಾಡುತ್ತಿದೆ. ಇದರ ಬಗ್ಗೆ ಜನಗಳಿಗೆ ಅನುಮಾನ ಬಂದಿರತಕ್ಕ ಸಂದರ್ಭದಲ್ಲಿ ಮತ್ತು ಇಷ್ಟೊಂದು ಭ್ರಷ್ಟಾಚಾರ ತಾಂಡವವಾಡುತ್ತಿರುವ ಈ ಒಂದು ಇಲಾಖೆಯಿಂದ ಲಾಭ ಇದೆಯೆಂದು ಹೇಳಿ, ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಕಂಡು ಕಾಣದಂತೆ, ಕಣ್ಣು ಮುಚ್ಚಿಕೊಂಡು ಇರುವುದು ಸರಿಯಲ್ಲ. ಇದರ ಬಗ್ಗೆ ಮಂತ್ರಿಗಳು ಸರಿಯಾದ ಗಮನ ಹರಿಸಬೇಕು. ಈಗ ಇದರಿಂದ ರಾಜ್ಯದ ಜನತೆಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕು. ಈವತ್ತು ಎಷ್ಟೊಂದು ಅಂಗಡಿಗಳನ್ನು ತೆರೆದಿದ್ದೀರಿ ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ಲಾಭ ಬರಬೇಕಾಗಿತ್ತು. ಆದರೆ ಅಲ್ಲಿ ನಡೆಯುತ್ತಿರುವ ಅವ್ಯವಹಾರದಿಂದಾಗಿ ಸರ್ಕಾರಕ್ಕೆ ಲಾಭ ಬರುತ್ತಿಲ್ಲ. ಆದರೆ ಇವತ್ತು ಬರುತ್ತಿರುವ ಆದಾಯ ತುಂಬಾ ಕಡಿಮೆಯಾಗಿದೆ. ಇದು ಅಲ್ಲೇ ಸೋರಿ ಹೋಗುತ್ತಿದೆ ಎಂದು ನಾನು ಹೇಳುತ್ತೇನೆ. ಎಷ್ಟೋ ಜನ ಈ ಸದನದಲ್ಲಿರತಕ್ಕಂಥವರು ಬೇನಾಮಿ ಲೈಸೆನ್ಸ್‌ಗಳನ್ನು ತೆಗೆದುಕೊಂಡಿದ್ದಾರೆ. ನಾನು ಇಲ್ಲಿ ಯಾರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರುಗಳ ಬಗ್ಗೆ ನೀವೆ ತನಿಖೆ ಮಾಡಿ, ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ರೀತಿ ಜನಗಳ ಹಿತವನ್ನು ಕಾಪಾಡಲು ಬಂದಿರುವವರೇ ಬೇನಾಮಿ ಲೈಸೆನ್ಸ್‌ಗಳನ್ನು ತೆಗೆದುಕೊಂಡು ಅವ್ಯವಹಾರವನ್ನು ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಸಚಿವರು ಈ ಸದನದ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ಮಂಡಿಸಿರತಕ್ಕಂಥಾ ಬೇಡಿಕೆಗಳು ಏನು ಇವೆ ಅವುಗಳ ಮೇಲೆ ಮಾತನಾಡುವುದಕ್ಕೆ ಮೊದಲು ಹಿಂದೆ ಮಾಡಿರತಕ್ಕಂಥ ಕಾರ್ಯಾಚರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ಬೇಡಿಕೆಗಳನ್ನು ವಿರೋಧ ಮಾಡುತ್ತೇನೆ. ಮೊದಲು ಇವರ ಆರೋಗ್ಯ ಖಾತೆಯನ್ನು ನೋಡೋಣ. ಆರೋಗ್ಯವಂತ ಜನಾಂಗ ಯಾವ ರೀತಿ ರಾಷ್ಟ್ರದ ಬಹು ಸಂಪನ್ಮೂಲಗಳ ಕಡೆಗೆ ಏನು ಗಮನ ಕೊಡಬೇಕೋ ಆ ಬಗ್ಗೆ ನಮ್ಮ ರಾಷ್ಟ್ರದ ದೃಷ್ಟಿಯನ್ನಿಟ್ಟುಕೊಂಡು ನಾವು ಯೋಚನೆ ಮಾಡುವುದಾದರೆ ಸರ್ಕಾರದವರು ಈ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಗ್ರಾಮಾಂತರ ಪ್ರದೇಶದ, ಹಳ್ಳಿಗಾಡಿನ

ರೈತರಿಗೆ ಇದರಿಂದ ಏನೂ ಪ್ರಯೋಜನ ಸಿಕ್ಕುತ್ತಾ ಇಲ್ಲ. ಅವರನ್ನು ಕೃಷ್ಣ ಪರಮಾತ್ಮನೇ ಕಾಪಾಡಬೇಕು. ಏತಕ್ಕೆಂದರೆ ಈ ಆರೋಗ್ಯ ಇಲಾಖೆ ಧಾರುಣ ಇಲಾಖೆಯಾಗಿದೆ ಎಲ್ಲಾ ಸದಸ್ಯರೂ ಇದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳೂ ಕೂಡ ನಮ್ಮ ಇಲಾಖೆಗೆ ಒಂದು ಚುಚ್ಚು ಮದ್ದು ಕೊಡಬೇಕೆಂದು ಒಂದು ಸಲ ಹೇಳಿದ್ದಾರೆ. ಹಾಗೆ ಅವರು ಹೇಳಿದ ಮೇಲೂ ಕೂಡ ಏಕೋ ಏನೋ ಅವರು ನಿದ್ರೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಒಂದು ಹೇಳಿಕೆ ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರಬಯಸುತ್ತೇನೆ. ಅವರು ೧೧-೭-೧೯೮೬ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಹೆಡ್ಡಿಂಗ್‌ನಲ್ಲಿ "ಆರೋಗ್ಯ ಇಲಾಖೆಗೆ ಚುಚ್ಚುಮದ್ದು ಆಗಸ್ಟ್‌ನಲ್ಲಿ ಸಮಾಲೋಚನೆ ಸಭೆ" ಎಂದು ಇದೆ. ಇದರಲ್ಲಿ ಅವರು ಈ ಒಂದು ಮಾತು ಹೇಳಿದರು. ಏನೆಂದರೆ, ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಿಗೆ ವೈದ್ಯರು ಹೋಗುತ್ತಿಲ್ಲ. ಇದಕ್ಕೆಲ್ಲಾ ಚಿಕಿತ್ಸೆ ನೀಡಬೇಕಾಗಿದೆ. ಈ ಬಗ್ಗೆ ಚಿಂತನೆ ಮಾಡಿ ನಿರ್ಧಾರ ಕೈಗೊಳ್ಳಲು ಶಾಸಕರ, ಅಧಿಕಾರಿಗಳ ಹಾಗೂ ಇನ್ನಿತರ ಮುಖಂಡರುಗಳ ಸಭೆಯನ್ನು ಕರೆಯಲಾಗುವುದು ಎಂದು ಹೇಳಿದ ಮಂತ್ರಿಗಳು ಈಗ ನೋಡಿದರೆ ಅವರು ಗಾಢಾಂಧಕಾರ ನಿದ್ದೆಯಲ್ಲಿ ಮುಳುಗಿದ್ದಾರೆ, ಅವರು ಈ ಆರೋಗ್ಯ ಖಾತೆಗಿಂತ ಈ ಅಬ್ಕಾರಿ ಖಾತೆಯ ಮೋಹದ ಮೇಲೆ ಮಾಲಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದೇ ಸಂದರ್ಭದಲ್ಲಿ ಇನ್ನೊಂದು ಹೇಳಿಕೆ ೧೩-೧೧-೧೯೮೬ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಬಂದಿದೆ. ಇದಕ್ಕೆ "೧೭ ಅಕ್ರಮ ವೈದ್ಯ ಕಾಲೇಜುಗಳು" ಅನ್ನುವ ಹೆಡ್ಡಿಂಗ್ ಕೊಡಲಾಗಿದೆ. ಈ ೧೭ ವೈದ್ಯ ಕಾಲೇಜುಗಳ ಪೈಕಿ ಕರ್ನಾಟಕದಲ್ಲಿ ೪ ಕಾಲೇಜುಗಳು ಅಕ್ರಮ ವೈದ್ಯ ಕಾಲೇಜುಗಳು ಇವೆ ಎಂದು ಅದರಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ನಿಗಾ ವಹಿಸುತ್ತಿದ್ದಾರೆಯೋ ಎನ್ನುವುದನ್ನು ತಿಳಿಯಬಯಸುತ್ತೇನೆ. ಇನ್ನೊಂದು ಹೇಳಿಕೆ ೨೧-೧೦-೧೯೮೬ರ ಕನ್ನಡ ಪ್ರಭಾ ದಿನ ಪತ್ರಿಕೆಯಲ್ಲಿ "ವೈದ್ಯರ ಗ್ರಾಮ ಸೇವೆ ಕಡ್ಡಾಯ ಶೀಘ್ರ ಶಾಸನ" ಎಂದು ಹೆಡ್ಡಿಂಗ್‌ನಲ್ಲಿ ಕೊಟ್ಟಿದ್ದಾರೆ. ಅವರು ಹೀಗೆ ಹೇಳಿದ್ದರೂ ಸಹ ಇದುವರೆಗೂ ಸಾರ್ವಜನಿಕರ ಆರೋಗ್ಯದ ಬಗ್ಗೆ ಯಾವ ರೀತಿಯಾಗಿ ಶಾಸನವನ್ನು ತರುತ್ತೇವೆ ಅನ್ನುವುದನ್ನು ಈ ಸಭೆಯ ಮುಂದೆ ಇಡಲಿಕ್ಕೆ ಇನ್ನೂ ಆಗಿಲ್ಲ. ಈ ಬಗ್ಗೆ ಶಾಸಕರ ಜೊತೆಯಲ್ಲಿ ಸಂಸತ್ ಸದಸ್ಯರ ಜೊತೆಯಲ್ಲಿ, ಅಧಿಕಾರಿಗಳ ಜೊತೆಯಲ್ಲಿ, ಸಾರ್ವಜನಿಕರ ಮುಖಂಡರ ಜೊತೆಯಲ್ಲಿ ಹಾಗೂ ಹಿರಿಯರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆಂದು ಹೇಳಿದವರು ಇದುವರೆಗೂ ಮಾಡಿಲ್ಲ. ಒಂದು ವಿಚಾರ ಹೇಳುತ್ತೇನೆ. ಈ ಆರೋಗ್ಯ ಖಾತೆಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿರುವಾಗ, ಇದನ್ನು ಸರಿಮಾಡಬೇಕು ಅನ್ನುವ ಮನಸ್ಸು ಅವರಿಗೆ ಏನಾದರೂ ಇದ್ದರೆ, ಅವರಿಗೆ ಇದರ ಜೊತೆಗೆ ಇರತಕ್ಕಂಥಾ ಅಬ್ಕಾರಿ ಖಾತೆಯನ್ನು ಬಿಡಬೇಕು. ಇಲ್ಲವೇ, ಅವರಿಗೆ ಅಬ್ಕಾರಿ ಖಾತೆ ಬೇಕು ಅನ್ನುವುದಾದರೆ ಆರೋಗ್ಯ ಖಾತೆಯನ್ನು ಬಿಡಬೇಕು, ಇವರು ಯಾವುದಾದರೂ ಒಂದು ಖಾತೆಯನ್ನು ಬಿಡಬೇಕು. ಈಗ ಇವರು ಅಬ್ಕಾರಿ ಮತ್ತು ಆರೋಗ್ಯ ಈ ಎರಡೂ ಖಾತೆಗಳನ್ನು ಹೊಂದಿರುವುದರಿಂದ, ಇವರು ಆರೋಗ್ಯ ಖಾತೆ ಕಡೆ ಲಕ್ಷ್ಯ ಕೊಡುತ್ತಿಲ್ಲ ಆದರೆ, ಅಬ್ಕಾರಿ ಕಡೆ ಹೆಚ್ಚು ಮೋಹ ಉಂಟಾಗಿದೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳ ಸ್ಥಿತಿಯನ್ನು ನೋಡಿದರೆ ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ, ಔಷಧಿಗಳು ಇಲ್ಲ. ಹೀಗಾಗಿರುವುದರಿಂದ ಅಲ್ಲಿ ಯಾವ ಚಿಕಿತ್ಸೆಯೂ ರೋಗಿಗಳಿಗೆ ಸಿಗುತ್ತಿಲ್ಲ. ಹೀಗಿದ್ದರೂ ಕೂಡ ಮಾನ್ಯ ಆರೋಗ್ಯ ಸಚಿವರು ಆ ಬಗ್ಗೆ ಸರಿಯಾಗಿ ನಿಗಾ ವಹಿಸುತ್ತಿಲ್ಲ. ಅಲ್ಲದೆ ಇಲಾಖೆಯ ಅಧಿಕಾರಿಗಳ ಹತ್ತಿರ ಹೋದರೆ ಅವರುಗಳಿಗೆ ಮಾತನಾಡುವಂಥಾ ಒಂದು ಸೌಜನ್ಯವೂ ಇಲ್ಲ. ಅಲ್ಲಿಗೆ ಈ ಇಲಾಖೆಯ ಅಭಿಮಾನ ಎಷ್ಟರಮಟ್ಟಿಗೆ ಇದೆ ಎನ್ನುವುದು ಗೊತ್ತಾಗುತ್ತದೆ. ನಮಗೇ ಹೀಗಾದರೂ ಇನ್ನು ಸಾರ್ವಜನಿಕರಲ್ಲಿ ಇವರು ಹೇಗೆ ನಡೆದುಕೊಳ್ಳುತ್ತಾರೆ ಅನ್ನುವುದನ್ನು ನಾವು ಯೋಚನೆ ಮಾಡಿದರೆ ಇವರು ರಾಜೀನಾಮೆ ಕೊಡುವುದು ಒಳ್ಳೆಯದು. ಈ ಇಲಾಖೆ ಏತಕ್ಕೆ ಇರಬೇಕು ? ಈ ಇಲಾಖೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಾಗ ಸಾರ್ವಜನಿಕರ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳದೇ ಹೋದ ಮೇಲೆ, ಈ ಮಂತ್ರಿಮಂಡಲ ಏತಕ್ಕೆ ಇರಬೇಕು ? ಈ ಇಲಾಖೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದಕ್ಕೆ ಈ ಸಭೆಯ ಅನುಮತಿ ತೆಗೆದುಕೊಂಡರೂ ಕೂಡ ಗ್ರಾಮೀಣ ಪ್ರದೇಶದಲ್ಲಿರುವ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವುದಕ್ಕೆ, ಸಾರ್ವಜನಿಕರ ಆರೋಗ್ಯಕ್ಕೆ ಒಂದು ಶಕ್ತಿ ಕೊಡುವುದಕ್ಕೆ ಇವರಿಗೆ ಯೋಗ್ಯತೆ ಇಲ್ಲ ಎಂದರೆ ಇವರು ಏತಕ್ಕೆ ರಾಜೀನಾಮೆ ಕೊಡಬಾರದು ? ಈ ಇಲಾಖೆಯನ್ನು ಏತಕ್ಕೆ ವಜಾ ಮಾಡಬಾರದು ಎಂದು ನಾನು ಕೇಳುತ್ತೇನೆ.

ಏಕೆಂದರೆ, ಹೊಸನಗರ ತಾಲ್ಲೂಕ್‌ನಲ್ಲಿ ೮ ಆಸ್ಪತ್ರೆಗಳ ಪೈಕಿ ೭ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ. ಅದೇರೀತಿ ತೀರ್ಥಹಳ್ಳಿಯಲ್ಲಿ ಮೂರು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ. ಇದರ ಜೊತೆಗೆ ಆಸ್ಪತ್ರೆಗಳಲ್ಲಿ ಮಾತ್ರೆಗಳು, ಇಂಜಕ್ಷನ್ ಮತ್ತು ಇತರೇ ಯಾವ ಔಷಧಗಳೂ ಸಹ ಇರುವುದಿಲ್ಲ. ಇದೇ ಕಾರಣದಿಂದ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ಈ ದಿನ ದೂರ್ವಾಸ ಮುನಿಗಳಾಗಿದ್ದೀರಿ. ನನಗೆ ಮಾತನಾಡಲು ಹೆಚ್ಚು ಸಮಯ ಇಲ್ಲದ ಕಾರಣ ಅಬಕಾರಿ ಇಲಾಖೆ ಬಗ್ಗೆ ಎರಡು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ನಮ್ಮ ಮಾನವ ಕುಲದ ಇತಿಹಾಸದಲ್ಲಿ ಈ ಮದ್ಯ ಮತ್ತು ಮಾನವನ ಸಖ್ಯ ಅಥವಾ ಸಂಬಂಧ ಯಾವಾಗಿನಿಂದ ಪ್ರಾರಂಭವಾಯಿತು ಎಂದು ನಿಖರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲಸದ ಒತ್ತಡ ಸಾಮಾಜಿಕ ಒತ್ತಡ ಇವುಗಳ ದೆಸೆಯಿಂದ ಮನುಷ್ಯ ಮತ್ತು ಮದ್ಯದ ನಡುವೆ ಒಂದು ರೀತಿಯ ಸಾಂಗತ್ಯ, ಸಾಮೀಪ್ಯ ಹಾಗೂ ಸ್ನೇಹ ಬೆಳೆದು ಬಂತು. ನಮ್ಮ ಭಾರತ ಸಂವಿಧಾನದಲ್ಲಿ ಪಾನ ನಿರೋಧವನ್ನು ಒಪ್ಪಿಕೊಂಡಿದ್ದರೂ ಸಹ ನಮ್ಮ ರಾಜ್ಯದಲ್ಲಿ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಪಾನನಿರೋಧವನ್ನು ಸಡಿಲಗೊಳಿಸಲಾಯಿತು. ೧೯೬೭ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಈ ಅಬಕಾರಿ ಇಲಾಖೆಯು ಚಿಗುರು ಒಡೆಯಿತು. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಪಾಯಿಂಟ್‌ಗಳನ್ನು ಮಾತ್ರ ಈಗ ಹೇಳುತ್ತೇನೆ. ಗಾಂಧೀಜಿ ಅವರು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಿ ಹೇಳಿದ್ದರು, ಅವರ ಜೊತೆಗೆ ಈ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಮತ್ತು ಈ ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸಿದವರೆಲ್ಲರೂ ಸಹ ಪಾನನಿರೋಧವನ್ನು ಜಾರಿಗೆ ತರಲೇಬೇಕೆಂದು ಕಟುವಾಗಿ ಹೇಳಿದರು. ಆದರೆ ಇವೊತ್ತು ನಮ್ಮ ರಾಜ್ಯದಲ್ಲಿ ಈ ಅಬಕಾರಿ ಇಲಾಖೆ ಹೆಚ್ಚು ಲಾಭವನ್ನು ತರುವಂಥ ಇಲಾಖೆಯಾಗಿದೆ. ಈ ಖಾತೆ ಇವೊತ್ತು ಯಾವ ರೀತಿ ಇದೆ ಎಂದರೆ, ನಮ್ಮ ಅಬಕಾರಿ ಸಚಿವರು ಎಲ್ಲಿಗಾದರೂ ಬಂದರೆ, ಜನರು ಮೂಗು ಮುಚ್ಚಿಕೊಳ್ಳುವಂತಹ ಒಂದು ಕೆಟ್ಟ ಪರಿಸ್ಥಿತಿ ಇವೊತ್ತು ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ನಮ್ಮಲ್ಲಿ ಈ ಅಬಕಾರಿ ಇಲಾಖೆ ಎಷ್ಟೊಂದು ಗಾಢವಾಗಿ ಬೆಳೆದು ನಿಂತಿದೆ ಎಂದರೆ, ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣಪ್ಪನವರ ಭಕ್ತರು ನಮ್ಮ ರಾಜ್ಯದಲ್ಲಿ ೪೫ ರಿಂದ ೫೦ ಲಕ್ಷದಷ್ಟು ಇದ್ದಾರೆ. ಇಷ್ಟು ಜನರು ಕುಡಿಯಲು ಒಂದು ವರ್ಷಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ. ಸಾರಾಯಿ ಅನ್ನು ಲೀಟರ್ ಒಂದಕ್ಕೆ ೨೪ ರೂಪಾಯಿಗಳಿಂದ ಹಿಡಿದು ೩೦ ರೂಪಾಯಿಗಳವರೆಗೆ ಮಾರಾಟ ಮಾಡಬಹುದೆಂದು ದರ ನಿಗದಿ ಮಾಡಿದ್ದರೂ ಸಹ ಗುತ್ತಿಗೆದಾರರು ಲೀಟರ್‌ಗೆ ೩೬ ರೂಪಾಯಿಗಳ ಪ್ರಕಾರ ಮಾರಾಟ ಮಾಡಿದರು. ಈ ರೀತಿ ಹೆಚ್ಚಿನ ದರದಿಂದ ಮಾರಾಟ ಮಾಡುವುದರ ಮೂಲಕ ಒಂದು ದಿನಕ್ಕೆ ೫೦ ಲಕ್ಷ ರೂಪಾಯಿಗಳಂತೆ ಲಾಭ ಮಾಡಿಕೊಂಡಿದ್ದಾರೆ. ಈ ರೀತಿಯಿಂದ ಸರ್ಕಾರ ಮತ್ತು ಗುತ್ತಿಗೆದಾರರು ಸಾರಾಯಿ ಕುಡಿಯುವವರಿಗೆ ಶೋಷಣೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸಾರಾಯಿ ಮಾರಾಟದ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಪ್ರಮುಖ ಸುದ್ದಿಗಳೆಂದರೆ, "ಸಾರಾಯಿ ದರ, ಅಳತೆ ಎರಡರಲ್ಲೂ ಮೋಸ" 'ದುಬಾರಿ ದರದಲ್ಲಿ ಮಾರಾಟ', ಸಾರಾಯಿ ನಿಗದಿಗಿಂತ ಅಧಿಕ ಬೆಲೆಗೆ ಮಾರಾಟ, ಎಂಬತಕ್ಕಂಥ ಆರೋಪಗಳ ಜೊತೆಗೆ ಈ ಅಬಕಾರಿ ಇಲಾಖೆಯ ವೈಫಲ್ಯಗಳ ಬಗ್ಗೆ ಸರ್ಕಾರ ಗಮನಹರಿಸುವಂತೆ ಮಾಡಲು ಸಾರ್ಕ್ ಸಮಾವೇಶಕ್ಕೆ ಆಗಮಿಸಿದ್ದ ಪ್ರಧಾನಿ ರಾಜೀವ್‌ಗಾಂಧಿ ಹಾಗೂ ವಿದೇಶಿ ಗಣ್ಯರ ಮುಂದೆ ಬ್ಯಾನರ್‌ಗಳೊಂದಿಗೆ ಪಾನಪ್ರಿಯರು ಕುಡಿದು ಬಂದು ಪ್ರದರ್ಶನ ಮಾಡಿದರೂ ಸಹ ಮಾನ್ಯ ಮಂತ್ರಿಗಳು ಕುಂಭಕರ್ಣ ನಿದ್ದೆಯಲ್ಲಿಯೇ ಇದ್ದರು. ಈ ಅಬಕಾರಿ ಇಲಾಖೆ ಸಹ ಎಚ್ಚರಗೊಳ್ಳಲಿಲ್ಲ. ಕೊನೆಗೆ ಈ ಇಲಾಖೆಯ ಕಮೀಷನರ್ ಮಹಾಶಯರು ಗುತ್ತಿಗೆದಾರರಿಗೆ ಒಂದು ಎಚ್ಚರಿಕೆ ಕೊಟ್ಟರು. ಏನೆಂದರೆ, ಗಂಡ ಹೆಂಡತಿಗೆ ಬೈದಂತೆ, ಇನ್ನು ಮುಂದೆ ಗುತ್ತಿಗೆದಾರರು ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದು ಎಂದು. ಈ ಎಚ್ಚರಿಕೆ ಮಾರನೇ ದಿವಸಕ್ಕೇ ಮುಕ್ತಾಯವಾಯಿತು. ಈ ಹೆಚ್ಚುವರಿ ದರದಲ್ಲಿ ಮಾರಾಟ ಮಾಡುವುದರ ಮೂಲಕ ಗುತ್ತಿಗೆದಾರರು ೭ ಕೋಟಿ ರೂಪಾಯಿಗಳಷ್ಟು ಲಾಭ ಮಾಡಿಕೊಂಡರು. ಇದರ ಜೊತೆಗೆ ಮೊನ್ನೆ ಮಂಡನೆ ಮಾಡಿದಂಥ ಬಡ್ಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಗುತ್ತಿಗೆದಾರರಿಗೆ ಮತ್ತೊಂದು ಉಡುಗೊರೆಯನ್ನು ಹೊಸವರ್ಷಕ್ಕಾಗಿಕೊಟ್ಟರು ಅದೇನೆಂದರೆ, ಈ ಸಾರಾಯಿಯನ್ನು ಮಾರಾಟ ಮಾಡಲು ಏನು ಒಂದು ಪರಮಾವಧಿ ಬೆಲೆಯನ್ನು ಗೊತ್ತು ಮಾಡಲಾಗಿತ್ತು, ಅದನ್ನು ರದ್ದು ಮಾಡಿ ಎಷ್ಟು ಬೆಲೆಗೆ ಬೇಕಾದರೂ ಮಾರಾಟ ಮಾಡಬಹುದೆಂದು ತಿಳಿಸಿದ್ದಾರೆ. ಇದರಿಂದ ಈ ಗುತ್ತಿಗೆದಾರರು ಜಾಸ್ತಿ ಬೆಲೆಗೆ ಮಾರಾಟ ಮಾಡಿದರೂ

ಸಹ ಕಡಿಮೆ ಬೆಲೆಗೆ ಮಾರಾಟ ಮಾಡಿದೆ ಎಂದು ಆದಾಯ ತೆರಿಗೆ ಅಧಿಕಾರಿಗಳಿಗೆ ಹೇಳಿ, ತಾವು ಕೊಡಬೇಕಾದ ಆದಾಯ ತೆರಿಗೆಯನ್ನು ಕೊಡದೆ ಈ ಇಲಾಖೆಗೆ ವಂಚನೆ ಮಾಡಬಹುದು. ಅದಕ್ಕೂ ಕೂಡ ಇವರು ಅವಕಾಶ ಮಾಡಿಕೊಟ್ಟರು. ಅಧ್ಯಕ್ಷರೇ, ಇದು ೫೦ ಲಕ್ಷ ಜನರ, ಅಂದರೆ ಅರ್ಧ ಕೋಟಿ ಕಡು ಬಡವರ ಪ್ರಶ್ನೆಯಾಗಿದೆ. ಏಕೆಂದರೆ ಗೊಬ್ಬರದ ಮೇಲೆ ತೆರಿಗೆ ಹಾಕಿದ್ದೀರಿ. ೨೫ ಪೈಸೆ ಇರತಕ್ಕಂಥ ಬೆಂಕಿಪೊಟ್ಟಣದ ಮೇಲೆ ಸೆಂಟ್ರಲ್ ಎಕ್ಸೈಜ್ ಚೀಟಿ ಪ್ರಿಂಟ್ ಮಾಡುತ್ತಾರೆ. ಮಾನ್ಯ ಕೃಷ್ಣಪ್ಪನವರೇ, ಯಾವ ಮದ್ಯದ, ಬ್ರಾಂದಿ ಶಾಪಿನಲ್ಲೂ ಬಿಲ್ ಕೊಡುವುದಿಲ್ಲ. ಎಷ್ಟು ಬೇಕಾದರೂ ಮಾರಬಹುದು. ಸೆಕೆಂಡ್ಸ್ ಮಾರಬಹುದು ಆದಾಯ ತೆರಿಗೆಯನ್ನು ತಪ್ಪಿಸಿ ಮಾರತಕ್ಕಂಥ ವ್ಯವಹಾರ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ಇದರಿಂದ ಒಂದು ಕೋಟಿ ರೂಪಾಯಿ ಆದಾಯವು ಸರ್ಕಾರಕ್ಕೆ ತಪ್ಪಿಹೋಗುತ್ತಿದೆ. ಅಧ್ಯಕ್ಷರೇ, ತಾವು ಈಗಾಗಲೇ ಸಮಯದ ಮಿತಿಯನ್ನು ಹಾಕಿದ್ದೀರಿ. ಆದರೆ ಒಂದು ಮಾತನ್ನು ಹೇಳುತ್ತೇನೆ. ಸಾರಾಯಿ ಒಳ್ಳೆಯದಲ್ಲ ನಿಜ. ಆದರೆ ಆ ಸಾರಾಯಿಗೆ ಜೋತುಬಿದ್ದ ಜನರೆಲ್ಲರೂ ಕಡು ಬಡವರು. ಇದನ್ನು ನಾವು ಜನತಾಂತ್ರಿಕ ವ್ಯವಸ್ಥೆಯಲ್ಲಿ ಗುರುತಿಸಲೇಬೇಕು. ಆ ಕೆಲಸವನ್ನು ನಾವು ಮಾಡಬೇಕು. ಮಾನ್ಯ ಸಚಿವರಲ್ಲಿ ನನ್ನ ಕಳಕಳಿಯ ಮನವಿ ಇಷ್ಟೆ. ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ೫೦ ಲಕ್ಷ ಜನ ನಿಮ್ಮ ಭಕ್ತರನ್ನು ನೆನಪಿನಲ್ಲಿಟ್ಟುಕೊಂಡು ಅಬ್ಕಾರಿ, ಇಲಾಖೆ ಒಳ್ಳೆಯ ಸಾರಾಯಿ ಸಿಗುವುದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಗುತ್ತಿಗೆದಾರರನ್ನು ಹಾಗೂ ಬಂಡವಾಳಶಾಹಿಗಳನ್ನು ಸ್ವಲ್ಪ ದೂರ ಇಟ್ಟು ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ಕೃಷ್ಣಪರಮಾತ್ಮನ ಮೇಲೆ ಗೌರವ ಮತ್ತು ಆಧ್ಯಾತ್ಮಿಕ ಭಾವನೆ ಬರುವಹಾಗೆ ಮಾಡಬೇಕು, ಅದು ಬಡವರಿಗೆ ಕೊಡತಕ್ಕ ಆಶೀರ್ವಾದ ಎಂದು ಭಾವಿಸಿದ್ದೇನೆ. ಕಂಟ್ರಾಕ್ಟರ್. ಕೇಳಿದ್ದಕ್ಕೆ ತಥಾಸು ಎನ್ನುವುದು ಇದೆ. ಇದು ನಿಲ್ಲಬೇಕು ಒಟ್ಟಿನಲ್ಲಿ ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವು ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆರೋಗ್ಯ ಖಾತೆ ಬಗ್ಗೆ ಹೇಳುವುದಾದರೆ, ಆರೋಗ್ಯ ಖಾತೆಯಲ್ಲಿ ನೀವು ತಪ್ಪುಗಳನ್ನು ಮಾಡುತ್ತೀರಿ. ಸಂತಾನಹರಣ ಚಿಕಿತ್ಸೆ ಮಾಡತಕ್ಕಂಥ ಸಮಯದಲ್ಲಿ ತರಬೇತಿ ಇಲ್ಲದ ವೈದ್ಯರು ಹಳ್ಳಿಗಳಿಗೆ ಬಂದು ಆಪರೇಷನ್ ಮಾಡುತ್ತಾರೆ. ಈ ಬಗ್ಗೆ ಒಂದು ಕೋಟಿ ರೂಪಾಯಿ ಬಹುಮಾನ ಬಂತು ಎಂದು ಹೇಳಿದರು. ಅದು ಹೇಗೆ ಬಂತು, ಅದರ ಹಿನ್ನೆಲೆ ಏನು, ಅದರ ಕತೆ ಏನು. ಎಂಬುದನ್ನು ತಿಳಿದುಕೊಳ್ಳಬೇಕು ಆಪರೇಷನ್ ಮಾಡಿರತಕ್ಕ ಹೆಣ್ಣುಮಕ್ಕಳಿಗೆ ಮಾತ್ರೆಗಳನ್ನು ಕೊಡುವುದಿಲ್ಲ, ಸರಿಯಾಗಿ ತಿಳುವಳಿಕೆ ಕೊಡುವುದಿಲ್ಲ. ೨-೩ ಸಾವಿರ ರೂಪಾಯಿ ಸರ್ಕಾರಿ ಸಂಬಳ ತಿನ್ನುವ ವೈದ್ಯರು ಆ ಹೆಣ್ಣು ಮಕ್ಕಳನ್ನು ತಿರುಗಿ ನೋಡತಕ್ಕ ಕೆಲಸ ಮಾಡುವುದಿಲ್ಲ. ಆಮೇಲೆ ವೈದ್ಯಕೀಯ ಕೋರ್ಸಿಗೆ ಗವರ್ನಮೆಂಟ್ ಕೋಟಾ ಸಿಕ್ಕಲಿಲ್ಲ ಅಂದರೆ ಖಾಸಗಿ ಕಾಲೇಜುಗಳಿಗೆ ಹೋಗಬೇಕು. ಅಲ್ಲಿ ಸರ್ಕಾರದ ಕೋಟಾ ಕೊಡಿ ಅಂದರೆ ಎಕ್ಸೆಸ್ ಸೇರಿಸಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ. ಆಮೇಲೆ ಹೋಮಿಯೋಪತಿ ಕಾಲೇಜನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದಿರಿ. ಅದನ್ನು ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ. ಗ್ರಾಮಾಂತರ ಪ್ರದೇಶದ ಜನಗಳಿಗೆ ಯಾರು ಆಪರೇಷನ್ ಮಾಡಿಸಿಕೊಳ್ಳುತ್ತಾರೆ ಅವರಿಗೆ ಮನೆ ಕೊಡುತ್ತೇವೆ, ಲೋನ್ ಕೊಡುತ್ತೇವೆ, ಬಗರ್ ಹುಕುಂ ಭೂಮಿಯನ್ನು ಸ್ಯಾಂಕ್ಷನ್ ಮಾಡಿಸುತ್ತೇವೆ ಎಂದು ನಿಮ್ಮ ಕಾರ್ಯಕರ್ತರು ಹೇಳುತ್ತಾ ಇದ್ದಾರೆ. ನೀವು ಮತ್ತು ಗ್ರಾಮಾಭಿವೃದ್ಧಿ ಸಚಿವರು ಇಬ್ಬರೂ ಪರಸ್ಪರ ಒಪ್ಪಿಕೊಂಡು ತಿಳುವಳಿಕೆ ಮಾಡಿಕೊಂಡು ಈ ಕೆಲಸ ಕೈಗೊಂಡಿದ್ದೀರಾ ? ಅಥವಾ ಸುಮ್ಮನೆ ಸರ್ಕಾರಿ ನೌಕರರು ಟಾರ್ಗೆಟ್ ಮುಟ್ಟಲು ಈ ರೀತಿ ಕೆಲಸ ಮಾಡುತ್ತಿದ್ದಾರೋ ಎನ್ನುವುದರ ಬಗ್ಗೆ ಸ್ಪಷ್ಟವಾಗಿರತಕ್ಕಂಥ ಚಿತ್ರಣವನ್ನು, ಅಭಿಪ್ರಾಯವನ್ನು ತಾವು ಅಭಿವ್ಯಕ್ತ ಮಾಡುತ್ತೀರಿ ಎಂದು ಭಾವಿಸಿಕೊಂಡಿದ್ದೇನೆ. ಇಷ್ಟು ಹೇಳುವುದಕ್ಕೆ ತಾವು ಸಮಯವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಇಲಾಖೆ ಬೇಡಿಕೆ ಮೇಲಿನ ಚರ್ಚೆಯಲ್ಲಿ ಮಾತನಾಡುವಾಗ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸ್ವಾಮಿರಾವ್‌ರವರು ಮಾತನಾಡುತ್ತಾ ಇಡೀ ಕರ್ನಾಟಕದಲ್ಲಿ ಬಹುಶಃ

ಬೋರಿಂಗ್ ಆಸ್ಪತ್ರೆ ಒಳ್ಳೆಯ ಆಸ್ಪತ್ರೆ ಎಂದು ಹೇಳಿದರು. ಬಹುಶಃ ಏನಾಗಿದೆಯೆಂದರೆ, ಸಾರ್ಕ್ ಕಾನ್‌ಫರೆನ್ಸ್ ನಡೆದಾಗ ಕೆಲವು ಒಳ್ಳೆಯ ವಾರ್ಡ್‌ಗಳನ್ನು ಮಾಡಿ ವಿದೇಶೀಯರಿಗೆ, ವಿ.ಐ.ಪೀಸ್‌ಗೆ ಬಿಟ್ಟುಕೊಟ್ಟಿದ್ದರು. ಮಾನ್ಯ ಸ್ವಾಮಿರಾವ್‌ರವರು ವಿ.ಐ.ಪಿ. ವಾರ್ಡ್‌ಗಳನ್ನು ನೋಡಿಕೊಂಡು ಬಂದು ಬೋರಿಂಗ್ ಆಸ್ಪತ್ರೆ ಒಳ್ಳೆಯ ಆಸ್ಪತ್ರೆಯಾಗಿದೆ ಎಂದು ಹೇಳಿದ್ದಾರೆ.

(ಮಾನ್ಯ ವೈ. ಕೆ. ರಾಮಯ್ಯನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

Sir, Bowring Hospital is the second major biggest Hospital in Bangalore City. If this is the fate of this Hospital. we cannot think of the hospitals located in rural areas. Here it is mentioned in the Annual Report of the Department that the Pharmacy Block has been completed but actually it has not been completed. The work has been stopped for the last 3 months. The Bowring Hospital is attached for clinical facilities to Bangalore Medical College and Ambedkar Medical College as is reported in the annual report. In fact, the hospital has been attached for clinical facilities to 3 colleges i.e., 1) Bangalore Medical College, 2) Kempegowda Medical College and 3) Ambedkar Medical College. For check-up of a patient, there will be nearly 20-30 doctors around a patient. This is the metal torture and agony the patients have been subjected to undergo. As per the norms of the Indian Medical Council, the Hospital should be attached to only one College for the purpose of clinical facilities in the interest of administrative control, discipline and efficiency. Recently when there was a firing incident, the staff of the Hospital toiled day and night to treat the injured. The staff of this Hospital should really be complimented for this. Even though it is a major Hospital, there is no Blood Bank and there are no life saving drugs. The patients are asked to bring blood from the private Blood Banks. What these officers of the Department of Medical Education are doing? They have not taken any steps in this behalf inspite of my personal discussion and request to them. I have also raised this issue on the floor of the House in the past. There are number of vacancies in the Department of Anaesthesia, E.N.T. and X-Ray. These vacancies have not been filled up since 8 months. The patients from Frazer Town, Jayamahal Extension, Bharathinagar, Yelahanka etc. are coming to this Hospital. This is such a major hospital but surprisingly there is no facility for treatment of burn and there is no plastic surgery ward. The patients are given only First Aid and then shifted to Victoria Hospital. There is no Psychiatry and Neurology ward. I have raised this matter during the last Session and after that Neurology Doctor has been appointed but equipments have not been provided. I have personally requested the Director for Medical Education and the Hon. Minister for *Health, but* so far nothing has been done. Being an M.L.A., we cannot do such a small work. We feel really shame about it. Another thing Sir, about the

water charges of this Hospital. The BUWS&SB is charging commercial rates. I would like the Hon. Minister for Health to intervene in this matter and see that water utilised by this Hospilal is not charged at commercial rates.

Another thing Sir, there are number of vacaneies in the Radiology section which have not been filled up. There is a need for creation of Medical Records Department with the staff involving expenditure to the extent of Rs. 2,56,000 per annum to increase the nursing staff from 113 to 178, Augmentation of Ministerial staff, creation of posts of security staff/watchman and creation of the post of trained Receptionist to men admission counters Apart from this the proposals pertaining to expansion scheme i.e., 1) Two Incinerators to burn the wastes in the hospital, 2) Electric Laundry to wash the hospital linen hygienically, 3) Two more Ambulances to meet the demands of the public, 4) One staff car for the use of the Superintendent for official duties 5) increase in the number of direct telephone lines to the Hospital, 6) One more Electric Generator to cover the maternity and other wards etc., are pending consideration before the Government. I would like the Hon. Minister to please accord necessary approval for the same. Further Sir, there are no post-mortem facilities in the said Hospital. There is no cold-storage facility. At present, the dead bodies are taken to Victoria Hospital for post-mortem. I would like the Hon. Minister to provide post-mortem facility to the Bowring Hospital. In Isolation Hospital there is no fan and ventilation faeliities. If the doctor goes there for 15 minutes, he will get headache. Similarly, in Malleswaram Hospital they have constructed a ward. I would like the Hon. Minister to inspect it. That Hospital has been attached to Ramaiah college for clinical facilities. If you are not having funds, you please request them. With these few words, I conclude my speech.

SMT. MUKTHARUNNISA (Narasimharaja).—Sir, while speaking on Demands for Grants pertaining to Health Department, I would like to speak about the National Leprosy Eradication Programme, This programme is cent-per-cent financed by the Central Government. In this programme, 58 Physiotherapists posts have been created. Out of 58 posts created, only 39 posts of Physio therapists have been filled up and still there are 19 posts vacant. I would like the Hon. Minister to please explain as to why they are not filled up and request him to fill up them immediately, otherwise, the grants will lapse. These Physiotherpists are working there for the last 25 years without any service and promotional benefits. I urge the Government to see that these Physiotherapists get the service and promotional benefits due to them.

3-30 p.m.

I have seen some centre near Nanjanagud. I don't know whether it belongs to the Government, Corporation or private. If we go in day time and visit the centre, we can find no inmates there. The patients leave very early in the morning on the wheel-chairs, come to Sayyaji Rao Road and start begging. After begging and collecting something. they go back to the Centre in the evening. I request the Hon'ble Minister to see that they do not come out to such important public localities They should also give up begging. The Government should see that the Loprosy Eradication Programme is implemented in Mysore.

Now I come to the Medical Colleges. During the regime of our Congress Government, permissions were accorded to start new private medical colleges and during the regine of the present Janata Government also, they have permitted new private Medical Colleges attached to the Government hospitals until the New Medical Colleges construct their own hospitals. In the whole of Karnataka. all the private medical colleges are availing these facilities' for practical purposes. The same is the position in Mysore also. But what happened in Mysore last year was due to strike by the Government Medical College, this benefit was withdrawn in respect of J. S. S. Medical College, which comes under my constituency. As you are aware. there are five Government hospitals in Mysore. They are K.R. Hospital. Sanitorium, Cheluvamba Hospital, Children hospital and E.D. Hospital excluding E. S. I. hospital. In J. S. S. Medical College, students are facing great hardship without the benefit of the Government hospital. In the Government hospitals in Mysore, there are 1908 beds against which only 1050 beds are used and there are surplus of 558 beds. From the last months the J. S. S. Medical College students are facing problems and they get the allotment of only small health units and Maternity Homes and the number of patients are not adequat for the purpose of the Medical College students. Until this colleges constructs its own hospital, it will be very difficult for the students. Therefore. I request the Hon'ble Minister to extend the facilities of the Government hospitals in Mysore to the said J.S.S. Medical College.

Sir, the Taluk Development Board hospitals have been handed over to P.W.D. and Health Departments for repairs. But the hospitals have not been repaired. They remain in a very worst condition, in every taluk. If we ask the P.W.D. Department. they say that Health Department has to repair the hospitals. If we ask the Health Department, they say that P.W.D. Department has to repair these hospitals. God only knows who has to repair the hospitals, Please

take up the matter with the concerned and arrange for repairs of these hospitals immediately.

As regarrds maternity cases in rural areas, I learn that a sum of Rs. 300 is being given to the pregnant women at the rate of Rs. 100 per month for three months. There are so many complaints that the pregnant women are not getting the said allowance. Because they are illiterate and innocent, they are paid just Rs. 100 some times and they discharged from the hospitals and in some cases, no amount is paid to them. I request the Hon'ble Minister to instruct the concerned authorities to be very vigilant in this behalf and see that the pregnant women in the rural areas get the allowance in full. Some Supervisers may be posted in the rural areas to watch the disbursement of this allowance scrupulously.

Sir, in rural areas. we see lot of vacant posts of Lady doctors: Lady Doctors are most important for Maternity homes. I would like to give an instance here. Some pregnant women was coming from Hullahalli in Nanjangud to Mysore with severe pain. But before reaching the hospital, she gave birth to child on the way itself. This is because there was no lady doctor in the maternity centre in her place. Therefore, I request the Hon'ble Minister to post lady doctors in the rural areas where there is great demand for lady doctors

Sir, another point is that in rural areas, in the Government Health Units. medicines are not properly distributed. Poor innocent patients are facing problems. I learn that whenever they pay the amount, they will got the medicines. Otherwise, they say that there is no stock. I would request the Hon'ble Minister to depute your Inspectors to make surprise checks in the health centres, with regard to the position of medicines.

Sir, I am pained to say that the condition of our K.R. Hospital, Children Hospital, Sanitorium and E.D. hospital is in a very bad condition. I would like to bring to the notice of the Government that I visited K.R. Hospital. Our K. R. Hospital and Cheluvamba Hospital and beautiful buildings and nobody can construct such beautiful buildings in future, Unfortunately the maintenance of these hospitals is very bad. If we go inside, we can see the leakage of water, without any garden, dirty bed-sheets, pillows, dirty clothes, dust-bin full of dust, The doctors and the Nurses have been provided with low-quality broken chairs, which affects their personalities. The wards have no doors, they look like old-scrap, without any painting. We can find lot of cockroaches, bugs. We should call the hospital as "Bugs Nikethan". I would request the Hon'ble Minister to kindly visit the Hospital. I learnt from the newspapers that the Government had sent some men for repairs, but

it is not sufficient. No repairs have been done. There are no gardens, no doors, no windows, no ventilators, no uniform for patients. There are hardly two or three bed-pans. There is no wash basin, no vomitting tray or no Urine-Can, These are the things which are not available particularly in the children hospital. It is not just an eye-witness, but a real fact.

Another thing is, there are no curtains. When the patients want sunlight in the morning they open the windows and dust comes in. So curtains are also very important in hospitals. Even in big wards. there are only, one or two screens. Screens are most important. If any woman wanted to go to bed-pan, two women have to hold the screen otherwise everybody could see the stomoch and everything. So the minimum facilities like bed-screens should be provided. There is no mosquite net in the whole hospital except in the special ward. The patients shout on nurses. Poor ladies, What can they do ? The doctors are qualified. Incidentally, I met a Gujarati pair who entered the hospital for seeing the doctor. They complained of stomoch pain and fever. I took them to the doctor. The doctor is highly qualified. One is an M.S. and another an M.D. But as soon as they saw the condition of the hospital, they said they did not want medicines and that they would just take lemon and water and they went away. Thus, this bad condition of the hospitals affects our good doctors and good nurses. So I request the Hon. Minister to provide more grants for the Hospital at Mysore and our. Hon. Minister Sri Rachaiah will also be very happy of this is done.

Sir, there are a lot of beedi workers in Mysore and many of them are affected by T.B. The Government of India have been giving assistance and there is a Sanatorium but it is not maintained well. Whether the Government of Karnataka has been helping the T.B. patients ? Isn't that they are living here in Karnataka? They are your people. They are working in your factories. What is the assistance you are providing to the beedi workers? 80% are affcteed by T.B. I request that you should also give assistance to the T.B. patients simultaneously at least in future. It is mentioned that in every taluka, a T. B. Ward is sanctioned or some other Centre is opened and T. B. specialists are deputed in these centres. But I don't know in how many centres you have filled the posts of these T. B. specialists because I heard that in many places there are no T.B. specialists, there are no lady doctors, no ENT specialist, no Dentist and so on. In many places, only one doctor has to attend to all the diseases.

It is mentioned here that BIRD project i.e., the programme of immueisation is implemented in Bidar. What about Mysore, Coorg,

and Shimoga ? The Central Government is giving so much amount. Why you are not implementing it ?

We want that both the BIRD project and the Pilot Project should be implemented in Mysore and also in other places. In Children's hospital. there is a great need of equipments. When I visited Bowring Hospital, I was so happy to see that so many modern equipments have been installed there and our Hon. Rajiv Gandhi has granted so much money. Hon. Member Sri Vedantha Hemmige was also admitted there. The scanning machines and other equipments are very useful Particularly people like Sri Hemmige and all the MLAs who are sitting here in the air-conditioned chamber will get back pain. There is such a big hospital in Mysore, which is famous for tourists. You have to instal such modern equipments in that Hospital i.e., K.R. Hospital, Cheluvamba Hospital and Children's hospital. Apart from that, please open a Toys room in the children's hospital because sick children will be very happy to have toys when they are admitted in the hospital. Another thing is when women give birth to babies in hospitals and before they are discharged, you should compulsorly conduct a class and teach them how to feed the baby, how to handle and so on. With these words, I thank you very much, Sir and conclude.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).--ಮಾನ್ಯ ಅಧ್ಯಕ್ಷರೆ, ಈ ಮದ್ಯಸೇವನೆ ಶತಮಾನ ಶತಮಾನಗಳಿಂದ ಈ ಸಮಾಜದ ಒಂದು ಅಂಗವಾಗಿ ಹೋಗಿಬಿಟ್ಟಿದೆ.

ಛೇರ್ಮನ್.--ದಯಮಾಡಿ ೧೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವೇದಾಂತ ಹೆಮ್ಮಿಗೆ.—ಸಮಾಜದಲ್ಲಿ ಬಡವರೇ ಇರಲಿ, ಬಲ್ಲಿದರೇ ಇರಲಿ ಅವರಿಂದ ಇದನ್ನು ದೂರ ಮಾಡಬೇಕು ಎಂಬ ಪ್ರಯತ್ನ ಈ ದೇಶದಿಂದ ಹಿಡಿದು ಪಾಶ್ಚಾತ್ಯ ದೇಶದವರೆಗೂ ನಡೆದಿದೆ. ಆ ಪ್ರಯತ್ನದಲ್ಲಿ ನಾವೆಲ್ಲರೂ ಕೂಡ ವಿಫಲರಾಗಿದ್ದೇವೆ. ಅಬ್ಕಾರಿ ಮಂತ್ರಿಗಳಿರುವ ಶ್ರೀಮಾನ್ ಕೃಷ್ಣಪ್ಪನವರು ಅವರ ಕ್ಷೇತ್ರವಾದ ನಾಗಮಂಗಲ ತಾಲ್ಲೂಕಿನಲ್ಲಿ ಸೋಮನಹಳ್ಳಿ ಎಂಬ ಊರಿದೆ. ಅಲ್ಲಿ ಕೋತಿ ಮಾರಮ್ಮ ಎಂಬ ದೇವರಿದೆ. ಆ ದೇವರ ಪಕ್ಕದಲ್ಲಿ ಇವತ್ತು ಕೂಡ ಪ್ರತಿ ಮಂಗಳವಾರ, ಶುಕ್ರವಾರ ಮತ್ತು ಭಾನುವಾರ ಪೂರ್ತಿ ಒಂದು ಬಾಟಲ್ ಹೆಂಡವನ್ನು ಇಡುತ್ತಾರೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಲ್ಲಿಗೆ ಕೋಳಿ ಮತ್ತು ಕುರಿಯನ್ನು ತೆಗೆದುಕೊಂಡು ಬರುತ್ತಾರೆ. ಆ ದೇವರ ಮುಂದೆ ಇಟ್ಟಿರ ತಕ್ಕಂತಹ ಹೆಂಡವನ್ನು ಕೋಳಿ ಬಾಯಿಗೆ ಒಂದಿಷ್ಟು ಕುರಿ ಬಾಯಿಗೆ ಒಂದಿಷ್ಟು ಕುಡಿಸಿ ಆಮೇಲೆ ಅವು ಗಳನ್ನು ದೇವರಿಗೆ ಬಲಿ ಕೊಡುತ್ತಾರೆ. ಇದರ ಅರ್ಥ ಏನೆಂದರೆ, ಕೋಳಿ-ಕುರಿಗೆ ಹೆಂಡವನ್ನು ಕುಡಿಸಿ ಬಲಿ ಕೊಟ್ಟ ಮೇಲೆ ಅದು ಆ ಮಾರಮ್ಮನಿಗೆ ಹೆಂಡ ಕುಡಿಸಿದ ಹಾಗೆ ಎಂಬುದು ಆ ಜನರ ಅರ್ಥ. ದೇವರಿಗೂ ಹೆಂಡ ಕಂಡರೆ ಇಷ್ಟ, ಮದ್ಯ ಕಂಡರೆ ಇಷ್ಟ ಎಂಬುದು ಇದರ ಅರ್ಥ. ಮತ್ತೊಂದು ೧೦-೩-೧೯೮೭ ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ ಬಗ್ಗೆ ಹೇಳುವುದಾದರೆ, ಮುಧೋಳ್ ಎಂಬ ಒಂದು ಊರು. ಇತ್ತೀಚೆಗೆ ಅಲ್ಲಿ ೩ ದಿವಸಗಳ ಜಾತ್ರೆಯನ್ನು ಮಾಡಿದರು. ಬೇಕಾದಷ್ಟು ಭಕ್ತರು ಅಲ್ಲಿಗೆ ಬಂದಿದ್ದರು. ಆ ಭಕ್ತರಿಗೆಲ್ಲಾ ಹೆಂಡವನ್ನು ಕುಡಿಸಿದ್ದರು. ಅಲ್ಲಿಯ ಪೂಜಾರಿ ದೇವರಿಗೆ ಪೂಜೆ ಮಾಡುವುದೇ ಮದ್ಯದಲ್ಲಿ, ನೈವೇದ್ಯ ಅಂತ ಕೊಡುವುದೇ ಹೆಂಡ. ಅಲ್ಲಿಗೆ ಹೋಗತಕ್ಕ ಹಸುಗಳಿಗೆಲ್ಲಾ ಹೆಂಡವನ್ನು ಕುಡಿಸಿದ್ದಾರೆ, ಇದು ಪತ್ರಿಕೆಯಲ್ಲಿ ಬಂದಿದೆ. ಇದಕ್ಕೆ ಕಾರಣವೇನೆಂದರೆ, ಅಲ್ಲಿ ಒಬ್ಬ ಶರಣರು ಇದ್ದರಂತೆ. ಆ ಶರಣರು ಯಾವಾಗಲೂ ಮದ್ಯಪಾನ ಮಾಡುತ್ತಿದ್ದರಂತೆ.

ಅವರು ಮದ್ಯಪಾನವನ್ನು ಮಾಡಿದಂತಹ ಸಂದರ್ಭದಲ್ಲಿ ಒಳ್ಳೊಳ್ಳೆ ಕವನಗಳನ್ನು ಹಾಡುತ್ತಿದ್ದರಂತೆ. ಅದೂ ಕೂಡ ಪತ್ರಿಕೆಯಲ್ಲಿ ಬಂದಿದೆ. ಅವರೊಬ್ಬ ಜನಪದ ಶಿವ ಶರಣರು. ಅವರು ಆ ಸಮಯದಲ್ಲಿ ಹೇಳಿರುವಂತಹದ್ದೆಲ್ಲಾ ಸತ್ಯವಾಗಿದೆಯಂತೆ. ಅದೂ ಕೂಡ ಪತ್ರಿಕೆಯಲ್ಲಿ ಬಂದಿದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮದ್ಯ-ಹೆಂಡ ಎನ್ನುವಂತಹದ್ದರ ಬಗ್ಗೆ ಈಗಿನ ಸಮಾಜದಲ್ಲಿ ಯಾವರೀತಿ ಸ್ಪಷ್ಟೀಕರಣ ಕೊಡ ತಕ್ಕಂತಹ ಜನ ಇದ್ದಾರೆ, ಅವರು ಇದನ್ನು ಸ್ವಲ್ಪ ಆಳವಾಗಿ ಅಧ್ಯಯನ ಮಾಡಿ ನಂತರ ಇದರಬಗ್ಗೆ ಸ್ಪಷ್ಟೀಕರಣ ಮಾಡತಕ್ಕಂತಹದ್ದು ಅತಿ ಅವಶ್ಯಕತೆ ಇದೆ. ಇದರ ಬಗ್ಗೆ ನಾನು ನಾಲ್ಕು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಾಮಪ್ಪ.—ನಮ್ಮನ್ನೆಲ್ಲಾ ಕುಡುಕರನ್ನಾಗಿ ಮಾಡುವುದಕ್ಕೆ ತಯಾರು ಮಾಡಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಮದ್ಯ ಹಾಗೂ ಆರೋಗ್ಯ ಇವೆರಡನ್ನೂ ಹತ್ತು ನಿಮಿಷದಲ್ಲಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ಕ್ಲಬ್ಬುಗಳ ಬಗ್ಗೆ ಹೇಳುವುದಾದರೆ, ೬೭ ಕ್ಲಬ್ಬುಗಳು ಬೆಂಗಳೂರು ನಗರದಲ್ಲಿವೆ. ಅವುಗಳಿಗೆ ಸರ್ಕಾರ ಲೈಸನ್ಸ್ ಕೊಟ್ಟಿದೆ. ಕ್ಲಬ್ಬುಗಳಿಗೆ ಹೋಗತಕ್ಕ ಜನ. ಪತ್ರಿಕಾ ಕರ್ತರಿಗೆ ಇರತಕ್ಕ ಪ್ರೆಸ್ ಕ್ಲಬ್ಬು ಒಂದನ್ನು ಬಿಟ್ಟರೆ, ಬಾಕಿ ಎಲ್ಲಾ ಶ್ರೀಮಂತರ ಕ್ಲಬ್ಬುಗಳು ಸಾಮಾನ್ಯ ಜನರು ಶ್ರೀಮಂತ ವರ್ಗದವರ ಸ್ವಾಧೀನದಲ್ಲಿರುವ ಕ್ಲಬ್ಬುಗಳಿಗೆ ಹೋಗುವುದಕ್ಕಾಗುವುದಿಲ್ಲ. ಇನ್ನುಳಿದ ಎಲ್ಲಾ ಕ್ಲಬ್ಬುಗಳ ಮುಂದೆ ಸಂಜೆ ಸಮಯದಲ್ಲಿ ಹೋಗಿ ನೋಡಿದರೆ ನೂರಾರು ಕಾರುಗಳು ನಿಂತಿರುತ್ತವೆ. ಅವರು ೫೦೦ ರಿಂದ ೧೦೦೦೦ ರೂಪಾಯಿಗಳವರೆಗೆ ಖರ್ಚು ಮಾಡುತ್ತಾರೆ. ಇಸ್ಪೀಟ್ ಆಟ ಆಡುತ್ತಾರೆ. ಈ ರೀತಿ ಖರ್ಚು ಮಾಡತಕ್ಕ ಕ್ಲಬ್ಬುಗಳಿಗೆ ವಿನಾಯಿತಿಯನ್ನು ಕೊಡತಕ್ಕ ಅವಶ್ಯಕತೆ ಏನು ಇತ್ತು ? ದಯಮಾಡಿ ಮಂತ್ರಿಗಳು ಈ ಪತ್ರಿಕಾ ಕರ್ತರ ಕ್ಲಬ್ ಏನಿದೆ ಅದೊಂದನ್ನು ಬಿಟ್ಟರೆ ಶ್ರೀಮಂತ ವರ್ಗದವರಿಗಾಗಿ ಇರುವಂತಹ ಇನ್ನುಳಿದ ೬೬ ಕ್ಲಬ್ಬುಗಳು ಏನು ಇವೆ, ಅವುಗಳ ಮೇಲೆ ಈಗ ಇರತಕ್ಕ ತೆರಿಗೆಯ ಮೇಲೆ ಒಂದಕ್ಕೆ ನಾಲ್ಕರಷ್ಟು ಹಾಕಿ. ಕಾರಿನಲ್ಲಿ ಹೋಗಿ ಕುಡಿಯತಕ್ಕಂತಹ ಜನ ಅವರು, ನಮ್ಮಲ್ಲಿ ಮದ್ಯ ಮಾರಾಟ ಇವತ್ತು ಏನು ಇದೆ. ಇದಕ್ಕೆ ಒಂದು ಕಪ್ಪು ಚುಕ್ಕೆಯನ್ನು ಹಾಕಬೇಕಾದ ಪ್ರಸಂಗ ಬಂದಿದೆ ಇದನ್ನು ಹಾಕಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಿಕ್ಕರ್‌ಲಾಬಿ ಯಿಂದ ಶ್ರೀಮಂತಿಕೆಯನ್ನು ಪಡೆಯತಕ್ಕಂತಹ ವ್ಯವಸ್ಥೆ ಏನಿದೆ, ಆ ವ್ಯವಸ್ಥೆಯ ಬುಡವನ್ನೇ ಕಿತ್ತು ಹಾಕಬೇಕಾದರೆ ಇದರ ವಿಕೇಂದ್ರೀಕರಣವಾಗಬೇಕು. ತಾಲ್ಲೂಕು ಮಟ್ಟದಲ್ಲೂ ಇದರ ಹರಾಜು ಹಾಕಬೇಕು. ಮದ್ಯವಾಗಲಿ ಹಾಗೂ ಸಾರಾಯಿಯಾಗಲಿ ತಾಲ್ಲೂಕು ಮಟ್ಟದಲ್ಲೂ ಇದರ ಹರಾಜು ಮಾಡಿ ವಿಕೇಂದ್ರೀಕರಣ ಮಾಡಿದರೆ ಒಳ್ಳೆಯದು. ಯಾರು ಈ ಮದ್ಯ ವ್ಯವಹಾರದಲ್ಲಿ ಒಡೆಯರು ಅಂತ ಇದ್ದಾರೆ, ಇವರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುತ್ತಾರೆ, ಹಾಗೂ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡುತ್ತಾರೆ. ಈ ಜನಗಳನ್ನು ದೂರ ಮಾಡಬೇಕಾದರೆ, ಈ ಮದ್ಯ ಮಾರಾಟ ವಿಕೇಂದ್ರೀಕರಣವನ್ನು ಪ್ರಥಮವಾಗಿ ಮಾಡಬೇಕು. ಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮದ್ಯ ಮಾರಾಟ ಹಾಗೂ ಸಾರಾಯಿ ಮಾರಾಟದ ಜೊತೆಗೆ ಈ ಕಳ್ಳ ಬಟ್ಟಿ ಕೂಡ ತಯಾರಾಗುತ್ತಿದೆ. ಅದು ಹೋಗಿಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ಏಕೆ ಅಂತ ? ಇವರು ಕೊಟ್ಟಿರತಕ್ಕ ವಾರ್ಷಿಕವರದಿಯಲ್ಲಿ ನೋಡಿದರೆ ಕಳ್ಳಬಟ್ಟಿ ಇಷ್ಟೊಂದು ಪ್ರಮಾಣದಲ್ಲಿ ತಯಾರಾಗುತ್ತಿದ್ದರೂ ಈ ಇಲಾಖೆ ಏನು ಮಾಡುತ್ತಿದೆ ? ಇದನ್ನು ನೋಡಿದಾಗ ನನಗನ್ನಿಸುತ್ತದೆ, ಯಾರು ಈ ಕಳ್ಳಬಟ್ಟಿಯನ್ನು ತಯಾರು ಮಾಡುತ್ತಾರೆ ಅವರ ಜೊತೆಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಅಧಿಕಾರಿಗಳೂ ಕೂಡ ಶಾಮೀಲಾಗಿದ್ದಾರೆ. ಆದ್ದರಿಂದ ಈ ಕಳ್ಳಬಟ್ಟಿ ತಯಾರಿ ನಡೆಯುತ್ತಿದೆ. ಇದರಿಂದ ಸರ್ಕಾರಕ್ಕೂ ನಷ್ಟವಾಗುತ್ತಿದೆ. ಯಾರು ಈ ಕಳ್ಳಬಟ್ಟಿಯನ್ನು ತಯಾರು ಮಾಡುತ್ತಿದ್ದಾರೆ ಅವರಿಗೆ ಉಗ್ರ ಶಿಕ್ಷೆಯನ್ನು ವಿಧಿಸತಕ್ಕ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಸ್ವಾಮಿ, ಈ ಖಾಸಿಗೀ ನರ್ಸಿಂಗ್ ಹೋಮ್‌ಗಳು ಜನರ ಸುಲಿಗೆ ಮಾಡತಕ್ಕ ಒಂದು ಕೇಂದ್ರಗಳಾಗಿವೆ. These Private nursing homes are worse than the liquor. ಇವತ್ತು ನನ್ನದೇ ಒಂದು ಉದಾರಣೆ ಕೊಡುತ್ತೇನೆ. ನಾನೂ ಕೂಡಾ ಒಂದು ದಿವಸ ಆಸ್ಪತ್ರೆಗೆ ಹೋಗಿದ್ದೆ. ನಾನು ಜೀವಮಾನದಲ್ಲೇ ಆಸ್ಪತ್ರೆಗೆ ಹೋದವನಲ್ಲ. ಆಸ್ಪತ್ರೆಗೆ ಹೋಗಿ ಮಲಗಿದವನಲ್ಲ. ನಾನು ಮೊದಲ ಸಲ ಬೌರಿಂಗ್ ಆಸ್ಪತ್ರೆಗೆ ಹೋದೆ. ಅಲ್ಲಿ ಯಾವ ಯಾವ ನಲ್ಲಿಯಲ್ಲಿ

ಬಿಸಿನೀರು ಬರುತ್ತದೆ ಯಾವ ನಲ್ಲಿಯಲ್ಲಿ ತಣ್ಣೀರು ಬರುತ್ತದೆ ಎಂಬುದೇ ಗೊತ್ತಾಗಲಿಲ್ಲ, ಏಕೆಂದರೆ ನಾನೂ ಯಾವಾಗಲೂ ಹಾಸಿಗೆಯಲ್ಲಿ ಮಲಗಿದವನಲ್ಲ. ಅಲ್ಲಿ ಶಾಸಕರಿಗೆ ಒಳ್ಳೆಯ ರೂಮ್ ದೊರೆಯುವ ವ್ಯವಸ್ಥೆ ಇದೆ ಸ್ವಾಮಿ, ಸರ್ಕಾರಿ ಆಸ್ಪತ್ರೆಯಲ್ಲಿ ಇರತಕ್ಕ ಎಕ್ಸ್‌ಪರ್ಟ್‌ರ್ಸ್ ಯಾರಿದ್ದಾರೆ ಅವರು ಖಾಸಗೀ ನರ್ಸಿಂಗ್ ಹೋಮ್‌ಗೆ ಹೋಗಿ ಸಾವಿರಾರು ರೂಪಾಯಿ ದುಡಿಯುತ್ತಿದ್ದಾರೆ. ನಾನು ಒಂದು ಉದಾಹರಣೆ ಕೊಡುತ್ತೇನೆ, ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ಎಕ್ಸ್‌ಪರ್ಟ್ ಬರೀ ಎರಡು ನಿಮಿಷ ತನ್ನ ಸ್ಟೆತೋಸ್ಕೋಪ್ ನನ್ನ ಎದೆಯ ಮೇಲೆ ಇಟ್ಟು ನೋಡಿದ, ಆಮೇಲೆ ಹೊರಗಡೆ ಬಂದು ಆತ ಪುಸ್ತಕದಲ್ಲಿ ೨೫ ರೂಪಾಯಿ ಫೀಸ್ ಎಂದು ಬರೆದಿದ್ದಾನೆ. ಇವತ್ತು ಸರ್ಕಾರಿ ಸಂಬಳ ಪಡೆಯುತಕ್ಕ ಒಬ್ಬ ಎಕ್ಸ್‌ಪರ್ಟ್ ಸರ್ಕಾರಿ ಸಂಬಳದ ಜೊತೆಗೆ ಇವತ್ತು ಖಾಸಗಿ ನರ್ಸಿಂಗ್ ಹೋಮುಗಳಲ್ಲಿ ದಿವಸಕ್ಕೆ ೫೦೦ ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುವ ನಿದರ್ಶನಗಳು ಇವೆ. ಆದ್ದರಿಂದ ನಾನು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಖಾಸಗೀ ಮೆಡಿಕಲ್ ಕಾಲೇಜು ಗಳನ್ನು ರಾಷ್ಟ್ರೀಕರಣ ಮಾಡದೇ ಇರಬಹುದು, ಮತ್ತೆ ಯಾವುದನ್ನೇ ರಾಷ್ಟ್ರೀಕರಣ ಮಾಡದೇ ಇರಬಹುದು, ಆದರೆ ಈ ಖಾಸಗೀ ನರ್ಸಿಂಗ್ ಹೋಮ್‌ಗಳು ಏನಿವೆ ಇವುಗಳನ್ನು ರಾಜ್ಯಾದ್ಯಂತ ರಾಷ್ಟ್ರೀಕರಣ ಮಾಡಿ ಎಂಬುದು ನನ್ನ ಕಳಕಳಿಯ ಪ್ರಾರ್ಥನೆ. ಸರ್ಕಾರ ಮತ್ತೊಂದರ ಬಗ್ಗೆ ಆದೇಶ ಕೊಡಬೇಕು. ಯಾರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕ ತಜ್ಞರು ಇದ್ದಾರೆ, ಅವರು ಖಾಸಗೀ ನರ್ಸಿಂಗ್ ಹೋಮ್‌ಗಳಿಗೆ ಹೋಗಬಾರದು. ದಯಮಾಡಿ ಖಾಸಗೀ ನರ್ಸಿಂಗ್ ಹೋಮ್ ಗಳಿಗೆ ಹೋಗತದ್ದಂಥ ಬಗ್ಗೆ ದಿಗ್ಬಂಧನ ಹಾಕಬೇಕು. ಇವತ್ತು ಔಷಧಿಗಳನ್ನು ವಿತರಣೆ ಮಾಡುವ ವಿಷಯದಲ್ಲಿ ಬದಲಾವಣೆಯಾಗಬೇಕು. ಇವತ್ತು ಗುಲ್ಬರ್ಗಾ ಇರಬಹುದು, ರಾಯಚೂರು ಇರಬಹುದು, ಚಾಮರಾಜನಗರ ಇರಬಹುದು, ಔಷಧಿಗಳನ್ನು ಬೆಂಗಳೂರಿನಲ್ಲಿ ಕೂತು ವಿತರಣೆ ಮಾಡತಕ್ಕ ವ್ಯವಸ್ಥೆ ಇದೆ. ಇವತ್ತು ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆಗಳಿಗೆ ಔಷಧಿಗಳನ್ನು ವಿತರಣೆ ಮಾಡತಕ್ಕ ವ್ಯವಸ್ಥೆ ಆಗಬೇಕಾಗಿದೆ. ಇಂತಹ ವ್ಯವಸ್ಥೆಯನ್ನು ಆರೋಗ್ಯ ಇಲಾಖೆ ಮಾಡಬೇಕು. ಇವತ್ತು ಎಲ್ಲೋ ಇರುವ ಕೇಂದ್ರ ಸ್ಥಳಕ್ಕೆ ಬಂದು ಪಡೆಯುವ ವ್ಯವಸ್ಥೆ ಇದೆ. ಇವತ್ತು ಸರ್ಕಾರಿ ಆಸ್ಪತ್ರೆಯಾಗಲೀ, ಪ್ರೈಮರಿ ಹೆಲ್ತ್ ಸೆಂಟರ್‌ಗಳಾಗಲೀ ಔಷಧಿಗಳನ್ನು ಪಡೆದುಕೊಳ್ಳಬೇಕಾದರೆ ಕೇಂದ್ರ ಸ್ಟೋರ್ಸ್‌ನಲ್ಲಿ ಹಣ ಕೊಟ್ಟು ಔಷಧಿಯನ್ನು ಪಡೆದುಕೊಳ್ಳುವಂತಹ ವ್ಯವಸ್ಥೆ ಇದೆ, ಆದ್ದರಿಂದ ದಯಮಾಡಿ ಔಷಧಿ ವಿತರಣೆ ವಿಕೇಂದ್ರೀಕರಣ ವಾಗಬೇಕು. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಸ್ಟೋರ್ಸ್ ಮಾಡಿ ಔಷಧಿಗಳನ್ನು ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಪಾಶ್ಚಿಮಾತ್ಯ ಮಾದರಿ ವೈದ್ಯಕೀಯ ಶಿಕ್ಷಣ ಕೊಡತಕ್ಕ ಆಸ್ಪತ್ರೆಗೆ ನಾನು ಹೋಗಿದ್ದೆ. ನಾನೂ ಮತ್ತು ಮಾನ್ಯ ಅಪ್ಪಾಜಿಗೌಡರು ಪಕ್ಕಪಕ್ಕದ ಕೊಠಡಿ ಗಳಲ್ಲಿದ್ದೆವು. ಅಲ್ಲಿ ಎರಡು ಕೊಠಡಿಗಳ ಬಾಗಿಲಿಗೆ "ಚರಕ" ಹಾಗೂ "ಸುಶ್ರುತ" ಎಂದು ಹೆಸರು ಇಟ್ಟಿದ್ದರು. ಅದನ್ನು ನೋಡಿ ನನಗೆ ಸಂತೋಷವಾಯಿತು. ಆಯುರ್ವೇದ ಪದ್ಧತಿಯಲ್ಲಿ ಸಹಸ್ರಾರು ವರ್ಷಗಳ ಹಿಂದೆ ಶಸ್ತ್ರಚಿಕಿತ್ಸೆಯನ್ನು ಜಗತ್ತಿಗೆ ತೋರಿಸಿಕೊಟ್ಟವರ ಹೆಸರನ್ನು ಅಲ್ಲಿ ಇಟ್ಟಿರುವುದನ್ನು ನೋಡಿ ನನಗೆ ಸಂತೋಷವಾಯಿತು. ಇವತ್ತು ನಾವು ಪಾಶ್ಚಿಮಾತ್ಯ ಪದ್ಧತಿಗೆ ಏನೇನು ಎನ್‌ಕರೇಜ್‌ಮೆಂಟ್ ಕೊಡುತ್ತಿದ್ದೇವೆಯೋ ಅದೇ ರೀತಿ ಆಯುರ್ವೇದಕ್ಕೂ ಕೂಡಾ ಪ್ರೋತ್ಸಾಹ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನಾನು ಅಭಾರಿಯಾಗಿದ್ದೇನೆ.

೪-೦೦ ಪಿ. ಎಂ.

† ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೇಡಿಕೆ ಮತ್ತು ವಾರ್ಷಿಕ ವರದಿಯನ್ನು ಈ ಸಂದರ್ಭದಲ್ಲಿ ವಿರೋಧಿಸುತ್ತಾ ಸಂಕ್ಷಿಪ್ತವಾಗಿ ಎರಡು ಮಾತುಗಳನ್ನು ಆಡಲಿಕ್ಕೆ ಇಚ್ಛೆಪಡುತ್ತೇನೆ. ಆರೋಗ್ಯ ಇಲಾಖೆ ಜನರ ರಕ್ಷಣೆ ಮಾಡುವ ಕೆಲಸಕ್ಕಿಂತ ಮೊದಲು ಆರೋಗ್ಯ ಇಲಾಖೆಯ ಆರೋಗ್ಯದ ರಕ್ಷಣೆ ಮಾಡುವಂಥ ಅವಶ್ಯಕತೆ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸುಮಾರು

೪೭ ಕೋಟಿ ರೂಪಾಯಿಗಳನ್ನು ಖರ್ಚುಮಾಡುವಂಥ ಜವಾಬ್ದಾರಿ ಇರತಕ್ಕಂಥ ಈ ಒಂದು ಇಲಾಖೆಯಲ್ಲಿ ಅಲ್ಲಿಯ ಆರೋಗ್ಯ ಸಹಾಯಕನಿಂದ ಹಿಡಿದು ಆರೋಗ್ಯ ನಿರ್ದೇಶಕರ ತನಕ ಸ್ವಲ್ಪವೂ ಜವಾಬ್ದಾರಿ ಇಲ್ಲವೆಂದೇ ಹೇಳಬೇಕಾಗುತ್ತದೆ, ಈ ಇಲಾಖೆಯ ವರದಿಯಲ್ಲಿ ರಾಜ್ಯದಲ್ಲಿ ಸುಮಾರು ೨೫೯ ಆಸ್ಪತ್ರೆಗಳು. ೨೫೭ ಪ್ರೈಮರಿ ಹೆಲ್ತ್ ಸೆಂಟರ್‌ಗಳು ಮತ್ತು ೧೩೧೦ ಪ್ರೈಮರಿ ಹೆಲ್ತ್ ಯೂನಿಟ್‌ಗಳು ಇವೆಯೆಂದು ಹೇಳಿದ್ದಾರೆ. ಆದರೆ ಇಲ್ಲಿರತಕ್ಕಂಥ ವೈದ್ಯರ ಸಂಖ್ಯೆ ಮತ್ತು ಅವಶ್ಯಕತೆಗಳು ಅಥವಾ ಇಷ್ಟು ಆಸ್ಪತ್ರೆಗಳಲ್ಲಿ ಯಾವ್ಯಾವ ಹುದ್ದೆಗಳು ಖಾಲಿ ಇದೆಯೆಂದು ಅಂಕಿಅಂಶಗಳನ್ನು ಸಹ ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು. ಏಕೆಂದರೆ ನಿಮ್ಮ ಸಾಧನೆಯನ್ನು ಇಲ್ಲಿ ತೋರಿಸುತ್ತಾ ಹೋದರೆ ಮಾತ್ರ ಸಾಲದು, ಇಲ್ಲಿರುವ ಕುಂದುಕೊರತೆಗಳ ಬಗ್ಗೆ ಗಮನಹರಿಸಬೇಕಾದ ಜವಾಬ್ದಾರಿಯೂ ಕೂಡ ಸರ್ಕಾರಕ್ಕೆ ಇದೆಯೆಂದು ಹೇಳುತ್ತಾ, ಇದರ ಬಗ್ಗೆ ಒಂದು ವರದಿಯನ್ನು ಕೊಡುವುದು ಅತ್ಯಂತ ಸೂಕ್ತವೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ನಿಮ್ಮ ಇಲಾಖೆಯ ವರದಿಯಲ್ಲಿ ಹೇಳಿದ್ದೀರಿ. ವೈದ್ಯಕೀಯ ವ್ಯವಸ್ಥೆಗೆ ಹಾಗೂ ಜನಸಂಖ್ಯೆಗೆ ಇರುವಂತಹ ಅನುಪಾತ ಏನೆಂದರೆ ೧೬,೭೩೦ ಜನರಿಗೆ ಒಬ್ಬ ವೈದ್ಯ. ೯೪೦ ಜನಕ್ಕೆ ಒಂದು ಹಾಸಿಗೆ ವ್ಯವಸ್ಥೆ ಇದೆಯೆಂದು ನಿಮ್ಮ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಆದರೆ ಈ ಅಂಕಿಅಂಶಗಳು ನಿಮ್ಮ ರಾಜಕೀಯ ದೊಂಬರಾಟದ ಚಿತ್ರಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಇಂದು ನಮ್ಮ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳಿಂದ ಮತ್ತು ಆಯುರ್ವೇದ, ಹೋಮಿಯೋಪತಿ ಹಾಗೂ ಪ್ರಕೃತಿಚಿಕಿತ್ಸೆ ವಿಧಾನಗಳಿಂದ ಸುಮಾರು ೩೫೦೦ ಜನರು ವೈದ್ಯಕೀಯ ಪದವಿ ಪಡೆದು ಹೊರಬರುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇರತಕ್ಕಂಥ ವೈದ್ಯರ ಸಂಖ್ಯೆ ೩೬೩೪ ಆಗಿದೆ. ಅಂದರೆ ಈಗ ತಾವು ಹಾಕಿಕೊಂಡಿರತಕ್ಕಂಥ ಅನುಪಾತ ಒಂದು ಲಕ್ಷ ಜನರಿಗೆ ಒಬ್ಬ ವೈದ್ಯರನ್ನು ಕೊಟ್ಟಂತಾಗುತ್ತದೆ ಎಂಬುದನ್ನು ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲೂ ಸಹ ಹಲವಾರು ಲೋಪದೋಷಗಳನ್ನು ಬೊಟ್ಟು ಮಾಡಿ ತೋರಿಸಬಹುದು. ಈ ಆರೋಗ್ಯ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆ ಎಂದು ವಿಮರ್ಶೆ ಮಾಡಿದಾಗ ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡುವಲ್ಲಿ, ಸೀಟುಗಳನ್ನು ಹಂಚುವಲ್ಲಿ, ವರ್ಗಾವರ್ಗಿಗಳನ್ನು ಮಾಡುವಲ್ಲಿ ಬಹಳ ಆತುರ ತೋರುತ್ತಿದೆಯೇ ವಿನಹ ಬಡಜನರ ಆರೋಗ್ಯ ರಕ್ಷಣೆ ಮಾಡುವಲ್ಲಿ, ಈ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ ಮೇಲ್ಕಂಡದಲ್ಲಿರತಕ್ಕಂಥ ಲೋಪ ದೋಷಗಳನ್ನು ಸರಿಪಡಿಸುವಂಥ ಜವಾಬ್ದಾರಿ ಈ ಸದನಕ್ಕೆ ಸರ್ಕಾರಕ್ಕೆ ಇದೆ ಎನ್ನುವ ವಿಚಾರ. ಮಾನ್ಯ ಅಧ್ಯಕ್ಷರೇ. ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಆದರೂ ಈ ವಿಚಾರವನ್ನು ಸಂಕ್ಷಿಪ್ತವಾಗಿ ನಾನು ಹೇಳಬೇಕೆಂದು ಇಚ್ಛೆಪಡುತ್ತೇನೆ.

ಅದು ಏನೆಂದು ಹೇಳಿದರೆ, ಈ ಒಂದು ರಾಜ್ಯಸರ್ಕಾರ ಔಷಧಿ ಪೂರೈಸುವಲ್ಲಿ ದೊಡ್ಡ ಅವ್ಯವಹಾರ ಮಾಡಿದೆ ಎಂದು ಅಪಾದನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ಹಿಂದೆ ಒಂದು ಪ್ರಶ್ನೆಗೆ ಉತ್ತರವನ್ನು ಕಳಿಸಿದ್ದರು. ಆ ಉತ್ತರದ ಪ್ರಕಾರ ರಾಜ್ಯಸರ್ಕಾರ ಔಷಧಿಗಳನ್ನು ಪೂರೈಸುವಾಗ ಅನುಸರಿಸಬೇಕಾದ ನಿಯಮಗಳನ್ನು ಉತ್ತರ ರೂಪದಲ್ಲಿ ಕೊಟ್ಟಿದ್ದರು. ಆಸ್ಪತ್ರೆಗಳಿಗೆ ಬೇಕಾದ ಔಷಧಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಟೆಂಡರನ್ನು ಕರೆಯಲಾಗುವುದು. ಈ ರೀತಿ ಕರೆದಿರತಕ್ಕಂಥ ಟೆಂಡರುದಾರರ ಸಮ್ಮುಖದಲ್ಲಿ ಅವುಗಳ ಬೆಲೆಯನ್ನು ನಿಗದಿ ಮಾಡಲಾಗುವುದು. ಟೆಂಡರ್‌ನಲ್ಲಿ ಸೂಚಿಸಿದ ದರಗಳ ಆಧಾರದಮೇಲೆ ದರಗಳ ಪಟ್ಟಿಯನ್ನು ಸೂಚಿಸಲಾಗುವುದು ಎಂಬ ರೀತಿಯಲ್ಲಿ ಹೇಳಿದ್ದರು. ಈ ಔಷಧಿಗಳನ್ನು ಎಲ್ಲಾ ಆಸ್ಪತ್ರೆಗಳಿಗೆ ಅವುಗಳ ಬೇಡಿಕೆಯನ್ನು ಅನುಸರಿಸಿ ಸರಬರಾಜು ಮಾಡಲಾಗುವುದು ಮತ್ತು ರಾಜ್ಯದ ಎಲ್ಲಾ ಆಸ್ಪತ್ರೆಗಳು ಸರಬರಾಜು ಮಾಡಿದ ಔಷಧಿಗಳ ದಾಸ್ತಾನ ಮತ್ತು ಲೆಕ್ಕಪತ್ರವನ್ನು ಸರಿಯಾಗಿ ಇಡುವಂತೆ ಸೂಚನೆ ನೀಡಲಾಗಿದೆ ಮತ್ತು ಇವುಗಳನ್ನು ಕಾಲಕಾಲಕ್ಕೆ ಆಡಿಟ್ ಮಾಡಲಾಗುವುದು ಎಂದೂ ಸಹ ತಿಳಿಸಿದ್ದರು. ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಇದರ ಬಗ್ಗೆ ಆಡಿಟ್ ಆಗಿದ್ದರೆ, ಅದನ್ನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಸದನದ ಮುಂದೆ ಇಡಬೇಕೆಂದು ನಾನು ಹೇಳುತ್ತೇನೆ. ಮತ್ತೊಂದು ವಿಚಾರವೆಂದರೆ, ಈ ಔಷಧಿಗಳನ್ನು ಪೂರೈಸುವಾಗ ಸುಮಾರು ೪೭ ಕಂಪನಿಗಳು ಮುಂದೆ ಬಂದಿದ್ದರೂ, ಕೇವಲ ಆರು

ಕಂಪನಿಗಳಿಗೆ ಮಾತ್ರ ಔಷಧಿ ಸರಬರಾಜಿಗೆ ಅವಕಾಶ ಕೊಟ್ಟಿದ್ದಾರೆ. ಈ ಆರು ಕಂಪನಿಗಳು ಯಾವ್ಯಾವೆಂದರೆ, ಬೊಂಬೆ ಸರ್ಜಿಕಲ್ ಅಂಡ್ ಸೈಂಟಿಫಿಕ್ ಕಂಪನಿ, ಬೆಂಗಳೂರು, ಸಿದ್ದ ಲಿಮಿಟೆಡ್ ಬೆಂಗಳೂರು, ಮಹಾವೀರ ಡ್ರಗ್‌ಹೌಸ್, ಬೆಂಗಳೂರು, ಮಹಾವೀರ ಮೆಡಿಕಲ್ ಹಾಲ್ ಬೆಂಗಳೂರು, ವಿನಯ್ ಸರ್ಜಿಕಲ್ ಪ್ರೈವೇಟ್ ಲಿಮಿಟೆಡ್, ದೆಹ್ಲಿ. ಈ ಕಂಪನಿಗಳಿಂದ ಮಾತ್ರ ಔಷಧಿಗಳನ್ನು ಖರೀದಿಸುತ್ತಿದ್ದಾರೆ. ಅವರು ಔಷಧಿಗಳನ್ನು ಪೂರೈಸಿರುವಂಥ ರೀತಿ, ಒಂದು ವ್ಯವಹಾರ ನೋಡಿದರೆ ಇದರಲ್ಲಿ ಹೆಚ್ಚಿನ ಹಣ ದುರುಪಯೋಗ ಆಗಿದೆ ಎಂಬ ವಿಚಾರವನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಇಲ್ಲಿ ಔಷಧಿಗಳ ದರಪಟ್ಟಿ ಸಹ ಇದೆ. ಅದರಲ್ಲಿ ಇರತಕ್ಕಂಥ ಸಣ್ಣ ಟ್ಯಾಬ್ಲೇಟ್ ಟೆಟ್ರಾಸೈಕ್ಲಿನ್‌ಗೆ ಸರ್ಕಾರದವರು ಕೊಟ್ಟಿರುವ ದರ ೨೫.೮೦ ರೂಪಾಯಿ ಇದ್ದರೆ, ರಖಂ ಬೆಲೆ, ಮಾರ್ಕೆಟ್‌ನಲ್ಲಿ ೧೩.೫೦ ರೂಪಾಯಿ ಇದೆ ಆಮೇಲೆ ಆ್ಯಂಪಿಸಿಲಿನ್ ಸರ್ಕಾರದ ಖರೀದಿ ೪೪೪ ರೂಪಾಯಿ ಇದ್ದರೆ, ಅದು ಮಾರ್ಕೆಟ್‌ನಲ್ಲಿ ಇದು ೩೯೦ ರೂಪಾಯಿಗೆ ಸಿಗುತ್ತದೆ. ಅದೇರೀತಿ ಮೆಬೆಂಡಜೋಲ್ ಟ್ಯಾಬ್ಲೆಟ್ಸ್ ಮಾರ್ಕೆಟ್ ದರ ೬.೩ ರೂಪಾಯಿ ಇದ್ದರೆ, ಸರ್ಕಾರ ಖರೀದಿ ಮಾಡಿದ ದರ ೯೯ ರೂಪಾಯಿ. ಹಾಗೆಯೇ ವಿರಾಜಿನಾವುರ್ ಮಾತ್ರ ಮಾರ್ಕೆಟ್‌ನಲ್ಲಿ ೮೦.೭ ರೂಪಾಯಿ ಇದ್ದರೆ, ಖರೀದಿ ಮಾಡಿದ ದರ ೮೬.೫ ರೂಪಾಯಿ. ಇದರ ಅರ್ಥ ಏನು ಎಂದರೆ ಸರ್ಕಾರ ಅತೀ ಕಡಿಮೆ ದರಕ್ಕೆ ಖರೀದಿ ಮಾಡುವುದು ಬಿಟ್ಟು ಅತೀ ಹೆಚ್ಚಿನ ದರಕ್ಕೆ ಖರೀದಿ ಮಾಡಿದೆ. ಆದ್ದರಿಂದ ಇದರಲ್ಲಿ ದುರ್ವ್ಯವಹಾರ ನಡೆದಿದೆ ಎಂಬ ಆಪಾದನೆಯನ್ನು ನಾನು ಮಾಡುತ್ತೇನೆ. ಈ ಬಗ್ಗೆ ತನಿಖೆ ನಡೆಸಬೇಕು ನಡೆದಿರುವಂಥ ಆಡಿಟ್ ವರದಿಯ ಪ್ರತಿಯನ್ನು ಮಾನ್ಯ ಮಂತ್ರಿಗಳು ಉತ್ತರ ನೀಡುವ ಸಂದರ್ಭದಲ್ಲಿ ಸದನದ ಮುಂದಿಡಬೇಕು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಮತ್ತೊಂದು ವಿಚಾರವೆಂದರೆ, ಔಷಧಿಗಳನ್ನು ಖರೀದಿ ಮಾಡುವಾಗ ಕೆಲವೊಂದು ನಿಯಮಾವಳಿಗಳನ್ನು ಪಾಲಿಸಿದ್ದಾರೆ. ಅದು ಏನೆಂದರೆ ಕೇವಲ ಕೆಲವೊಂದು ಕಂಪನಿಗಳಿಗೆ ಮಾತ್ರ ಇದನ್ನು ಸೀಮಿತವಾಗಿ ಹಂಚಿದ್ದಾರೆ. ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆದರೆ ಈ ಸಣ್ಣ ಘಟಕಗಳು ನಮ್ಮ ರಾಜ್ಯದಲ್ಲಿ ಏನಿವೆ, ಅವುಗಳಿಗೆ ಪ್ರೋತ್ಸಾಹ ಕೊಡುವ ಪ್ರಯತ್ನ ಮಾಡಿಲ್ಲ, ರಾಜ್ಯದಲ್ಲಿರತಕ್ಕಂಥ ಸಣ್ಣ ಉದ್ಯಮಗಳಿಂದ ಔಷಧಿಗಳನ್ನು ಖರೀದಿ ಮಾಡಬಾರದು ಎಂಬ ವ್ಯವಸ್ಥೆ ನಡೆದಿದೆ.

ಇದಕ್ಕೆ ಕಾರಣ ಏನು ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಲೈಸೆನ್ಸ್ ಪಡೆದು, ನಮ್ಮ ಡ್ರಗ್ಸ್ ಕಂಟ್ರೋಲ್ ಅವರಿಂದ ಲೈಸೆನ್ಸ್ ಪಡೆದಿರತಕ್ಕಂಥ ಸಂಸ್ಥೆಗಳಿಂದ ಏಕೆ ಖರೀದಿ ಮಾಡಬಾರದು ? ಇದರ ಉದ್ದೇಶ ಏನು ಇದೆ ಎಂಬುದನ್ನು ತಿಳಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇನ್ನು ಮೆಡಿಕಲ್ ಎಜುಕೇಷನ್. ಇದರಲ್ಲೂ ಕೂಡ ಹಲವಾರು ದುರ್ವ್ಯವಹಾರಗಳು ನಡೆದಿವೆ. ಎಂ.ಬಿ.ಬಿ.ಎಸ್. ಮತ್ತು ಪಿ.ಜಿ.ಗಳಿಗೆ ಆಯ್ಕೆ ಮಾಡುವ ಸಲುವಾಗಿ ೫ ಜನರ ಒಂದು ಸಮಿತಿಯನ್ನು ಮಾಡಿದರು. ಆ ಸಮಿತಿಯಲ್ಲಿರತಕ್ಕಂಥ ಚಿನ್ನಪ್ಪ ಮತ್ತು ಪ್ರಭು ಎಂಬುವರು ರಾಜಿನಾಮೆ ಕೊಟ್ಟಿರುತ್ತಾರೆ. ಇದಕ್ಕೆ ಕಾರಣ ಏನು ಎಂಬುದನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಇದೆ ಸಂದರ್ಭದಲ್ಲಿ ವೈದ್ಯಕೀಯ ಸೀಟನ್ನು ಹಂಚುವ ಸಂದರ್ಭದಲ್ಲಿ ಅಂದರೆ, ಎಂಬಿಬಿಎಸ್ ಮತ್ತು ಪಿ ಜಿ. ಸೀಟುಗಳನ್ನು ಹಂಚತಕ್ಕಂಥ ಸಂದರ್ಭದಲ್ಲಿ ಭಾರಿ ದುರ್ವ್ಯವಹಾರ ನಡೆದಿದೆ ಈ ಅವ್ಯವಹಾರಗಳನ್ನು ಸಿ ಓ.ಡಿ. ತನಿಖೆಗೆ ಮಾಡಿಸುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರ ಮಗಳು ಒಬ್ಬರಿಗೆ ಖಾಸಗಿ ಪಿ ಜಿ. ಕಾಲೇಜಿನಲ್ಲಿ ಸೀಟನ್ನು ಕೊಟ್ಟಿರುವಂಥ ಔಚಿತ್ಯವನ್ನೂ ಸಹ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕುಟುಂಬ ಯೋಜನೆ. ಈ ಕುಟುಂಬ ಯೋಜನೆ ಹೆಸರಿನಲ್ಲೂ ಬಹಳ ದುರುಪಯೋಗವಾಗಿದೆ. ಸುಮಾರು ೩೦ ಸಾವಿರ ಜನ ಪ್ರಾಕ್ಸಿ ಹೆಸರಿನಲ್ಲಿ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆಂದು ಹೇಳಿರುವುದರಿಂದ, ಇದರಲ್ಲೂ ಹಣ ದುರುಪಯೋಗವಾಗಿದೆ ಎಂದು ಆಪಾದನೆ ಮಾಡುತ್ತಾ, ಆರೋಗ್ಯ ಇಲಾಖೆಯಲ್ಲಿರತಕ್ಕಂಥ ಸಂಪೂರ್ಣ ಲೋಪದೋಷಗಳು ಮೇಲ್ಮಟ್ಟದಲ್ಲಿ ಆಗಿರುವುದರಿಂದ, ಇವುಗಳನ್ನು ತನಿಖೆ ಮಾಡಬೇಕೆಂದು ಹೇಳುತ್ತೇನೆ.

ಇತ್ತೀಚಿಗೆ ಕಳೆದ ವರ್ಷ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಪಗಾರ್ವಣೆಯನ್ನು ಈ ವರ್ಷದ ಮಟ್ಟಿಗೆ ತಡೆಹಿಡಿಯುತ್ತೇವೆ ಎಂದು. ಪತ್ರಿಕೆಗಳಲ್ಲಿ

ಹೇಳಿಕೆ ಕೊಟ್ಟರು. ಅವರು ಯಾವುದೇ ವರ್ಗಾವಣೆಯನ್ನು ಮಾಡುವುದಿಲ್ಲವೆಂದು ಹೇಳಿದರು. ಈ ಸಂದರ್ಭದಲ್ಲಿ ವರ್ಗವಾದ ನೌಕರರೊಬ್ಬರು ನನ್ನನ್ನು ಸಂಪರ್ಕಿಸಿದರು. ನಾನು ಸಂಬಂಧಪಟ್ಟ ನಿರ್ದೇಶಕರನ್ನು ಕೇಳಿದಾಗ, ನಮಗೆ ಮುಖ್ಯ ಮಂತ್ರಿಗಳಿಂದ ಯಾವುದೇ ಸುತ್ತೋಲೆ ಬಂದಿಲ್ಲ, ಈ ವರ್ಗವನ್ನು ತಾವು ಪಾಲಿಸಲೇ ಬೇಕು, ತಾವು ಹೋಗಲೇಬೇಕು ಎಂದು ಹೇಳಿದರು. ಈ ವಿಚಾರವನ್ನು ಆ ನೌಕರನಿಗೆ ನೀವು ಹೋಗಲೇಬೇಕಾದ ಪರಿಸ್ಥಿತಿ ಇದೆ ಎಂದು ತಿಳಿಸಿದೆ. ಅವರು ಊರಿಗೆ ಹೋದರು, ಪುನಃ ಮೂರು ಸಾವಿರ ರೂಪಾಯಿ ಕೊಟ್ಟು ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿಸಿಕೊಂಡು ಹೋದರು. ಇಂತಹ ಆಡಳಿತ ವ್ಯವಸೆ ಯಲ್ಲಿ ಮೇಲಿನ ಹಂತದಲ್ಲೇ ಈ ರೀತಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಕೆಳದರ್ಜೆಯಲ್ಲಿರತಕ್ಕ ಅಧಿಕಾರಿಗಳ ಮೇಲಾಗಲೀ, ಬೇರೆ ಯಾರ ಮೇಲೆಯೋ ಆಗಲೀ ಆರೋಪವನ್ನು ಮಾಡಿದರೆ ತಪ್ಪಾಗುವುದಿಲ್ಲವೆಂದು ಹೇಳಿ, ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಸಿ. ಕಲಕೋಟಿ (ಹಾವೇರಿ).—ಮಾನ್ಯ ಅಧ್ಯಕ್ಷರೇ, ಆ ದಿನ ಆರೋಗ್ಯ ಸಚಿವರು ತಂದಿರತಕ್ಕ ಇಲಾಖೆ ಮೇಲಿನ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ೧೯೭೭ರಿಂದ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಆದರೆ ಇದು ಸಾಲದು. ಬೆಳೆಯುತ್ತಿರುವ ಜನಸಂಖ್ಯೆಗೆ ಅನೇಕ ಸಮಸ್ಯೆಗಳು ಇವತ್ತಿನದಿವಸ ಉದ್ಭವಿಸುತ್ತಿವೆ. ರಾಜ್ಯಮಟ್ಟದ, ಜಿಲ್ಲಾಮಟ್ಟದ, ತಾಲ್ಲೂಕುಮಟ್ಟದ ಮತ್ತು ಹಳ್ಳಿ ಮಟ್ಟದ ದವಾಖಾನೆಗಳಲ್ಲಿ ಇನ್ನೂ ಸಾಕಷ್ಟು ತಕರಾರುಗಳು ಇವೆ. ಸಾಕಷ್ಟು ದವಾಖಾನೆಗಳಲ್ಲಿ ವೈದ್ಯರಿಲ್ಲ, ಲೇಡಿ ಡಾಕ್ಟರ್‌ಗಳು ಇಲ್ಲ. ದಾದಿಗಳು, ಅಂದರೆ ಸಿಪಾಯಿಗಳು ಎಂದು ನಾವು ಏನು ಹೇಳುತ್ತೇವೆ ಅವರು ಸಹ ಇಲ್ಲ. ಈ ಎಲ್ಲಾ ಹುದ್ದೆಗಳಲ್ಲೂ ಸಹ ಸಾಕಷ್ಟು ಕೊರತೆ ಇದೆ. ಇನ್ನು ಹೋದ ವರ್ಷ ನಮ್ಮ ಆರೋಗ್ಯ ಸಚಿವರಾಗಿದ್ದಂಥ ಡಾ. ತಿಮ್ಮೇಗೌಡರು, ಮುಂದಿನ ವರ್ಷ ೧೨ರಿಂದ ೧೫ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮಗಳಿಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್‌ನ್ನೂ, ೫ ರಿಂದ ೬ ಸಾವಿರ ಜನಸಂಖ್ಯೆ ಇರುವಂತಹ ಊರುಗಳಿಗೆ ಒಂದು ಪ್ರೈಮರಿ ಹೆಲ್ತ್ ಯೂನಿಟ್‌ನ್ನೂ ಕೊಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಅದನ್ನು ಸಾಧಿಸುವುದಕ್ಕೆ ಆಗಲಿಲ್ಲ. ಈ ವರ್ಷವಾದರೂ ಸಹ ಸರಕಾರ ಇದರ ಕಡೆಗೆ ಗಮನ ಕೊಡಬೇಕು. ೫-೬ ಸಾವಿರ ಜನಸಂಖ್ಯೆ ಇರುವಂತಹ ಗ್ರಾಮದಲ್ಲಿ ೨೫ ಸಾವಿರ ರಖಮ್ ಮತ್ತು ಮೂರು ನಾಲ್ಕು ಎಕರೆ ಭೂಮಿಯನ್ನು ಕೊಟ್ಟರೆ, ಸರಕಾರ ಅಲ್ಲಿಗೆ ದವಾಖಾನೆಯನ್ನು ಕೊಡಬೇಕೆಂದು ಒಂದು ಆದೇಶ ಇದೆ. ಆ ಪ್ರಕಾರ ಎಲ್ಲೆಲ್ಲಿ ರಖಮ್‌ಗಳನ್ನು ತುಂಬಿದ್ದಾರೆ, ಅಲ್ಲಿಗೆ ಆದಷ್ಟು ತೀವ್ರಗತಿಯಿಂದ ದವಾಖಾನೆಗಳನ್ನು ಕೂಡಲೇ ಮಾಡಿಕೊಡಬೇಕು. ಈಗಾಗಲೇ ನಮ್ಮ ತಾಲ್ಲೂಕಿನಲ್ಲಿ ಮೂರು ನಾಲ್ಕು ಜಾಗಗಳಲ್ಲಿ ಈ ರಖಮ್ ತುಂಬಿ, ಮೂರು ನಾಲ್ಕು ಎಕರೆ ಭೂಮಿಯನ್ನೂ ಸಹ ಕೊಟ್ಟಿದ್ದಾರೆ, ಆ ಗ್ರಾಮಗಳ ಹೆಸರು ಖರ್ಜಗಿ ಮತ್ತು ದೇವಗೇರಿ. ಹಾವೇರಿ ಸಕ್ಕರೆ ಕಾರ್ಖಾನೆ ವತಿಯಿಂದ ಕೂಡಾ ೨೫ ಸಾವಿರ ರಖಮ್ ಮತ್ತು ಮೂರು ನಾಲ್ಕು ಎಕರೆ ಭೂಮಿಯನ್ನು ಕೊಟ್ಟಿದ್ದಾರೆ, ನಮ್ಮ ಮಾನ್ಯ ದೊಡ್ಡಮೇಟಿಯವರ ಊರಿನಲ್ಲೂ ಕೂಡಾ ರಖಮ್ ತುಂಬಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಈ ಎಲ್ಲಾ ಕಡೆಗೂ ಕೂಡಲೇ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅನೇಕ ಮುಖ್ಯವಾದ ವಿಷಯಗಳ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಆದರೆ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯಲ್ಲೂ ಕೂಡಾ ಒಂದು ಸರ್ಜಿಕಲ್ ಯೂನಿಟ್, ಒಂದು ಕೋಬಾಲ್ಟ್ ಯೂನಿಟ್, ಪ್ಲಾಸ್ಟಿಕ್ ಸರ್ಜರಿ ಯೂನಿಟ್, ಡೀಪ್ ಎಕ್ಸ್‌ರೇ, ಅಲ್ಟ್ರಾಸೋನಿಯಂ ಮತ್ತು ಒಂದು ಬ್ಲಡ್ ಬ್ಯಾಂಕ್ ಇಷ್ಟು ವ್ಯವಸ್ಥೆಯಾದರೆ ಬಹಳ ಅನುಕೂಲವಾಗುತ್ತದೆ ಎಂದು ನಮ್ಮ ಆರೋಗ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ೬೦ ಹಾಸಿಗೆಗಳ ಒಂದು ಕಾಟೇಜ್ ಹಾಸ್ಪಿಟಲ್ ಇದೆ. ಆದರೆ ಅಲ್ಲಿಗೆ ಪ್ರತಿನಿತ್ಯ ನಾಲ್ಕುನೂರರಿಂದ ಐದುನೂರು ಔಟ್ ಪೇಷಂಟ್ಸ್ ಬರುತ್ತಾರೆ. ಮತ್ತು ಇನ್‌ಪೇಷಂಟ್ಸ್ ಸಾಕಷ್ಟು ಜನ ಇರುತ್ತಾರೆ. ಅದರ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಬಹುದು. ಅಲ್ಲಿಗೆ ಕನಿಷ್ಟ ಇನ್ನೂ ೬೦ ಬೆಡ್‌ಗಳಾದರೂ ಬೇಕು. ಈಗಿರುವ ೬೦ ಬೆಡ್‌ಗಳ ಜೊತೆಗೆ ಇನ್ನೂ ೬೦ ಬೆಡ್‌ಗಳನ್ನು ಸೇರಿಸಿ, ೧೨೦ ಬೆಡ್‌ಗಳ ಒಂದು ದವಾಖಾನೆಯಾದರೆ ನಮಗೆ ಬಹಳ ಅನುಕೂಲವಾಗುತ್ತದೆ. ಅದನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ. ಮತ್ತೊಂದು ಏನೆಂದರೆ ನಮ್ಮ ತಾಲ್ಲೂಕಿನಲ್ಲಿರುವ ದವಾಖಾನೆಗಳಿಗೆ ನೀರಿನ ಸೌಕರ್ಯ ಇಲ್ಲ. ನೀರಿನ ಬಗೆ ಸಾಕಷ್ಟು ತಕರಾರು ಆಗಿದೆ ಡಿ.ಹೆಚ್.ಓ, ರವರನ್ನು ಕೇಳಿದರೆ,

ಮುನಿಸಿಪಾಲಿಟಿಯವರು ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತಾರೆ. ಆದರೆ ಅವರು ನಮ್ಮ ಜನರಿಗೇ ನೀರು ಸರಬರಾಜು ಮಾಡುವುದು ಕಷ್ಟವಾಗಿರುವ ಕಾಲದಲ್ಲಿ ಮುನಿಸಿಪಾಲಿಟಿಯವರು, ದವಾಖಾನೆಗಳಿಗೆ ನೀರು ಸರಬರಾಜು ಮಾಡುವುದು ಕಷ್ಟದಾಯಕವಾದ ಕೆಲಸ. ಆದುದರಿಂದ ಆರೋಗ್ಯ ಇಲಾಖೆಯವರೇ ಇದನ್ನು ವಹಿಸಿಕೊಂಡು ಎಲ್ಲೆಲ್ಲಿ ನೀರಿನ ಸೌಕರ್ಯ ಇಲ್ಲ, ಅಲ್ಲಿ ಅನುಕೂಲ ಮಾಡಿಕೊಡಬೇಕೆಂದು ಇವತ್ತಿನದಿವಸ ನಮ್ಮ ಸಚಿವರನ್ನು ಕೇಳಿಕೊಳ್ಳುತ್ತೇನೆ. ಸಾಕಷ್ಟು ಸದಸ್ಯರು ದವಾಖಾನೆಗಳ ಬಗ್ಗೆ ತಕರಾರುಗಳನ್ನು ಹೇಳಿದರು. ಅವುಗಳ ಕಡೆಗೆ ತಕ್ಷಣ ಗಮನ ಹರಿಸಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಇವತ್ತಿನದಿವಸ ಕೇಳಿಕೊಳ್ಳುತ್ತೇನೆ. ಇನ್ನೊಂದು ಮಹತ್ವವಾದ ವಿಷಯ ಏನೆಂದರೆ ನಮ್ಮ ರಾಜ್ಯದಲ್ಲಿ ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿಗಳ ಬಗ್ಗೆ ತಾವು ಕೊಟ್ಟಿರುವ ವಾರ್ಷಿಕ ವರದಿಯ ಪುಟ ೬೦ರಲ್ಲಿ ನೋಡಿದರೆ ಎಲ್ಲಾ ವಿಷಯಗಳೂ ಗೊತ್ತಾಗುತ್ತದೆ ನಮ್ಮ ರಾಜ್ಯದಲ್ಲಿ ಒಟ್ಟು ೭ ದವಾಖಾನೆಗಳು ಮಾತ್ರ ಜಿಲ್ಲಾ ಮಟ್ಟದಲ್ಲಿವೆ. ಇದರಲ್ಲಿ ೩ ದವಾಖಾನೆಗಳು ದೊಡ್ಡವು. ಇನ್ನುಳಿದ ೪ ದವಾಖಾನೆಗಳು ಚಿಕ್ಕವು. ಈ ಚಿಕ್ಕ ದವಾಖಾನೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಇವೆ. ತಮ್ಮ ಒಂದು ವಾರ್ಷಿಕ ವರದಿಯನ್ನು ನಾವು ನೋಡಿದರೆ ಈ ಆಯುರ್ವೇದಿಕ್‌ಗೆ, ಹೋಮಿಯೋಪತಿಗೆ ಮತ್ತು ಯುನಾನಿಗೆ ಹೆಚ್ಚು ಲಕ್ಷ್ಯ ಕೊಟ್ಟಂತೆ ಕಾಣಲಿಲ್ಲ. ಈ ಒಂದು ದಿಸೆಯಲ್ಲಿ ನಾವು ನಮ್ಮ ಪಕ್ಕದ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳನ್ನು ಹೋಲಿಕೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿನ ಡಾಕ್ಟರ್‌ಗಳಿಗೆ ಯಾವ ರೀತಿ ಅನುದಾನ ಕೊಡುತ್ತಿದ್ದಾರೆ. ಅವರು ಅಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ತಮ್ಮ ಇಲಾಖಾ ಅಧಿಕಾರಿಗಳಿಂದ ಮಾಹಿತಿಯನ್ನು ಮಾನ್ಯ ಮಂತ್ರಿಗಳು ತರಿಸಿಕೊಂಡು ನೋಡಬೇಕು. ಆಮೇಲೆ ಅದೇ ರೀತಿಯ ಒಂದು ಪದ್ಧತಿಯನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಸಹ ಈ ಆಯುರ್ವೇದಿಕ್ ಬಗ್ಗೆ ಅಷ್ಟು ಪ್ರಗತಿದಾಯಕವಾದಂಥ ಕೆಲಸವನ್ನು ನಾವು ಮಾಡಿಲ್ಲ. ಇದು ನಿಮ್ಮ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ ೧೯೪೭-೪೮ ರಿಂದ ಎಲ್.ಎಮ್.ಪಿ. ಎಸ್. ಎಂ. ಪಿ. ವೈದ್ಯರು ಮಾಡಿಕೊಂಡಿದ್ದಂತಹ ೧೩೨ ಜನ ಡಾಕ್ಟರ್‌ಗಳನ್ನು ಬಾಂಬೆ ಕರ್ನಾಟಕ ಭಾಗದಲ್ಲಿ ಡಿ.ಬಿ. ಅಧ್ಯಕ್ಷರು ಆಗ ನೇಮಿಸಿಕೊಂಡಿದ್ದರು. ಅವರಿಗೆ ಈಗ ಕನಿಷ್ಟ ಪಕ್ಷ ೩೦೦ ರೂಪಾಯಿಗಳ ವೇತನವನ್ನು ಮಾತ್ರ ಕೊಡುತ್ತಿದ್ದಾರೆ. ಈ ಹಿಂದೆ ಬರೀ ೧೨೦ ರೂಪಾಯಿಗಳ ವೇತನವನ್ನು ಮಾತ್ರ ಕೊಡುತ್ತಿದ್ದರು. ಕಳೆದ ಎರಡು ವರ್ಷಗಳಿಂದೀಚೆಗೆ ಈ ೩೦೦ ರೂಪಾಯಿಗಳ ವೇತನ ಕೊಡುವಂತೆ ಮಾಡಿದರು. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ, ಈ ಡಾಕ್ಟರ್‌ಗಳನ್ನು ಖಾಯಂ ಮಾಡುವ ಬಗ್ಗೆ ಸನ್ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಅಂದರೆ ೨೧-೮-೭೭ರಲ್ಲಿ ಆಗಿನ ಸರ್ಕಾರ ಇವರನ್ನೆಲ್ಲಾ ಖಾಯಂ ಸರ್ಕಾರಿ ನೌಕರರನ್ನಾಗಿ ಮಾಡಿಕೊಳ್ಳಬೇಕೆಂದು ನಿಲುವು ತೆಗೆದುಕೊಂಡಿತ್ತು. ಆ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಹೆಚ್ಚು ಗಮನ ಕೊಟ್ಟು ಇವರನ್ನು ಈಗಲಾದರೂ ಖಾಯಂ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ನೂರಕ್ಕೆ ೫೦-೬೦ ಜನರು ವಯಸ್ಸಾದ ಮೇಲೆ ನಾನಾ ರೀತಿಯ ಬೇನೆಗಳಿಗೆ ತುತ್ತಾಗುತ್ತಾರೆ. ಅದಕ್ಕಾಗಿ ದೊಡ್ಡ ದೊಡ್ಡ ಪಟ್ಟಣಗಳಾದ ದಾವಣಗೆರೆ ಮುಂತಾದ ಜಾಗಗಳಲ್ಲಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ತಜ್ಞರ ಸಮಿತಿಯೊಂದನ್ನು ಮಾಡಿ ಅಲ್ಲಿ ಯಾರ್ಯಾರು ಇಂತಹವರು ಇರುತ್ತಾರೋ ಅವರಿಂದ ಕಂತಿನ ಆಧಾರದ ಮೇಲೆ ಹಣ ತೆಗೆದುಕೊಂಡು ಅವರ ಆರೋಗ್ಯವನ್ನು ಒಂದೇ ಕಡೆ ಚೆಕ್ ಮಾಡಿ ಅವರಿಗೆ ಚಿಕಿತ್ಸೆ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎಕ್ಸೈಜ್ ಬಗ್ಗೆ ಮಾತನಾಡುವುದಾದರೆ,

ಅಧ್ಯಕ್ಷರು.—೧೦ ನಿಮಿಷಗಳು ಮುಗಿಯಿತು. ತಾವು ದಯವಿಟ್ಟು ಮುಕ್ತಾಯ ಮಾಡಿ. ಇನ್ನೂ ಬೇಕಾದಷ್ಟು ಜನ ಮಾನ್ಯ ಸದಸ್ಯರು ಇದ್ದಾರೆ.

ಶ್ರೀ ಸಿ. ಸಿ. ಕಲ್ಕೋಟಿ.—ಈ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ರಾಜ್ಯಕ್ಕೆ ಬರತಕ್ಕಂಥ ಆದಾಯವನ್ನು ರೂಡಿಸಿಕೊಳ್ಳಬೇಕೆಂದು ಹೇಳಿ, ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಆರೋಗ್ಯ ಸಚಿವರು ಇಟ್ಟಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಪ್ರಜಾ ರಾಜ್ಯ ಬಂದಾಗಿನಿಂದ ನಾವು ವೆಲ್‌ಫೇರ್ ಸ್ಟೇಟ್ ಮಾಡುವ ಒಂದು ಉದ್ದೇಶ ಇಟ್ಟುಕೊಂಡಿದ್ದೆವು. ಬರಬರುತ್ತಾ ನಮ್ಮ ಯೋಜನೆಗಳು ಮತ್ತು ಸರ್ಕಾರ ಕೊಡುತ್ತಿರುವ ಸೌಲಭ್ಯಗಳನ್ನು ನೋಡಿದರೆ, ಈಗ ನಮ್ಮ ಸರ್ಕಾರ ಮಾಡುತ್ತಿರುವ ಯೋಜನೆಗಳು ಏನು ಇವೆ ಅವುಗಳಿಂದ ನಿಜವಾಗಿ ವೆಲ್‌ಫೇರ್ ಸೊಸೈಟಿಗೆ ಬೇಕಾದಂಥ ಅನೇಕ ಕಾರ್ಯಕ್ರಮಗಳು ಆಗುತ್ತಿಲ್ಲ. ಅದರಲ್ಲಿ ಮುಖ್ಯವಾಗಿ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಸೌಲಭ್ಯಗಳನ್ನು ಕೊಡುವಲ್ಲಿ ನಮ್ಮ ಸರ್ಕಾರ ವಿಫಲವಾಗಿದೆ. ನಮಗೆಲ್ಲಾ ಗೊತ್ತಿದ್ದಂತೆ ನಮ್ಮಲ್ಲಿ ಬಡ ಜನರು ಬಹಳ ಇದ್ದಾರೆ. ನಮ್ಮ ರಾಜ್ಯದಲ್ಲಿ ಹಾಗೂ ನಮ್ಮ ರಾಷ್ಟ್ರದಲ್ಲೇ ಬಹಳ ಜನ ಬಡವರೇ ಇದ್ದಾರೆ. ಅವರಿಗೆ ಸರ್ಕಾರ ಕೊಡುತ್ತಿರುವ ಆರೋಗ್ಯ ಸೌಲಭ್ಯ ಬಹಳ ಕಡಿಮೆ ಇದೆ. ವಿಶೇಷವಾಗಿ ನಾವು ಖರ್ಚು ಮಾಡುತ್ತಿರುವ ಹಣ ಆಸ್ಪತ್ರೆಗಳಲ್ಲಿ ಯಾವ ರೀತಿ ಸದುಪಯೋಗ ಆಗಬೇಕೋ ಆ ರೀತಿ ಆಗುತ್ತಿಲ್ಲ. ಈ ಆಸ್ಪತ್ರೆಗಳಲ್ಲಿ ಯಾವ ರೀತಿ ಅನ್ಯಾಯ ನಡೆಯುತ್ತಿದೆ ಎಂದು ಶ್ರೀಮತಿ ಮುಕ್ತಾರ್ ಉನ್ನಿಸಾ ಬೇಗಮ್ ರವರು ಹೇಳಿದಾಗ ಈ ಸದನದಲ್ಲಿ ಕೆಲವರು ನಗುತ್ತಿದ್ದರು. ಆಸ್ಪತ್ರೆಯಲ್ಲಿ ಇರುವ ಒಂದು ಅವ್ಯವಸ್ಥೆ ಬಗ್ಗೆ ಅವರು ಹೇಳುತ್ತಿದ್ದರು. ನಿಜವಾಗಿ ಇಂಥ ಅವ್ಯವಸ್ಥೆ ಇದೆಯಲ್ಲಾ ಎಂದು ನಾಚಿಕೆ ಪಟ್ಟುಕೊಳ್ಳಬೇಕು. ಆಸ್ಪತ್ರೆಗಳಲ್ಲಿ ಇರತಕ್ಕಂಥ ಅವ್ಯವಸ್ಥೆಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಕಡೆ ಅಂದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆ ಇದೆ. ಈ ಆಸ್ಪತ್ರೆ ಎಂದೇನೂ ಅಲ್ಲ, ಯಾವುದೇ ಆಸ್ಪತ್ರೆಗಳ ಚಿತ್ರಣವನ್ನು ತೆಗೆದುಕೊಂಡರೂ, ಇದೇ ಪರಿಸ್ಥಿತಿ ಇರುತ್ತದೆ. ಗುಲ್ಬರ್ಗಾ ಜಿಲ್ಲಾ ಆಸ್ಪತ್ರೆಗೆ ಮಾನ್ಯ ಆರೋಗ್ಯ ಮಂತ್ರಿಗಳು, ತಾವು ಈ ಖಾತೆ ವಹಿಸಿಕೊಂಡ ಮೇಲೆ ಇನ್ನೂ ಬಂದಿಲ್ಲ. ಈ ಆಸ್ಪತ್ರೆಯಲ್ಲಿ ಬಹಳ ಒಂದು ಕೆಟ್ಟ ಅವ್ಯವಸ್ಥೆ ಇದೆ. ಆಸ್ಪತ್ರೆಯ ವಾರ್ಡ್‌ಗಳಿಗೆ ಹೋಗಬೇಕಾದರೆ, ನಾವು ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಆ ಆಸ್ಪತ್ರೆಗೆ ಸರ್ಕಾರದಿಂದ ಬರುವ ಒಳ್ಳೊಳ್ಳೆಯ ಇಂಜಕ್ಷನ್ ಟ್ಯೂಬುಗಳನ್ನು ಮತ್ತು ಟ್ಯಾಬ್‌ಲೆಟ್‌ಗಳನ್ನು ಮಾರಿಕೊಳ್ಳುವಂಥ ಅಧಿಕಾರಿಗಳು ಅಲ್ಲಿ ಇದ್ದಾರೆ. ಅಧಿಕಾರಿಗಳ ಜೊತೆಗೆ ಡಾಕ್ಟರುಗಳೂ ಸಹ ಸೇರಿಕೊಂಡು ಔಷಧಿಗಳನ್ನು ಮಾರಿಕೊಳ್ಳುತ್ತಾರೆ. ಈ ರೀತಿಯ ಅನೇಕ ಉದಾಹರಣೆಗಳು ಅಲ್ಲಿ ಇವೆ. ಈ ಆಸ್ಪತ್ರೆಯಲ್ಲಿರತಕ್ಕಂಥ ಡಾಕ್ಟರುಗಳು ಎಕ್ಸ್‌ಪರ್ಟ್‌ಗಳಿದ್ದಾರೆ. ಆದರೆ, ಇವರು ತಮ್ಮ ಮನೆಯಲ್ಲಿ ಪ್ರಾಕ್ಟೀಸ್ ಮಾಡುತ್ತಾರೆಯೇ ವಿನಃ ಆಸ್ಪತ್ರೆಯಲ್ಲಿ ಶುಶ್ರೂಷೆ ಮಾಡುವುದಿಲ್ಲ. ರೋಗಿಗಳು ಮನೆಗೆ ಬಂದು ದುಡ್ಡು ಕೊಟ್ಟರೆ ಅವರುಗಳನ್ನು ಆಸ್ಪತ್ರೆಗೆ ಸೇರಿಸಿಕೊಂಡು ಒಳ್ಳೆಯ ಟ್ರೀಟ್‌ಮೆಂಟ್ ಕೊಡುತ್ತಾರೆ. ಮಧ್ಯಾಹ್ನದ ಮೇಲೆ ಡ್ಯೂಟಿಗೆ ಬಹುಶಃ ನೂರಕ್ಕೆ ಎಂಬತ್ತು ಡಾಕ್ಟರುಗಳು ಬರುವುದಿಲ್ಲ. ಇಂಥಹ ವ್ಯವಸ್ಥೆ ಗುಲ್ಬರ್ಗಾ ಜಿಲ್ಲಾ ಆಸ್ಪತ್ರೆಯಲ್ಲಿ ಇದೆ. ಇದಕ್ಕೆಲ್ಲಾ ಮುಖ್ಯ ಕಾರಣವೆಂದರೆ, ಸ್ಥಳೀಯವಾಗಿರುವ ಡಾಕ್ಟರುಗಳು ಅದೇ ಆಸ್ಪತ್ರೆಯಲ್ಲಿ ಸುಮಾರು ೫ ವರ್ಷದಿಂದ ೨೦ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಇವರುಗಳೆಲ್ಲಾ ಸ್ಥಳೀಯರೇ ಆಗಿದ್ದಾರೆ. ಅಲ್ಲಿನ ಸೂಪರಿಟೆಂಡೆಂಟ್‌ರವರ ಮಾತನ್ನು ಯಾವ ಡಾಕ್ಟರುಗಳೂ ಕೇಳುವುದಿಲ್ಲ, ಇವರುಗಳೇ ಅವರ ಮೇಲಧಿಕಾರಿಗಳಿಗೆ ನಿರ್ದೇಶನ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಮಾನ್ಯ ಆರೋಗ್ಯ ಮಂತ್ರಿಗಳು ಒಂದು ವೇಳೆ ನಿಜವಾಗಿ ಆರೋಗ್ಯ ಸೇವೆಯಲ್ಲಿ ಒಳ್ಳೆಯ ಒಂದು ಸೇವೆಯನ್ನು ಮಾಡಬೇಕೆಂದು ಇದ್ದರೆ, ಗುಲ್ಬರ್ಗಾ ಜಿಲ್ಲಾ ಆಸ್ಪತ್ರೆ ಮತ್ತು ಇನ್ನಿತರ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ೫ ವರ್ಷಕ್ಕಿಂತ ಹೆಚ್ಚು ಯಾರು ಕೆಲಸ ಮಾಡುತ್ತಿದ್ದಾರೋ ಅವರುಗಳನ್ನು ಕೂಡಲೇ ವರ್ಗಾವಣೆ ಮಾಡಬೇಕು. ಇವರನ್ನು ವರ್ಗಾವಣೆ ಮಾಡುವಾಗ ಯಾವುದೇ ರಾಜಕೀಯ ಒತ್ತಡ ಬಂದರೂ ಸಹ ತಾವು ಗಮನಕ್ಕೆ ತೆಗೆದುಕೊಳ್ಳದೆ ವರ್ಗಾವಣೆ ಮಾಡಬೇಕು. ಇನ್ನು ಗ್ರಾಮೀಣ ಕುಟುಂಬ ಕಲ್ಯಾಣ ಇಲಾಖೆ ಬಗ್ಗೆ ಹೇಳಬೇಕಾದರೆ ಗ್ರಾಮೀಣ ಕುಟುಂಬ ಕಲ್ಯಾಣ ಆಸ್ಪತ್ರೆಗಳಲ್ಲಿ ವೈದ್ಯರುಗಳೇ ಇರುವುದಿಲ್ಲ. ವೈದ್ಯರುಗಳು ಇದ್ದರೆ ಔಷಧಿಗಳೇ ಇರುವುದಿಲ್ಲ ಇವೆರಡೂ ಇದ್ದರೆ ಇನ್ನಿತರ ಸೌಲಭ್ಯಗಳು ಇರುವುದಿಲ್ಲ. ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ಹಸಿರು ಕಾರ್ಡ್‌ಗಳನ್ನು ಹಳ್ಳಿಗಳಲ್ಲಿ ಕೊಟ್ಟಿರುತ್ತಾರೆ. ಅದರ ಉದ್ದೇಶ ಎಂದರೆ, ಹಸಿರು ಕಾರ್ಡ್ ತೋರಿಸಿದವರಿಗೆ, ಅವರಿಗೆ ಬೇಕಾದಂಥ ಖಾಯಿಲೆಗೆ ಔಷಧಿಗಳು ಹಾಗೂ ವೈದ್ಯಕೀಯ ಸೇವೆಯನ್ನು ಉಚಿತವಾಗಿ ಕೊಡಬೇಕು ಎಂದು, ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ನಿಜವಾಗಿಯೂ

೪-೩೦ ಪಿ. ಎಂ.

ಅರ್ಹರಾದವರಿಗೆ, ಯಾರಿಗೂ ಇದರ ಸೌಲಭ್ಯ ಸಿಕ್ಕುತ್ತಾ ಇಲ್ಲ. ಅಲ್ಲಿ ಬೇಕಾದಂತಹ ತಜ್ಞ ವೈದ್ಯರಾಗಲೀ, ಮಕ್ಕಳ ವೈದ್ಯರಾಗಲೀ, ಔಷಧಿಗಳಾಗಲೀ, ಇಲ್ಲವೇ ಇಲ್ಲ. ಈ ರೀತಿಯಾಗಿ ಆರೋಗ್ಯ ಇಲಾಖೆಯಲ್ಲಿ ಖರ್ಚು ಮಾಡತಕ್ಕಂಥ ಹಣದಲ್ಲಿ ಶೇಕಡಾ ೭೫ ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ ಎಂದು ಕಾಣುತ್ತದೆ. ಆರೋಗ್ಯ ಇಲಾಖೆಯಲ್ಲಿರತಕ್ಕಂಥ ಅವ್ಯವಹಾರ ಅವ್ಯವಸ್ಥೆಗಳು ಎಲ್ಲಾ ಕಡೆಗಳಲ್ಲಿಯೂ ಇವೆ. ಎಲ್ಲಾ ಆಸ್ಪತ್ರೆಗಳಲ್ಲಿಯೂ ಈ ರೀತಿಯ ಒಂದು ಅವ್ಯವಸ್ಥೆ ನಡೆಯುತ್ತಾ ಇದೆ.

ಇನ್ನು ಅನೇಕ ಆಸ್ಪತ್ರೆಗಳಲ್ಲಿ ಎಕ್ಸ್‌ರೇ ಮೆಷೀನ್ ಇದ್ದರೂ ಕೂಡ ಅವುಗಳು ಕೆಟ್ಟಿರುತ್ತವೆ. ಒಂದು ವೇಳೆ ಮೆಷೀನ್‌ಗಳು ಸರಿಯಾಗಿ ಇದ್ದಲ್ಲಿ, ಅಲ್ಲಿ ಟೆಕ್ನೀಷಿಯನ್ಸ್ ಇರುವುದಿಲ್ಲ, ಅಥವಾ ಬೇಕಾದ ಫಿಲಂ ಮತ್ತಿತರ ವಸ್ತುಗಳು ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿಯನ್ನು ಅಲ್ಲಿ ಕಾಣಬಹುದು. ಈ ರೀತಿಯಾಗಿ ವ್ಯವಸ್ಥೆಯನ್ನು ಮಾಡಿಯೂ ಉಪಯೋಗವಿಲ್ಲದಂತೆ ಮಾಡಿರುವುದರ ಬದಲು ಆ ಸೌಲಭ್ಯಗಳು ಇಲ್ಲದೆ ಇರುವುದೇ ಒಳ್ಳೆಯದು ಎಂದು ಹೇಳಬೇಕಾಗುತ್ತದೆ.

ಈ ದಿಶೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಹಾರಗಳನ್ನು, ಅವ್ಯವಸ್ಥೆಗಳನ್ನು ಗುರುತಿಸುವ ಸಲುವಾಗಿ ತಜ್ಞರ ಒಂದು ಸಮಿತಿಯನ್ನು ಮಾಡಿ ಅವುಗಳನ್ನು ಗುರುತಿಸತಕ್ಕಂಥ ಮತ್ತು ಲೋಪ ದೋಷಗಳನ್ನು ಸಂಧಾರಣೆ ಮಾಡತಕ್ಕಂಥ ಒಂದು ಗುರುತರವಾದ ಕಾರ್ಯವನ್ನು ಈ ಸಲುವಾಗಿ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಇನ್ನು ಗ್ರಾಮೀಣ ಸಾಮೂಹಿಕ ಆರೋಗ್ಯ ಕಾರ್ಯಕರ್ತರು ನಮ್ಮ ರಾಜ್ಯದಲ್ಲಿ ೧೫,೩೭೮ ಜನರಿದ್ದಾರೆ ಎಂದು ತಿಳಿದು ಬಂದಿದೆ. ಊರಿಗೆ ಒಬ್ಬ ಆರೋಗ್ಯ ಕಾರ್ಯಕರ್ತರನ್ನು ನೇಮಿಸಿದ್ದಾರೆ, ಆದರೆ ಅವರಿಗೆ ಕೊಡತಕ್ಕಂಥ ಹಣ ಬಹಳ ಕಡಿಮೆ. ಕೇವಲ ೫೦ ರೂಪಾಯಿಗಳನ್ನು ಅವರಿಗೆ ಕೊಡುತ್ತಿದ್ದೀರಿ. ಮತ್ತು ೬೦೦ ರೂಪಾಯಿಗಳ ಔಷಧಿಗಳನ್ನು ಅವರಿಗೆ ಕೊಡುತ್ತಿದ್ದೀರಿ; ಸರಕಾರದ ಉದ್ದೇಶ ಒಳ್ಳೆಯದಾಗಿದ್ದರೂ, ಇದರಿಂದ ಊರಿಗೆ ಬೇಕಾದಂತಹ ಕನಿಷ್ಟ ಚಿಕಿತ್ಸೆಯನ್ನು ಕೊಡಲು ಅವರಿಗೆ ಸಾಧ್ಯವಾಗುವುದಿಲ್ಲ, ಆದಕಾರಣ ಅವರಿಗೆ ಬೇಕಾದಷ್ಟು ಔಷಧಿಗಳನ್ನು ಒದಗಿಸಿಕೊಡಬೇಕು ಮತ್ತು ಅವರಿಗೆ ಸರಿಯಾಗಿ ತರಬೇತಿಯನ್ನು ಸೂಕ್ತ ರೀತಿಯಲ್ಲಿ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಶಾಲಾ ಆರೋಗ್ಯ ಕಾರ್ಯಕ್ರಮದನ್ವಯ, ಕೇಂದ್ರ ಸರಕಾರದವರ ಸಹಾಯದಿಂದ, ಬೆಳಗಾವಿ ಮತ್ತು ಧಾರವಾಡ, ಜಿಲ್ಲೆಗಳಲ್ಲಿ ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಮಾಡುವುದು ಮತ್ತು ಶಿಕ್ಷಕರಿಗೆ ಆ ಕುರಿತು ತರಬೇತಿ ಕೊಡತಕ್ಕಂಥ ಒಂದು ಕಾರ್ಯಕ್ರಮ ಜಾರಿಯಲ್ಲಿದೆ. ಇದು ಕೂಡ ಒಂದು ಒಳ್ಳೆಯ ಕಾರ್ಯಕ್ರಮ. ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಕೊಡುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಮಾಡುವುದರ ಮೂಲಕ ರಾಜ್ಯದಲ್ಲಿನ ಎಲ್ಲಾ ಶಾಲಾ ಮಕ್ಕಳಿಗೂ ಒಂದು ಆರೋಗ್ಯ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಇನ್ನು ಕುಷ್ಟ ರೋಗ ನಿರ್ಮೂಲನ ಕಾರ್ಯಕ್ರಮದನ್ವಯ ಅನೇಕ ಕಡೆಗಳಲ್ಲಿ ಕುಷ್ಟ ರೋಗ ಚಿಕಿತ್ಸಾ ಕೇಂದ್ರಗಳು ಏನಿವೆ, ಅಲ್ಲಿ ವೈದ್ಯರುಗಳು ಇಲ್ಲ, ಒಂದು ವೇಳೆ ಇದ್ದರೂ ಕೂಡ ಅವರು ಸರಿಯಾದ ಸಮಯದಲ್ಲಿ ಚಿಕಿತ್ಸಾಲಯಕ್ಕೆ ಬಂದು ಹೋಗತಕ್ಕಂಥ ಸೌಜನ್ಯವನ್ನು ಕೂಡ ತೋರಿಸುವುದಿಲ್ಲ. ಕೇವಲ ಗುಲ್ಬರ್ಗದಲ್ಲಿ ನೌಕರಿ ಮಾಡಬೇಕೆಂಬ ಒಂದು ಕಾರಣಕ್ಕೋಸ್ಕರವಾಗಿ ಇಲ್ಲಿ ನೇಮಕವಾಗಿರುತ್ತಾರೆ, ಇಲ್ಲಿಗೆ ಪೋಸ್ಟಿಂಗ್ ಮಾಡಿಸಿಕೊಳ್ಳುತ್ತಾರೆ. ಆದರೆ ದವಾಖಾನೆಯಲ್ಲಿ ಕೆಲಸ ಮಾಡುವುದಕ್ಕೆ ಬದಲಾಗಿ ಮನೆಗಳಲ್ಲಿ ಪ್ರಾಕ್ಟೀಸ್ ಮಾಡುತ್ತಾರೆ. ಹೀಗಾಗಿ ಕುಷ್ಟ ರೋಗಿಗಳು ಎಲ್ಲಾ ಕಡೆಗಳಲ್ಲಿ ಅಷ್ಟು ಸಂಖ್ಯೆಯಲ್ಲಿ ಈ ಆರೋಗ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿಲ್ಲ, ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಗಮನಿಸಬೇಕು.

ಇನ್ನು ನೇತ್ರ ಚಿಕಿತ್ಸಾ ಸೌಲಭ್ಯ ಕೆಲವೇ ಆಸ್ಪತ್ರೆಗಳಲ್ಲಿ ಇದೆ. ಈ ನೇತ್ರ ಚಿಕಿತ್ಸೆ ಬಹಳ ಮುಖ್ಯವಾದುದು. ಆದಕಾರಣ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಾದರೂ ಈ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

ಇನ್ನು ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ಒಂದಿದೆ. ಇದರಲ್ಲಿಯೂ ಸಹ ಕೇಂದ್ರ ಸರಕಾರದವರಿಂದ ಅರ್ಧ ಭಾಗದಷ್ಟು ಧನಸಹಾಯ ಬರುತ್ತದೆ. ಆದರೆ ದುರ್ದೈವವಶಾತ್ ನಮ್ಮಲ್ಲಿ ಅನೇಕ ಕ್ಷಯರೋಗ ನಿಯಂತ್ರಣ ಕೇಂದ್ರಗಳಲ್ಲಿ ವರ್ಷದಲ್ಲಿ ಸುಮಾರು ೬ ತಿಂಗಳುಗಳಿಂದ ೮ ತಿಂಗಳವರೆಗೆ ಅಲ್ಲಿ ಔಷಧಿಗಳು ಇರುವುದಿಲ್ಲ. ಗ್ರಾಮಾಂತರ ರೋಗಿಗಳಿಗೆ ಚಿಕಿತ್ಸೆ ಕೊಡಬೇಕಾದರೆ ಔಷಧಿಗಳ ಸರಬರಾಜು ಸೂಕ್ತ ಪ್ರಮಾಣದಲ್ಲಿ ಇರಬೇಕು. ಅದಕ್ಕೆ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿ ಇನ್ನೂ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಗಮನಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಇನ್ನು ನಾರುಹುಣ್ಣು ನಿರ್ಮೂಲನ ಕಾರ್ಯಕ್ರಮ, ಇದೂ ಕೂಡ ಕೇಂದ್ರ ಸರಕಾರದ ಸಹಾಯ ದೊರೆಯುವ ಕಾರ್ಯಕ್ರಮವಾಗಿದೆ. ಇದು ಅನೇಕ ಗ್ರಾಮಗಳಲ್ಲಿ ಜನರನ್ನು ಕಾಡುವ ರೋಗವಾಗಿದ್ದು. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ, ಕುಡಿಯುವ ನೀರಿನ ವ್ಯವಸ್ಥೆಯಲ್ಲಿನ ದೋಷ. ಈ ರೋಗದ ನಿರ್ಮೂಲನೆ ಬಗ್ಗೆ ಬಹುಶಃ ಸರ್ಕಾರದವರು ಹೆಚ್ಚಿನ ಒಂದು ಆಸ್ಥೆಯನ್ನು ವಹಿಸಿ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ ಎಂದು ಕಾಣುತ್ತದೆ. ನಮ್ಮ ತಾಲ್ಲೂಕಿನಲ್ಲಿ ೨-೩ ಗ್ರಾಮಗಳಲ್ಲಿ ಈ ರೋಗದ ತೀವ್ರತೆ ಹೆಚ್ಚಿಗೆ ಇದೆ. ಮಾನ್ಯ ಮಂತ್ರಿಗಳು ಇದರ ಚಿಕಿತ್ಸೆ ಮತ್ತು ನಿರ್ಮೂಲನೆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿ, ಈ ಬಗ್ಗೆ ಹೆಚ್ಚಿನ ಹಣವನ್ನು ಕೂಡ ಒದಗಿಸಿಕೊಡಬೇಕೆಂದು ಕೇಳಿಕೊಂಡು, ಈ ರೋಗದ ನಿರ್ಮೂಲನೆ ಮಾಡುವುದರ ಬಗ್ಗೆ ಸೂಕ್ತ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಅಬ್ಕಾರಿ ಇಲಾಖೆಯ ಬಗ್ಗೆ ಒಂದು ಸಲಹೆ ಕೊಡುತ್ತೇನೆ. ಒಂದು ಸೇಂದಿ ಗಿಡಕ್ಕೆ ೨೫ ರೂ. ಕೊಡಬೇಕೆಂದು ರೂಲ್ ಇದೆ. ಆದರೆ ರೈತರಿಗೆ ಕಂಟ್ರಾಕ್ಟರ್‌ಗಳು ಮನಸ್ಸಿಗೆ ಬಂದಷ್ಟು ಕೊಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಒಂದು ಗಿಡಕ್ಕೆ ಕೇವಲ ೫—೧೦ ರೂ. ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ನಿಜವಾಗಿ ಅನ್ಯಾಯವಾಗುತ್ತಿದೆ. ಇದನ್ನು ತಪ್ಪಿಸಲು ೨೫ ರೂ.ಗಳನ್ನು ಸರ್ಕಾರವೇ ನೇರವಾಗಿ ರೈತರಿಗೆ ಕೊಡಬೇಕು ಇಲ್ಲದಿದ್ದರೆ ಕಂಪಲ್ಸರಿಯಾಗಿ ೨೫ ರೂ. ರೈತನ ಕೈ ಸೇರುವಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಧರ್ಮಪ್ಪ (ಸಾಗರ).—ಅಧ್ಯಕ್ಷರೇ, ನಾನು ಅಬ್ಕಾರಿ ಮತ್ತು ಆರೋಗ್ಯ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಮೊದಲು ಅಬ್ಕಾರಿ ಬಗ್ಗೆ ಮಾತನಾಡುತ್ತೇನೆ. ಇವತ್ತು ಏನು ಒಂದು ಸಂತೋಷ ಎಂದರೆ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ೩೦೦-೪೦೦ ಜನ ಸತ್ತಿದ್ದಂಥ ಘಟನೆ ಜನತಾ ಸರ್ಕಾರದ ಅವಧಿಯಲ್ಲಿ ಆಗಿಲ್ಲ. ಈ ಹೆಂಡ, ಸಾರಾಯಿ, ಬ್ರಾಂದಿ, ವಿಸ್ಕೀಗಳನ್ನು ಮಾರುವುದಕ್ಕೆ ಹೊಸ ಕಾನೂನು ಮಾಡಿದರೆ ಚೆನ್ನ ಎಂದು ನನಗೆ ಅನ್ನಿಸುತ್ತಿದೆ. ಹೇಗೆಂದರೆ, ನಮ್ಮ ಬೆಂಗಳೂರಿನಲಿ ಅರಳೇಪೇಟೆ, ಬಳೇಪೇಟೆ ಗಳಿರುವಂತೆ ಈ ಕಂಡಿತಗಳಿಗಾಗಿ ಊರ ಹೊರಗಡೆ ಒಂದು ಸಪರೇಟಾಗಿ ಕಾಲೋನಿ ಮಾಡಿಬಿಟ್ಟರೆ ಉಳಿದವರಿಗೆ ಸ್ವಲ್ಪ ನೆಮ್ಮದಿ ಸಿಕ್ಕಬಹುದೇನೋ ಎಂದು ನನಗನ್ನಿಸುತ್ತದೆ. ಊರ ಒಳಗಡೆ ಅಂಗಡಿಗಳಿಗೆ ಲೈಸೆನ್ಸ್ ಕೊಡಲು ಶುರು ಮಾಡಿದ್ದರಿಂದ, ಅದನ್ನು ಬೇಡ ಎಂದು ಅರ್ಜಿ ಹಾಕುವವರು ಕೆಲವರಾದರೆ, ಅಲ್ಲೇ ಅದನ್ನು ಮಾಡಬೇಕೆಂದು ಇನ್ನು ಕೆಲವರು ಅರ್ಜಿ ಹಾಕುತ್ತಾರೆ. ಇದರ ಬದಲಿಗೆ ಹೊರ ಹೊರಗಡೆ ಕಾಲೋನಿ ಮಾಡಿದರೆ, ಯಾರು ಬೇಕೋ ಅವರು ಹೋಗಿ ಎಷ್ಟು ಹೊತ್ತುಬೇಕೋ ಅಷ್ಟು ಕುಡಿದು ಬರಬಹುದು. ಇದು ನನ್ನ ಅಭಿಪ್ರಾಯ, ಸರ್ಕಾರ ಇದನ್ನು ಗಮನಿಸಬೇಕು. ಏಕೆಂದರೆ, ಬೆಂಗಳೂರಿನಂಥ ನಗರಗಳಲ್ಲಿ ಈ ಸಮಸ್ಯೆ ಅಷ್ಟಾಗಿ ಇಲ್ಲ, ಆದರೆ ನಮ್ಮ ಹಳ್ಳಿ ಮತ್ತು ಕಿರುಪಟ್ಟಣಗಳಲ್ಲಿ ಜನರಿಗೆ ಇವು ನೆಮ್ಮದಿಗೇಡುಗಳಾಗಿವೆ.

ಸಾರಾಯಿ ರೇಟ್ ಹೆಚ್ಚಿಸಿರುವುದು ಸ್ವಲ್ಪ ಜಾಸ್ತೀನೇ ಆಯಿತು. ಹೀಗೆ ಮಾಡಿದ್ದರಿಂದ ಆದಾಯ ಜಾಸ್ತಿ ಬರುವುದಕ್ಕಿಂತ ಆದಾಯ ಕಡಿಮೆಯಾಗಬಹುದೆಂದು ನನ್ನ ಅಂದಾಜು. ಕಳ್ಳಭಟ್ಟಿ ಎಲ್ಲೀಯವರೆಗೆ ಹೋಗಿದೆ ಎಂದರೆ ಈಗಿರುವ ರೇಟಿನ ಪ್ರಕಾರ ಬಿಳಿಯದು ಕೆಂಪದೂ ಎರಡೂ ಒಂದೇ ಆಗಿವೆ. ಅದಕ್ಕೇ ಜನ ಬಿಳಿಯದರ ಬದಲು ಕೆಂಪಿಗೇ ಹೋಗೋಣ ಎಂದು ಹೋಗಿ ಕುಡಿಯುತ್ತಾರೆ. ಆದ್ದರಿಂದ ಕಳ್ಳಭಟ್ಟಿಯನ್ನು ಬಂದ್ ಮಾಡಬೇಕೆಂದು ಸರ್ಕಾರಕ್ಕೆ ಮನಸ್ಸಿದ್ದರೆ, ಮೊದಲು ಸಾರಾಯಿಯ ರೇಟನ್ನು ಕಡಿಮೆ ಮಾಡಬೇಕು. ನಮ್ಮ ಹಳ್ಳಿ ಕಡೆ ಏನಾಗಿದೆ ಎಂದರೆ, ಹಳ್ಳಿಗಳ ಕಡೆ ಜನರೆಲ್ಲಾ ರಾತ್ರಿ ಹೊತ್ತು ಸಾಗರದ ಕಡೆ ಸಿಕ್ತಾರೆ. ಏಕೆ ಇವರೆಲ್ಲಾ ರಾತ್ರಿ ಹೊತ್ತು ಇಲ್ಲಿರ್ತಾರೆ

ಎಂದು ಕೇಳಿದರೆ ಅವರು 'ನೋಡಿ ಸಾರಾಯಿ ಅಷ್ಟೊಂದು ಘಾಟು ಬರುವುದಿಲ್ಲ ಮತ್ತು ಅದಕ್ಕಾಕೆ ಅಷ್ಟೊಂದು ರೇಟು ಕೊಟ್ಟು ಕುಡೀಬೇಕು ಎಂದು ಅಲ್ಲಿಂದ ಇಲ್ಲಿಗೆ ಬಸ್ ಹತ್ತೀವಿ' ಎನ್ನುತ್ತಾರೆ. ಇವತ್ತು ನಾವು ಬೆಲೆಯನ್ನು ಕಡಿಮೆ ಮಾಡಿದರೆ ಮಾತ್ರ. ಆದಾಯ ಜಾಸ್ತಿಯಾಗುತ್ತದೆಂದು ನನಗನ್ನಿಸುತ್ತದೆ, ಅನೇಕ ಜನ ಸಾಹುಕಾರರು ಇದನ್ನು ಕುಡಿಯುವುದಿಲ್ಲ. ಒಂದು ಕಡೆಯಿಂದ ಕಳ್ಳಬಟ್ಟಿ ಜಾಸ್ತಿಯಾಗುತ್ತದೆ. ಅಧಿಕಾರಿಗಳಂತೂ ಇದನ್ನು ಹಿಡಿಯುವ ಗೋಜಿಗೇ ಹೋಗುವುದಿಲ್ಲ. ಪೇಟೆಯಲ್ಲಿದ್ದುಕೊಂಡು ಮಾಮೂಲು ತೆಗೆದುಕೊಂಡು ಆರಾಮವಾಗಿರುತ್ತಾರೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಇದನ್ನು ಕಂಟ್ರೋಲ್ ಮಾಡಬೇಕೆಂದಿದ್ದರೆ, ಸಾರಾಯಿ ಬೆಲೆಯನ್ನು ಕಡಿಮೆ ಮಾಡಿದರೆ ಮಾತ್ರ ಹೆಚ್ಚಿನ ಆದಾಯ ತೆಗೆದುಕೊಳ್ಳಬಹುದೆಂದು ನನ್ನ ಅಭಿಪ್ರಾಯ. ಇದರ ಜೊತೆಗೆ ಕಳ್ಳಭಟ್ಟಿಯನ್ನು ನಿರ್ಮೂಲನ ಮಾಡುವುದಕ್ಕೆ ಸತತವಾಗಿ ಕಾರ್ಯಕ್ರಮ ಹಾಕದಿದ್ದರೆ ಕಳ್ಳಭಟ್ಟಿ ಇಡೀ ರಾಜ್ಯವನ್ನು ಅಕ್ರಮಿಸುವಂತಹ ಪರಿಸ್ಥಿತಿಗೆ ಹೋಗುತ್ತದೆ. ಒಂದು ಕಡೆ ಕುಡಿಯಬಾರದೆಂದು ಹೇಳಿ ಪಾನ ಸಂಯಮ ಸಮಿತಿಯನ್ನು ಮಾಡಿದ್ದೇವೆ, ಆದರೆ ಇನ್ನೊಂದು ಕಡೆ ಕುಡಿಯುವುದಕ್ಕೆ ಅಬ್ಕಾರಿ ಇಲಾಖೆ ಎಂದು ಮಾಡಿ ಇಟ್ಟಿದ್ದೇವೆ. ಎರಡೂ ಒಂದೇ ಕಡೆ ಇದ್ದು ಯಾವ ಕೆಲಸವೂ ಕೂಡ ಆಗುವುದಿಲ್ಲ. ಕಳ್ಳಭಟ್ಟಿಯನ್ನು ನಿರ್ಮೂಲನ ಮಾಡಿ ಸಾರಾಯಿ ಇರಬೇಕೆಂದು ಹೇಳುವುದಾದರೆ ಇದರ ಬೆಲೆಯನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಯಾವುದೇ ಆಸ್ಪತ್ರೆಗಳು ಕೂಡ ಸರಿಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ, ಬಹಳ ಕಾಲದಿಂದ ಆ ರೀತಿ ನಡೆಸಿಕೊಂಡು ಬಂದಿದ್ದಾರೆ. ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ಪ್ರಾರಂಭ ಮಾಡಿ ಎಂದು ನಾನು ಹೇಳುವುದಿಲ್ಲ. ಇರುವುದನ್ನು ಸರಿಯಾಗಿ ನಡೆಸಿಕೊಂಡು ಹೋದರೆ, ಅಲ್ಲಿಗೆ ವೈದ್ಯರನ್ನು ಕೊಟ್ಟರೆ, ಔಷಧಿ ಕೊಟ್ಟರೆ ಹಾಗೂ ಅದನ್ನು ಚೊಕ್ಕಟವಾಗಿ ಇಡುವಂತಹ ಕೆಲಸವನ್ನು ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಇನ್ನು ಅನೇಕ ಹಳೆಯ ಕಾಲದ ಆಸ್ಪತ್ರೆಗಳಲ್ಲಿ ಹಳೇ ಮಂಚಗಳಿದ್ದು, ಸೊಳ್ಳೆಗಳು, ತಿಗಣೆಗಳಿಂದ ಕೂಡಿದ್ದು ಅದನ್ನು ನೋಡಿದರೆ ಸಾಕು, ಒಳಗೆ ಹೋಗುವ ಮನಸ್ಸು ಬರುವುದಿಲ್ಲ, ಅದಕ್ಕೂ ಹೊಸ ಕಾಯಕಲ್ಪ ಮಾಡಬೇಕು. ವೈದ್ಯರಿಗೆ ಎಲ್ಲಾ ವಿದ್ಯೆ ಬರುತ್ತದೆ ಎಲ್ಲಾ ಮಾಡುತ್ತಾರೆ ಆದರೆ ದಯೆ ಎನ್ನುವಂತಹ ಭೋಧನೆಯನ್ನು ಅವರಿಗೆ ನೀಡುವುದಕ್ಕೆ ವ್ಯವಸ್ಥೆ ಮಾಡಿದರೆ ನಮ್ಮ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ. ಇನ್ನು ಬಹಳ ಬೇಜಾರಿನ ವಿಷಯವೆಂದರೆ, ಕುಟುಂಬ ಕಲ್ಯಾಣ ಯೋಜನೆಯ ಮುಖಾಂತರವಾಗಿ ಆಪರೇಷನ್ ಮಾಡುವ ವ್ಯವಸ್ಥೆ ಇದೆ. ದೊಡ್ಡ ದೊಡ್ಡ ಮನುಷ್ಯರಂತೂ ಯಾವುದೋ ಆಸ್ಪತ್ರೆಗೆ ಹೋಗಿ ಆಪರೇಷನ್ ಮಾಡಿಸಿಕೊಳ್ಳುತ್ತಾರೆ ಆದರೆ ಬಡ ಜನರ ಅವಸ್ಥೆಯನ್ನು ನೋಡಬೇಕು ಒಂದು ಬಾರಿಗೆ ೪೦೦—೫೦೦ ಜನರನ್ನು ತಂದು ದನಗಳನ್ನು ಕರೆದುಕೊಂಡು ಬಂದ ಹಾಗೆ ಕರೆದುಕೊಂಡು ಬಂದು ನಿಲ್ಲಿಸುತ್ತಾರೆ. ಕೇಂದ್ರ ಸರಕಾರದ ಸ್ಕೀಮ್, ರಾಜ್ಯ ಸರಕಾರದ ಸ್ಕೀಮ್ ಎಂದು ಹೇಳುತ್ತಾ ೩೦೦—೪೦೦ ಜನರಿಗೆ ಒಂದೇ ದಿನ ಆಪರೇಷನ್ ಮಾಡುವ ಇಂತಹ ವ್ಯವಸ್ಥೆಯನ್ನು ಎಲ್ಲೂ ಇಟ್ಟುಕೊಳ್ಳಬಾರದು. ಒಂದು ದಿನಕ್ಕೆ ೫೦—೧೦೦ ಜನರಿಗೆ ಮಾತ್ರ ಆಪರೇಷನ್ ಮಾಡಬೇಕು ಮತ್ತು ಅವರಿಗೆ ಉಳಿದುಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆ, ಸರಿಯಾದ ಚಿಕಿತ್ಸೆಯನ್ನು ಮಾಡಬೇಕು. ಮನುಷ್ಯರ ಮೇಲೆ ಇಂತಹ ಪ್ರಯೋಗ ಮಾಡುವುದು ಸರಿ ಕಾಣುವುದಿಲ್ಲ. ೫೦ ಜನರಿಗಿಂತ ಮೇಲೆ ಒಂದು ಸಾರಿ ಶಸ್ತ್ರಚಿಕಿತ್ಸೆಯನ್ನು ಎಲ್ಲೂ ಮಾಡಬಾರದು ಅನೇಕ ಸಾರಿ ಅನೇಕ ಕಡೆಗಳಲ್ಲಿ ಬಹಳ ಅವಮಾನದ ರೀತಿಯಲ್ಲಿ, ಅವಹೇಳನದ ರೀತಿಯಲ್ಲಿ ಬಡವರನ್ನು ತಂದು ನಿಲ್ಲಿಸಿ ಆಪರೇಷನ್ ಮಾಡುತ್ತಾರೆ, ದೊಡ್ಡ ಮನುಷ್ಯರನ್ನು ತಂದು ನಿಲ್ಲಿಸಿ ಮಾಡಿಸುವುದಕ್ಕೆ ತಯಾರಿಲ್ಲ. ಆಪರೇಷನ್ ಮಾಡಿಸಿಕೊಂಡರೆ ಇಷ್ಟು ಬಟ್ಟೆ ಕೊಡುತ್ತೇವೆಂದು ಹೇಳುತ್ತಾರೆ, ದೊಡ್ಡ ಕ್ಯಾಂಪ್ ಮಾಡುತ್ತಾರೆ. ಶಾಸಕರನ್ನು ಕರೆದುಕೊಂಡು ಬಂದು ಭಾಷಣ ಮಾಡಿಸುತ್ತಾರೆ. ನಂತರ ಅವರ ಗತಿ ಏನಾಯಿತು ಎಂದು ಯಾರೂ ಹೋಗಿ ನೋಡುವುದಿಲ್ಲ, ಅಂತಹ ಸ್ಥಿತಿಯಲ್ಲಿ ಆಪರೇಷನ್ ಮಾಡುವುದನ್ನು ನಾನು ವಿರೋಧ ಮಾಡುತ್ತೇನೆ. ನಮ್ಮಲ್ಲಿ ಅನೇಕ ದೊಡ್ಡ ದೊಡ್ಡ ರಾಜಕಾರಣಿಗಳಿಗೆ, ದೊಡ್ಡ ಕೆಲಸದಲ್ಲಿರುವವರಿಗೆ ದೊಡ್ಡ ಕಾಯಿಲೆ ಬಂದರೆ ಎಲ್ಲಿಗೆ ಬೇಕಾದರೂ ಕಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಪತ್ರಿಕೆಯ ವಾಚಕರ ವಾಣಿಯಲ್ಲಿ ನೋಡಿದರೆ ಗೊತ್ತಾಗುತ್ತದೆ. ನನ್ನ ಗಂಡನಿಗೆ ಹೃದಯಬೇನೆ ಇದೆ. ಮಾತ್ರ ಪಿಂಡ ಕೆಟ್ಟಿದೆ ನಮಗೆ ಸಹಾಯ ಮಾಡಿ ಎಂದು ಬರೆಯುತ್ತಾರೆ, ಇವರೂ ಕೂಡ ಮನುಷ್ಯರಲ್ಲವೇ? ಇವರಿಗೂ ಕೂಡ ಜೀವಿಸುವುದಕ್ಕೆ ಹಕ್ಕು ಇದೆ. ಆದ್ದರಿಂದ ಸರ್ಕಾರ ತನ್ನ ಶಕ್ತಿ ಮೀರಿ ಸಹಾಯ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇವತ್ತು ಕುಷ್ಟರೋಗ ನಿವಾರಣೆಗೋಸ್ಕರ ನಾವು ಏನೆಲ್ಲಾ ಕ್ರಮ ಕೈಗೊಂಡಿದ್ದರೂ ಕೂಡಾ ಯಾವುದೇ ಒಂದು ದೇವಸ್ಥಾನ, ಜಾತ್ರೆ ಹತ್ತಿರ ನಿಂತುಬಿಟ್ಟರೆ ರಾಶಿ ಜನ ಅಲ್ಲಿರುತ್ತಾರೆ. ಅವರೆಲ್ಲರನ್ನೂ ಕರೆದು ಕೊಂಡು ಹೋಗಿ ಒಳ್ಳೆಯ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವತ್ತು ನಾಗರೀಕರ ಸರ್ಕಾರ ಏನಿದೆ, ನಾಗರೀಕ ಜನ ಏನಿದ್ದಾರೆ, ಈ ರಸ್ತೆ ಮೇಲಿರುವ ಕುಷ್ಟರೋಗಿಗಳನ್ನು ಕೈ ಕಾಲು ಗಳನ್ನು ಕಳೆದುಕೊಂಡಿರುವವರನ್ನು ಕರೆದುಕೊಂಡು ಹೋಗಿ ಅವರಿಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇಂಥವರು ದೇವಸ್ಥಾನ, ಚರ್ಚು, ಮಸೀದಿ ಹತ್ತಿರ ಕೂತಿರುತ್ತಾರೆ. ಇನ್ನು ಸಂತೆ ನಡೆಯುವ ಜಾಗ ದಲ್ಲೆಲ್ಲಾ ಇವರು ಇರುತ್ತಾರೆ. ಜಾಸ್ತಿ ಜನ ಎಲ್ಲಿರುತ್ತಾರೋ ಅಲ್ಲಿ ಇವರು ಇರುತ್ತಾರೆ. ಇದು ಒಂದು ರೀತಿಯಲ್ಲಿ ಜಾಸ್ತಿ ಜನಕ್ಕೆ ಈ ರೋಗ ಹರಡುವುದಕ್ಕೆ ಕಾರಣವಾಗುತ್ತದೆ. ಅದನ್ನು ತಪ್ಪಿಸು ವುದಕ್ಕೋಸ್ಕರ ಇಂಥ ಜನಗಳಿಗೆ, ದಿಕ್ಕು ಇಲ್ಲದಂಥವರಿಗೆ ಯಾರಿಗೆ ಈ ರೋಗಗಳು ಇದೆಯೋ, ಅವರುಗಳಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಅವರನ್ನು ಸರಿಯಾಗಿ ನೋಡಿಕೊಳ್ಳುವಂತಾಗಬೇಕು ಎಂದು ಹೇಳಿ ಈ ಬೇಡಿಕೆಯ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ಬೇಡಿಕೆಯನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಶ್ರೀ ಐ. ಬಿ. ಶಂಕರ್‌ರವರು ಈಗ ಮಾತನಾಡಿ. ತಾವು ಕೂಡಾ ದಯವಿಟ್ಟು

೧೦ ನಿಮಿಷದಲ್ಲಿ ಮುಗಿಸಬೇಕು.

† ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಅಧ್ಯಕ್ಷರೇ, ಇವತ್ತು ಈ ಬೇಡಿಕೆ ಯನ್ನು ಸ್ವಾಗತಿಸುತ್ತಾ ಈಗಾಗಲೇ ನಮ್ಮ ಹಿರಿಯ ಶಾಸಕ ಮಿತ್ರರೊಬ್ಬರು ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಅವರು ಹೇಳಿದ್ದನ್ನು ನಾನು ಹೇಳಲಿಕ್ಕೆ ಹೋಗದೆ ನನ್ನ ಜಿಲ್ಲೆಗೆ ಸೀಮಿತಪಡಿಸಿ ಕೆಲವು ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಈಗಾಗಲೇ ಈ ಸದನದಲ್ಲಿ ಮಾಜಿ ಮತ್ತು ಹಾಲಿ ಸಚಿವರುಗಳು ಇದ್ದಾರೆ. ಈಗಾಗಲೇ ಹಿಂದಿನ ಸಚಿವರು ಮೂರು ವರ್ಷದಲ್ಲಿ ಈ ಚಿಕ್ಕ ಮಗಳೂರು ಆಸ್ಪತ್ರೆಯನ್ನು ಪೂರೈಸಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದರೂ ಕೂಡಾ ಇವತ್ತಿನ ವರೆಗೂ ಅಲ್ಲಿಗೆ ಒಂದು ಕಲ್ಲುಬಂದು ಬಿದ್ದಿಲ್ಲ. ಇದರಿಂದ ಆ ಒಂದು ಬೇಡಿಕೆ ಈಡೇರಿಲ್ಲ. ನಮ್ಮ ಆಸ್ಪತ್ರೆ ಸ್ಥಿತಿ ಇವತ್ತು ಚಿಂತಾಜನಕವಾಗಿದೆ. ಅಲ್ಲಿ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಇದನ್ನು ತಾವು ದಯವಿಟ್ಟು ಮನಗಂಡು ಈ ಟೆಂಡರ್‌ದಾರರ ಮತ್ತು ಕಂಟ್ರಾಕ್ಟರ್‌ಗಳ ನಡುವೆ ಇರುವ ಹೋರಾಟವನ್ನು ತಪ್ಪಿಸಿ ಕೂಡಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಈ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಹಾಕ ಬೇಕಾದರೆ, ಫಿಜಿಷಿಯನ್ ಹಾಕಬೇಕು ಎಂದರೆ ಆರು ಜನರನ್ನು ಹಾಕಿಬಿಡುವುದು. ಆದರೆ ಅಲ್ಲಿ ಸರ್ಜನ್ ಒಬ್ಬನೇ ಇರುತ್ತಾನೆ. ಈ ತರಹ ವ್ಯತ್ಯಾಸ ಇದೆ. ಆದ್ದರಿಂದ ಪ್ರತಿಯೊಂದು ಆಸ್ಪತ್ರೆಗಳಿಗೆ ನಿಯಮ ಬದ್ಧವಾಗಿ ಎರಡು ಜನ ಫಿಜಿಷಿಯನ್ ಹಾಕಿದರೆ ಎರಡು ಜನ ಸರ್ಜನ್‌ಗಳನ್ನು ಹಾಕಬೇಕಾಗುತ್ತದೆ. ಇ.ಎನ್.ಟಿ. ಡಾಕ್ಟರ್‌ಗಳನ್ನು ಅಲ್ಲಿ ಹಾಕಬೇಕಾಗುತ್ತದೆ. ಮೂಳೆ ತಜ್ಞರನ್ನು ಹಾಕಬೇಕಾಗುತ್ತದೆ. ಈ ರೀತಿಯಲ್ಲಿ ಮಾಡಿದರೆ ಮಾತ್ರ ಸರ್ಕಾರಿ ಆಸ್ಪತ್ರೆಗಳು ಉತ್ತಮಗೊಳ್ಳುತ್ತವೆ. ಇವತ್ತು ಇನ್ನೊಂದು ಏನಾಗಿದೆ ಎಂದರೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಓದಿ ಡಾಕ್ಟರ್ ಆಗಿರುತ್ತಾನೆ. ಅವನಿಗೆ ಪೋಸ್ಟಿಂಗ್ ಕೊಡಬೇಕಾದಂಥ ಕಾಲಕ್ಕೆ ಸಲಕರಣೆ ಇಲ್ಲದಂಥ ಆಸ್ಪತ್ರೆಗಳಿಗೆ ಹಾಕಿರತಕ್ಕಂಥದ್ದು ಎಷ್ಟೋ ನಿದರ್ಶನಗಳು ಇವೆ ಸಲಕರಣೆ ಇಲ್ಲದೇ ಇದ್ದರೆ ಡಾಕ್ಟರ್ ಏನು ಶಸ್ತ್ರಚಿಕಿತ್ಸೆ ಮಾಡುತ್ತಾನೆ? ಗೌರ್ನಮೆಂಟ್ ಆಸ್ಪತ್ರೆಗಳಲ್ಲಿ ಸರಿಯಾಗಿ ಸಲಕರಣೆಗಳೇ ಇರುವುದಿಲ್ಲ. ನಮ್ಮ ಚಿಕ್ಕಮಗಳೂರು ಜನರಲ್ ಆಸ್ಪತ್ರೆಯಲ್ಲಂತೂ ಇಲ್ಲವೇ ಇಲ್ಲ. ಈ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಡಿ.ಹೆಚ್.ಓ.ನಲ್ಲಿ ಡಾಕ್ಟರ್ ಇದ್ದರೆ ಅವರನ್ನೇ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರಚಿಕಿತ್ಸೆ ಮಾಡಿಸತಕ್ಕಂಥ ವ್ಯವಸ್ಥೆ ಇದೆ. ಆದ್ದರಿಂದ ಕೂಡಲೇ ಇಂಥದ್ದನ್ನು ಬಗೆಹರಿಸ ಬೇಕು ಎಂದು ಪ್ರಾರ್ಥಿಸುತ್ತೇನೆ. ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗೂ ಜನರೇಟರನ್ನು ಒದಗಿಸದೇ ಹೋದರೆ ರೋಗಿಗಳ ಸ್ಥಿತಿ ಚಿಂತಾಜನಕವಾಗುತ್ತದೆ. ಇದರ ಬಗ್ಗೆ ಹಿಂದಿನ ಮಂತ್ರಿಗಳು ಇದನ್ನು ಹಂತಹಂತವಾಗಿ ನೆರವೇರಿಸಿ ಕೊಡುತ್ತೇವೆ ಎಂದು ಭರವಸೆ ಕೊಟ್ಟರೂ ಆ ಪರಿಸ್ಥಿತಿಯು ಹಾಗೆಯೇ ಉಳಿದಿದೆ. ಇದರ ಜೊತೆಗೆ ಜಿಲ್ಲಾ ಆಸ್ಪತ್ರೆಗಳಿಗೆ ಬಹು ಮುಖ್ಯವಾಗಿ ಒಂದು ಜೀವಕ್ಕೆ ಬೇಕಾಗಿರುವುದು ಡ್ರಿಫ್ಸ್ ಇದನ್ನು ಮಂಗಳೂರಿನಿಂದ ತರಿಸಬೇಕಾದಂಥ ಪರಿಸ್ಥಿತಿ ಇದೆ. ನನ್ನ ಪ್ರಾರ್ಥನೆ ಇಷ್ಟೆ ನೀವು ಜಿಲ್ಲೆಯಲ್ಲಿ ಒಂದೊಂದು ಯೂನಿಟ್ ಕೊಟ್ಟಿದ್ದೇ ಆದರೆ ಈ ಒಂದು ಲೋಪದೋಷಗಳನ್ನು ಸರಿಪಡಿಸಿ

ಈ ಬಡ ಜನರು ಈ ಔಷಧಿ ಅಂಗಡಿಗಳಿಗೆ ಹೋಗುವುದನ್ನು ತಪ್ಪಿಸಬಹುದು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿಯ ಬಗ್ಗೆ ಹೇಳುವುದಾದರೆ, ಇದನ್ನು ಕೂಡಲೇ ಸರಿಪಡಿಸಿ ಎಂದು ಹೇಳುತ್ತೇನೆ. ಈ ಕೆಲಸವನ್ನು ತ್ವರಿತವಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ ಇದರಿಂದ ಸರ್ಕಾರಕ್ಕೆ ಖರ್ಚಿನ ಬಾಬ್ತು ಏನೂ ಇಲ್ಲ. ಇವನ್ನು ಕೂಡಲೇ ಮಾಡುವುದರಿಂದ, ಆಸ್ಪತ್ರೆಗಳಲ್ಲಿರುವ ಲೋಪದೋಷಗಳನ್ನು ನಾವು ಸರಿಪಡಿಸಬಹುದು ಎಂದು ಹೇಳುವುದರ ಜೊತೆಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಈ ಸಮಿತಿಗಳಲ್ಲಿ ಹೆಚ್ಚಿಗೆ ಪ್ರಾತಿನಿಧ್ಯ ನೀಡಿ ಎಂದು ಹೇಳುತ್ತೇನೆ. ಇನ್ನು ಹೆರಿಗೆ ಆಸ್ಪತ್ರೆಗಳಲ್ಲಿ ಸ್ಥಿತಿ ಬಹಳ ಚಿಂತಾಜನಕವಾಗಿದೆ.

ಕೆಲವು ಕಡೆ ದಾದಿಯರು ಗರ್ಭಿಣಿ ಹೆಂಗಸರನ್ನು ಹೆರಿಗೆಗೆ ಕರೆದುಕೊಂಡು ಹೋಗುವಾಗ ಅವರಿಗೆ ಇಷ್ಟು ಕೊಡಬೇಕೆಂದು ಹೇಳಿ ಸುಲಿಗೆ ಮಾಡುತ್ತಾರೆ. ಆದುದರಿಂದ ಈ ಸಂದರ್ಶನ ಸಮಿತಿಯಲ್ಲಿ ಹೆಂಗಸರನ್ನು ಸೇರಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಗಂಡಸರಿಗೆ ಅವರ ಕಷ್ಟ ಅಷ್ಟಾಗಿ ಗೊತ್ತಾಗುವುದಿಲ್ಲ. ಆದುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರನ್ನು ಸಂದರ್ಶನ ಸಮಿತಿಯಲ್ಲಿ ಸೇರಿಸಬೇಕು ಎಂದು ನಾನು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಏನೆಂದರೆ ಚಿಕ್ಕಮಗಳೂರಿನಲ್ಲಿ ಎಎನ್‌ಎಂ ಕ್ವಾಟರ್ಸ್ ಕಟ್ಟಿಸಲಿಕ್ಕೆ ಇಲಾಖೆಯವರ ಕೈಯಲ್ಲಿ ಇನ್ನೂ ಆಗಿಲ್ಲ. ಈಗ ಅಲ್ಲಿ ಡಿ. ಹೆಚ್. ಓ. ಆಫೀಸಿಗೆ ಒಂದು ಹಳೇ ಮನೆಯನ್ನು ತೆಗೆದುಕೊಂಡಿದ್ದಾರೆ. ಆ ಮನೆ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಆ ಮನೆಯಲ್ಲಿ ದನ ಮಲಗಿಕೊಳ್ಳುತ್ತಿದೆ. ಈ ಬಗ್ಗೆ ತಾವು ಆಸ್ಥೆ ವಹಿಸಿ, ಆ ಮನೆಯನ್ನು ನಿಮ್ಮ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಎ.ಎನ್.ಎಂ. ಕ್ವಾರ್ಟರ್ಸ್ ಕಟ್ಟಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಅಬ್ಕಾರಿ ಇಲಾಖೆ ಬಗ್ಗೆ ನನ್ನ ಒಂದು ಪ್ರಾರ್ಥನೆ ಏನೆಂದರೆ ಈವೊತ್ತು ಈ ಅಬ್ಕಾರಿ ಇಲಾಖೆ ಬಗ್ಗೆ ವಿಧಾನಸೌಧದ ಒಳಗೂ ಮತ್ತು ಹೊರಗೂ ಸಾಕಷ್ಟು ಪ್ರಚಾರ ನಡೆಯುತ್ತಾ ಇದೆ. ಇದರ ಬಗ್ಗೆ ಮಾನ್ಯ ಸಚಿವರಲ್ಲಿ ವಿಶೇಷವಾಗಿ ಪ್ರಾರ್ಥನೆ ಮಾಡುವುದೇನೆಂದರೆ, ಈಗ ಹರಾಜು ಸಿಸ್ಟಂ ಏನು ಇದೆ ಅದನ್ನು ದೊಡ್ಡ ದೊಡ್ಡ ಕಂಪನಿಗೆ ಕೊಡುವ ಬದಲು ಅದನ್ನು ಷಾಪ್‌ವೈಸ್ ಆಗಲಿ ಅಥವಾ ತಾಲ್ಲೂಕಾವೈಸ್ ಆಗಲಿ ಮಾಡಿದರೆ ಬಡವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡುವುದು ತಪ್ಪು. ಜೊತೆಗೆ ತಮ್ಮ ಹತ್ತಿರ ಲೀಗಲ್ ಸೆಲ್ ಏನು ಇದೆ ಅದು ಸರಿಯಾಗಿ ಕೆಲಸ ಮಾಡುತ್ತದೋ ಇಲ್ಲವೋ ಅನ್ನುವುದರ ಬಗ್ಗೆ ನಾವು ಪ್ರಶ್ನೆ ಹಾಕಬೇಕಾಗಿದೆ. ಇದು ಸುವ್ಯವಸ್ಥಿತವಾಗಬೇಕಾದರೆ, ನಿಮ್ಮ ಲೀಗಲ್ ಸೆಲ್‌ನಲ್ಲಿ ಇದರ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆದು ಈ ವಿಚಾರದಲ್ಲಿ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ ಜೊತೆಗೆ ಇನ್ನೊಂದು ವಿಚಾರ ಏನೆಂದರೆ ತಾವು ಒಂದು ಸಾರಿ ಟೂರ್ ಮಾಡಿ ನೋಡಬೇಕು. ನೀವು ನೇರವಾಗಿ ಅಂಗಡಿಯವರನ್ನು ಶಿಕ್ಷಿಸುವ ಬದಲು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇರುತ್ತಾರೋ ಅವರನ್ನು ಶಿಕ್ಷಿಸಿದರೆ ಚೆನ್ನಾಗಿರುತ್ತದೆ. ಅವರಿಂದ ಆಗತಕ್ಕಂಥಾ ಅನ್ಯಾಯಗಳು ತಪ್ಪುತ್ತದೆ ಎಂದು ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಕೆಟ್ಟ ಸಹವಾಸ ಇವೆ. ಆದುದರಿಂದ ತಮ್ಮ ಕಾಲದಲ್ಲಿಯಾದರೂ ಇದರ ಬಗ್ಗೆ ತಾವು ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಂಡು ಒಂದು ವ್ಯವಸ್ಥಿತವನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ನಾನು ಮೊದಲೇ ಹೇಳಿದ ಹಾಗೆ, ಈ ಆಸ್ಪತ್ರೆಗೆ ಜನರೇಟರ್ ಹಾಗೂ ಡಾಕ್ಟರ್‌ಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಇವರಿಗೆ ವಸತಿ ಸೌಕರ್ಯವನ್ನು ಮಾಡಿಕೊಡಬೇಕು. ಜೊತೆಗೆ ಈಗ ಅಲ್ಲಿ ಡಿ. ಹೆಚ್. ಓ. ಆಫೀಸು ಏನು ಇದೆ ಅದು ಶಿಥಿಲವಾಗಿರುವುದರಿಂದ ಅದನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಹೊಸದಾದ ಬಿಲ್ಡಿಂಗ್ ಅನ್ನು ಕಟ್ಟುವುದಕ್ಕೆ ಈ ವರ್ಷದ ಬಡ್ಜೆಟ್‌ನಲ್ಲಿ ಹಣವನ್ನು ಸ್ಯಾಂಕ್ಷನ್ ಮಾಡಿಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಇದರ ಬಗ್ಗೆ ಮಾತನಾಡುವವರು ಇನ್ನೂ ೧೨ ಜನರು ಇರುವುದರಿಂದ ಶ್ರೀ ಉಮರಬ್ಬನವರು ೧೦ ನಿಮಿಷದಲ್ಲಿ ಮುಗಿಸಬೇಕು ಎಂದು ಹೇಳುತ್ತೇನೆ. ಒಬ್ಬೊಬ್ಬರಿಗೆ ೧೦–೧೨ ನಿಮಿಷ ಎಂದರೂ ಕೂಡ ಎಲ್ಲರ ಚರ್ಚೆಯೂ ೬–೦೦ಕ್ಕೆ ಮುಗಿಯುತ್ತದೆ.

†ಶ್ರೀ ಬಿ. ಎ. ಉಮರಬ್ಬ (ವಿಟ್ಲಲ್).—ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ೧೦ ನಿಮಿಷ ಕಾಲಾವಕಾಶವನ್ನು ಕೊಟ್ಟಿದ್ದೀರಿ. ಹಾಗೂ ಬಹು ದೊಡ್ಡ ಇಲಾಖೆಗಳಾದ ಈ ಎರಡು ಇಲಾಖೆಗಳ ಮೇಲೂ ನಾನು ಮಾತನಾಡಬೇಕಾಗಿದೆ. ರಾಮಾಯಣ ಮಹಾಭಾರತ ಬಗ್ಗೆ ಒಟ್ಟು ೧೦ ನಿಮಿಷದಲ್ಲಿ ವಿಶ್ಲೇಷಣೆ ಮಾಡಬೇಕು ಎನ್ನುವ ಹಾಗೆ ನಾನು ಒಂದು ಮಾನಸಿಕವಾದ ಪರಿಸ್ಥಿತಿಯಲ್ಲಿ ಮಾತನಾಡಬೇಕಾಗಿದೆ. ಆದರೆ ತಮ್ಮ ಪರಿಸ್ಥಿತಿಯೂ ಕೂಡ ನಮಗೆ ಅರ್ಥವಾಗಿದೆ. ಈ ಒಂದು ವಿರೋಧಾಭಾಸವಾದಂಥ ವ್ಯವಸ್ಥೆಯನ್ನು ನಾವು ಪ್ರತಿ ಸ್ಥಳದಲ್ಲೂ ವಿಶೇಷವಾಗಿ ಕಾಣುತ್ತಿದ್ದೇವೆ. ಇದರಲ್ಲಿ ಪ್ರಮುಖವಾಗಿ ಹೇಳುವುದೇನೆಂದರೆ ಇದರಲ್ಲಿ ಆರೋಗ್ಯ ಮತ್ತು ಆರೋಗ್ಯವನ್ನ ಕೆಡಿಸತಕ್ಕಂಥ ಸಮಿಶ್ರ ಕೆಲಸಗಳು ಈ ಎರಡೂ ಇಲಾಖೆಗಳ ಬೇಡಿಕೆಗಳು ಇಂದು ಕೇಂದ್ರಿಕರಿಸಿರುವುದರಿಂದ, ಇದು ವಿರೋಧಾಭಾಸವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ.

ಅದರ ಜೊತೆಗೆ ನೀವು ಹಲವಾರು ವಿಚಾರಧಾರೆಗಳನ್ನು ಹರಿಸುವ ಪ್ರಯತ್ನವನ್ನು ಮಾಡುತ್ತಿದ್ದೀರಿ. ಈ ನಮ್ಮ ಗ್ರಾಮ ಸ್ವರಾಜ್ಯದ ಹಿನ್ನೆಲೆಯಲ್ಲಿ ನೀವು ಅನೇಕ ಮಾತುಗಳನ್ನು ಹೇಳಿಕೊಂಡು ಬಂದಿದ್ದೀರಿ. ಗ್ರಾಮ ಸ್ವರಾಜ್ಯದ ಬಗ್ಗೆ ಪೂಜ್ಯ ಮಹಾತ್ಮಗಾಂಧಿ ಅವರ ಕಲ್ಪನೆ ಯಾವ ರೀತಿ ಇತ್ತು ಎಂಬುದನ್ನು ತಾವು ಹೇಳುತ್ತೀರಿ ಆದರೆ ಪಾನನಿರೋಧದ ಬಗ್ಗೆ ಅವರ ಅಭಿಪ್ರಾಯ ಏನಿತ್ತು ಎಂಬುದನ್ನು ಮಾತ್ರ ನೀವು ಹೇಳುವುದಿಲ್ಲ. ಅವರ ಅಭಿಪ್ರಾಯದ ಬಗ್ಗೆ ನೀವು ಒಂದನ್ನು ಹೇಳಿ ಮತ್ತೊಂದನ್ನು ಬಿಟ್ಟರೆ. ನಿಮ್ಮ ವಿಚಾರಧಾರೆ ಈ ಬಗ್ಗೆ ಏನಿದೆ, ಅದು ಅರ್ಥಪೂರ್ಣವಾಗುವುದಿಲ್ಲ. ಗಾಂಧೀಜಿ ಅವರು ಇಡೀ ಜಗತ್ತಿಗೇ ಒಂದು ಹೊಸ ದಿಕ್ಕನ್ನು ಮತ್ತು ಒಂದು ಹೊಸ ಬೆಳಕನ್ನ ನೀಡಿದಂಥ ಮಹಾನ್ ಶಕ್ತಿ ಆಗಿದ್ದರು. ಆದ್ದರಿಂದ ಪಾನನಿರೋಧದ ಬಗ್ಗೆ ಅವರ ಕಲ್ಪನೆ ಏನಿತ್ತು ಎಂಬುದನ್ನು ಇಲ್ಲಿ ಹೇಳಿದರೆ ಕೇವಲ ಗ್ರಾಮ ಸ್ವರಾಜ್ಯದ ಬಗ್ಗೆ ಅವರಿಗಿದ್ದ ಕಲ್ಪನೆಯನ್ನು ಹೇಳಿದರೆ ಮತ್ತು ನಿಮ್ಮ ಅಭಿಪ್ರಾಯವನ್ನು ಕೇವಲ ಒಂದು ವಿಷಯಕ್ಕೆ ಮಾತ್ರ ಸೀಮಿತಗೊಳಿಸಿದರೆ ಅದು ಒಂದಕ್ಕೊಂದು ವಿರೋಧಾಭಾಸವಾಗುತ್ತದೆ. ಮಹಾತ್ಮಗಾಂಧಿ ಅವರ ಹೋರಾಟ ಕೇವಲ ಅಹಿಂಸೆ, ಅಸಹಕಾರ, ಸತ್ಯ ಮತ್ತು ತ್ಯಾಗ ಇವುಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಈ ರಾಷ್ಟ್ರವನ್ನು ಒಂದು ನಿರ್ದಿಷ್ಟವಾದ ಗುರಿಗೆ ಸಾಗಿಸಬೇಕೆಂಬ ಧ್ಯೇಯವನ್ನು ಅವರು ಇಟ್ಟುಕೊಂಡಿದ್ದರು. ಅವರು ಒಪ್ಪಿದ್ದ ಗ್ರಾಮಸ್ವರಾಜ್ಯವನ್ನು ಅನುಷ್ಠಾನದಲ್ಲಿ ತಂದಿದ್ದೇವೆ ಎಂಬ ಹೆಗ್ಗಳಿಕೆಯ ಮಾತನ್ನು ಒಂದು ಕಡೆ ತಾವು ಇಲ್ಲಿ ಹೇಳಿ, ಅವರು ಹೇಳುತ್ತಿದ್ದ ಪಾನನಿರೋಧವನ್ನು ಜಾರಿಗೆ ತರದಿದ್ದರೆ, ಇದು ಒಂದಕ್ಕೊಂದಕ್ಕೆ ವಿರೋಧಾಭಾಸವಾಗುತ್ತದೆಂದು ಹೇಳುತ್ತೇನೆ. ಪಾನನಿರೋಧವನ್ನು ಈ ರಾಷ್ಟ್ರದಲ್ಲಿ ಸಂಪೂರ್ಣವಾಗಿ ನಿಷಿದ್ಧ ಮಾಡಬೇಕೆಂದು ಹೇಳಿದ್ದರೂ ಸಹ ನೀವು ಅದನ್ನು ಜಾರಿಯಲ್ಲಿ ತರಲಿಲ್ಲ. ಇದು ಸಧ್ಯಕ್ಕೆ ಬೇಕು ಎನ್ನುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಇದರ ಬಗ್ಗೆ ಇಂದಲ್ಲ ನಾಳೆ ಈ ಸದನ ಮತ್ತು ಈ ನಾಡಿನ ಜನತೆ ಗಂಭೀರವಾಗಿ ಮತ್ತು ಅಮೂಲಾಗ್ರವಾಗಿ ಚಿಂತನೆ ಮಾಡಲೇಬೇಕಾಗುತ್ತದೆ. ಏಕೆಂದರೆ. ಇವೊತ್ತು ನೀವು ನಿಮ್ಮ ಅಭಿವೃದ್ಧಿ ಕಾರ್ಯಗಳಿಗೆ ಅಂದರೆ ರಸ್ತೆ ಕೆಲಸ, ಸೇತುವೆ ಕೆಲಸ ಮುಂತಾದುವಕ್ಕೆ ಹಣದ ಕೊರತೆ ಇದೆ ಎಂದು ಹೇಳಿ, ಆ ಒಂದು ಕಾರಣಕ್ಕೋಸ್ಕರವಾಗಿ ಈ ಒಂದು ಬಹು ದೊಡ್ಡ ಸಾಧನವಾದಂಥ ಹೆಂಡವನ್ನು ನೀವು ಉಪಯೋಗಿಸಿಕೊಂಡರೆ ನಿಮ್ಮ ರಸ್ತೆ ಮತ್ತು ಸೇತುವೆಗಳ ಕೆಲಸಗಳು ಆಗಬಹುದು. ಆದರೆ ಇದರಿಂದ ನಮ್ಮ ಸಮಾಜದ ಶಕ್ತಿ ದಿದಿನಂದ ದಿನಕ್ಕೆ ಸಂಪೂರ್ಣವಾಗಿ ಶಿಥಿಲವಾಗುತ್ತದೆ. ಅಷ್ಟೇ ಅಲ್ಲ, ನಮ್ಮ ಗ್ರಾಮಗಳು ಸಹ ಶಿಥಿಲವಾಗಬಹುದೆಂದು ಹೇಳುತ್ತೇನೆ. ಒಂದು ಕಡೆ ನೀವು ತಾಳಿಭಾಗ್ಯ ಯೋಜನೆಯನ್ನು ಜಾರಿಗೆ ತಂದು ಮತ್ತೊಂದು ಕಡೆ ಇದರ ಅನುಕೂಲ ಪಡೆದ ಸುಮಂಗಲಿಯರ ಬದುಕಿನಲ್ಲಿ ಶಾಂತಿಯನ್ನು ಕದಡುವಂಥ ಪರಿಸ್ಥಿತಿಯನ್ನು ಉಂಟು ಮಾಡುತ್ತಿರುವುದು ವಿಷಾದದ ಸಂಗತಿ ಆಗಿದೆ ಎಂದು ಹೇಳುತ್ತೇನೆ. ಇವೊತ್ತು ಜನರಿಗೆ ಬೇಕಾದಂಥ ಮೂಲಭೂತ ಸೌಲಭ್ಯಗಳು ಏನಿವೆ. ಅವುಗಳನ್ನು ಎಲ್ಲರಿಗೂ ಮುಟ್ಟಿಸುವಂತಹ ಕೆಲಸ ನಿಮ್ಮಿಂದ ಆಗುತ್ತಿಲ್ಲ, ಇವೊತ್ತು ಜನರು ಕುಡಿಯುವ ನೀರಿಗೆ ಒಂದು ಕಡೆ ಪರದಾಡುತ್ತಿದ್ದರೆ, ಮತ್ತೊಂದು ಕಡೆ ನೀವು ೭೫೦೦ ಜನರಿಗೆ ಒಂದರಂತೆ ಬ್ರಾಂದಿ ಅಂಗಡಿಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದು ಒಂದಕ್ಕೊಂದು ವಿರೋಧಾಭಾಸವಾಗುವುದಿಲ್ಲವೇ ? ಮಹಾತ್ಮಗಾಂಧಿ, ಲೋಹಿಯಾ ಹಾಗೂ ಜಯಪ್ರಕಾಶ್‌ನಾರಾಯಣ್ ಅವರುಗಳು ಈ ಮಧ್ಯಪಾನದ ಬಗ್ಗೆ ಒಂದು ನಿರ್ದಿಷ್ಟವಾದಂಥ ನಿಲುವನ್ನು ತಳೆದಿದ್ದರು. ಲೋಹಿಯಾ ಅವರು ಈ ಮಧ್ಯಪಾನ ಎಂಬುದು ಸಮಾಜಘಾತುಕವಾದುದು ಎಂದು ಹೇಳಿದ್ದರು. ಈ ದಿನ ಈ ಸಭೆಯಲ್ಲಿ ಶ್ರೀ ಲೋಹಿಯಾ ಅವರ ತತ್ವ ಮತ್ತು ಆದರ್ಶಗಳ ಮೇಲೆ ರಾಜಕೀಯ ಕ್ಷೇತ್ರಕ್ಕೆ ಬಂದು ಕೆಲಸ

ಮಾಡಿದವರು ಅದೇ ರೀತಿ ಮಹಾತ್ಮಗಾಂಧೀಜಿ ಅವರು ಮತ್ತು ಶ್ರೀ ಜಯಪ್ರಕಾಶ್‌ನಾರಾಯಣ್ ಅವರ ತತ್ವ ಮತ್ತು ಆದರ್ಶಗಳನ್ನು ಒಪ್ಪಿ ರಾಜಕೀಯ ಕ್ಷೇತ್ರಕ್ಕೆ ಬಂದವರು ಇದ್ದಾರೆ. ಈ ಮಹನೀಯರುಗಳ ತತ್ವ ಮತ್ತು ಸಿದ್ಧಾಂತಗಳನ್ನು ಒಪ್ಪಿರುವವರಿಗೆ ಈ ಪಾನನಿರೋಧವನ್ನು ಜಾರಿಗೆ ತರುವುದರ ಬಗ್ಗೆ ಎಷ್ಟರಮಟ್ಟಿಗೆ ಪ್ರಾಮಾಣಿಕತೆಯಿದೆ ಎಂಬುದೇ ಇಲ್ಲಿರುವಂಥ ಮುಖ್ಯವಾದ ಪ್ರಶ್ನೆ.

ಇನ್ನು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಕುಟುಂಬ ಕಲ್ಯಾಣ ಯೋಜನೆ ಏನಿದೆ ಇದನ್ನು ಜಾರಿಗೆ ತರಬೇಕಾದರೆ ಕೆಲವೊಂದು ಸಾಧನಗಳನ್ನು ಬಳಕೆ ಮಾಡಬೇಕಾಗುತ್ತದೆ. ಇದಕ್ಕಾಗಿ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡುವುದರ ಮೂಲಕ ಇದನ್ನು ಪ್ರಚಾರ ಮಾಡುತ್ತಿದ್ದಾರೆ. ಒಂದು ಕಡೆ ಕುಟುಂಬ ನಿಯಂತ್ರಣದ ಬಗ್ಗೆ ಪ್ರಚಾರ ಮಾಡುತ್ತಿದ್ದೀರಿ. ಆದರೆ ಅದನ್ನು ಜಾರಿಯಲ್ಲಿ ತರಬೇಕಾದವರು ರಾತ್ರಿ ಸಮಯದಲ್ಲಿ ಸರಾಯಿ ಕುಡಿದರೆ ತಮ್ಮ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ? ಇದನ್ನು ನೀವು ಯೋಚನೆ ಮಾಡಿದ್ದೀರಾ? ಸಾರಾಯಿ ಕುಡಿಯುವವರಿಗೆ ಈ ಕುಟುಂಬ ನಿಯಂತ್ರಣದ ಬಗ್ಗೆ ಸೋಲನ್ನು ಅನುಭವಿಸುವಂಥ ಪ್ರಸಂಗ ಬರುತ್ತಿದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

೫–೦೦ ಪಿ.ಎಂ.

ಆದುದರಿಂದ ಯಾರೇ ಮಹಾನವ್ಯಕ್ತಿಯಾಗಲಿ, ಪೂಜ್ಯ ಗಾಂಧೀಜಿಯವರಾಗಲಿ, ಯಾರೇ ಆಗಲಿ, ನಾವು ಇಲ್ಲಿ ಒಂದು ವಿಪರ್ಯಾಸದ ರೀತಿಯಲ್ಲಾಗಲಿ ಅಥವಾ ನಮ್ಮ ರಾಜಕೀಯ ಮಾರುಕಟ್ಟೆಯ ಜಾಹೀರಾತಿನ ವಸ್ತುಗಳ ಬಳಕೆಯ ರೀತಿಯಲ್ಲಾಗಲೀ ಆಗದೆ ಸಮಗ್ರ ರೂಪದಲ್ಲಿ ಅವರ ಚಿಂತನೆ ಏನಿತ್ತು ಅದನ್ನು ಪರಿಪೂರ್ಣವಾಗಿ ಸಮಾಜದಲ್ಲಿ ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವುಂಟು ಎನ್ನುವಂಥ ಚಿಂತನೆ ಅಗತ್ಯ. ೧೯೬೭ರಲ್ಲಿ ಮಾನ್ಯ ಹೆಗಡೆಯವರು ಅರ್ಥಸಚಿವರಾದಂಥ ಸಂದರ್ಭದಲ್ಲಿ ಒಂದು ಮಾತನ್ನು, ಹಾರಿಕೆಯ ಮಾತನ್ನು ತಮ್ಮ ಬಡ್ಜೆಟ್‌ನಲ್ಲಿ ಹೇಳಿಕೊಂಡು ಬರುತ್ತಾರೆ. ಪಾನನಿಷೇಧದ ಬಗ್ಗೆ ಮರು ಚಿಂತನೆ ಅವಶ್ಯಕತೆ ಇದೆ ಎಂದು. ಅನಂತರ ಮರುಚಿಂತನೆಯ ಅವಶ್ಯಕತೆ ಇಲ್ಲದೆ ಕೇವಲ ಒಂದು ಲೈನಿನ ಒಂದು ಆರ್ಡರ್ ಮೂಲಕ ಅಥವಾ ಬದಲಾವಣೆಯ ಮೂಲಕ ಪಾನನಿಷೇಧ ರದ್ದುಗೊಳಿಸಲಾಯಿತು ಮತ್ತು ಮದ್ಯಪಾನದ ಕರಾಳಛಾಯೆ ಪಟ್ಟಣದಿಂದ ಹಳ್ಳಿಯವರೆಗೆ ಮನೆ ಮನೆಗಳಿಗೆ ಚಾಚುತ್ತಾ ಬರುವಂಥಾದ್ದನ್ನು ನಾವು ಕಂಡಿದ್ದೇವೆ. ಅಂದರೆ ೧೨೦೦೦ ಸಾರಾಯಿ ಅಂಗಡಿಗಳಿಗೆ ಏಕ ಕಾಲದಲ್ಲಿ ತಾನೇ ಲೈಸನ್ಸ್ ಕೊಡುವಂಥಾದ್ದು ನಡೆಯಿತು. ಅದರ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ಏನಿದೆ ಅದನ್ನು ಹೇಳಲಿಕ್ಕೆ ಬಯಸುವುದಿಲ್ಲ. ಆಗ ಸಚಿವರಾದಂಥ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಅಂದೇ ವಿರೋಧ ಮಾಡಿ ರಾಜೀನಾಮೆ ಕೊಡತಕ್ಕ ಕಾಲ ಬಂದಿತ್ತು. ಆದರೆ ವಿರೋಧ ನಿಲ್ಲಲಿಲ್ಲ. ದಿನದಿಂದ ದಿನಕ್ಕೆ ಬೆಳೆದು ಬೆಳೆದು ಕೇವಲ ಒಂದು ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಮಾತ್ರವಲ್ಲ ರಾಜಕೀಯ ಕ್ಷೇತ್ರದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಇಂದು ತನ್ನ ಕಪಿಮುಷ್ಟಿಯನ್ನು ಈ ಸಾರಾಯಿ ಲಾಬಿ ಏನಿದೆ, ಹೆಂಡದ ಲಾಬಿ ಏನಿದೆ ಇದು ಹಿಡಿದುಕೊಂಡಿತು. ಸ್ಪಷ್ಟವಾಗಿ ನಾವು ಎಲ್ಲಾ ಕಡೆ ಅದರ ಗುರುತುಗಳನ್ನು ಕಾಣುತ್ತಾ ಇದ್ದೇವೆ. ಎಲ್ಲಾ ಕಡೆ ತನ್ನ ಪ್ರಭಾವವನ್ನು ಬೀರುವಂಥಾದ್ದು, ಎಲ್ಲಾ ಕಡೆ ತನ್ನ ಪ್ರಭಾವದ ಮೂಲಕ ತನ್ನ ಬೇರುಗಳನ್ನು ಈ ನೆಲದಲ್ಲಿ ಆಳದಿಂದ ಆಳಕ್ಕೆ ಹಿಗ್ಗಿಸಿಕೊಂಡು ಹೋಗುತ್ತದೆ. ಹೀಗೆ ನೆಲದ ಆಳಕ್ಕೆ ಹೋದಂಥ ಬೇರುಗಳು ಪ್ರತಿದಿನ ನೆಲದ ಸಾರವನ್ನು ಹೀರಿ ಹೀರಿ ಒಂದು ದಿನ ಈ ಜನಾಂಗ, ಈ ನಾಡು ಬರಿದಾಗುವಂತಹ ಕಾಲ ಹೆಚ್ಚು ದೂರ ಇಲ್ಲ ಎಂದು ಭಾವಿಸಿರುವುದರಿಂದ ಈ ಬಗ್ಗೆ ಗಂಭೀರವಾಗಿ ಚಿಂತನೆ ಅವಶ್ಯಕತೆ ಇದೆ. ಅಭಿವೃದ್ಧಿ ಕಾರ್ಯಗಳು ಸ್ವಲ್ಪ ಕುಂಠಿತವಾದರೂ ಚಿಂತೆಯಿಲ್ಲ ಅಥವಾ ಯಾವುದೇ ರೂಪದಲ್ಲಿ ಜನರ ಮೇಲೆ ಕರಭಾರ ಹೇರಿ ಆ ಹಣದ ಮೂಲಕ ರಾಜ್ಯ ಸರ್ಕಾರವನ್ನು ನಡೆಸುವಂಥಾದ್ದನ್ನು ನಾವು ಮಾಡಿದರೂ ಚಿಂತೆಯಿಲ್ಲ, ಆದರೆ ಜನರನ್ನು ಒಂದು ರೀತಿಯಲ್ಲಿ ಪರೋಕ್ಷವಾಗಿ ವಂಚಿಸುವಂತಹ ಈ ಕಾರ್ಯಕ್ರಮ ಏನಿದೆ ಇದರ ಬಗ್ಗೆ ನಿಜವಾಗಿಯೂ ನಿಮಗೆ ಸಾಮಾಜಿಕ ಕಳಕಳಿ ಇದ್ದರೆ ಗಂಭೀರವಾಗಿ ಇವತ್ತು ಚಿಂತನೆ ಮಾಡಲೇಬೇಕು. ಇಲ್ಲದೇಹೋದರೆ ನರನಾಡಿಗಳು ದುರ್ಬಲವಾಗುತ್ತದೆ. ಇಂದು ನಮ್ಮ ಸಾರಾಯಿ ಕೇವಲ ನಾವು ಭಾವಿಸಿದ ಒಂದು ಅವತಾರದಲ್ಲಿ ಮಾತ್ರವಲ್ಲದೆ ಹಣಗಳಿಕೆಯ ಏಕ ಉದ್ದೇಶವನ್ನಿಟ್ಟುಕೊಂಡು ಅದನ್ನು ಕಲಬೆರಕೆಯ ಮೂಲಕ ಮಾಡುತ್ತಿದ್ದಾರೆ. ಇವತ್ತು ಭಟ್ಟಿಸಾರಾಯಿ ಬಗ್ಗೆ ಯಾವ

ಒಂದು ಭಾವನೆಯನ್ನು ನಾವು ತಳೆದಿದ್ದೇವೊ ಇಂದು ಮಾರುಕಟ್ಟೆಯಲ್ಲಿ ಸಿಗುವಂತಹ ಯಾವುದೇ ಭಟ್ಟಿ ಸಾರಾಯಿಗಿಂತ ಉತ್ತಮವಾದ ಸಾರಾಯಿ ಬಡ ಜನರಿಗೆ ಸಿಗುತ್ತಿದೆಯೋ ಎಂದು ಹೇಳಿದರೆ ಅದು ಅರ್ಥ ಪೂರ್ಣ ಆಗಲಿಕ್ಕಿಲ್ಲ ಎಂದು ಭಾವಿಸಿಕೊಂಡಿದ್ದೇನೆ. ೫-೬-೭ ವರ್ಷ ಕುಡಿದಂತಹ ಕೂಲಿಗಾರರು ಆಗಿರ ಬಹುದು, ಕೃಷಿಕಾರ್ಮಿಕರು ಆಗಿರಬಹುದು ಅವರು ಗಂಟಲುನೋವು, ಸೊಂಟ ನೋವುಗಳ ಮೂಲಕ ದುಡಿಮೆಯ ಶಕ್ತಿಯನ್ನು ಕಳೆದು ಕೊಳ್ಳುವಂಥಾದನ್ನು ನಾವು ನೋಡುತ್ತಿದ್ದೇವೆ. ಚಿಂತನೆ ಮಾಡುವಂಥ ಜನಾಂಗದಲ್ಲೂ ಮಾನಸಿಕವಾಗಿ ಒತ್ತಡದಲ್ಲೂ ಸಹ ಸುಫಲತೆಯನ್ನು ಕಾಣುವುದಾದರೆ ಜನಾಂಗವನ್ನೇ ಪೂರ್ಣವಾದ ರೀತಿಯಲ್ಲಿ ನಿಧಾನವಾಗಿ ನಿಧಾನ ವಿಷಪಾನದ ಮೂಲಕ ಮುಗಿಸುವಂತಹ ಒಂದು ವ್ಯವಸ್ಥೆಯನ್ನು ಯಾರೂ ಒಪ್ಪುವಂಥಾದ್ದಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದರಲ್ಲಿ ಎಷ್ಟು ಜನರನ್ನು ಹಣದ ಮೂಲಕ ನೀವು ಹೀರುತ್ತಿದ್ದೀರಿ, ಅವರ ಆರೋಗ್ಯವನ್ನು ಹೀರುತ್ತಿದ್ದೀರಿ ಇದನ್ನು ಕೇವಲ ಬೆರಳೆಣಿಕೆಯಷ್ಟು ಜನರನ್ನು ನಾವು ಬೆಳಸುವಂತಹ ವ್ಯವಸ್ಥೆಗೆ ಒಗ್ಗಿಕೊಂಡು ಅದನ್ನು ಮಾಡುತ್ತಿದ್ದೇವೆ ಎಂದು ಹೇಳಿದರೆ ನಾವೆಲ್ಲರೂ ನಾಚಿಕೆ ಪಡುವಂಥಾದ್ದು. ಯಾವುದನ್ನು ಬೇಕಾದರೂ ಭಾವಿಸಿ ಕೊಳ್ಳುವ. ಒಮ್ಮೆ ಪಾನನಿಷೇಧವನ್ನು ರದ್ದುಮಾಡಿದ್ದು ತಪ್ಪು ಎಂದು ಹೇಳಿ ಶ್ರೀಮಂತಿ ಯಶೋಧರಮ್ಮ ದಾಸಪ್ಪನವರು ರಾಜಿನಾಮೆ ಕೊಟ್ಟರೆ ಇವತ್ತು ಅನೇಕ ದಾಸಪ್ಪಗಳನ್ನು ಬೆಳೆಸುವಂಥ ಕೆಲಸ ಈ ಅಬ್ಕಾರಿ ಮೂಲಕ ಆಗಿದೆ. ಕೋರ್ಟಿನಿಂದ ಯಾವುದೇ ತೀರ್ಪು ಇರಲಿ ಅದನ್ನು ಮೀರಿ ನಿಂತು ಅವರು ಬೆಳೆಯಬೇಕು. ಎನ್ನುವಷ್ಟರಮಟ್ಟಿಗೆ ನಾವು ದಾಷ್ಟ್ರ್ಯವನ್ನು ಮನಸ್ಸಿನಲ್ಲಿ ಬೆಳೆಸಿಕೊಂಡಿದ್ದೇವೆ ಎಂದು ಹೇಳಿದರೆ ನಮಗೆ ಯಾವುದೇರೀತಿಯ ನೈತಿಕವಾದಂಥ ಅಧಃಪತನ ಆಗಿವೆ ಎನ್ನುವಂಥಾದ್ದು ಬಹಳ ಮುಖ್ಯವಾದಂಥಾದ್ದು. ಮಾನ್ಯ ಕೃಷ್ಣಪ್ಪನವರು ಇಲ್ಲೇ ಇದ್ದಾರೆ. ಒಮ್ಮೆ ಕಾರ್ಪೊರೇಷನ್ ಮೂಲಕ ಬಾಟ್ಲಿಗಳಲ್ಲಿ ಕೊಡುವಂತಹ ವಿಚಾರ ಇಲ್ಲಿ ಆಯಿತು. ಅನಂತರ ಶುದ್ಧ ಸಾರಾಯಿ ಕೊಡುವಂತಹ ವಿಚಾರಧಾರೆಯ ಹಿನ್ನೆಲೆಯಲ್ಲಿ ನಡೆದ ವಿಚಾರ ಹೇಳಬೇಕಾಗುತ್ತದೆ. ಅನಂತರ ಕೋರ್ಟ್ ರದ್ದುಪಡಿಸಿತು, ಕಾರ್ಪೊರೇಷನ್ನೂ ಇಲ್ಲ, ಮತ್ತೆ ಖಾಸಗಿ ಡಿಸ್ಟಲರೀಸ್ ಯಾವುದು ಇದೆ ಅದಕ್ಕೆ ಕೊಡುವುದಿಲ್ಲ ಎನ್ನುವಂಥ ವಿಚಾರಧಾರೆ ಏನಿತ್ತು ಅದೂ ಇಲ್ಲ. ೧೮೦ ಜನ ಅರ್ಜಿಗಳನ್ನು ಹಾಕಿದಾಗ ಈ ೧೮೦ ಜನರನ್ನು ಯಾವುದೇ ರೀತಿಯ ಪರಿಶೀಲನೆಗೆ ಒಳಪಡಿಸದೆ ಮತ್ತೆ ೮ ಜನರ ಕೈಗೆ, ಅವರ ಕಪಿಮುಷ್ಟಿಗೆ ಈ ಬಾಟ್ಲಿಗಳನ್ನು ಕೊಡುವಂಥಾದ್ದು, ಲೈಸನ್ಸ್ ಕೊಡುವಂಥಾದ್ದು ಆಯಿತು. ಈ ಪರಿಸ್ಥಿತಿಗೆ ಸಹ ನಾವು ಬಂದಿದ್ದೇವೆ. ಆದುದರಿಂದ ಒಂದು ಪೂರ್ಣ ವಿರಾಮವನ್ನು ಈ ಅವ್ಯವಸ್ಥೆಗೆ ಒಡ್ಡುವಂತಹ ತೀವ್ರ ಅವಶ್ಯಕತೆ ಖಂಡಿತ ಇದೆ ಎನ್ನುವಂಥ ಒಂದು ವಿಚಾರಧಾರೆಯ ಹಿನ್ನೆಲೆಯಲ್ಲಿ ಹೇಳುವುದಿಷ್ಟೆ.

ಕೇಂದ್ರಸರ್ಕಾರದಿಂದ ಪರವಾನಗಿ ಸಿಗದಿದ್ದರೂ ನಿರಾಶೆ ಇಲ್ಲದೆ, ರಾಜ್ಯಸರ್ಕಾರ ಜವಾಬ್ದಾರಿಯುತವಾಗಿ, ಜವಾಬ್ದಾರಿ ಪೂರ್ಣವಾಗಿ ನಡೆಸಬೇಕಾದ ಅಗತ್ಯ ಇದೆ. ಎಲ್ಲವನ್ನೂ ತಪ್ಪಿಸಿ ನಿಷೇಧವಾಗುವವರೆಗೂ ನಿಲುವನ್ನೂ ಬದಲಾವಣೆ ಮಾಡುವುದರ ಮೂಲಕ ಕೆಳಗಿನ ಹಂತದಲ್ಲಿ ರೀಟೈಲ್ ಮಾರಾಟ ಮಾಡುವುದನ್ನು ಸರ್ಕಾರವೇ ತನ್ನ ಪೂರ್ಣ ನಿಯಂತ್ರಣಕ್ಕೆ ಇಟ್ಟುಕೊಂಡು ಖಾಸಗೀ ವ್ಯಕ್ತಿಗಳು ಪ್ರವೇಶ ಮಾಡಿ ಕೈಯಾಡಿಸಿ. ಕೈಯಾಡಿಸಿದಾತ ಕೈಗಳು ದಿನದಿನಕ್ಕೆ ಬೆಳೆಯುತ್ತಾ ಬೆಳೆಯುತ್ತಾ ಸಂಪಾದಿಸುವ ಶಕ್ತಿಯ ಮೂಲಕ ಎಲ್ಲಾ ಸ್ಥಳಗಳಲ್ಲಿಯೂ, ತನ್ನ ಮುಷ್ಠಿಯನ್ನು ಪ್ರಹಾರ ಮಾಡತಕ್ಕಂಥ ವ್ಯವಸ್ಥೆ ಏನಿದೆ ಅದನ್ನು ನಿಲ್ಲಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ಸರ್ಕಾರೀ ಆಸ್ಪತ್ರೆಗೆ ಹೋದವರು, ಹೆಣವಾಗಿ ಬರುತ್ತಾರೆ. ರೋಗಿಗಳ ಜೊತೆಗೆ ಹೋದಂಥ ಆರೋಗ್ಯವಂತರು ರೋಗಿಗಳಾಗಿ ಬರುವುದು ದಿನಚರಿಯಾಗಿದೆ ಸರ್ಕಾರದ ಆಸ್ಪತ್ರೆಗಳ ಬಗ್ಗೆ ರಂಗುರಂಗಿನ ವಿಚಾರ ಇಲ್ಲಿ ಹರಿದಿದೆ. ರಂಗುರಂಗಿನ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಯಾವುದೇ ಸರ್ಕಾರ ಇದ್ದರೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಜನರ ಆರೋಗ್ಯವನ್ನು ಕಾಪಾಡುತ್ತೇವೆನ್ನುವ ಕಮಿಟ್‌ಮೆಂಟ್ ಮಾಡಿರುವಾಗ, ಇವತ್ತು ಆ ಒಂದು ಇಲಾಖೆಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುವುದರ ಬಗ್ಗೆ ಸರ್ಕಾರ ತಳೆಯಬಹುದಾದ ನಿಲುವು ಏನು ? ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಇವತ್ತು ಸಾಮಾನ್ಯ ಜನರು ಹೋಗುವಂಥ ಆಸ್ಪತ್ರೆಗಳಿದ್ದರೂ, ಅವುಗಳು ಸುಸಜ್ಜಿತವಾಗಿದ್ದರೂ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ತಮ್ಮ ಚಿಕಿತ್ಸೆಗಾಗಿ ಖಾಸಗೀ ಆಸ್ಪತ್ರೆಗೆ ಹೋಗಿದ್ದಾರೆಂದರೆ, ಎಷ್ಟರ ಮಟ್ಟಿಗೆ ನಮ್ಮ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಒಲವು ಇದೆ ಎನ್ನುವುದಕ್ಕೆ ಗೊತ್ತಾಗುತ್ತದೆ. ಸರ್ಕಾರಕ್ಕೆ ಸರ್ಕಾರಿ ಆಸ್ಪತ್ರೆಗಳ ವಿಚಾರದಲ್ಲಿ ಎಂಥ ವಿಶ್ವಾಸ ಇದೆ ಎನ್ನುವುದಕ್ಕೆ ಇದೊಂದು ಜೀವಂತ

ಉದಾಹರಣೆ. ತಾವು ಒಂದು ಆಸ್ಪತ್ರೆಗೆ ಭೇಟಿ ಮಾಡಿದರೆ ಅಲ್ಲಿನ ಚಿತ್ರ ತಮ್ಮ ಮುಂದೆ ಬರಬಹುದು. ಆದರೆ, ಯಾರಿಗೂ ಸರ್ಕಾರೀ ಆಸ್ಪತ್ರೆಗಳ ಬಗ್ಗೆ ಆಸಕ್ತಿ ಇಲ್ಲ. ಸರಿಯಾದ ಸೇವೆ ಸಿಗುತ್ತಿಲ್ಲ. ಅಲ್ಲಿರತಕ್ಕ ವಾರ್ಡ್‌ಗಳು ದೊಡ್ಡಿಗಳಾಗಿವೆ. ಕ್ಯೂನಲ್ಲಿ ನಿಂತುಕೊಳ್ಳುವುದು, ಚುಚ್ಚಿದ ಸೂಜಿಯನ್ನೇ ಚುಚ್ಚುವಂತಾದ್ದು ತಪ್ಪಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಸರ್ಕಾರೀ ಆಸ್ಪತ್ರೆಗಳಲ್ಲಿ ಒಳ್ಳೆಯ ವಾತಾವರಣವನ್ನು ಆಚರಣೆಗೆ ತರತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿ. ಆ ಮೂಲಕ ಸಮಾಜವನ್ನು, ಜನರನ್ನು ಆರೋಗ್ಯವಂತರನ್ನಾಗಿ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ. ಆರೋಗ್ಯ ಮತ್ತು ಅಬ್ಕಾರಿ ಇಲಾಖೆಗಳ ಬೇಡಿಕೆಗಳನ್ನು ಮಾನ್ಯ ಮಂತ್ರಿಗಳೇನು ಇಟ್ಟಿದ್ದಾರೆ. ಆ ಇಲಾಖೆಗಳ ಕಾರ್ಯನಿರ್ವಹಣೆಗಾಗಿ ವಿರೋಧಿಸುತ್ತಿದ್ದೇನೆ. ಜನತೆಯ ಕನಿಷ್ಟ ಆವಶ್ಯಕತೆಗಳಲ್ಲಿ ಆರೋಗ್ಯ ಕೂಡ ಒಂದು. ಇವತ್ತು. ಸರ್ಕಾರದವರು ಹೊಸದಾಗಿ ಮಂಜೂರು ಮಾಡಿರುವಂಥ ಆಸ್ಪತ್ರೆಗಳ ಪಟ್ಟಿ ಪ್ರಕಾರ ೮೬–೮೭ರಲ್ಲಿ ಕನಿಷ್ಟ ಆರೋಗ್ಯ ಯೋಜನೆಗಳ ಪ್ರಕಾರ ೫೦ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆಯೆಂದೂ ಅನಂತರ ಮುಂದೆ ನೋಡುವಾಗ, ಕಡ್ಡಾಯ ಯೋಜನೆ ಮೇಗೆ ೮ ಉಪ ಆರೋಗ್ಯ ಕೇಂದ್ರಗಳು ವಿಶೇಷ ಯೋಜನೆ ಮೂಲಕ ೭ ಹೊಸ ಆರೋಗ್ಯ ಕೇಂದ್ರಗಳು ಒಟ್ಟು ೬೫ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆಯೆಂದು ಸಂತೋಷಪಟ್ಟುಕೊಂಡೆವು. ಆದರೆ, ಕೂಲಂಕುಷವಾಗಿ ನೋಡಿದಾಗ, ಕನಿಷ್ಟ ಆರೋಗ್ಯ ಯೋಜನೆಯಲ್ಲಿ ವಿಶೇಷ ಅಂಶದ ಯೋಜನೆಯೂ ಅಡಕವಾಗಿದೆ. ವರದಿಯನ್ನು ಕೊಡುವಾಗ ೬೫ ಆಸ್ಪತ್ರೆಗಳನ್ನು ತೋರಿಸಿ, ೫೦ ಆಸ್ಪತ್ರೆಗಳನ್ನು ಮಂಜೂರು ಮಾಡಿರುವಂಥ ಪ್ರಯೋಗ ಸರ್ಕಾರದ ವತಿಯಿಂದ ನಡೆದಿದೆ. ಮುಂದಿನ ವರ್ಷವಾದರೂ ರಾಜ್ಯದಲ್ಲಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆಗೆಯಬೇಕಾಗುತ್ತದೆ. ಎಲ್ಲಾ ಶಾಸಕರುಗಳು ಅರ್ಜಿಗಳನ್ನು ಕೊಟ್ಟಿದ್ದಾರೆ. ಬೇಡಿಕೆಗಳನ್ನು ಇಟ್ಟಿದ್ದಾರೆ ಇದರ ಬಗ್ಗೆ ಸರ್ಕಾರದವರು ಮರು ಆಲೋಚನೆ ಮಾಡಬೇಕೆಂದು ಅಪೇಕ್ಷೆ ಪಡುತ್ತೇನೆ. ಇರತಕ್ಕ ಆಸ್ಪತ್ರೆಗಳ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದರ ಬಗ್ಗೆ ಅನೇಕ ಮಿತ್ರರು ಹೇಳಿದ್ದಾರೆ ಪಟ್ಟಣಗಳಲ್ಲಿರುವಂಥ ಆಸ್ಪತ್ರೆಗಳ ಸಂಪರ್ಕ ಮಂತ್ರಿಗಳಿಗೆ ನೇರವಾಗಿ ಇರುತ್ತದೆ. ಅವುಗಳು ಸಾಕಷ್ಟು ಸಮರ್ಪಕವಾಗಿರುತ್ತವೆ. ಆದರೆ ಹಳ್ಳಿಗಳಲ್ಲಿ ಹಾಗಿಲ್ಲ ಆಸ್ಪತ್ರೆಗಳಿಗೆ ಸಂದರ್ಶಕರ ಸಮಿತಿ ಮಾಡಿದ್ದೀರಿ. ಅವರು ಕೊಟ್ಟ ವರದಿ ಕಾರ್ಯಗತವಾಗುತ್ತಿಲ್ಲ. ಇವತ್ತು ಅನೇಕ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ. ನನ್ನ ಕ್ಷೇತ್ರದ ನಾದಾ ಮತ್ತಿತರ ನಾಲ್ಕು ಕಡೆ ಕಳೆದ ನಾಲ್ಕು ವರ್ಷಗಳಿಂದ ವೈದ್ಯರುಗಳಿಲ್ಲ. ಮಂತ್ರಿಗಳ ಹತ್ತಿರ ವಿಚಾರಿಸಿದರೆ ಅಧಿಕಾರಿಗಳ ಹತ್ತಿರ ವಿಚಾರಿಸಿ ಎಂದು ಹೇಳುತ್ತಾರೆ, ಅಧಿಕಾರಿಗಳ ಹತ್ತಿರ ವಿಚಾರಿಸಿದರೆ ಸೊ ಅಂಡ್ ಸೊ ಈಸ್‌ಪೋಸ್ಟೆಡ್ ಎಂದು ಹೇಳುತ್ತಾರೆ. ಇವರು ಸೊ ಅಂಡ್ ಸೊ ಈಸ್ ಪೋಸ್ಟೆಡ್ ಎಂದರೆ ಅಲ್ಲಿ ಡಾಕ್ಟರ್ ಭರ್ತಿ ಆಗುವುದಿಲ್ಲ. ಅಲ್ಲಿ ನಿಜವಾಗಿ ಡಾಕ್ಟರುಗಳು ಬರಬೇಕು. ನಿಜವಾಗಿ ಅಲ್ಲಿಗೆ ಹೋಗಿ ಡಾಕ್ಟರ್ ಜಾಯಿನ್ ಆಗಿದ್ದಾನೆ. ಇಲ್ಲ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೆ ಇದು ಎಂತಹ ಅಡ್ಮಿನಿಸ್ಟ್ರೇಷನ್. ಇನ್ನು ನಾದಾ ಎನ್ನುವ ಒಂದು ಆಸ್ಪತ್ರೆಗೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಇಡೀ ವರ್ಷ ಮದ್ದೇ ಬರಲಿಲ್ಲ, ಇಂತಹ ವ್ಯವಸ್ಥೆ ಇದೆ. ಸಂದರ್ಶನ ಸಮಿತಿಯವರು ವರದಿ ಮಾಡಿದ್ದಾರೆ, ಜಿಲ್ಲಾ ಆರೋಗ್ಯ ಅಧಿಕಾರಿಗಳವರ ಗಮನಕ್ಕೆ ತರಲಾಗಿದೆ. ಆದರೂ ಸಹ ಮದ್ದು ಬರಲಿಲ್ಲ. ಈ ರೀತಿಯಲ್ಲಿ ಆಡಳಿತ ನಡೆಯುತ್ತಿದೆ, ಬರುತ್ತಾ ಇರುವ ಮದ್ದು ಕೂಡ ಯೂನಿಫಾರಮ್ ಪ್ಯಾಕೇಜ್ ಆಗಿ ಬರುತ್ತಿದೆ. ನಮ್ಮ ರಾಜ್ಯದ ಹವಾಮಾನದ ಪ್ರಕಾರ ಬೇರೆಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯ ಖಾಯಿಲೆಗಳು ಬರುವುದು ಸ್ವಾಭಾವಿಕ, ಎಲ್ಲಾ ಆಸ್ಪತ್ರೆಗಳಿಗೂ ಕಳುಹಿಸುವಾಗ ಕಳೆದ ವರ್ಷ ಖರ್ಚು ಆಗದೇ ಇರತಕ್ಕ ಮದ್ದು ಯಾವ ಯಾವ ಆಸ್ಪತ್ರೆಗಳಲ್ಲಿರುತ್ತದೆ, ಅದೇ ಮದ್ದು ತಿರುಗಿ ಕಳುಹಿಸುವ ವ್ಯವಸ್ಥೆ ಇದೆ. ಈ ಬಗ್ಗೆ ಯಾವರೀತಿ ಬದಲಾಯಿಸ ಬೇಕು ಎಂದು ತಜ್ಞರು, ವೈದ್ಯರು ನೋಡಿ ಆಲೋಚನೆ ಮಾಡಬೇಕು ಇನ್ನು ಹಳ್ಳಿಗಳಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಪೋಲಿಯೋ ವ್ಯಾಕ್ಸಿನ್ ಬರುತ್ತದೆ ಅದನ್ನು ಇಡಲಿಕ್ಕೆ ಬೇಕಾದಂಥ ಫ್ರಿಡ್ಜ್ ವ್ಯವಸ್ಥೆಯಾಗಬೇಕು. ಒಂದು ವರ್ಷದ ಹಿಂದೆ ಕೊಲ್ಲೂರಿಗೆ ಮಾನ್ಯ ಆರೋಗ್ಯ ಮಂತ್ರಿಗಳು, ಮಾನ್ಯ ಮುಖ್ಯ ಮಂತ್ರಿಗಳು. ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಬಂದಿದ್ದಾಗ, ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಲಿಕ್ಕೆ ಆಶ್ವಾಸನೆಯನ್ನು ಕೊಟ್ಟಿದ್ದರು. ಅದು ನಮ್ಮ ಬಜೆಟ್‌ನಲ್ಲಿಯೂ ಸೇರ್ಪಡೆಯಾಗಿತ್ತು. ಸರ್ಕಾರದ

ಆಜ್ಞೆಯೂ ಆಯಿತು, ಕಳೆದ ವರ್ಷದ ಅಂತ್ಯದಲ್ಲಿ ಆ ಆಜ್ಞೆಯನ್ನು ರದ್ದುಮಾಡಿ ಮೂರು ನಾಲ್ಕು ಆಸ್ಪತ್ರೆಗಳನ್ನು ಬದಲಾಯಿಸಿ ಬೇರೆ ಬೇರೆ ಕಡೆಗೆ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದಾಗ ಮೂರನೆಯ ಒಂದು ಅಂಶ ಬಡ್ಜೆಟ್ಟನಲ್ಲಿ ಇಟ್ಟಿಲ್ಲ ಎನ್ನುವ ಒಂದು ಉತ್ತರ ಬಂತು. ಆದರೆ ವಿಚಾರ ಹಾಗೆ ಅಲ್ಲ ಮೂರನೆಯ ಒಂದು ಅಂಶವನ್ನು ಹೊಸ ಆಸ್ಪತ್ರೆಗಳಿಗೆ ಮಂಜೂರಾತಿ ಎಲ್ಲಿ ಕೊಡಲಾಯಿತೋ ಅಲ್ಲಿಯೂ ಸಹ ಇಟ್ಟಿರಲಿಲ್ಲ, ಈ ಒಂದು ಆಸ್ಪತ್ರೆಗಾಗಿ ಕೊಲ್ಲೂರುದೇವಸ್ಥಾನದವರು ಮೂರು ಲಕ್ಷರೂಪಾಯಿ ಸಹಾಯ ಧನವನ್ನು ಕೊಟ್ಟಿದ್ದರೂ ಅದನ್ನು ನಿರ್ಲಕ್ಷಿಸಿದ್ದಾರೆ. ಮಾನ್ಯ ಆರೋಗ್ಯ ಮಂತ್ರಿಗಳು, ಮಾನ್ಯ ಲೋಕೋಪಯೋಗಿ ಮಂತ್ರಿಗಳು, ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಬಹಿರಂಗ ವಾಗ್ದಾನ ಕಡೆಗಣಿಸುವ ಯತ್ನ ಇಲ್ಲಿ ಆಗಿದೆ. ಅಂದಮೇಲೆ ಇದಕ್ಕಿಂತಲೂ ದೊಡ್ಡ ಮೋಸ ನಾನು ಏನು ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಕುಟುಂಬ ಕಲ್ಯಾಣದ ಬಗ್ಗೆ ಬಹಳ ದೊಡ್ಡ ಸಾಧನೆಯಾಗಿದೆ ಎಂದು ಹೇಳಿದ್ದಾರೆ. ಬಹುಮಾನ ಬಂದಿದೆ. ರಾಜ್ಯಪ್ರಶಸ್ತಿ ಬಂದಿದೆ ಎಂದು ಹೇಳಿದ್ದಾರೆ. ಇವೊತ್ತು ಕುಟುಂಬ ಕಲ್ಯಾಣ ಆಗಬೇಕು ಅರ್ಹ ದಂಪತಿಗಳ ಮನ ವೊಲಿಸಿ ಆಗುವಂಥಾದ್ದು ಆಗಬೇಕು. ಆದರೆ ಏನಾಗಿದೆ. ಹಸಿರುಕಾರ್ಡ್ ಪಡೆದುಕೊಳ್ಳಬೇಕಾದರೆ, ಹುಡ್ಕೋಮನೆಗಳು ಬೇಕು ಅಂದರೆ ಕುಟುಂಬಕಲ್ಯಾಣ ಚಿಕಿತ್ಸೆ ಆಗಬೇಕೆಂದು ಹೇಳುತ್ತಾರೆ ಎನ್ನುವುದು ಇದೆ. ಇವೊತ್ತು ತಾಲ್ಲೂಕು ಮಟ್ಟದಲ್ಲಿ ಬಹಳಷ್ಟು ಒತ್ತಾಯದಿಂದ ಚಿಕಿತ್ಸೆ ಕಡ್ಡಾಯವಾಗಿ ಆಗುತ್ತಿದೆ. ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆ, ಚಿಕ್ಕ ಉಳಿತಾಯ ಯೋಜನೆಗೆ ಇಂತಿಷ್ಟು ಹಣವನ್ನು ಹಾಕಬೇಕೆಂದು ಹೇಳುವಂತಾದ್ದು ಇದೆ. ಈ ಒತ್ತಾಯ ಒಂದಲ್ಲ ಒಂದು ದಿನ ತಮಗೆ ತೊಂದರೆ ತಂದೀತು ಇದು ಒಳ್ಳೆಯದಲ್ಲ, ಇವತ್ತು ಆಳುವ ಪಕ್ಷದವರಿಗೆ ಈ ವಿಚಾರ ಒಂದು ಕಿವಿ ಮಾತು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ಶೇಕಡಾ ೫೦ ರಿಂದ ೧೦೦ರ ವರಿಗೆ ಸಹಾಯಧನ ಬರುವ ಅನೇಕ ಕೇಂದ್ರದ ನೆರವಿನ ಕಾರ್ಯಕ್ರಮಗಳು ಇವೆ. ಈ ಕಾರ್ಯಕ್ರಮದ ಪ್ರಕಾರ ಲಕ್ಷಾಂತರ ರೂಪಾಯಿ ಕೇಂದ್ರದ ನೆರವು ಬಂದಿದೆ. ರಾಷ್ಟ್ರೀಯ ಕುಷ್ಟರೋಗ ನಿವಾರಣಾ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ ರಾಷ್ಟ್ರೀಯ ಕ್ಷಯರೋಗ ನಿವಾರಣಾ ಕಾಯಕ್ರಮ ರಾಷ್ಟ್ರೀಯ ಮಲೇರಿಯ ನಿವಾರಣಾ ಕಾರ್ಯಕ್ರಮ ಕೇಂದ್ರದ ನೆರವು ಇಷ್ಟು ಬಂದರೂ ಸಹ ಗುರಿ ಶೇಕಡ ೫೦ ರಿಂದ ೬೦ ಮಾತ್ರ ಸಾಧನೆಯಾಗಿದೆ. ಕೇಂದ್ರದ ಸಹಾಯಧನ ದೊರಕುತ್ತಿಲ್ಲ ಎಂದು ಪ್ರತಿಯೊಂದು ವಿಚಾರದಲ್ಲಿ ಟೀಕೆ ಮಾಡುವುದು ಸರಿಯಲ್ಲ. ಕೇಂದ್ರದ ನೆರವು ಸಂಪೂರ್ಣವಾಗಿದ್ದರೂ ಸಹ ಸಾಧನೆ ಇಷ್ಟು ಕುಂಠಿತವಾಗಲಿಕ್ಕೆ ಕಾರಣ ಏನು ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಕೆಲವರು ಸೂಪರ್ ಸ್ಪೆಷಲಿಸ್ಟ್‌ಗಳು ಅಗತ್ಯ ಇದೆ. ಕಾರ್ಡಿಯಾಲಜಿಸ್ಟ್, ನ್ಯೂರಾಲಿಜಿಸ್ಟ್ ಇಂತಹವರ ಸೇವಾ ಮಾಡುವಂಥಾದ್ದು ಅಗತ್ಯ ಇದೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. ಇದರ ಬಗ್ಗೆ ತಜ್ಞರನ್ನು ಇನ್‌ಸರ್ವೀಸ್ ಕ್ಯಾಂಡಿಡೇಟ್ ಏನು ಸಿಕ್ಕುತ್ತಾರೆ, ಅಂತಹವರನ್ನು ತರಬೇತಿಗಾಗಿ ಸೇರಿಸಿಕೊಳ್ಳಬೇಕು. ಇನ್ನು ಖಾಸಗಿ ಕಾಲೇಜಿನಲ್ಲಿ ಸೀಟು ಹೆಚ್ಚು ಮಾಡಲಾಗುತ್ತಿದೆ. ಖಾಸಗಿ ಕಾಲೇಜಿನಲ್ಲಿ ಸ್ಪೆಷಲಿಸ್ಟ್ ಸೀಟು ಯಾವುದು ಇದೆ ಅದನ್ನು ಸರ್ಕಾರದವರೇ ಇಟ್ಟುಕೊಳ್ಳಿ ಸರ್ಕಾರ ವೈದ್ಯಾಧಿಕಾರಿಗಳನ್ನು ಹೆಚ್ಚು ತರಬೇತಿಗೊಳಿಸುವ ಬಗ್ಗೆ ಏತಕ್ಕೆ ಆಲೋಚನೆ ಮಾಡಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಬ್ಕಾರಿ ಇಲಾಖೆಯನ್ನು ಕುರಿತು ಒಂದೆರಡು ಮಾತನ್ನು ನಾನು ಹೇಳಬಯಸುತ್ತೇನೆ, ಇದರ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲದಿದ್ದರೂ ಸ್ವಲ್ಪಮಟ್ಟಿಗೆ ಮಾತನಾಡಲು ಅಪೇಕ್ಷೆ ಪಡುತ್ತೇನೆ. ಐ.ಎಂ.ಎಲ್. ಲೈಸೆನ್ಸ್‌ಗಳ ಬಗ್ಗೆ ಇಲ್ಲಿ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ. ೨-೩ ವರ್ಷದಲ್ಲಿ ಏನು ಪ್ರಗತಿಯಾಗಿದೆ ಎಂಬುದನ್ನೂ ಕೂಡ ಹೇಳಿದ್ದೀರಿ. ನೀವು ಹೊಸದಾಗಿ ಕೋಟಾ ಕೊಡುವಾಗ ಸಿಎಲ್‌ಆರ್ ೭ ಅಂತ ಕೊಡುವುದಾದರೆ ಸಿಎಲ್‌ಆರ್ ೮ ಅಂತ ಇನ್ನು ಒಂದಿಷ್ಟು ಕೊಡಬಹುದಲ್ಲಾ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವಿದ್ಯಾವಂತ ನಿರುದ್ಯೋಗಿಗಳಿಗೆ ಕೊಡಿ ಎಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮದ್ಯವನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವ ವಿಚಾರ ಬಜೆಟ್ ಭಾಷಣದಲ್ಲಿತ್ತು. ಈ ರೀತಿ ವ್ಯಾಪಾರ ಮಾಡುವುದು ಬೇಡ ಬಾಟ್ಲಿಂಗ್ ವ್ಯವಸ್ಥೆಯನ್ನಾದರೂ ಸಹಕಾರ ಸಂಘಗಳಿಗೆ ಏತಕ್ಕೆ ಕೊಡಬಾರದು ? ಸಾಮಾನ್ಯವಾಗಿ ಎಲ್ಲ ಮಾರ್ಕೆಟಿಂಗ್ ಸಹಕಾರ ಸಂಘಗಳೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ಲಾಸ್‌ನಲ್ಲಿವೆ. ಅವುಗಳಿಗೆ ಇದನ್ನು ಕೊಟ್ಟರೆ ಸ್ವಲ್ಪಮಟ್ಟಿಗೆ ಅನುಕೂಲವಾಗುವುದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು

ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಮ್ಮ ಕುಂದಾಪುರದ ಸಮೀಪ ಗುಜ್ಜಾಡಿ ಎಂಬ ಜಾಗದಲ್ಲಿ ಒಂದು ಗೇರು ಫೆನ್ನಿ ಕಾರ್ಖಾನೆಯನ್ನು ಸ್ಥಾಪಿಸಲು ಮಾನ್ಯ ಮಂತ್ರಿಗಳು ಫೌಂಡೇಷನ್ ಸ್ಟೋನ್‌ನ್ನು ಹಾಕಿ ಬಂದಿದ್ದಾರೆ. ಮಾನ್ಯ ಉಮರಬ್ಬನವರು ಹೇಳಿದಂತೆ ಮಹಾತ್ಮ ಗಾಂಧಿಯವರನ್ನು ಕುರಿತಾಗಿ ಮಾನ್ಯ ಮಂತ್ರಿಯವರ ಭಾಷಣದಲ್ಲಿ ಬಹಳ ಚೆನ್ನಾಗಿ ಒಂದು ವ್ಯಾಖ್ಯಾನ ಈ ಸಂದರ್ಭದಲ್ಲಿಯೂ ಬಂದಿತ್ತು. ಸರ್ಕಾರದವರು ಎಲ್ಲಿ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದಿದ್ದಾರೋ ಅದರ ಪಕ್ಕದ ಊರಿನಲ್ಲೇ ಖಾಸಗಿಯವರೂ ಕೂಡ ಒಂದು ಫೌಂಡೇಷನ್‌ನ್ನು ಹಾಕುತ್ತಾರೆ. ಎರಡು ಕಾರ್ಖಾನೆಗಳೂ ಒಂದೇಕಡೆ ಇದ್ದರೆ ಸರ್ಕಾರದವರದ್ದೂ ನಡೆಯುವುದಿಲ್ಲ, ಖಾಸಗಿಯವರದ್ದೂ ನಡೆಯುವುದಿಲ್ಲ. ಇದಕ್ಕೆ ಬದಲಾಗಿ ಸರ್ಕಾರದವರು ಮಾಡುವುದಾದರೆ ಮಾಡಲಿ, ಖಾಸಗಿಯವರು ಮಾಡುವುದಾದರೆ ಅವರೇ ಮಾಡಲಿ, ಇಬ್ಬರೂ ಮಾಡುವುದಕ್ಕೆ ಹೋದರೆ ಲಾಭದಾಯಕವಾಗುವುದಿಲ್ಲ. ಕಾರಣ ಗೇರುಹಣ್ಣು ಸರಿಯಾಗಿ ಸಿಕ್ಕುತ್ತಿಲ್ಲ.

ಸ್ವಾಮಿ, ವರದಿಯಲ್ಲಿ ತಾವು ಒಂದು ಅಂಶವನ್ನು ಮುದ್ರಣ ಮಾಡಿಸಿದ್ದೀರಿ. ಅದು ಏನೆಂದರೆ, "ಗಾಂಧಿ ಜಯಂತಿ ದಿನವನ್ನು ರಾಜ್ಯದಾದ್ಯಂತ ಪಾನ ನಿಷೇಧಿತ ದಿನ ಎಂದು ಘೋಷಿಸಲಾಗಿದೆ" ಈ ರೀತಿ ಚುನಾವಣೆಯ ದಿವಸ ಸಹ ಘೋಷಿಸಲಾಗುತ್ತದೆ. ಈ ಘೋಷಣೆ ಬಹಳ ದಿನ ಉಳಿಯುವುದಿಲ್ಲ ಮದ್ಯ ಪಾನವನ್ನು ಸರಿಯಾಗಿ ನಿಯಂತ್ರಣ ಮಾಡುವುದಾದರೆ ಇದರ ಬಗ್ಗೆ ಸಮಗ್ರವಾದ ಚಿಂತನೆ ಮಾಡಲಿ ಎನ್ನತಕ್ಕ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅಬ್ಕಾರಿ ಇಲಾಖೆಗಳಿಗೆ ಸಂಬಂಧಪಟ್ಟಂತೆ ೧೯೮೭–೮೮ನೇ ಸಾಲಿನ ಆಯವ್ಯಯವನ್ನು ಮಾನ್ಯ ಸಚಿವರು ಏನು ಸಭೆಯಮುಂದೆ ಮಂಡಿಸಿದ್ದಾರೆ ಇದನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮನುಷ್ಯನಿಗೆ ನೀರು. ಗಾಳಿ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ ಆರೋಗ್ಯ ಕೂಡ. ಆರೋಗ್ಯಕ್ಕೋಸ್ಕರ ನಮ್ಮ ಸರ್ಕಾರ ಪ್ರತಿವರ್ಷ ತನ್ನ ಆಯವ್ಯಯದಲ್ಲಿ ಹೆಚ್ಚಿನ ಪಾಲನ್ನು ಉಳಿಸಿಕೊಂಡು ಅದನ್ನು ವೆಚ್ಚಮಾಡತಕ್ಕ ಪದ್ಧತಿ ಇದೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಇದರ ಅನುಕೂಲವನ್ನು ಸರ್ಕಾರ ಖರ್ಚು ಮಾಡುತ್ತಿದೆಯೋ, ಇಲ್ಲವೋ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಗ್ರಾಮಾಂತರ ಪ್ರದೇಶದ ಜನರು ಬಹಳಷ್ಟು ಮೂಢನಂಬಿಕೆಗಳನ್ನು ಇಟ್ಟುಕೊಂಡು ತಮ್ಮ ಜೀವನವನ್ನು ನಡೆಸುತ್ತಾ ಬಂದಿರುವವರು. ಅವರಿಗೆ ವಿದ್ಯಾಭ್ಯಾಸ ಕಡಿಮೆ. ಅನೇಕ ಸಂದರ್ಭಗಳಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಹಳೇ ಸಂಸ್ಕೃತಿ, ಮೂಢನಂಬಿಕೆಗಳನ್ನು ಅನುಸರಿಸಿಕೊಂಡು ಬರುತ್ತಾ ಹಳ್ಳಿಯ ವೈದ್ಯರು ಕೊಡತಕ್ಕ ಮದ್ದು ತಿಂದುಕೊಂಡು ಅಥವಾ ದೇವರ ಮೇಲೆ ಭಾರ ಹೊರಿಸಿಕೊಂಡು. ಅಥವಾ ಭೂತಗಳ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡು ತಮಗೆ ಬಂದಂಥ ರೋಗದ ಬಗ್ಗೆ ಮನಸ್ಸನ್ನು ಗಟ್ಟಿಮಾಡಿಕೊಂಡು ಹಿಂದುಹಿಂದಕ್ಕೆ ಹೋಗುತ್ತಿರುವುದನ್ನು ನಾವು ಇವತ್ತೂ ಕೂಡ ಕೇಳುತ್ತಿದ್ದೇವೆ ಮತ್ತು ನೋಡುತ್ತಿದ್ದೇವೆ.

ನಮ್ಮ ಸರ್ಕಾರದ ಒಂದು ನೀತಿಯ ಪ್ರಕಾರ ಈವತ್ತು ಆರೋಗ್ಯ ಇಲಾಖೆಯು ಸರ್ಕಾರಿ ಆಸ್ಪತ್ರೆಗಳ ಮುಖಾಂತರ ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಘಟಕಗಳನ್ನು ತೆಗೆದು ಈವತ್ತು ಎಲ್ಲಾ ಜನರಿಗೂ ಆ ಮುಖಾಂತರ ಅನುಕೂಲತೆಯನ್ನು ಕೊಡುವಂಥ ಕೆಲಸ ಕಾರ್ಯಗಳನ್ನು ಹಲವಾರು ವರ್ಷಗಳಿಂದ ಮಾಡುತ್ತಿದೆ ಆದರೆ ಈವತ್ತಿನ ದಿವಸ ನಿಜಕ್ಕೂ ಕೂಡ ಗ್ರಾಮಾಂತರ ಪ್ರದೇಶಗಳ ಜನರಿಗೆ ಪ್ರಯೋಜನವಾಗುತ್ತಿದೆಯೋ ಎನ್ನುವ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಏತಕ್ಕೆಂದರೆ ನನ್ನ ಕ್ಷೇತ್ರದಲ್ಲಿ ಹೊಂದಿಕೊಂಡಂತೆ ಒಂದು ಸರ್ಕಾರಿ ಆಸ್ಪತ್ರೆ ಇದೆ. ಅದು ೬ಳ ಬೆಡ್ಡುಗಳ ಆಸ್ಪತ್ರೆಯಾಗಿದೆ. ಆ ಆಸ್ಪತ್ರೆಯಲ್ಲಿ ಯಾವುದೇ ಮದ್ದುಗಳು ಇರುವುದಿಲ್ಲ. ಸರಿಯಾದ ಡಾಕ್ಟರುಗಳು ಇರುವುದಿಲ್ಲ. ಡಾಕ್ಟರುಗಳು ಇದ್ದರೂ ಅಲ್ಲಿನ ವ್ಯವಸ್ಥೆ ಸರಿಯಾಗಿರುವುದಿಲ್ಲ. ಹಳ್ಳಿಗರಿಗೆ ಬರುವಂಥ ರೋಗಗಳನ್ನು ಸಮರ್ಪಕವಾಗಿ ಚಿಕಿತ್ಸೆ ಕೊಡಲು ಸಾಧ್ಯವಾಗುತ್ತಿಲ್ಲ. ಇದೆಲ್ಲಾ ಕಾರಣಗಳಿಂದ ಅಲ್ಲಿ ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆಯುವಂಥ ಸ್ಥಿತಿ ಉಂಟಾಗಿದೆ. ನಮ್ಮ ಕ್ಷೇತ್ರದಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಎಕ್ಸ್‌ರೇ ಉಪಕರಣ

ಹಾಳಾಗಿದ್ದು, ಅದರಿಂದ ಉಪಯೋಗವಾಗದೆ ತುಂಬಾ ತೊಂದರೆಯಾಗಿರುವುದನ್ನು ಕಾಣುತ್ತಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮದ್ದುಗಳನ್ನು ಕೊಡುವ ಬದಲಾಗಿ ಚೀಟಿಯನ್ನು ಬರೆದುಕೊಟ್ಟು ಹೊರಗಡೆ ಅಂಗಡಿಗಳಲ್ಲಿ ನಿಗದಿಪಡಿಸಿದ ಮದ್ದನ್ನು ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಪ್ರಿಂಟ್ ಮಾಡಿದ ಸ್ಲಿಪ್ಪಿನಲ್ಲಿ ಬರೆದುಕೊಡುತ್ತಿರುವ ವ್ಯವಸ್ಥೆಯನ್ನು ಪ್ರತಿದಿವಸ ಕಾಣುತ್ತಿದ್ದೇವೆ. ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಾಗ ಒಂದು ಕಮಿಟಿಯನ್ನು ರಚನೆ ಮಾಡುತ್ತೇವೆಂದು ಹೇಳಿ ಒಂದು ವಿಸಿಟರ್ಸ್ ಕಮಿಟಿಯನ್ನು ರಚನೆ ಮಾಡಿದರು. ಆ ವಿಸಿಟರ್ಸ್ ಕಮಿಟಿ ಯಾವರೀತಿ ನಡೆಯುತ್ತಿದೆ ಎಂದು ನೋಡಿದರೆ, ಕಾನೂನಿನ ಪ್ರಕಾರ ಸ್ಥಳೀಯ ಶಾಸಕರ ಅನುಮತಿಯನ್ನು ಪಡೆಯಬೇಕೆಂದು ಇರುತ್ತದೆ. ವಿಸಿಟರ್ಸ್ ಕಮಿಟಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಶಾಸಕರೇ ಅಧ್ಯಕ್ಷರಾಗಿರಬೇಕೆಂದು ಇರುತ್ತದೆ. ಆಸ್ಪತ್ರೆಗಳನ್ನು ತೆಗೆದಾಗ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಆರೋಗ್ಯವನ್ನು ಕಾಪಾಡಿಕೊಂಡು ಬರಬೇಕು ಎನ್ನುವ ದೃಷ್ಟಿಯಿಂದ ಈ ವಿಸಿಟರ್ಸ್ ಕಮಿಟಿಯನ್ನು ಮಾಡಿದ್ದು ಆಯಿತು. ಆದರೆ ಈ ವಿಸಿಟರ್ಸ್ ಕಮಿಟಿಯ ಮೀಟಿಂಗ್ ಕರೆದರೆ, ಯಾರೂ ಕೂಡ ಸಭೆಗೆ ಬರುವುದಿಲ್ಲ. ಈ ದೃಷ್ಟಿಯಿಂದ ಈ ಕಮಿಟಿ ನಿರೀಕ್ಷೆ ಮಾಡಿದ ರೀತಿಯಲ್ಲಿ ನಡೆಯುತ್ತಿಲ್ಲ. ಈವತ್ತಿನದಿವಸ ಹಳ್ಳಿಗಳಲ್ಲಿ ಪಂಡಿತರು ಇರುತ್ತಾರೆ. ಅವರು ಮದ್ದನ್ನು ಕೊಡತಕ್ಕಂಥ ಸಂಸ್ಕೃತಿ ಏನು ಇರುತ್ತದೆ ಅದಕ್ಕೂ ಕೂಡ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಮುಂದೆ ತರಬೇಕೆಂದು ಒತ್ತಾಯ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಚೀನಾದೇಶದಲ್ಲಿ ಇರುವಂತಹ ಸೂಜಿ ಚಿಕಿತ್ಸೆ ಹೆಚ್ಚಿನ ರೀತಿಯಲ್ಲಿ ನಮ್ಮಲ್ಲೂ ಕೂಡ ಜಾರಿಗೆ ತರಬೇಕು. ಹಿಂದೆ ಸೂಜಿ ಚಿಕಿತ್ಸೆ ಎಂದು ನಮ್ಮಲ್ಲೂ ಕೂಡ ಅನುಕರಣೆಯಲ್ಲಿತ್ತು. ಪುರಾತನ ಕಾಲದಲ್ಲಿ ಭಾರತದೇಶದಿಂದ ಬೌದ್ಧಿಕರು ಧರ್ಮ ಪ್ರಚಾರವಾಗುವ ಸಂದರ್ಭದಲ್ಲಿ ಈ ರೀತಿಯ ಚಿಕಿತ್ಸೆ ಭಾರತದಿಂದ ಚೀಣಾಕ್ಕೆ ಹೋಗಿದೆ. ಅದನ್ನು ಅವರು ಅನುಕರಣೆ ಮಾಡುತ್ತಿದ್ದಾರೆ. ನಮ್ಮ ಹಿಂದಿನವರು ಏನು ಒಂದು ನಂಬಿಕೆಯನ್ನು ಇಟ್ಟುಕೊಂಡು ಕಿವಿ ತೂತು ಮಾಡುವುದು, ಮೂಗು ತೂತು ಮಾಡುವುದು ಇನ್ನು ಬೇರೆ ಬೇರೆ ರೀತಿಯಲ್ಲಿ ಆಚರಣೆಯಲ್ಲಿತ್ತು. ಅದೆ ರೀತಿಯಲ್ಲಿ ಸೂಜಿ ಚಿಕಿತ್ಸೆಯನ್ನು ಕೊಡುವ ವಿಚಾರವೂ ಕೂಡ ನಿಜವಾಗಿಯೂ ಒಂದು ರೀತಿಯಲ್ಲಿ ಒಳ್ಳೆಯ ಚಿಕಿತ್ಸೆ ಎಂದು ಹೇಳುತ್ತೇನೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ತೆಗೆದುಕೊಂಡು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮದ್ಯಪಾನದಿಂದ ಬಹಳಷ್ಟು ದುರಂತಗಳು ನಡೆಯುತ್ತದೆ. ಸರ್ಕಾರದ ಒಂದು ಆದಾಯದ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಮದ್ಯದ ಅಂಗಡಿಗಳಿಗೆ ಲೈಸೆನ್ಸನ್ನು ಕೊಡುತ್ತಿರುವುದು ಜಾಸ್ತಿಯಾಗಿದೆ. ಇದರಿಂದ ಅನಾಹುತಗಳು ಜಾಸ್ತಿಯಾಗುತ್ತಿರುತ್ತವೆ. ಕಳೆದ ೩-೪ ತಿಂಗಳ ಹಿಂದೆ ನನ್ನ ಕ್ಷೇತ್ರದಲ್ಲಿ ನಡೆದ ಒಂದು ಘಟನೆಯನ್ನು ಹೇಳುತ್ತೇನೆ. ಒಬ್ಬಳೇ ಹೆಣ್ಣು ಮಗಳು ಮನೆಯಲ್ಲಿ ಇದ್ದಂಥ ಸಂದರ್ಭದಲ್ಲಿ ಕುಡಿತದ ಅಮಲಿನಲ್ಲಿ ದುಷ್ಕರ್ಮಿಗಳು ಮನೆಗೆ ನುಗ್ಗಿ ಆ ಹೆಣ್ಣು ಮಗಳ ಮಾನಾಪಹರಣ ಮಾಡಿ, ಆಸ್ತಿಪಾಸ್ತಿಗಳನ್ನು ದೋಚಿಕೊಂಡು ಹೋಗಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿರುತ್ತೇನೆ.

ಆದರೆ ಇದುವರೆಗೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವುದೇ ಪರಿಹಾರ ಸಿಗಲಿಲ್ಲ. ೨ನೇ ಸಾರಿ ಆ ಮನೆಗೆ ಬಾಗಿಲು ಒಡೆದು ನುಗ್ಗಿ ತೊಂದರೆ ಮಾಡಿದ್ದಾರೆ. ಇನ್ನು ಅಬ್ಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಸೇಂದಿ ತಯಾರು ಮಾಡುವಂಥ ಜನರು ಯಾರಿದ್ದಾರೆ ಅವರಿಗೆ ನಿಗದಿತವಾದ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ. ಒಂದು ಲೀಟರ್‌ಗೆ ಒಂದು ರೂಪಾಯಿ ದರ ಕೊಟ್ಟು, ಅದನ್ನು ಮಾರಾಟ ಮಾಡುವವರು ೨-೩ ರೂಪಾಯಿವರೆಗೆ ಮಾರಾಟ ಮಾಡಿ, ತಯಾರಿಸತಕ್ಕವರಿಗೆ ಜೀವನದುದ್ದಕ್ಕೂ ಯಾವುದೇ ರೀತಿಯ ಪರಿಹಾರ ಸಿಕ್ಕದಂತೆ ಕಾಣುತ್ತಿದೆ. ಕಳೆದ ಸಾರಿ ಇದೇ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಪಟೇಲರು ಸೊಸೈಟಿ ರಚಿಸುತ್ತೇವೆಂದು ವಾಗ್ದಾನ ಕೊಟ್ಟಿದ್ದರು, ಇದುವರೆಗೆ ಸೊಸೈಟಿ ರಚನೆಯಾಗಿಲ್ಲ. ಇವರ ಜೀವನಕ್ಕೆ ಒಳ್ಳೆಯ ಅವಕಾಶ ಸಿಗುವಂಥ ವ್ಯವಸ್ಥೆ ಮಾಡಬೇಕೆಂದು ಸಚಿವರಲ್ಲಿ ವಿನಂತಿಸಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫-೩೦ ಪಿ.ಎಂ.

ಶ್ರೀ ಎನ್.ಎಂ. ಅಡ್ಯಂತಾಯ (ಸುರತ್ಕಲ್) — ಮಾನ್ಯ ಅಧ್ಯಕ್ಷರೆ, ಅಬ್ಕಾರಿ ಹಾಗೂ ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುತ್ತಿದ್ದೇನೆ. ಈ ಇಲಾಖೆಯಲ್ಲಿ ಕಲ್ಲು ಕರಗಿಸಿ ನೀರು ತೆಗೆಯುವ, ಹೊಸ ಆವಿಷ್ಕಾರ ಮಾಡುವ ಕೀರ್ತಿ ಇಂದಿನ ಮುಖ್ಯ ಮಂತ್ರಿಗಳೂ ಹಾಗೂ ೭೦ರ ದಶಕದ ಅಂತ್ಯದಲ್ಲಿ ಅಬ್ಕಾರಿ ಮಂತ್ರಿಯಾಗಿದ್ದ ನಮ್ಮ ರಾಜ್ಯದ ವರ್ಣಮಯ ನಾಯಕ ಶ್ರೀ ಹೆಗ್ಡೆಯವರದ್ದು. ರಾಜ್ಯದ ಇಲಾಖೆಗಳಲ್ಲಿ ೨ನೇ ಆರ್ಥಿಕ ಆದಾಯ ತರುವಂಥ ಕೀರ್ತಿ ಈ ಅಬ್ಕಾರಿ ಇಲಾಖೆಗೆ ಸೇರಿದ್ದು. ಆದರೆ ದುರಾದೃಷ್ಟವಶಾತ್ ಈ ಅಬ್ಕಾರಿ ಇಲಾಖೆ ಕರ್ನಾಟಕ ರಾಜ್ಯದ ಎಲ್ಲಾ ಇಲಾಖೆಗಳಿಗೆ breeding place for corruption ಎಂಬ ಹೆಸರು ಗಳಿಸಿದ ಇಲಾಖೆ ಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ಅಬ್ಕಾರಿ ಲಾಬಿ ಏನಿದೆ ಅದು ತನ್ನ ಬಾಹುಗಳನ್ನು ನಮ್ಮ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ವ್ಯವಹಾರದ ಮೇಲೆ ಆಕ್ಟೋಪಸ್‌ನ ಟೆಂಟಿಕಲ್ಸ್‌ನ ಹಾಗೆ ಚಾಚಿದೆ ಎಂಬುದು ರಾಜ್ಯಕ್ಕೆ ಗೊತ್ತಿರುವ ಸತ್ಯ. ೧೯೮೩ರಲ್ಲಿ ಅಧಿಕಾರಕ್ಕೆ ಬಂದು ಜನತಾ ಸರ್ಕಾರದ ನೇತಾರರಾದ ಹೆಗಡೆಯವರು ಒಬ್ಬ ಪ್ರವಾದಿ ತರಹ, ಚಿಂತಕರ ರೀತಿಯಲ್ಲಿ ಈ ದೇಶದ ರಾಜಕೀಯಕ್ಕೆ ಮೌಲ್ಯಾಧಾರಿತ ರಾಜಕಾರಣ ನಡೆಸುತ್ತೇವೆಂದು ಹೊಸ ಘೋಷಣೆ ನೀಡಿ ರಾಜ್ಯದಲ್ಲಿ ಹೊಸ ವಿಚಾರದ ಬಿರುಗಾಳಿ ಯನ್ನೇ ಎಬ್ಬಿಸಿದ್ದಾರೆ ಆದರೆ 'ನೇಕಾರನ ಹೆಂಡತಿ ಬೆತ್ತಲು' ಎಂಬ ಗಾದೆಯಂತೆ ಬರಬರುತ್ತಾ ಮೌಲ್ಯಾಧಾರಿತ ರಾಜಕೀಯ ಬದಲಾಗಿ ಮದ್ಯಾಧಾರಿತ ರಾಜಕೀಯವಾಗಿದೆ ಎಂಬುದನ್ನು ನೋಡುವಾಗ ಬಹಳ ಬೇಸರವಾಗುತ್ತದೆ. ಸಾರಾಯಿ ಬಾಟ್ಲಿಂಗ್ ಪ್ರಕರಣ ಕೋರ್ಟಿಗೆ ಹೋಗಿತ್ತು. ವಿಧಾನ ಸಭೆಯಲ್ಲಿ ಹಲವಾರು ಸಲ ಚರ್ಚೆ ನಡೆದಿದೆ. ಅದರಲ್ಲೂ ಸಾರಾಯಿ ಬಾಟ್ಲಿಂಗ್ ಪ್ರಕರಣದ ಬಗ್ಗೆ ಹೈಕೋರ್ಟ್ ತೀರ್ಪು ಬಂದಾಗ ಮಾನ್ಯ ಹೆಗಡೆಯವರು ರಾಜೀನಾಮೆ ನೀಡಿದರು ಆಮೇಲೆ ಅವರ ಪಕ್ಷದ ಶಾಸಕರ ಒತ್ತಾಯಕ್ಕೆ ಮಣಿದು ಕೊನೆಗೆ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡರು. ಅದು ಏನೇ ಇರಲಿ, ಅವರ ನಿರ್ಧಾರ ಸರಿಯೋ ಅಥವಾ ತಪ್ಪೋ ಎಂಬ ತೀರ್ಪು ಕೊಡುವವರು ನಾವಲ್ಲ. ಕರ್ನಾಟಕದ ನಾಲ್ಕು ಕೋಟಿ ಜನತೆ ಇದಕ್ಕೆ ಸರಿಯಾದ ತೀರ್ಪನ್ನು ಮುಂದಕ್ಕೆ ಕೊಟ್ಟಾರು. ಇದನ್ನು ಇಲ್ಲಿಗೆ ಬಿಡೋಣ. ಮಾನ್ಯ ಕೃಷ್ಣಪ್ಪನವರು ಅಬ್ಕಾರಿ ಮಂತ್ರಿಗಳಾಗಿರುವುದು ನಮ್ಮೆಲ್ಲರಿಗೂ ಬಹಳ ಸಂತೋಷದ ಸಂಗತಿ. ಬೇಜಾರು ಸಂಗತಿ ಎಂದು ಕೆಲವರು ಹೇಳುತ್ತಾರೆ. ಆದರೆ ನನಗಂತೂ ಬೇಜಾರಿಲ್ಲ. ಅವರು ಉದಾರ ಮನಸ್ಸಿನವರು. ಅವರ ದೇಹದ ಪದ್ಧತಿ ಹೇಗಿದೆಯೋ ಅದೇ ರೀತಿಯಲ್ಲಿ ಅವರ ಮನಸ್ಸು ಕೂಡ ದೊಡ್ಡದು. ಬಹಳ ದೊಡ್ಡ ಮನಸ್ಸಿನವರು. ಅದು ಸಂತೋಷದ ಸಂಗತಿ. ಅವರ ಮನಸ್ಸು ಯಾವರೀತಿ ಉದಾರವಾಗಿದೆಯೋ ಅದೇ ರೀತಿಯಲ್ಲಿ ಇಲಾಖೆಯನ್ನೂ ನಡೆಸಿಕೊಂಡು ಹೋಗಬೇಕೆಂಬ ಭಾವನೆಯಿಂದ ಹೇಳುತ್ತಿದ್ದೇನೆ. ಆ ರೀತಿಯಲ್ಲಿ ತಮ್ಮ ಇಲಾಖೆಯನ್ನು ನಡೆಸಿಕೊಂಡು ಹೋಗಬೇಕು. ಅವರ ಇಲಾಖೆಯನ್ನು ಸಾರಾಯಿ ಬಾಟ್ಲಿಯ ರೀತಿಯಲ್ಲಿ ನಡೆಸಿಕೊಂಡು ಹೋಗ ಬಾರದು. ಸ್ಕಾಚ್ ವಿಸ್ಕಿ ಬಾಟ್ಲಿ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಕಟ್ಟಕಡೆಗೆ ಈ ದೇಶದಲ್ಲಿ ತಯಾರು ಮಾಡುವ ವಿಸ್ಕಿ, ಬ್ರಾಂದಿ, ರಮ್ ಮಾದರಿಯಲ್ಲಾದರೂ ಅವರ ಇಲಾಖೆಯನ್ನು ನಡೆಸಿ ಕೊಂಡು ಹೋಗಬೇಕು ಎಂಬುದಾಗಿ ಅವರ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ. ಕಳ್ಳಬಟ್ಟಿಯಂತೆ ಅಬ್ಕಾರಿ ಇಲಾಖೆಯಲ್ಲಿ ದುರ್ವಾರ್ಥ ಬಹಳ ಜಾಸ್ತಿ ಹೊಡೆಯುತ್ತಿದೆ. ಅದನ್ನು ನಿಲ್ಲಿಸುವುದಕ್ಕೆ ನಾವೆಲ್ಲರೂ ಪಕ್ಷ ಭೇದ ಮರೆತು ಶ್ರೀ ಕೃಷ್ಣಪ್ಪನವರಿಗೆ ಸಹಾಯ ಮಾಡಲಿಕ್ಕೆ ಸಿದ್ಧರಿದ್ದೇವೆ ಆದ್ದರಿಂದ ದಯಮಾಡಿ ಈ ಒಂದು ಕರಪ್ಷನ್ನನ್ನು ತಮ್ಮ ಇಲಾಖೆಯಲ್ಲಿ ನಿಲ್ಲಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಕೇಳಿ ಕೊಳ್ಳುತ್ತಿದ್ದೇನೆ. ರಾಜ್ಯದ ರಾಜಕೀಯದಲ್ಲಿ ಎಸ್ಟಾಬ್ಲಿಷ್ಡ್ ಕರಪ್ಷನ್ ಯಾವುದಿದೆ ಅದನ್ನು ತೆಗೆದು ನೋಡುವುದಾದರೆ ತಮ್ಮ ಇಲಾಖೆ ಮುಂಚೂಣಿಯಲ್ಲಿದೆ. ಎಸ್ಟಾಬ್ಲಿಷ್ಡ್ ಕರಪ್ಷನ್‌ನಲ್ಲಿ ಮೊಟ್ಟ ಮೊದಲನೇ ಸ್ಥಾನ ಅಬ್ಕಾರಿ ಇಲಾಖೆಗೆ ಸಿಕ್ಕಿದೆ. ಅದು ಮುಂಚೂಣಿಯಲ್ಲಿದೆ. ಅದಕ್ಕೆ ಉದಾಹರಣೆ ಹೈಕೋರ್ಟಿನಲ್ಲಿ ನಡೆದಂಥ ಹಲವಾರು ಕಟ್ಲೆಗಳು ಮತ್ತು ಅದರಲ್ಲಿ ಬಂದಂಥ ತೀರ್ಪುಗಳು. ಈ ತೀರ್ಪುಗಳನ್ನು ನೋಡಿದಾಗ ಮೊದಲನೆಯದು ಹೋದಸಾರಿ ಸಾರಾಯಿ ಬಾಟ್ಲಿಂಗ್ ಪ್ರಕರಣದಲ್ಲಿ ನೀಡಿದ ತೀರ್ಪು. ಎರಡನೆಯದು ದಾಸಪ್ಪ ಅಂಡ್ ಕಂಪೆನಿ ಮೇಲೆ ಹೈಕೋರ್ಟ್ ನೀಡಿದ ತೀರ್ಪು. ಮಾನ್ಯ ವೆಂಕಟರಾಮಯ್ಯನವರು ಈಗತಾನೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳನ್ನು ತೆಗೆದು ಓದಿದರು. ಎಚ್.ಸಿ. ದಾಸಪ್ಪ ಅಂಡ್ ಕಂಪೆನಿ ವಿರುದ್ಧ ಡಿವಿಷನ್ ಬೆಂಚ್‌ನಲ್ಲಿ ಕೊಟ್ಟ

ತೀರ್ಪನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಈ ಪಬ್ಲಿಕ್ ಲಿಟಿಗೇಷನ್ ಕೇಸ್‌ನಲ್ಲಿ ಡಿವಿಜನ್ ಬೆಂಚ್ ಕೊಟ್ಟ ತೀರ್ಪಿನಲ್ಲಿ ಈ ರೀತಿ ಹೇಳಿದ್ದಾರೆ.

"Both these petitions have admittedly been able to say that the appellant was in arrears and owes to the State an amount approximately to the tune of 8 crores both as shop rental and sales tax."

೮ ಕೋಟಿ ರೂಪಾಯಿ ನಮ್ಮ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ. ಅದೇರೀತಿಯಲ್ಲಿ ಇನ್ನೊಂದು

"They have been able to bring to the notice of the court the arbitrary. capricious and mala-fide exercise of power by the executive."

ಎಂಬುದಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಒಂದು ಸಾರಿ ಇದೇ ಸದನದಲ್ಲಿ ಇಂಥದ್ದೇ ಒಂದು ಹೇಳುವಾಗ ಮಾಲಾಫೈಡಿ ಇಂಟೆನ್‌ಷನ್ ಎಂದು ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿಲ್ಲ ಎಂದು ಹೇಳಿದರು. ಇಲ್ಲಿ ಮಾಲಾಫೈಡಿ ಎಂದು ಹೇಳಿದ್ದಾರೆ. ಸ್ಪೆಸಿಫಿಕ್ಕಾಗಿ ಹೇಳಿದ್ದಾರೆ. ಇದು ಡಿವಿಷನಲ್ ಬೆಂಚ್ ತೀರ್ಪು. ಅದೇ ತೀರ್ಪಿನಲ್ಲಿ ಈ ರೀತಿ ಹೇಳುತ್ತಾರೆ,

"The court, in the circumstances of the case, cannot be a party to the arbitrary, capricious and mala-fide exercise of power wholly in contravention of the law by the Executive."

ಯಾವ Executive ? ತಮ್ಮ ಸರ್ಕಾರ, ಮಾನ್ಯ ಕೃಷ್ಣಪ್ಪನವರ ಸರ್ಕಾರ ಯಾವುದಿದೆ ಅದು ಎಗ್ಸಿಕ್ಯುಟೀವ್.

"The ratis of the dicision in regard to these cases are fully applicable to the facts of the case and we find that the writ petitioners have been able to prove successfully in-view of public interest caused by the illegal. arbitrary and capricious decisions of the executive."

ತಾವೇ ತೀರ್ಮಾನ ಮಾಡಿ ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆ ಬಗ್ಗೆ ಕೊಟ್ಟಿರುವಂತಹ ಜಡ್ಜ್‌ಮೆಂಟ್‌ನ್ನು ತೆಗೆದು ನೋಡುವುದಾದರೆ, ಇದರಲ್ಲಿ

"This meek and silent submission to the so-called judicial order thus give impression that all is not well in the excise department without whose active or passive connivance this could not have been accomplished...total frustration of the government notification calling for fresh tenders in respect of right of lease to vend liquor in favour of the firm that had been declared null and void."

ಇದು ಶ್ರೀಮಾನ್ ಉಮರಬ್ಬನವರು ಹೇಳಿದ ಹಾಗೆ ಅವರು ಹೋದ ಸಲ ಹೇಳಿದ್ದು ಕೋರ್ಟಿನಲ್ಲಿ ಸ್ಟ್ರೈಕ್‌ಡೌನ್ ಆಯಿತು. ಅದಕ್ಕೋಸ್ಕರ ರಾತ್ರೋ ರಾತಿ ಸುಮಾರು ೮ ಜನರಿಂದ ಏನೊಂದು ಸಮಸ್ಯೆ ಉದ್ಭವವಾಯಿತು. ಈ ಬಾಟ್ಲಿಂಗ್ ಕಾಂಟ್ರಾಕ್ಟ್‌ನಲ್ಲಿ, ಆದೇ ಸ್ಥಳದಲ್ಲಿ ಬೋರ್ಡ್‌ನ್ನು ಮಾತ್ರ ಬದಲಾಯಿಸಿದ್ದಾರೆ ಯಾವ್ಯಾವ ಸ್ಥಳದಲ್ಲಿತ್ತೋ ಅದೇ ಸ್ಥಳದಲ್ಲಿ ಗಂಡ ಇದ್ದರೆ ಹೆಂಡತಿ ಹೆಸರಿನಲ್ಲಿ, ಹೆಂಡತಿ ಇದ್ದರೆ ಅವರ ತಮ್ಮನ ಹೆಸರಿನಲ್ಲಿ ಕೊಟ್ಟಿದ್ದಾರೆ. Old wine in the new bottle ಎಂಬ ರೀತಿಯಲ್ಲಿ ಹಳೇ ಕಾಂಟ್ರಾಕ್ಟ್‌ಗಳನ್ನೇ ಹೊಸ ಬಾಟ್ಲಿಯಲ್ಲಿ ಹಾಕಿದ್ದಾರೆ. ಆ ರೀತಿಯಲ್ಲಿ

ಕೊಟ್ಟಿದ್ದಾರೆ. ಅದಕ್ಕೋಸ್ಕರ ಆ ಜಡ್ಜ್‌ವರು ಕಡೆಗೆ ತಮ್ಮ ಜಡ್ಜ್‌ಮೆಂಟ್ ಅನ್ನು ಕನ್‌ಕ್ಲೂಡ್ ಮಾಡುವಾಗ ಏನು ಹೇಳುತ್ತಿದ್ದಾರೆಂದರೆ,

> "As a judge of this court, I would rather urge to preserve the court's dignities than find myself in a straight jacket of legal niceties."

ಇದಕ್ಕಿಂತ ಇನ್ಯಾವ ಜಡ್ಜ್‌ಮೆಂಟ್ ಈ ಸರ್ಕಾರಕ್ಕೆ ಬೇಕು ಎಂಬುದು ನಮಗಂತೂ ಗೊತ್ತಾಗುವುದಿಲ್ಲ. ಅದು ಏನೇ ಇರಲಿ, ಅದೇ ಇದೇ ರೀತಿ ದಾಸಪ್ಪ ಮತ್ತು ಪಂಕ್ಸ್ ಎಂಬ ಕಾಂಟ್ರಾಕ್ಟ್ ಪ್ರಸಂಗ ಕೂಡ ನೋಡೋಣ. ಅವರನ್ನು ಬಿಟ್ಟರೆ ಇಂತಹ ಅನೇಕ ದಾಸಪ್ಪಗಳು ಇದ್ದಾರೆ. ಸುಮಾರು ೯೦ ಕೋಟಿಯ ಅವ್ಯವಹಾರ ಈ ಇಲಾಖೆಯಿಂದ ನಡೆದಿದೆ. ಇದೂ ಕೂಡ ನಾಳೆ ಬಹಿರಂಗವಾಗಿ ಬರುತ್ತದೆ. ಸಾರ್ವಜನಿಕರು ಹಾಕಿದಂತಹ ಕೇಸಿನಲ್ಲೇ ಈ ರೀತಿ ಆಯಿತೆಂದರೆ, ಆದರೂ ಇನ್ನೂ ಕೂಡ ಆ ಒಂದು ಮೌಲ್ಯಾಧಾರಿತ ಎಂಬ ಹೆಸರಿನಲ್ಲಿ ಇವರು ಅಧಿಕಾರವನ್ನು ನಡೆಸುವುದಾದರೆ ಪ್ರಾಯಶಃ ಈ ಮೌಲ್ಯಾಧಾರಿತ ಎಂಬ ಶಬ್ದಕ್ಕೆ ಕನ್ನಡದ ನಿಘಂಟಿನಲ್ಲಿ ಬೇರೆ ಅರ್ಥವನ್ನು ಕೊಡಬೇಕಾಗುತ್ತದೋ ಏನೋ ಎಂಬ ಸಂಶಯ ನನ್ನಲ್ಲಿ ಮೂಡಿಬರುತ್ತದೆ. ಈ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ, ಈ ಒಂದು ಇಲಾಖೆಯನ್ನು ಸರಿಯಾಗಿ ನಡೆಸುವಂತಹ ಹುಮ್ಮಸ್ಸು ಶ್ರೀಮಾನ್ ಹೆಚ್. ಡಿ. ಕೃಷ್ಣಪ್ಪನವರಲ್ಲಿ ಇರುವುದಾದರೆ, ಅವರ ದೇಹ ಇದ್ದ ಹಾಗೆ ಈ ಒಂದು ಇಲಾಖೆಯಲ್ಲಿ ಯಾವ ಮದ್ಯವನ್ನು ಕಂಟ್ರಾಕ್ಟ್‌ಗಳ ಮುಖಾಂತರವಾಗಿ ಬ್ರಾಂದಿ ಶಾಪುಗಳಲ್ಲಿ ಇವರು ಮಾರಿಸುತ್ತಿದ್ದಾರೋ, ಆ ಪ್ರತಿಯೊಂದು ಬಾಟಲ್ ಮೇಲೂ ಎಕ್ಸೈಸ್ ಡ್ಯೂಟಿಲೇಬಲ್ ಹಾಕಬೇಕು. ಉದಾಹರಣೆಯಾಗಿ ಹೇಳುವುದಾದರೆ, ಕೇಂದ್ರ ಸರ್ಕಾರದವರು ಬೆಂಕಿ ಪೆಟ್ಟಿಗೂ ಕೂಡ ಎಕ್ಸೈಜ್ ಡ್ಯೂಟಿ ಎಂಬುದಾಗಿ ಹಾಕಿದ್ದಾರೆ. ಅದೇ ರೀತಿಯಲ್ಲಿ ಪ್ರತಿಯೊಂದು ಬಾಟ್ಲಿ ಮೇಲೂ ಎಕ್ಸೈಜ್ ಡ್ಯೂಟಿಯ ಲೇಬಲ್ ಏಕೆ ಹಾಕಬಾರದು ? ಅದರಲ್ಲೂ ಸೆಲ್ಲಿಂಗ್ ಪಾಯಿಂಟ್‌ನಲ್ಲಿ ಇದು ಇರಲೇ ಬೇಕು. ಇವರು ಏನು ಮಾಡುತ್ತಿದ್ದಾರೆಂದರೆ, ಎಕ್ಸೈಜ್ ಡ್ಯೂಟಿಯನ್ನು ನಿಗದಿ ಮಾಡುವ ಸಲುವಾಗಿ ಅಧಿಕಾರಿಗಳನ್ನು ಅಲ್ಲಿ ನಿಲ್ಲಿಸುತ್ತಾರೆ. ಅವರು ತಯಾರು ಮಾಡುವಂತಹವರಿಂದ ಮಾಮೂಲಿಯನ್ನು ತೆಗೆದುಕೊಂಡು, ತಾವು ಮಾಮೂಲಿ ತೆಗೆದುಕೊಳ್ಳುತ್ತಿದ್ದಾರೆ ಎಂಬ...

ಅಧ್ಯಕ್ಷರು.—ತಾವು ಅಂತ ಹೇಳಿದ್ದು ಸರಿಯಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಅವರು ತೆಗೆದುಕೊಳ್ಳುತ್ತಾರೆ ಅಂತ ಹೇಳಲಿಲ್ಲ. ಆ ರೀತಿ ಆಪಾದನೆಗೆ ಗುರಿಯಾಗುವುದಕ್ಕಿಂತ ಪ್ರತಿಯೊಂದು ಬಾಟ್ಲಿ ಮೇಲು ಎಕ್ಸೈಸ್ ಡ್ಯೂಟಿಯ ಲೇಬಲನ್ನು ಹಾಕಿದ್ದೇ ಆದರೆ ಲೆಕ್ಕಕ್ಕೂ- ಪಕ್ಕಕ್ಕೂ ಎರಡಕ್ಕೂ ಸರಿಹೋಗುತ್ತದೆ, ದಯಮಾಡಿ ಇದನ್ನು ತಾವು ಹಾಕಬೇಕು. ಅದೇ ರೀತಿಯಲ್ಲಿ ಇನ್ನೊಂದು ಸಲಹೆ ಏನೆಂದರೆ, ದೆಹಲಿಯಲ್ಲಿ ಅಥವಾ ನಮ್ಮ ಉತ್ತರ ಹಿಂದೂಸ್ಥಾನದಲ್ಲಿ ನೋಡುವುದಾದರೆ, ಮದ್ಯ ಮಾರಾಟ ಮಾಡತಕ್ಕಂತಹ ಅಂಗಡಿಗಳು ೭ ಗಂಟೆಯ ವರೆಗೆ ಮಾತ್ರ ತೆರೆದಿರುತ್ತವೆ. ಆದರೆ ಇಲ್ಲಿ ೯ ಗಂಟೆಯಿಂದ ಪ್ರಾರಂಭವಾಯಿತೆಂದರೆ, ೧೦ ಗಂಟೆ ಆಯಿತು, ೧೧ ಗಂಟೆ ಆಯಿತು. ರಾತ್ರಿ ಒಂದು ಗಂಟೆಯವರೆಗೂ ತೆರೆದಿರುತ್ತದೆ. ಈಗ ಬೆಳಗಿನ ೩-೩೦ ಗಂಟೆಯವರೆಗೂ ನಡೆಯುತ್ತಿದೆ, ಈಗ ನೀವು ೧೦ ಸಾವಿರ ಜನಸಂಖ್ಯೆಗೆ ಒಂದರಂತೆ ಶಾಪು ಅಂತ ಏನು ಇತ್ತು ಅದನ್ನು ಬದಲಾವಣೆ ಮಾಡಿ ಏಳೂವರೆ ಸಾವಿರಕ್ಕೆ ಎಂದು ಮಾಡಿದ್ದೀರಿ. ಅದು ಬರುಬರುತ್ತಾ ೫ ಸಾವಿರ ಅಥವಾ ೪ ಸಾವಿರ ಜನಸಂಖ್ಯೆಗೆ ಒಂದರಂತೆ ಶಾಪನ್ನು ಹಾಕಬೇಕಾದಂತಹ ಪರಿಸ್ಥಿತಿ ಬರುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಚೈನಾ ದೇಶಕ್ಕೆ ಹೋಗಿ ಬಂದಿದ್ದೇನೆ. ಅಮೇರಿಕಾಕ್ಕೆ ನಾನು ಹೋಗಿ ನೋಡಿ ಬಂದಿದ್ದೇನೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಕೂಡಾ ಈ ಮದ್ಯಪಾನದ ಬಗ್ಗೆ ಚಿಂತನೆ ನಡೆದಿದೆ. ಇವತ್ತು ರಷ್ಯಾದಲ್ಲಿ ಕೂಡಾ ಮದ್ಯವನ್ನು ರೇಷನ್ ರೀತಿ ಕೊಡುತ್ತಿದ್ದಾರೆ. ಇವತ್ತು ನಮ್ಮಲ್ಲಿ ಏನಾಗಿದೆ? ೧೦ ಸಾವಿರ ಜನಸಂಖ್ಯೆಗೆ ಒಂದರಂತೆ ಇದ್ದುದು ಈಗ ಏಳೂವರೆ ಸಾವಿರ ಜನಸಂಖ್ಯೆ ಒಂದರಂತೆ ಆಗಿದೆ. ಮುಂದೆ ಎರಡು ವರ್ಷದಲ್ಲಿ ೫ ಸಾವಿರ ಜನಸಂಖ್ಯೆಗೆ ಒಂದರಂತೆ ಮಾಡಿದರೆ ಈ ದೇಶ ಸರ್ವನಾಶವಾಗುತ್ತದೆಂದು ಹೇಳಿ ಈ ಬಗ್ಗೆ ಈ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳಿ ತಮ್ಮ ಮುಖಾಂತರ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು. ಮಾನ್ಯ ಮಂತ್ರಿಗಳವರಿಂದ ಉತ್ತರ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಎರಡು ದೊಡ್ಡ ಪ್ರಮುಖ ಖಾತೆಗಳ ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಮಾತನಾಡುವ ಕಾಲದಲ್ಲಿ ಅವರ ಪ್ರಾಮುಖ್ಯವಾದ ಕಳಕಳಿ ಏನು ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ತಪ್ಪು ಮಾಡಿದೆ ಎನ್ನತಕ್ಕ ಭಾವನೆಯನ್ನು ಇಟ್ಟುಕೊಂಡು ಮಾತನಾಡಿದ್ದಾರೆ. ಸರ್ಕಾರ ಕೆಲವು ಕಡೆ ತನ್ನ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ವೈಯುಕ್ತಿಕವಾಗಿ ನನ್ನ ಬಗ್ಗೆ ಟೀಕೆ ಮಾಡತಕ್ಕದ್ದೂ ಮಾಡಿದ್ದಾರೆ. ಟೀಕೆ ಎಂದರೆ ಒಂದು ರೀತಿಯ ಮೂದಲಿಕೆ, ಅಥವಾ ಒಂದು ರೀತಿಯ ಅಪಹೇಳನ ಎಂದರೂ ಆಗಬಹುದು. ಅವರು ಏನೇ ಮಾತನಾಡಲಿ, ಅದನ್ನು ಅವರು ಸದ್ಭಾವನೆಯಿಂದಲೇ ಮಾತನಾಡಿದ್ದಾರೆನ್ನುವ ರೀತಿಯಲ್ಲಿ ನಾನು ತೆಗೆದುಕೊಳ್ಳುತ್ತೇನೆ. ಅವರು ಆವೇಶಭರದಲ್ಲಿ ಮಾತನಾಡತಕ್ಕ ಕಾಲದಲ್ಲಿ ಕೆಲವು ಮುಖ್ಯವಾದ ಮತ್ತು ನೈಜವಾದ ವಾಸ್ತವಿಕ ಅಂಶಗಳನ್ನು ಮರೆತು ಮಾತನಾಡಿದ್ದಾರೆಂದು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಆರೋಗ್ಯ ಇಲಾಖೆ ಬಹಳ ದೊಡ್ಡ ಇಲಾಖೆ. ಈ ಇಲಾಖೆಯಲ್ಲಿ ಇವತ್ತು ಖಾಯಂ ಆಗಿ ನೇಮಕಗೊಂಡು ಸೇವೆ ಮಾಡುತ್ತಿರುವ ಕರ್ಮಚಾರಿ ವರ್ಗದ ಸಂಖ್ಯೆ ೫೧ ಸಾವಿರದ ೬೯ ಜನ. ಅದರ ಜೊತೆಗೆ ಸ್ವಯಂ ಪ್ರೇರಿತರಾಗಿ ಕೆಲಸ ಮಾಡತಕ್ಕ ವ್ಯಕ್ತಿಗಳ ಸಂಖ್ಯೆ ಬೇಕಾದಷ್ಟು ಇದೆ. ಅದರ ಜೊತೆಗೆ ನಾವು ಕೆಲವು ಗೌರವಾನ್ವಿತ ವ್ಯಕ್ತಿಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಅನೇರಲ್ಲೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಳ್ಳುತ್ತಿರತಕ್ಕ ಬರಿಗಾಲಿನ ಡಾಕ್ಟರು ಎಂದರೆ ಆರೋಗ್ಯ ಮಾರ್ಗದರ್ಶಿಗಳ ಸಂಖ್ಯೆ ಕೂಡಾ ಸುಮಾರು ೧೦ ಸಾವಿರಕ್ಕೆ ಮೀರಿದೆ. ಅವರು ನಮ್ಮ ಇಲಾಖೆಯ ಖಾಯಂ ನೌಕರರಲ್ಲ. ಆದರೆ ಆಯಾಯ ಸ್ಥಳದಲ್ಲಿ ಇದ್ದುಕೊಂಡು ಅವರು ಈ ಒಂದು ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ನೆರವು ಕೊಡುತ್ತಾ ಇರುವುದರಿಂದ ಆ ಒಂದು ವ್ಯವಸ್ಥೆಯನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದು ನಮ್ಮ ರಾಜ್ಯದ ವ್ಯವಸ್ಥೆಯಲ್ಲ. ಕೇಂದ್ರ ಸರ್ಕಾರದ ಸೂತ್ರಗಳನ್ನು ಅನುಸರಿಸಿಕೊಂಡು ಇದನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಅಧ್ಯಕ್ಷರೇ, ನಮ್ಮ ಸ್ನೇಹಿತರು, ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಅವುಗಳಿಗೆ ನಾನು ಅನಂತರ ಉತ್ತರ ಕೊಡುತ್ತೇನೆ. ಅದಕ್ಕೆ ಪೂರ್ವಭಾವಿಯಾಗಿ ಆರೋಗ್ಯ ಇಲಾಖೆಯಲ್ಲಿ ಇರತಕ್ಕ ಒಂದು ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಮತ್ತು ಈಗ ಇರಬಹುದಾದ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕ ಒಂದು ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ ಎನ್ನುವುದನ್ನು ನಾನು ಪ್ರಾರಂಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ವರದಿಯಲ್ಲಿ ಈಗಾಗಲೇ ಉಲ್ಲೇಖಿಸಿರುವ ಪ್ರಕಾರ ಸಂಚಾರಿ ಆರೋಗ್ಯ ಘಟಕಗಳು ಇದು ನಮ್ಮ ರಾಜ್ಯದಲ್ಲಿ ಮೊಟ್ಟ ಮೊದಲನೆಯದಾಗಿ ಜಾರಿಗೆ ತರತಕ್ಕ ಯೋಜನೆ. ಈ ಯೋಜನೆಯಲ್ಲಿ ಖಾಸಗಿ ಸೇವಾಸಂಸ್ಥೆಗಳು ಮತ್ತು ಖಾಸಗಿ ವೈದ್ಯಕೀಯ ಸೇವೆ ಮಾಡತಕ್ಕ ವ್ಯಕ್ತಿಗಳು ಕೂಡ ತಮ್ಮ ಭಾಗದ ಸೇವೆಯನ್ನು ಮಾಡಿಕೊಡುವುದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ವಾಹನ ಸಂಚಾರ ಸಾಧ್ಯವಿಲ್ಲವೋ ಅಂತಹ ಕಡೆಗಳಲ್ಲಿ ಸಂಚಾರಿ ಆಸ್ಪತ್ರೆ ಸೌಲಭ್ಯದ ಮೂಲಕ ವೈದ್ಯಕೀಯ ಸೌಲಭ್ಯವನ್ನು ಒದಗಿಸಿ ಕೊಡುವಂತಹ ವಿಶೇಷ ಕಾರ್ಯಕ್ರಮ ಇದು. ಇದರಲ್ಲಿ ೧ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ವೈದ್ಯರುಗಳಿಗೆ ಕೊಡಿಸತಕ್ಕ ವ್ಯವಸ್ಥೆ ಇದೆ. ಅನಂತರ ೨೦ ಸಾವಿರ ರೂಪಾಯಿಗಳನ್ನು ಔಷಧಕ್ಕಾಗಿ ೧೫ ಸಾವಿರ ಮತ್ತು ಇಂಧನಕ್ಕಾಗಿ ೫ ಸಾವಿರ ರೂಪಾಯಿಗಳನ್ನು ತ್ರೈಮಾಸಿಕ ಕಂತುಗಳಲ್ಲಿ ಕೊಡತಕ್ಕ ವ್ಯವಸ್ಥೆ ಇದೆ. ಈಗಾಗಲೇ ಅನೇಕ ಜನ ನಿರುದ್ಯೋಗಿ ವೈದ್ಯರುಗಳು ಖಾಸಗಿಯಾಗಿ ವೈದ್ಯಕೀಯ ಸೇವೆಯನ್ನು ಮಾಡುವುದಕ್ಕೆ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೆ ಬ್ಯಾಂಕುಗಳಿಂದ ಆರ್ಥಿಕ ನೆರವನ್ನು ಪಡೆಯಲು ಮುಂದೆ ಬಂದಿದ್ದಾರೆ, ಆದರಲ್ಲೂ ವಾಹನ ಸೌಲಭ್ಯ ಇಲ್ಲದೇ ಇರತಕ್ಕ ಹಳ್ಳಿಗಳು ಏನಿವೆ ಅಂತಹ ಕಡೆಗಳಲ್ಲಿ ಕ್ರಾಂತಿಕಾರಕವಾದ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಮಕ್ಕಳಿಗೆ ವೈದ್ಯಕೀಯ ಪರೀಕ್ಷೆಯನ್ನು ಕಳೆದ ಕೆಲವು ವರ್ಷಗಳಿಂದ ಮಾಡುತ್ತಿಲ್ಲ. ಮುಂದಿನ ವರ್ಷದಿಂದ ನಮ್ಮ ಸರ್ಕಾರಿ ವೈದ್ಯರುಗಳು ಒಂದು ಆದ್ಯ ಕರ್ತವ್ಯವೆಂದು

ಮನದಟ್ಟು ಮಾಡಿಕೊಂಡು ಸರ್ಕಾರಿ ಸೇವೆಯ ವ್ಯಾಪ್ತಿಯಲ್ಲಿಯೇ ಆದನ್ನು ಸೇರಿಸತಕ್ಕ ಕೆಲಸ ಅಗತ್ಯವಾಗಿ ಆಗಬೇಕು ಎನ್ನುವ ಅಭಿಪ್ರಾಯವನ್ನು ಕೆಲವು ಸ್ನೇಹಿತರು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರುಗಳು ಹೇಗೆ ಸ್ವೀಕಾರ ಮಾಡುತ್ತಾರೋ ನನಗೆ ಗೊತ್ತಿಲ್ಲ. ಅದೇನೆಂದರೆ, ಆಸ್ಪತ್ರೆ ಕಟ್ಟಡ ಕಟ್ಟಿಸುವುದಕ್ಕೆ ನಮ್ಮದೇ ಆದ ಕೆಲವು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಯೋಚನೆ ಮಾಡುವ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಿಂದ ಎಂಟಾಣೆಯನ್ನು ವಸೂಲಿ ಮಾಡುವುದು, ಪಟ್ಟಣ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಿಂದ ಒಂದು ರೂಪಾಯಿ ವಸೂಲಿ ಮಾಡಿದರೆ ನಮಗೆ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತದೆ. ಆ ಆದಾಯವನ್ನು ಆಸ್ಪತ್ರೆ ಕಟ್ಟಡ ಕ ಟ್ಟುವುದಕ್ಕೆ ಮೀಸಲಿಡಬೇಕೆನ್ನುವ ಉದ್ದೇಶವನ್ನು ಹೊಂದಿದ್ದೇವೆ. ವೈದ್ಯರು ಕೊಡತಕ್ಕ ಚೀಟಿಯನ್ನು ಕಳೆದುಕೊಂಡು ಬಿಡುತ್ತಾರೆ. ಗುರುತಿನ ಚೀಟಿ ಮತ್ತು ಕಾಯಿಲೆಯ ಹಿಸ್ಟರಿ ಇರತಕ್ಕ ಚೀಟಿಯನ್ನು ಕೊಡುವಾಗ ಎಂಟಾಣೆ ಮತ್ತು ಒಂದು ರೂಪಾಯಿ ಅವರು ಕೊಟ್ಟರೆ ಆ ಚೀಟಿಯನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ. ಕೆಲವರು ೧೫ ದಿವಸ ಒಂದು ತಿಂಗಳು ಬಿಟ್ಟು ಕಾಯಿಲೆ ಉಲ್ಬಣವಾದಾಗ ಬರುತ್ತಾರೆ. ಅವರು ವೈದ್ಯರು ಕೊಟ್ಟ ಚೀಟಿಯನ್ನು ಕಳೆದುಕೊಂಡು ಬಿಡುತ್ತಾರೆ ಪುನಃ ಚೀಟಿ ಪಡೆಯಬೇಕಾದರೆ ಶುಲ್ಕ ನಿಗದಿ ಮಾಡಿದರೆ ಅವರು ಜೋಪಾನವಾಗಿಟ್ಟುಕೊಳ್ಳುತ್ತಾರೆ, ಯಾರು ಅದನ್ನು ಸಹ ಕೊಡಲಿಕ್ಕೆ ಸಾಧ್ಯವಿಲ್ಲವೋ ಅಂತಹ ರೋಗಿಗಳಿಗೆ ವೈದ್ಯಾಧಿಕಾರಿಗಳು ತಮ್ಮ ವಿವೇಚನೆಯನ್ನು ಉಪಯೋಗಿಸಿ ವಿನಾಯಿತಿ ಕೊಡುವ ಅವಕಾಶವಿರುತ್ತದೆ. ಮಾನ್ಯ ಸದಸ್ಯರುಗಳು ಸಂದರ್ಶನ ಸಮಿತಿಗಳ ಬಗ್ಗೆ ಹೇಳಿದ್ದಾರೆ. ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿಗಳು ಇದ್ದರೆ ಅಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ನಿಲ್ಲಿಸಬಹುದು. ಜೊತೆಗೆ ಸರ್ಕಾರಕ್ಕೆ ಯೋಗ್ಯ ಸಲಹೆಗಳನ್ನು ಸಹ ಕೊಡುವುದಕ್ಕೆ ಸಂದರ್ಶನ ಸಮಿತಿಗಳ ಸಹಾಯಬೇಕಾಗುತ್ತದೆ ಎನ್ನುವುದನ್ನು ನಾನು ಬಲ್ಲೆ. ಆ ದೃಷ್ಟಿಯಿಂದ ಈಗಾಗಲೇ ಕೆಲವು ಸಮಿತಿಗಳನ್ನು ರಚನೆ ಮಾಡಿದ್ದೇವೆ. ಉಳಿದ ಸಮಿತಿಗಳನ್ನು ಕೇವಲ ಒಂದು ತಿಂಗಳುಗಳಲ್ಲಿ ಮಾಡಿ ಮುಗಿಸುತ್ತೇನೆ, ಎನ್ನುವ ಭರವಸೆಯನ್ನು ಸದನಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಮೂರು ನಾಲ್ಕು ತಿಂಗಳುಗಳಲ್ಲಿ ಖಾಲಿಯಿರತಕ್ಕ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು ಮುಂದಿನ ಕೆಲಸ.

ನಮ್ಮ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಈ ವಿಚಾರದಲ್ಲಿ ಯಾವ ಪ್ರಗತಿಯನ್ನು ಸಾಧನೆ ಮಾಡಿದೆ ಎನ್ನತಕ್ಕದ್ದನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ೧೯೮೪ ರಲ್ಲಿ ೩೬೩ ಜನ ವೈದ್ಯಾಧಿಕಾರಿಗಳ ನೇಮಕ ಮಾಡಿದೆ. ೧೯೮೫ ರಲ್ಲಿ ೬೭೪ ಜನ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿದೆ. ೧೯೮೬ ಅಂದರೆ ಪ್ರಸ್ತುತ ವರ್ಷದಲ್ಲಿ ೧೯೦ ಜನರನ್ನು ಮಾಡಿದ್ದೇವೆ. ಇನ್ನೂ ೩೦೦ ಜನ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಲೋಕಸೇವಾ ಆಯೋಗಕ್ಕೆ ಬರೆದಿದ್ದು, ಈಗ ಜಾಹೀರಾತು ಕೂಡ ಕೊಟ್ಟಾಗಿದೆ. ಇನ್ನೂ ಎರಡು ಅಥವಾ ಎರಡೂವರೆ ತಿಂಗಳ ಒಳಗೆ ಈ ಆಯ್ಕೆ ಮುಕ್ತಾಯ ಆಗುತ್ತದೆ ಅಂದರೆ ಗ್ರಾಮಾಂತರ ಮಟ್ಟದಲ್ಲಿ ಎಷ್ಟು ಖಾಲಿ ಇರತಕ್ಕಂಥ ಜಾಗಗಳಿವೆ. ಎಲ್ಲಾ ಕಡೆಗಳಿಗೂ ಕೂಡ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಅವಕಾಶ ಆಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಖಾಲಿ ಇರುವ ವೈದ್ಯಾಧಿಕಾರಿಗಳ ಜಾಗಗಳು ಬಹಳ ಕಡಿಮೆ ಆಗಿರುವುದನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಶ್ರೀ ಯಡಿಯೂರಪ್ಪನವರು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಹಾಗೆ ಕೆಲವು ವಿಷಯವನ್ನು ಬಹಳ ದೀರ್ಘವಾಗಿ ಹೇಳಿದರು. ೧೯೮೪-೮೫ ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ೬೩ ಖಾಲಿ ಜಾಗಗಳು ಇದ್ದವು. ಅದು ೧೯೮೫-೮೬ ರಲ್ಲಿ ೩೬ಕ್ಕೆ ಇಳಿಯಿತು. ಈ ವರ್ಷ ೧೯ಕ್ಕೆ ಇಳಿದಿದೆ. ಎಲ್ಲಾ ಭಾಗಗಳಲ್ಲೂ ವೈದ್ಯರು ಇದ್ದಾರೆ ಎಂದು ನಾನು ಹೇಳುವುದಿಲ್ಲ. ನಮ್ಮ ಸರ್ಕಾರ ಪ್ರತಿ ಹಂತದಲ್ಲೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದು ರುಜುವಾತು ಮಾಡಿಕೊಡುವುದಕ್ಕೆ ಈ ಮಾಹಿತಿಯನ್ನು ನಾನು ಕೊಡಬೇಕಾಯಿತು.

ಇನ್ನು ಅಧ್ಯಕ್ಷರೇ, ಈ ಹುಡ್ಕೊ ಸಂಸ್ಥೆಯ ಸಹಾಯದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಮುಖ್ಯವಾಗಿ ವೈದ್ಯಾಧಿಕಾರಿಗಳಿಗೆ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಮನೆ ಕಟ್ಟಿಸಿಕೊಡತ-

ಹೊಸದಾದ ಯೋಜನೆ. ನಾವು ಎಷ್ಟು ಭಾಗ ಹಣ ಕೊಡುತ್ತೇವೋ, ಅದರ ಎರಡರಷ್ಟು ಭಾಗದ ಹಣವನ್ನು ಹುಡ್ಕೋ ಸಂಸ್ಥೆಯವರು ಕೊಡುತ್ತಾರೆ. ಹೀಗೆ ಹಂತಹಂತವಾಗಿ ಮೊದಲು ನಾಲ್ಕು ಜಿಲ್ಲೆಗಳನ್ನು ಕೈಗೆತ್ತಿಕೊಂಡು ಅನಂತರ ನಮ್ಮ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಇಡೀ ರಾಜ್ಯಕ್ಕೆ ಇದನ್ನು ವಿಸ್ತರಿಸಿಕೊಂಡು ಹೋಗಬೇಕು ಎನ್ನತಕ್ಕದ್ದು ನಮ್ಮ ಈ ಕಾರ್ಯಕ್ರಮದ ಉದ್ದೇಶ ಮೊದಲೇ ನಾನು ಹೇಳಿದ ಹಾಗೆ ಈ ನಾಲ್ಕು ಜಿಲ್ಲೆಗಳಾದ ಕೋಲಾರ, ಬಳ್ಳಾರಿ, ಕೊಡಗು ಮತ್ತು ಮಂಡ್ಯ ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಂಡ್ಯ ಮೊದಲಿನ ಲಿಸ್ಟ್‌ನಲ್ಲಿ ಇರಲಿಲ್ಲ.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಈಗಲೇ ಕೇಳುವುದು ಬೇಡ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ವಿರೋಧ ಪಕ್ಷದ ಉಪನಾಯಕರಾದ ಶ್ರೀ ಖರ್ಗೆಯವರು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರು ಏಕೆ ಹೋಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಯೋಚನೆ ಮಾಡಬೇಕಾದರೆ ಅನೇಕ ಗ್ರಾಮಗಳಲ್ಲಿ ವಾಸಕ್ಕೆ ಮನೆ ಇಲ್ಲ. ಈ ಸಬೂಬನ್ನು ಅವರು ಹೇಳೇ ಹೇಳುತ್ತಾರೆ. ಮತ್ತು ನಮ್ಮ ಮಾನ್ಯ ಸ್ನೇಹಿತರು ಆಸ್ಪತ್ರೆಗಳನ್ನು ಮಂಜೂರು ಮಾಡಿಕೊಳ್ಳುವ ಆತುರದಲ್ಲಿ ಒಳ್ಳೆ ಮನೆ ಕೊಡುತ್ತೇವೆ ಎಂದು ವಾಗ್ದಾನ ಮಾಡುತ್ತಾರೆ. ಮನೆಯನ್ನೂ ಕೂಡ ತೋರಿಸುತ್ತಾರೆ. ಆದರೆ ವೈದ್ಯರು ಅದನ್ನು ನಂಬಿ ಅಲ್ಲಿಗೆ ಹೋದಾಗ ಆ ಮನೆಯಲ್ಲಿ ಬೇರೆ ಯಾರೋ ಇರುತ್ತಾರೆ ಹೀಗಾಗಿ ಕೆಲವು ಸಲ ತೊಂದರೆಗಳಾಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಯೋಜನೆಯಲ್ಲಿ ಮಂಡ್ಯ ಇರಲಿಲ್ಲ. ಈಗ ಅದು ಹೇಗೆ ಬಂತು ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಇನ್ನುಮೇಲೆ ಆಸ್ಪತ್ರೆ ಕೊಡುವುದಕ್ಕೆ ಮುಂಚೆ ವೈದ್ಯರಿಗೆ ಮನೆ ಕೊಟ್ಟು ನಂತರ ಆಸ್ಪತ್ರೆಯನ್ನು ಮಂಜೂರು ಮಾಡಬೇಕಾಗುತ್ತದೆ. ಆ ಮೇಲೆ ಈಗ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ೯ ಲಕ್ಷ ರೂಪಾಯಿ ವೆಚ್ಚದಲ್ಲಿ ಲೇಸರ್ ಯಂತ್ರವನ್ನು ಒದಗಿಸಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ೧೯ನೇ ತಾರೀಖು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿಕೊಡುತ್ತಾರೆ. ಹೆಚ್ಚಿನ ಚಿಕಿತ್ಸೆಗೋಸ್ಕರ ನಮ್ಮ ರಾಜ್ಯದಿಂದ ಜನ, ಬೇರೆ ರಾಜ್ಯಕ್ಕೆ ಹೋಗುವ ಸಂದರ್ಭ ಇತ್ತು ಅದು ನಿವಾರಣೆಯಾಗುತ್ತದೆ ಎನ್ನುವ ಸಂತೋಷದ ವಿಚಾರವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯದ ಬಗ್ಗೆ ಈಗಾಗಲೇ ಆಯವ್ಯಯದ ಭಾಷಣದಲ್ಲಿ ಕೇಳಿದ್ದೀರಿ. ಆದಷ್ಟು ಜಾಗ್ರತೆ ಇದನ್ನು ಸ್ಥಾಪನೆ ಮಾಡಿ ಸಂಶೋಧನೆಗೆ ಹೆಚ್ಚು ಒತ್ತು ಕೊಟ್ಟು, ವೈದ್ಯಕೀಯ ಕಾಲೇಜುಗಳಲ್ಲಿ ಒಂದು ಆಡಳಿತದ ನಿಯಂತ್ರಣವನ್ನು ಬಿಗಿಗೊಳಿಸುವುದಕ್ಕೆ ಸಹಾಯವಾಗಲಿ ಎಂದು ಈ ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡುತ್ತೇವೆ. ಹೆಲ್ತ್ ಇನ್‌ಷೂರೆನ್ಸ್‌ನ್ನು ಈ ವರ್ಷದಿಂದ ಜಾರಿಗೆ ತರಬೇಕೆಂದಿದ್ದೇವೆ. ಇದರ ರೂಪರೇಷೆಗಳ ಬಗ್ಗೆ ವಿವರಣೆಯನ್ನು ಅನಂತರ ಕೊಡುತ್ತೇನೆ. ಅದು ಇನ್ನೂ ಸಮಾಲೋಚನೆಯಲ್ಲಿದೆ. ಮೆದುಳು ಜ್ವರದ ವಿಚಾರದಲ್ಲಿ ಹೇಳಬೇಕಾದರೆ, ಇದು ರಾಷ್ಟ್ರೀಯ ಕಾರ್ಯಕ್ರಮ ಕರ್ನಾಟಕ ಸರ್ಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಆಂಧ್ರ ಪ್ರದೇಶದಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥ ಖಾಯಿಲೆ. ಇದು ರಾಷ್ಟ್ರೀಯ ಕಾರ್ಯಕ್ರಮವಾದುದರಿಂದ, ಇದನ್ನು ಕೈಗೆತ್ತಿಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಇದಕ್ಕೆ ಮಂಜೂರಾತಿ ದೊರೆಯಬಹುದೆಂದು ನಾನು ಅಂದುಕೊಂಡಿದ್ದೇನೆ.

ಇನ್ನು ದಾದಿಯರ ನಿರ್ದೇಶನಾಲಯ. ಇದರ ಅವಶ್ಯಕತೆ ಇತ್ತು. ಆ ವರ್ಗದ ಜನಗಳನ್ನು ನಾನಾ ರೀತಿಯ ಶೋಷಣೆಗೆ ಗುರಿ ಮಾಡಿದ ಪರಿಸ್ಥಿತಿ ಕಂಡು ಬಂದುದರಿಂದ, ಅವರೇ ಸ್ವತಂತ್ರವಾಗಿ ತಮ್ಮ ಆಗು ಹೋಗುಗಳನ್ನು ನಿರ್ಧಾರ ಮಾಡಿಕೊಳ್ಳುವುದಕ್ಕೆ ಒಂದು ನಿರ್ದೇಶನಾಲಯ ಬೇಕು ಎಂದು ಮನವರಿಕೆಯಾದ ಮೇಲೆ ಇದಕ್ಕೆ ಮಂಜೂರಾತಿ ಕೊಟ್ಟಿದೆ. ಇನ್ನು ಬೆಂಗಳೂರು ನಗರದ ಬೌರಿಂಗ್ ಆಸ್ಪತ್ರೆಗೆ ಅತ್ಯಗತ್ಯವಾಗಿ ಬೇಕಾದಂಥ ಸಲಕರಣೆಗಳನ್ನು ೮೧ ಲಕ್ಷ ರೂಪಾಯಿ ವೆಚ್ಚದಲ್ಲಿ ಕೊಡಲಾಗಿದೆ ಸಾರ್ಕ್ ಸಮ್ಮೇಳನದ ಸಂದರ್ಭದಲ್ಲಿ ಬಂತು ಎಂದು ಆಕ್ಷೇಪಣೆ ಎತ್ತಿದರೆ ನನ್ನ ವಿವರಣೆ ಇಷ್ಟು. ಒಂದು ದೊಡ್ಡ ಆಸ್ಪತ್ರೆಗೆ ಬೇಕಾದ ಸಲಕರಣೆಗಳು ಇರಲೇಬೇಕು. ಈ ರೀತಿ ನಾವು ಬೌರಿಂಗ್ ಆಸ್ಪತ್ರೆಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದ್ದೇವೆ. ಇದರಿಂದ ಅತ್ಯಗತ್ಯವಾದ ಸಲಕರಣೆಗಳನ್ನು

ಹೊಂದಿರುವ ಆಸ್ಪತ್ರೆ ನಮ್ಮಲ್ಲಿ ಇದೆ ಎಂದು ಹೇಳಬಹುದು. ನಾನಾ ರೀತಿಯ ಖಾಯಿಲೆಗಳನ್ನು ಗುರುತಿಸುವುದಕ್ಕೆ, ಖಾಯಿಲೆಗಳಿಗೆ ಯೋಗ್ಯ ಚಿಕಿತ್ಸೆ ಕೊಡುವುದಕ್ಕೆ ಆ ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳು ಇವೆ ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಭಾರತೀಯ ವೈದ್ಯ ಪದ್ಧತಿಗೆ ಶಕ್ತಿ ತುಂಬುವ ಉದ್ದೇಶದಿಂದ ಗಿಡಮೂಲಿಕೆಗಳನ್ನು ಬೆಳೆಸತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಕೆಂಗೇರಿ ಹತ್ತಿರ ೩೭ ಎಕರೆ ನಮ್ಮದೇ ಆದ ಭೂಮಿ ಇದೆ. ಅಲ್ಲಿ ಈ ವರ್ಷದಿಂದಲೇ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಹೋಮಿಯೋಪತಿ ಕಾಲೇಜನ್ನು ಸ್ಥಾಪನೆ ಮಾಡಿದ್ದೇವೆ. ಗಣನೀಯ ಸೇವೆ ಸಲ್ಲಿಸಿದವರು ಯಾರಿದ್ದಾರೆ, ಅವರಿಗೆ ಸ್ವರ್ಣ ಪದಕಗಳನ್ನು ಕೊಡತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಉತ್ತಮ ಸೇವೆಯನ್ನು ಮಾಡಿ, ಜನಗಳ ವಿಶ್ವಾಸಕ್ಕೆ ಪಾತ್ರರಾಗಿರತಕ್ಕಂಥ ಜನ ಮತ್ತು ಆರ್ಥಿಕವಾಗಿ ತೊಂದರೆಗೆ ಈಡಾಗಿರುವ ಜನರನ್ನು ಗುರುತಿಸಿ ಮಾಶಾಸನ ಕೊಡತಕ್ಕ ಕಾರ್ಯಕ್ರಮ ಜಾರಿಗೆ ತಂದಿದ್ದೇವೆಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಇನ್ನು ಆಕ್ಷೇಪಣೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವೈದ್ಯರ ಬಗ್ಗೆ ಹೇಳುತ್ತಾ, ಅವರು ಖಾಸಗಿ ಸೇವೆಯಲ್ಲಿ ತೊಡಗುವುದಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳಿದರು. ಇದು ಈಗ ಮಾಡಿದ್ದಲ್ಲ, ಹಿಂದಿನಿಂದಲೂ ಈ ದೇಶದಲ್ಲಿರತಕ್ಕಂಥ ಒಂದು ವ್ಯವಸ್ಥೆ. ಖಾಸಗಿ ಸೇವೆ ಮಾಡಕೂಡದು ಎಂದರೆ, ಈ ವಿಚಾರದಲ್ಲಿ ನನ್ನ ಅನಿಸಿಕೆಯನ್ನು ಇಲ್ಲಿ ಮನಬಿಚ್ಚಿ ಹೇಳುತ್ತಿದ್ದೇನೆ. ಅನೇಕ ತಜ್ಞ ವೈದ್ಯರನ್ನು ನಮ್ಮ ಸರ್ಕಾರಿ ಸೇವೆಯಲ್ಲಿ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ.

೬-೦೦ ಪಿ ಎಂ.

ನಾವು ಈ ತಜ್ಞರನ್ನು ನಮ್ಮ ಸರಕಾರಿ ಸೇವೆಯಲ್ಲಿ ಉಳಿಸಿಕೊಳ್ಳಬೇಕೆಂಬ ಕಾಳಜಿಯನ್ನು ಕೂಡಾ ಹೊಂದಿದ್ದೇವೆ. ನಾವು ಅವರು ಮಾಡತಕ್ಕಂಥ ಸೇವೆ ಮತ್ತು ಅವರು ಪಡೆದಿರತಕ್ಕಂಥ ಪರಿಣತಿಯನ್ನು ನೋಡಿದರೆ, ಬೇರೆ ರಾಜ್ಯಗಳಲ್ಲಿ ಹೊರದೇಶಗಳಲ್ಲಿ ಇರತಕ್ಕಂಥ ತಜ್ಞರು, ಪರಿಣತರು ಏನಿದ್ದಾರೆ, ಅವರಿಗಿಂತ ಇವರು ಯಾವರೀತಿಯಲ್ಲೂ ಕಡಿಮೆ ಇಲ್ಲ. ಆದುದರಿಂದ ಬೇರೆ ತಜ್ಞರು ಯಾವರೀತಿ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೋ, ಅದೇ ರೀತಿ ಇವರೂ ಪ್ರಯತ್ನ ಮಾಡಿದರೆ ಅದು ತಪ್ಪು ಎಂದು ನಾನು ಅಂದುಕೊಂಡಿಲ್ಲ. ಈಗ ಪ್ರತಿಭಾ ಪಲಾಯನ ಎಂಬ ಮಾತನ್ನು ನಾವು ಬಹಳ ಕೇಳುತ್ತಿದ್ದೇವೆ. ಇಲ್ಲಿ ಅನುಕೂಲತೆಗಳು ಸಾಕಾದಷ್ಟು ಇಲ್ಲ ಎಂದು ಹೇಳಿ ಅವರು ಹೋಗುತ್ತಿದ್ದಾರೆ. ಈ ಪ್ರತಿಭೆಯನ್ನು ನಾವು ಸಂರಕ್ಷಣೆ ಮಾಡಿಕೊಳ್ಳಬೇಕು ಅವರಿಗೆ ಸಾಲದೇ ಇರತಕ್ಕಂಥ ಕೆಲವು ಅನುಕೂಲತೆಗಳನ್ನು, ತಾವೇ ಒದಗಿಸಿಕೊಳ್ಳುವುದಕ್ಕೆ ಅವರಿಗೆ ಒಂದು ಅವಕಾಶವನ್ನು ಕೊಡಬೇಕು ಎಂಬ ದೃಷ್ಟಿಯಲ್ಲಿ ಹಿಂದೆ ರದ್ದಾಗಿರತಕ್ಕಂಥ ಖಾಸಗಿ ಸೇವೆಯನ್ನು ಪುನಃ ಜಾರಿಗೆ ತಂದದ್ದು ಎಂದು ನಾನು ಅಂದುಕೊಂಡಿದ್ದೇನೆ. ಅನೇಕ ರೀತಿಯ ವಾದವಿವಾದಗಳು ಇದರ ಬಗ್ಗೆ ಆಗಿದೆ. ಖಾಸಗಿ ಸೇವೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಸರಕಾರ ತೀರ್ಮಾನ ತೆಗೆದುಕೊಂಡಿರುವ ವಿಚಾರದಲ್ಲಿ ವಾದವಿವಾದಗಳು ಆಗಿದೆ ವೈದ್ಯರ ಕೊರತೆಯ ಬಗ್ಗೆ ಹೇಳಿದ್ದೇನೆ. ಔಷಧಿಗಳ ಬಗ್ಗೆ ನಮ್ಮ ಸ್ನೇಹಿತರು ಟೀಕೆಯನ್ನು ಮಾಡಿದರು ಜನತಾ ಸರಕಾರ ಅಸ್ತಿತ್ವಕ್ಕೆ ಬಂದಮೇಲೆ ಪ್ರತಿವರ್ಷವೂ ಔಷಧಿಗಳ ಸರಬರಾಜಿನಲ್ಲಿ ದಿಟ್ಟ ಹೆಜ್ಜೆಯಲ್ಲಿ ಸಾಗಿದೆ ಎಂಬುದನ್ನು ಬಹುಶಃ ಅನೇಕರು ಗಮನಿಸಿರಲಾರರು ಎಂದು ನಾನು ಅಂದುಕೊಂಡಿದ್ದೇನೆ. ತಿಳಿದುಕೊಂಡಿರುವವರು ಯಾರೂ ಇದರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ನಾಲ್ಕು ವರ್ಷಗಳ ಹಿಂದೆ ಜನತಾ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ನಾವು ಕೊಡುತ್ತಿದ್ದ ಔಷಧಿಗಳ ಪ್ರಮಾಣ ಏನಿತ್ತು ಅದರ ಎರಡೂವರೆ ಪಟ್ಟು ಈಗ ಜಾಸ್ತಿಯಾಗಿದೆ. ಕಳೆದ ವರ್ಷ ನಾವು ಹನ್ನೆರಡೂವರೆ ಕೋಟಿ ರೂಪಾಯಿಗಳಷ್ಟು ಔಷಧಿಗಳನ್ನು ಸರಬರಾಜು ಮಾಡಿದರೆ, ಈ ವರ್ಷ ಹದಿನಾರೂವರೆ ಕೋಟಿ ರೂಪಾಯಿಗಳ ಔಷಧಿಗಳನ್ನು ಸರಬರಾಜು ಮಾಡಿದ್ದೇವೆ. ಆದಮೇಲೆ ಯಾವುದೋ ಒಂದು ಆಸ್ಪತ್ರೆಯಲ್ಲಿ ನೀವು ಹೇಳಿದದು ನಿಜ ಇರಬಹುದು, ಅವ್ಯವಹಾರಗಳು ಹಾಗೂ ದುರುಪಯೋಗ ಮಾಡಿಕೊಂಡಿರುವುದು ನಿಜ ಇರಬಹುದು

ಅದು ಸಾಧ್ಯ. ಅಂತಹದನ್ನು ಸರಕಾರದ ಗಮನಕ್ಕೆ ತಂದರೆ ಸರ್ಕಾರ ದಾಕ್ಷಿಣ್ಯ ತೋರಿಸಿ ಅವರ ತಪ್ಪುಗಳನ್ನು ಮುಚ್ಚಿಕೊಳ್ಳುವುದರಲ್ಲಿ ಏನಾದರೂ ಆಸಕ್ತಿ ತೋರಿಸಿದರೆ ಸರ್ಕಾರವನ್ನು ಆಗ ನೀವು ಆಕ್ಷೇಪಣೆ ಮಾಡ ಬಹುದು. ಆಗ ಮಾತ್ರ ಆ ಆಕ್ಷೇಪಣೆಗೆ ಅರ್ಥ ಬರುತ್ತದೆ. ಎಲ್ಲಾ ಕಡೆಯಲ್ಲೂ ಹೀಗೆ ನಡೆಯುತ್ತದೆ ಎಂದು ಲೋಕಾಭಿರಾಮವಾಗಿ ಹೇಳತಕ್ಕದ್ದು ಮಾನ್ಯ ಸದಸ್ಯರಿಗೆ ಗೌರವ ತರತಕ್ಕಂಥ ವಿಚಾರ ಅಲ್ಲ ಎಂದು ನಮ್ರತೆಯಿಂದ ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇವೆ.

ಅಧ್ಯಕ್ಷರೇ, ಇನ್ನು ವೈದ್ಯಕೀಯ ಕಾಲೇಜುಗಳ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಕಾಲೇಜುಗಳನ್ನು ಹೊಸದಾಗಿ ಕೊಡುತ್ತಿದ್ದೇವೆ ಎನ್ನುವುದು ಒಂದು, ಕ್ಯಾಪಿಟೇಷನ್ ಶುಲ್ಕವನ್ನು ಖಾಸಗಿ ಕಾಲೇಜಿನವರು ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದು ಇನ್ನೊಂದು, ನಾನು ತಮಗೆ ಹೇಳುವುದಾದರೆ, ನನ್ನ ಪ್ರಾಮಾಣಿಕವಾದ ಅನಿಸಿಕೆಯನ್ನು ಹೇಳುತ್ತಿದ್ದೇನೆ. ಈ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಎಷ್ಟು ಪೈಪೋಟಿ ಇದೆಯೋ, ಈ ಕ್ಯಾಪಿಟೇಷನ್ ಶುಲ್ಕ ಕೊಡುವುದಕ್ಕೂ ಜನಗಳ ಪೈಪೋಟಿ ಅಷ್ಟೇ ಇದೆ, ಇದು ಸತ್ಯಾಂಶ. ನಾವೂ ಕೂಡಾ ಸಮಾಜದ ಆಶೋತ್ತರಗಳಿಗೆ ಸ್ಪಂದಿಸಿ, ನಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು, ಬೇರೆ ರೀತಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಎಲ್ಲಾ ಕಾಲದಲ್ಲೂ ಇರತಕ್ಕಂತ ತತ್ವ.

ಶ್ರೀ ಬಿ. ಎ. ಉಮರಬ್ಬ.—ಇದು ಹೊಸ ತತ್ವ. 1981 ರಲ್ಲಿ ತಾವು ಏನು ಹೇಳಿದ್ದೀರಿ ? ಪೈಪೋಟಿ ಯಾರು ಮಾಡುತ್ತಾರೆ, ಯಾರೋ ದುಡ್ಡು ಇದ್ದವರು ಮಾತ್ರ ಮಾಡುತ್ತಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆಮೇಲೆ ಕೇಳಿ, ಕುತ್ತಿಗೆ ಕುಯ್ದು ಇಲ್ಲಿಟ್ಟರೂ, ಅದು ಸೋರೆ ಬುರುಡೆ ಎಂದು ಹೇಳತಕ್ಕ ಜನ ಇದ್ದಾರೆ, ಅವರಿಗೇನು ಮಾಡುವುದು ? ಎಷ್ಟೇ ಪ್ರಾಮಾಣಿಕವಾಗಿ ನಾನು ಉತ್ತರಿಸಿದರೂ ಸಮಾಧಾನವಾಗಿಲ್ಲ, ನನ್ನ ಉತ್ತರದಿಂದ ಎಲ್ಲರೂ ಸಂತುಷ್ಟರಾಗುತ್ತಾರೆ, ಎಲ್ಲರೂ ತೃಪ್ತಿಯಾಗುತ್ತಾರೆ ಎಂದು ನಾನು ಅಂದುಕೊಂಡಿಲ್ಲ. ಅದು ಆಗಬೇಕೆಂಬುದು ನನ್ನ ಬಯಕೆಯೂ ಅಲ್ಲ. ಹೇಳಬೇಕಾದುದನ್ನು ಪ್ರಾಮಾಣಿಕವಾಗಿ ಹೇಳಬೇಕೋ ಬೇಡವೋ ಹೇಳಿ.

ಶ್ರೀ ಕೆ. ಎಚ್. ಪಾಟೀಲ್.—ಏನಾದರೂ ಮಾಡಿ ತೃಪ್ತಿಪಟ್ಟುಕೊಳ್ಳುವ ಟೈಮ್ ಬಂದಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಎಲ್ಲಾ ಮಾನ್ಯ ಸದಸ್ಯರಿಗೂ ನನ್ನ ಉತ್ತರದಿಂದ ತೃಪ್ತಿಯಾಗಬೇಕು, ಎನ್ನುವ ಬಯಕೆ ನನ್ನದೇನೂ ಅಲ್ಲ. ನಾನು ಹೇಳಬೇಕಾದ್ದನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳೇ, ಇದು ತೃಪ್ತಿ ಪಡಿಸುವಂತಹ ಟೈಮ್ ಏನಾದರೂ ಮಾಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದ್ದಕ್ಕೆ ಕೆಲವು ಜನ ಇಲ್ಲಿ ಟೀಕೆ ಮಾಡಿದರು. ಆದರೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸ್ವಾಮಿರಾವ್‌ರವರು ಮಾತನಾಡುತ್ತಾ ಹೇಳಿದರು ಮೆಡಿಕಲ್ ಕಾಲೇಜುಗಳನ್ನು ಕೊಡುವುದಾದರೆ ನಮ್ಮ ಶಿವಮೊಗ್ಗ ಜಿಲ್ಲೆಗೂ ಒಂದು ಮೆಡಿಕಲ್ ಕಾಲೇಜು ಕೊಡಿ ಎಂದು ಹೇಳಿದರು. ಇದೇಕೆ ಸ್ವಾಮಿ ? ಬೇರೆಯವರಂತೆ ತಾವು ಅರ್ಜಿಯನ್ನು ಸಲ್ಲಿಸಿದ್ದೀರಿ, ಎಲ್ಲರ ಅರ್ಜಿಗಳನ್ನು ಪರಿಶೀಲನೆ ಮಾಡುವಾಗ ನಿಮ್ಮ ಅರ್ಜಿಯನ್ನು ಪರಿಶೀಲನೆ ಮಾಡಿ ಅರ್ಹರಾಗಿದ್ದರೆ...

ಶ್ರೀ ಎನ್. ಎಂ. ಅಡ್ಯಂತಾಯ.—ನಮ್ಮ ಜಿಲ್ಲೆಗ ಈ ಸಾರಿ ಎಷ್ಟು ಮೆಡಿಕಲ್ ಕಾಲೇಜುಗಳನ್ನು ಕೊಡುತ್ತೀರಿ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇನ್ನು ಸೀಟು ಕೊಡತಕ್ಕಂಥ ವಿಚಾರದಲ್ಲಿ ಹಲವಾರು ಜನ ಮಾನ್ಯ ಸದಸ್ಯರು ಮಾತನಾಡುತ್ತಾ ತಾರತಮ್ಯವನ್ನು ಮಾಡಿದ್ದೀರಿ ಎಂದು ಹೇಳಿದರು. ಅನುಮತಿ ಕೊಡುವಾಗ ಕೆಲವೊಂದು ಸಾರಿ ಈ ರೀತಿಯ ಹೆಚ್ಚು ಕಡಿಮೆಗಳು ಆಗಿರಬಹುದು. ನಾವು ಮೆಡಿಕಲ್ ಕಾಲೇಜುಗಳಿಗೆ ಅನುಮತಿಯನ್ನು ಕೊಡುವಾಗ ಅನುಸರಿಸತಕ್ಕಂಥ ಕ್ರಮಗಳಾವುವು ಎನ್ನುವುದನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಮೆಡಿಕಲ್ ಕಾಲೇಜು ನಡೆಸುವುದಕ್ಕೆ ಎಲ್ಲಾ ಸೌಲಭ್ಯಗಳು ಇವೆಯೇ ಎನ್ನುವುದನ್ನು ಇಲಾಖಾಧಿಕಾರಿಗಳಿಂದ ಖಚಿತಪಡಿಸಿ ಕೊಳ್ಳುತ್ತೇವೆ. ಮತ್ತು ಮೂಲ ಸೌಕರ್ಯಗಳು ಸಾಕಷ್ಟು ಇವೆಯೇ ಎನ್ನುವುದನ್ನು ನೋಡುತ್ತೇವೆ. ಮೂಲ ಸೌಕರ್ಯಗಳು

ಇದ್ದರೆ ಎಷ್ಟು ಜನ ವಿದ್ಯಾರ್ಥಿಗಳನ್ನು ಅವರು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಪರಿಶೀಲನೆ ಮಾಡಿ ಸೀಟುಗಳನ್ನು ನಿಗಧಿ ಮಾಡುತ್ತೇವೆ ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸ್ವಲ್ಪ ಹೆಚ್ಚು ಕಡಿಮೆ ಅದನ್ನು ಹೇಳಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನೀವು ಅದನ್ನೆಲ್ಲಾ ಕೇಳಬಾರದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನೇತಕ್ಕೆ ಅದನ್ನು ಕೇಳಬಾರದು ?

ಶ್ರೀ ಹೆಚ್. ಟಿ ಕೃಷ್ಣಪ್ಪ.—ಇದೆಲ್ಲಾ ಹಿಂದೆ ಆಗಿರುವಂತಾದ್ದು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಮಾಡಿದ್ದನ್ನೇ ನೀವು ಮಾಡಿ ಡಿಫೆಂಡ್ ಮಾಡಿಕೊಳ್ಳುವುದಾರೆ, ನಿಮಗೆ ಯಾವ ಮಾರಲ್ ರೈಟ್ಸ್ ಇದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇನ್ನು ನಾನು ಕುಟುಂಬ ಕಲ್ಯಾಣದ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ರಾಜ್ಯ ಈ ಒಂದು ಕ್ಷೇತ್ರದಲ್ಲಿ ಒಂದು ದೊಡ್ಡ ವಿಕ್ರಮವನ್ನೇ ಸಾಧನೆ ಮಾಡಿದೆ. ಈ ಒಂದು ವಿಕ್ರಮಕ್ಕೆ ಸರ್ಕಾರ ಒಂದೇ ಕಾರಣವೆಂದು ನಾನು ಹೇಳುವುದಿಲ್ಲ. ಪ್ರಧಾನವಾಗಿ ನಮ್ಮ ಜನತೆ ಮತ್ತು ಎಲ್ಲಾ ಇಲಾಖಾಧಿಕಾರಿಗಳು ಕೂಡ ಕಾರಣಕರ್ತರು. ಅವರೆಲ್ಲರೂ ಕೂಡ ಸಕ್ರಿಯವಾಗಿ ಕೆಲಸ ಮಾಡಿದ್ದರಿಂದ ಈ ಸಾಧನೆಯನ್ನು ಮಾಡಲಾಯಿತು. ಇನ್ನು ಪ್ರಸಕ್ತ ಸಾಲಿನಲ್ಲಿ ಕೂಡ ನಾವು ಎಲ್ಲಾ ರಾಜ್ಯಗಳಿಗಿಂತ ಮುಂದೆ ಇದ್ದೇವೆ. ಈ ಮಾತನ್ನು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಈ ಕುಟುಂಬ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಅನಗತ್ಯ ಟೀಕೆಗಳನ್ನು ಮಾಡುವುದರಿಂದ ನಮ್ಮ ಮುಂದಿನ ಭವಿಷ್ಯಕ್ಕೆ ಯೋಗ್ಯವಾಗಲಾರದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಾಗ ಕೆಲವು ಲೋಪದೋಷಗಳಾಗಬಹುದು. ಈ ಯೋಜನೆ ಯಶಸ್ವಿಯಾಗಬೇಕಾದರೆ ನಾವು ಸಿಬ್ಬಂದಿ ವರ್ಗವನ್ನು ಹೆಚ್ಚು ಮಾಡಿದ್ದೇವೆ. ಇನ್ನೂ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಆದ್ದರಿಂದ ಪ್ರಗತಿ ಸಾಧ್ಯವಾಯಿತು. ಇಲ್ಲದಿದ್ದರೆ ನಾನು ಇಲ್ಲಿ ಕುಳಿತುಕೊಂಡು ಮಂತ್ರ ಅಥವಾ ಪವಾಡ ಮಾಡಿದರೆ ಆಗುತ್ತದೆಯೇ ? ಇನ್ನು ಆಸ್ಪತ್ರೆಗಳು ಬಹಳ ಕೆಟ್ಟ ಸ್ಥಿತಿಯಲ್ಲಿವೆ ಎಂದು

ಶ್ರೀ ಗೋಪಾಲ ಮುಕುಂದ ಕಾನಡೆ.— ದಿನಾಂಕ ೧೭-೧-೮೭ರಲ್ಲಿ ಸಿದ್ದಾಪುರ ಆಸ್ಪತ್ರೆಯಲ್ಲಿ ಆಪರೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಶ್ರೀಮತಿ ನಾಗವೇಣಿ ನಾಯಕ್ ಎನ್ನುವವರು ಸತ್ತರು. ಈ ಬಗ್ಗೆ ನಾನು ತಮಗೆ ಪತ್ರ ಬರೆದು ತಿಳಿಸಿದ್ದೇನೆ. ಏನಾಯಿತು ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅದು ಇಂಡಿವಿಜ್ಯುಯಲ್ ಆಯಿತು. ಇನ್ನು ಆಸ್ಪತ್ರೆಗಳು ಕೆಟ್ಟ ಸ್ಥಿತಿಯಲ್ಲಿವೆ ಎನ್ನುವ ಮಾತನ್ನು ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಆಸ್ಪತ್ರೆಗಳ ದುರಸ್ತಿ ಕೆಲಸವಾಗಿಲ್ಲ. ಅಲ್ಲಿಗೆ ಬೇಕಾದಂತಹ ಸೌಕರ್ಯಗಳನ್ನು ಕಲ್ಪಿಸಿಲ್ಲ ಇತ್ಯಾದಿಗಳನ್ನು ಹೇಳಿದರು. ಈ ದೂರುಗಳು ನಿಜವಾಗಿಯೂ ಆಧಾರರಹಿತವೆಂದು ನಾನು ಹೇಳುವುದಿಲ್ಲ. ಇದ್ದರೂ ಇರಬಹುದು ಆದರೆ ಎಲ್ಲಾ ಆಸ್ಪತ್ರೆಗಳು ಆ ರೀತಿ ಇವೆ ಎಂದು ಹೇಳುವುದು ಸರಿಯಲ್ಲ. ಎಲ್ಲಿ ಆಸ್ಪತ್ರೆಗಳು ಕೆಟ್ಟ ಸ್ಥಿತಿಯಲ್ಲಿವೆಯೋ ಅಲ್ಲಿ ನಾವು ಸರಿಪಡಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸದಲ್ಲಿ ನಿರತರಾಗಿದ್ದೇವೆ. ಬಳ್ಳಾರಿ ಆಸ್ಪತ್ರೆ ಬಗ್ಗೆ ಶ್ರೀಮಾನ್ ಭೂಪತಿಯವರು ಹೇಳಿದ್ದಾರೆ. ಬಳ್ಳಾರಿ ಆಸ್ಪತ್ರೆಯ ಸುತ್ತುಮುತ್ತಲಿನ ಪರಿಸರವನ್ನು ನಿರ್ಮಲೀಕರಣ ಮಾಡತಕ್ಕಂಥಾದ್ದಾಗಲಿ, ಆಸ್ಪತ್ರೆಗೆ ನೀರು ಒದಗಿಸತಕ್ಕಂಥಾದ್ದಾಗಲೀ ಅದನ್ನು ಮಾಡುವುದು ಆರೋಗ್ಯ ಇಲಾಖೆಯ ಕರ್ತವ್ಯವಲ್ಲ. ಆ ಕರ್ತವ್ಯವನ್ನು ಪುರಸಭೆಯವರು ಮಾಡಬೇಕಾಗುತ್ತದೆ. ಪುರಸಭೆಯವರು ಮಾಡುವುದಕ್ಕೆ ಆಗದೇ ಇದ್ದಂಥ ಕಾಲದಲ್ಲಿ, ಇದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ಮಾಡಬೇಕೆಂದು ಕೇಳಿದರೆ ಅದು ಬೇರೆ ವಿಚಾರವಾಗುತ್ತದೆ. ಅದು ನಮ್ಮ ಅಬ್ಲಿಗೇಟರಿ ಡ್ಯೂಟಿ ಅಲ್ಲ ಆದ್ದರಿಂದ, ಆ ಕೆಲಸ ಪುರಸಭೆಯವರು ಮಾಡಬೇಕಾದುದೆಂದು ತಮಗೆ ಮನವರಿಕೆ ಮಾಡುವುದಕ್ಕೆ ಇಷ್ಟಪಡುತ್ತೇನೆ ಇನ್ನು ಮಂಗನ ಕಾಯಿಲೆ ಬಗ್ಗೆ ಹೇಳಬೇಕಾದರೆ, ಮಂಗನ ಖಾಯಿಲೆಯನ್ನು ವಾಸಿ ಮಾಡುವುದಕ್ಕೆ ಲಸಿಕೆಯನ್ನು ತಯಾರು ಮಾಡಿದ್ದಾರೆ ತಯಾರು ಮಾಡಿದ್ದಾರೆ ಎಂದರೆ ಅದನ್ನು ಸಂಶೋಧನೆ ಮಾಡಿ ಲಸಿಕೆಯನ್ನು ಕಂಡು ಹಿಡಿದಿದ್ದಾರೆ. ಅದನ್ನು ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿ ಮಾಡಿ ಹಂಚತಕ್ಕ ಕೆಲಸ ಇನ್ನೂ ಆಗಿಲ್ಲ. ಅದಕ್ಕೆ ಬೇಕಾದಂಥ ಯಂತ್ರಗಳು ಹೊರ ದೇಶದಿಂದ ತರಿಸಿಕೊಳ್ಳಬೇಕಾಗಿದ್ದು ಕೆಲವು

ಕಾನೂನಿನ ಅಡೆತಡೆಗಳು ಬಂದಿದ್ದರಿಂದ ಯಂತ್ರಗಳನ್ನು ತರಿಸುವುದಕ್ಕೆ ಆಗಿಲ್ಲಿಲ್ಲ. ಇನ್ನು ಮೂರು ನಾಲ್ಕು ತಿಂಗಳ ಒಳಗೆ ಯಂತ್ರಗಳು ಬರುತ್ತವೆ. ಈ ವರ್ಷದಲ್ಲೇ ಸಾಕಷ್ಟು ಪ್ರಮಾಣದಲ್ಲಿ ಲಸಿಕೆಯನ್ನು ತಯಾರು ಮಾಡಿ ನಮ್ಮ ರಾಜ್ಯಕ್ಕೇ ಅಲ್ಲದೆ ಬೇರೆ ರಾಜ್ಯಗಳಿಗೂ ಲಸಿಕೆಯನ್ನು ಕೊಡತಕ್ಕ ರೀತಿಯಲ್ಲಿ ಉತ್ಪತ್ತಿ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಬೇರೆ ರಾಜ್ಯಗಳಲ್ಲಿ ಮಂಗನ ಖಾಯಿಲೆ ಇಲ್ಲ. ಈ ಖಾಯಿಲೆಗೆ ಹೆಸರು ಮಂಗನ ಖಾಯಿಲೆ ಎಂದು ಇದ್ದರೂ ಬರುವುದು ಮನುಷ್ಯರಿಗೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಂಗನ ಖಾಯಿಲೆ ಅದೇ ಭಾಗಕ್ಕೆ ಏಕೆ ಸೀಮಿತವಾಗಿದೆ ಎಂಬುದು ವಿಸ್ಮಯಕರವಾದ ಸಂಗತಿ (ಆರ್.ಎನ್. ನಾಯಕ್‌ರವರನ್ನು ಉದ್ದೇಶಿಸಿ) ಆಮೇಲೆ ಭಾರತೀಯ ವೈದ್ಯ ಪದ್ಧತಿಯ ಒಂದು ಇಲಾಖೆಯಲ್ಲಿ ಫುಲ್ 'ಫ್ಲೆಡ್ಜ್ಡ್ ಡೈರೆಕ್ಟರ್' ಇಲ್ಲವೆಂದು ಹೇಳಿದ್ದಾರೆ. ಇವರನ್ನು ನೇಮಕ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ. ನಂತರ, ಮಹಿಳೆಯರಿಗೇ ಹೆಚ್ಚು ಶಸ್ತ್ರ ಚಿಕಿತ್ಸೆಗಳನ್ನು ಮಾಡುತ್ತೀರಿ, ಪುರುಷರಿಗೆ ಏಕೆ ಹೆಚ್ಚು ಶಸ್ತ್ರ ಚಿಕಿತ್ಸೆಗಳನ್ನು ಮಾಡುತ್ತಿಲ್ಲವೆಂದು ಕೇಳಿದ್ದಾರೆ. ಅದಕ್ಕೆ ಹೇಳುತ್ತೇನೆ ಕೇಳಿ. ನಾವು ನಿಜ ಹೇಳುವುದಾದರೆ ಪುರುಷರಿಗೆ ಹೆಚ್ಚಾಗಿ ಶಸ್ತ್ರ ಚಿಕಿತ್ಸೆಗಳನ್ನು ಮಾಡಬೇಕೆಂದು ಹೇಳಿ ಯಾರು ಪುರುಷರು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಾರೋ ಅವರುಗಳಿಗೆ ಪ್ರೋತ್ಸಾಹ ಧನ ೧೫೦ ರೂಪಾಯಿಗಳನ್ನು ಕೊಡಲಾಗುತ್ತದೆಂದು ಪ್ರಕಟಪಡಿಸಿದ್ದೇವೆ. ಮಹಿಳೆಯರಿಗೆ ೧೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮಹಿಳೆಯರೇ ಸ್ವತಃ ಬಂದು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಾರೆ. ಮಹಿಳೆಯರಿಗೆ ಬಲವಂತವಾಗಿ ಶಸ್ತ್ರ ಚಿಕಿತ್ಸೆ ಮಾಡುತ್ತಾರೆ ಎನ್ನುವುದು ಖಂಡಿತಾ ನಿರಾಧಾರವಾದುದು. ಮಕ್ಕಳನ್ನು ಹೆತ್ತು ಹೆತ್ತು ಸಾಕಾಗಿ ಇವನ ಮನೆ ಹಾಳಾಗ ಎಂದು ಶಪಿಸಿಕೊಂಡು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಮಹಿಳೆಯರು ಬರುತ್ತಾರೆ. ಇದು ನಿಜವಾದ ಸಂಗತಿ.

ಶ್ರೀ ಆರ್. ಎನ್. ನಾಯಕ್.—ಮಗು ಗಂಡಸರಿಗೆ ಹುಟ್ಟುತ್ತಿದ್ದರೆ ಅವರುಗಳೇ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದರು. ಮಗು ಮಹಿಳೆಯರಿಗೆ ಹುಟ್ಟುವುದರಿಂದ ಅವರೇ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಹೆಚ್ಚು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಂತರ ಡಾ. ಕುಲಕೋಟಿಯವರು, ಟಿ. ಡಿ. ಬಿ. ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಸಲಹೆ ಕೊಟ್ಟಿದ್ದಾರೆ. ನಾವು ಈಗಾಗಲೇ ಈ ಟಿ.ಡಿ.ಬಿ.ಯ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳನ್ನು ಪ್ರಥಮ ದರ್ಜೆ ಆಸ್ಪತ್ರೆಗಳನ್ನು ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಐ.ಪಿ.ಪಿ. ಅಂದರೆ ಇಂಡಿಯನ್ ಪಾಪ್ಯುಲೇಷನ್ ಪ್ರೋಗ್ರಾಂ ಅಡಿಯಲ್ಲಿ ಸುಮಾರು ೭೧ ಕೋಟಿ ರೂಪಾಯಿಗಳ ಕಟ್ಟಡಗಳ ನಿರ್ಮಾಣದ ಕಾರ್ಯ ಆಗುತ್ತಿದೆ. ೧೯೯೮ನೇ ಇಸವಿಗೆ ಕಟ್ಟಡಗಳೆಲ್ಲಾ ಪೂರ್ಣವಾಗುವ ನಿರೀಕ್ಷಣೆ ಇದೆ. ಅಧ್ಯಕ್ಷರೇ, ಇಷ್ಟು ವಿಚಾರವನ್ನು ಹೇಳಿದ್ದೇನೆ. ವೈಯುಕ್ತಿಕವಾಗಿ ಹೇಳಿರತಕ್ಕಂಥ ಪ್ರಶ್ನೆಗಳಿಗೆ ನಾನು ಪ್ರತ್ಯೇಕವಾಗಿ ಉತ್ತರ ಕೊಡುತ್ತೇನೆ.

ಆದರೆ ಒಂದು ವಿಷಯವನ್ನು ಗಮನಿಸಬೇಕು. ಭಾರತ ದೇಶದ ಬೇರೆ ಭಾಗಗಳಲ್ಲಿ ೩೦ ಸಾವಿರ ಪ್ರಜಾಸಂಖ್ಯೆಗೆ ಒಂದು ಆಸ್ಪತ್ರೆ ಇರಬೇಕೆಂಬ ಒಂದು ನಿಯಮವನ್ನು ಪಾಲನೆ ಮಾಡುತ್ತಾ ಇದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ೧೫ ಸಾವಿರ ಪ್ರಜಾ ಸಂಖ್ಯೆಗೆ ಒಂದು ಆರೋಗ್ಯ ಘಟಕ ಇದೆ. ನಾವುಗಳು ಆರೋಗ್ಯ ಕೇಂದ್ರಗಳನ್ನು ಇಟ್ಟುಕೊಂಡಿದ್ದೇವೆ ಮತ್ತು ಆರೋಗ್ಯ ಘಟಕಗಳನ್ನು ಇಟ್ಟುಕೊಂಡಿದ್ದೇವೆ. ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಅತೀ ದೂರವಾಗುತ್ತದೆ ಎಂಬುದನ್ನು ವಿಚಾರ ಮಾಡಿ ಮಧ್ಯಂತರದಲ್ಲಿ ಇನ್ನೊಂದು ಆಸ್ಪತ್ರೆ ಇದ್ದರೆ ಸಾರ್ವಜನಿಕರಿಗೆ ಉಪಯೋಗ ಆಗುತ್ತದೆ ಎಂಬ ದೃಷ್ಟಿಯಿಂದ, ಅದನ್ನು ಗಮನದಲ್ಲಿಟ್ಟುಕೊಂಡು, ನಾವು ಕೇಂದ್ರ ಸರಕಾರದವರಿಗಿಂತಲೂ ಒಳ್ಳೆಯ ಕಾರ್ಯವನ್ನು ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕಗಳನ್ನು ಮಾಡುವುದರ ಮೂಲಕ ಮಾಡಿದ್ದೇವೆ ಎಂಬುದನ್ನು ದಯಮಾಡಿ ಗಮನದಲ್ಲಿಟ್ಟುಕೊಳ್ಳಬೇಕು. ಇನ್ನು ಈ ವರ್ಷ ಎಲ್ಲಾ ದೊಡ್ಡ ಆಸ್ಪತ್ರೆಗಳ ದುರಸ್ತಿ ಕಾರ್ಯವನ್ನು ಮಾಡಬೇಕೆಂದು ಇದ್ದೇವೆ. ಮಾನ್ಯ ಶ್ರೀಮತಿ ಬೇಗಂರವರು ಹೇಳಿದ ಹಾಗೆ ಮೈಸೂರು ಆಸ್ಪತ್ರೆಯ ದುರಸ್ತಿ ಕಾರ್ಯವನ್ನೂ ಮಾಡುತ್ತೇವೆ. ಇನ್ನು ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿಗೆ ಕ್ಲಿನಿಕಲ್ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ವ್ಯವಸ್ಥೆಯನ್ನು ಮಾಡುತ್ತೇವೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಕುರಿತು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಅಬ್ಕಾರಿ ನೀತಿಯಿಂದಾಗಿ ದೇಶಕ್ಕೆ ಅನಾಹುತವನ್ನು ಮಾಡಿಬಿಟ್ಟಿದ್ದೀರಿ ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ, ಇದು ನಮ್ಮ ರಾಜ್ಯದಲ್ಲಿ ಮಾತ್ರವೇ ಇದೆಯೇ ? ಇಡೀ ದೇಶದಲ್ಲಿಯೇ ಇದೆ. ಭಾವನಾತ್ಮಕವಾದಂತಹ ಏನೋ ಒಂದು ತತ್ವದ ಆಧಾರದ ಮೇಲೆ ಮಾತನಾಡತಕ್ಕಂಥಾದ್ದು ಬೇರೆ ವಿಚಾರ. ಅದು ಬೇರೆ ವೇದಿಕೆಯಲ್ಲಿ ಪ್ರಸ್ತಾಪಿಸಬಹುದು. ಇಲ್ಲಿ ವಾಸ್ತವಾಂಶದ ಮೇಲೆ ಮಾತನಾಡಬೇಕು. ನಮ್ಮ ಸಮಾಜದ ಪರಿಸ್ಥಿತಿ ಏನು ? ಏತಕ್ಕೋಸ್ಕರವಾಗಿ ಪಾನನಿಷೇಧವನ್ನು ರದ್ದು ಮಾಡಲಾಯಿತು ಅಂದರೆ, ಬಟ್ಟಿ ಸಾರಾಯಿಯನ್ನು ನಿಲ್ಲಿಸುವುದಕ್ಕೋಸ್ಕರವಾಗಿ ಪಾನನಿಷೇಧವನ್ನು ರದ್ದು ಮಾಡಲಾಯಿತು. ಇದನ್ನು ಅರ್ಥಮಾಡಿಕೊಳ್ಳಬೇಕು. ಈಗ ತಮಿಳುನಾಡಿನಲ್ಲಿ ಸಾರಾಯಿ ಮಾರಾಟ ತಪ್ಪಿಸಿದ್ದನ್ನು ಈಗ ಪುನಃ ಜಾರಿಗೆ ತರುವುದಕ್ಕೆ ಯೋಚಿಸುತ್ತಿದ್ದಾರೆ ಎಂದು ಕೇಳಿದ್ದೇನೆ. ಅವರಿಗೆ ಪಾನನಿಷೇಧವನ್ನು ಯಶಸ್ವಿಯಾಗಿ ಜಾರಿಯಲ್ಲಿಡಲು ಆಗಲಿಲ್ಲ ಎಂದು ಕಾಣುತ್ತದೆ. ಇದರಿಂದಾಗಿ ಎರಡು ಪರಿಣಾಮಗಳು ಆಗುತ್ತದೆ. ಒಂದು ಸರಕಾರಕ್ಕೆ ಬರುವಂತಹ ಆದಾಯ ತಪ್ಪಿಹೋಗುತ್ತದೆ ಇನ್ನೊಂದು ಜನರು ಕಳ್ಳಬಟ್ಟಿ ಸಾರಾಯಿಯನ್ನು ಕುಡಿದು ದುರಂತಕ್ಕೆ ಒಳಗಾಗುತ್ತಾರೆ ಎಂಬುದು.........

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. — ಮಾನ್ಯ ಬಿ ಡಿ. ಜತ್ತಿಯವರು ಹೋದ ಮೇಲೆ, ಹಣಕಾಸಿನ ಕೊರತೆ ಆದನಂತರ.........

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ........

ಶ್ರೀ ಟಿ. ಎ. ಉಮರಬ್ಬ.—ಮದ್ಯಪಾನ ಆರೋಗ್ಯಕ್ಕೆ ಒಳ್ಳೆಯದೇ......

ಶ್ರೀ ಎಚ್. ಟಿ. ಕೃಷ್ಣಪ್ಪ.—ಆರೋಗ್ಯವಂತರು ಆನಂದವಾಗಿರುವುದಕ್ಕೆ ಬೇಕೋ ಏನೋ ನಿಮಗೆ ತಿಳಿದಿದೆ.........

ಶ್ರೀ ಟಿ. ಎ. ಉಮರಬ್ಬ.—ಆ ಆರೋಗ್ಯದ ಆನಂದ ಕುಡಿಯುವಾಗ ಮಾತ್ರ. ಬಿಲ್ ತಂದ ಕೂಡಲೇ ಎಲ್ಲಾ ಇಳಿದು ಹೋಗುತ್ತದೆ... ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. — ತಮ್ಮ ಮ್ಯಾನಿಫೆಸ್ಟೊದಲ್ಲಿ ಇದೆಯೇ......

ಶ್ರೀ ಎಚ್. ಟಿ. ಕೃಷ್ಣಪ್ಪ.— ಅದನ್ನೆಲ್ಲಾ ಆಮೇಲೆ ಮಾತನಾಡೋಣ......

ಶ್ರೀ ಆರ್. ಎನ್. ನಾಯಕ್.—ನಮಗೂ ಸ್ವಲ್ಪ ರುಚಿ ತೋರಿಸಬೇಕು.

ಶ್ರೀ ಟಿ. ಎ. ಉಮರಬ್ಬ.—ಇವೊತ್ತು ತಾವುಗಳು ಊಟ ಕೊಟ್ಟಿದ್ದೀರಲ್ಲಾ ? ಆಗ ಸ್ವಲ್ಪ ಕೊಡಬೇಕಾಗಿತ್ತು.......

ಶ್ರೀ ಎಚ್. ಟಿ. ಕೃಷ್ಣಪ್ಪ.—ಇನ್ನು ನನಗೆ ಅಬ್ಕಾರಿ ಇಲಾಖೆಗಳ ಬಗ್ಗೆ ಬಂದ ದೂರುಗಳ ಬಗ್ಗೆ ಉತ್ತರ ಕೊಡತಕ್ಕಂಥಾದ್ದು ನನ್ನ ಕರ್ತವ್ಯ ಇದೆ. ಅದಕ್ಕೆ ಪೂರ್ವಭಾವಿಯಾಗಿ, ಅಂತಹ ದೂರುಗಳನ್ನು ಪರಿಶೀಲಿಸಿ, ಮುಖ್ಯವಾದಂತಹದ್ದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಯೋಚನೆ ಮಾಡಿ, ನಾನು ಕೆಲವು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡ ಬಗ್ಗೆ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಬಹಳ ಮುಖ್ಯವಾದವುಗಳನ್ನು ಮಾತ್ರ ಹೇಳುತ್ತೇನೆ.

ಸ್ವಾಮಿ, ರಾಜ್ಯದಲ್ಲಿ ಬಾರ್‌ಗಳ ಸಂಖ್ಯೆ ಜಾಸ್ತಿಯಾಯಿತು, ಅವುಗಳನ್ನು ನಿಯಂತ್ರಣ ಮಾಡಬೇಕು. ಬಾರ್‌ಗಳಿಗೆ ಇದುವರೆಗೂ ಬೇಕಾದಷ್ಟು ಲೈಸನ್ಸ್‌ಗಳನ್ನು ಕೊಡುತ್ತಾ ಇದ್ದಾರೆ, ಅದನ್ನು ಕಡಿಮೆ ಮಾಡಬೇಕೆನ್ನುವ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಮಾಡಿದ್ದಾರೆ. ಹಾಗೆ ಮಾಡುವುದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ, ಆ ವಿಷಯವನ್ನು ಸರಕಾರವು ಗಮನದಲ್ಲಿಟ್ಟುಕೊಳ್ಳುತ್ತದೆ.

ಆಮೇಲೆ, ಹೆಂಡ ಮತ್ತು ಸಾರಾಯಿ ಮಾರಾಟ ಮಾಡತಕ್ಕಂಥ ಅಂಗಡಿಗಳು ರಾತ್ರಿ ೯ ಘಂಟೆಗೆ ನಂತರ ಮಾರಾಟ ಮಾಡಕೂಡದು. ವೈನ್‌ಶಾಪ್‌ಗಳು ರಾತ್ರಿ ೮ ಘಂಟೆಯ ನಂತರ ತೆರದಿರಕೂಡದು ಎಂದು ಮಾಡಿದ್ದೇವೆ. ...

ಶ್ರೀ ಆರ್. ಎನ್. ನಾಯಕ್.—ಸಂತೋಷ್ಕ್ಕೆ ಹೊರಡಿಸಿ ತೆಗೆಯುತ್ತೀರಾ ?

ಶ್ರೀ ಗೋಪಾಲ ಮುಕಂದ ಕಾನಡೆ.—ನೀವು ಈ ನಿಯಮಗಳನ್ನು ಜಾರಿಗೆ ತಂದ ಮೇಲೆ ಅಂಗಡಿಗಳಲ್ಲಿ ಇಡುವುದಿಲ್ಲ. ನಿಗದಿತ ಸಮಯ ಮುಗಿದ ಮೇಲೆ ಮನೆಗಳಲ್ಲಿ ಇಟ್ಟು ಮಾರುತ್ತಾರೆ. ಆಗ ಏನು ಮಾಡುತ್ತೀರಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಮನೆಗಳಲ್ಲಿ ಕುಡಿದುಕೊಳ್ಳಲಿ. ಸಾರ್ವಜನಿಕವಾಗಿ ಬೇಡ. ತಾವುಗಳು ಡೆಲ್ಲಿಗೆ ಹೋಗಿದ್ದೀರಾ ? ಹೋಗದಿದ್ದರೆ ಕೇಳಿ, ಅಲ್ಲಿ ಸಾಯಂಕಾಲ ೭ ಘಂಟೆಗೆ ವೈನ್‌ಶಾಪ್‌ಗಳನ್ನು ಮುಚ್ಚುತ್ತಾರೆ. ಹಾಗೆಂದ ಮಾತ್ರಕ್ಕೆ ಅಲ್ಲಿ ಕುಡಿಯುವವರು ಇಲ್ಲ ಎಂದು ಹೇಳಲಾಗುತ್ತದೆಯೇ ? ಇಲ್ಲ. ಕುಡಿಯುವವರು ಅವರವರ ಮನೆಗಳಲ್ಲಿ ಕುಡಿದುಕೊಳ್ಳಲಿ. ಹಾಗೆ ಮಾಡುವುದರಿಂದ ಕನಿಷ್ಟ ಬೇರೆ ಜನರಿಗೆ ಈ ಕುಡಿಯುವುವವರಿಂದ ಉಂಟಾಗುವ ತೊಂದರೆಯಾದರೂ ತಪ್ಪುತ್ತದೆ. ಆ ಒಂದು ತರಹದ ಹಿಂಸೆ ತಪ್ಪುತ್ತದೆ. ಇಂತಹ ಭಾದಕಗಳನ್ನು ನೋಡಿ ಪರಿಶೀಲಿಸಿ ಆ ಒಂದು ತೊಂದರೆಗಳನ್ನು ತಪ್ಪಿಸಬೇಕೆಂದು ಮಾಡಿದ್ದೇವೆ. ಅಂತಹ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ.

ಇನ್ನು ಇಂತಹ ಪರವಾನಗಿ ಶರತ್ತುಗಳನ್ನು ಉಲ್ಲಂಘನೆ ಮಾಡುವಂತಹ ಮಾರಾಟಗಾರರು ಯಾರಿದ್ದಾರೆ, ಅಂತಹವರಿಗೆ ಒಂದು ಸಾವಿರ ರೂಪಾಯಿಗಳ ದಂಡ ಹಾಕತಕ್ಕಂಥ ಅಧಿಕಾರವನ್ನು ಸರಕಾರ ಹೊಂದಿದ್ದು, ಈಗ ಅದನ್ನು ೫ ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಲಾಗಿದೆ. ಈ ಒಂದು ದಂಡ ಶುಲ್ಕವನ್ನು ಹೆಚ್ಚಿಗೆ ಮಾಡುವ ತೀರ್ಮಾನವನ್ನು ಮಾಡಿದ್ದೇವೆ, ಅದರ ಜೊತೆಗೆ ಲೈಸನ್ಸ್‌ನ್ನು ಕೂಡ ರದ್ದುಮಾಡುವ ಒಂದು ಕಾರ್ಯವನ್ನು ಮಾಡುವವರಿದ್ದೇವೆ.

ಆಮೇಲೆ, ಕಳ್ಳಬಟ್ಟಿ ಸಾರಾಯಿ ಮಾಡತಕ್ಕಂಥಾದ್ದು, ಬೇರೆ ಕಡೆಗೆ ಸಾಗಾಣಿಕೆ ಮಾಡತಕ್ಕಂಥಾದ್ದು, ಇಂತಹ ಒಂದು ಅನಿಷ್ಟ ವ್ಯವಸ್ಥೆ ಏನಿದೆ ಅದನ್ನು ತಪ್ಪಿಸುವುದಕ್ಕೋಸ್ಕರವಾಗಿ, ಸಾಗಾಣಿಕೆ ಮಾಡತಕ್ಕಂಥ ವಾಹನಗಳು ಏನಿವೆ, ಅದನ್ನು ಸರಕಾರ ಮುಟ್ಟುಗೋಲು ಹಾಕಿಕೊಳ್ಳತಕ್ಕಂಥ ಅಧಿಕಾರವನ್ನು ಪಡೆಯುವಂತೆ ಮಾಡಿದ್ದೇವೆ. ಅಂತೆಯೇ ಇನ್ನೊಂದು ಮುಖ್ಯವಾದುತಹ ವಿಚಾರ ಅಂದರೆ, ಬಾಟ್ಲಿಂಗ್ ಬಗ್ಗೆ ಬಂದ ದೂರುಗಳು. ಈ ಬಗ್ಗೆ ಹೆಚ್ಚಿನ ಒಂದು ವಿವರಕ್ಕೆ ಹೋಗುವುದಿಲ್ಲ. ಈ ಬಾಟ್ಲಿಂಗ್ ಪ್ರಕರಣಿಕ್ಕೆ ಸಂಬಂಧಪಟ್ಟ ಹಾಗೆ ಶ್ರೇಷ್ಠ ನ್ಯಾಯಾಲಯದವರು ಏನು ತೀರ್ಮಾನವನ್ನು ಕೊಟ್ಟಿದ್ದಾರೆಯೋ ಅದನ್ನು ಆಧಾರವಾಗಿ ಇಟ್ಟುಕೊಂಡು ನಮ್ಮ ಹೊಸ ನಿಯಮಗಳನ್ನು ರೂಪಿಸಬೇಕೆಂದು ಮಾಡಿದ್ದೇವೆ. ಆ ಬಗ್ಗೆ ಸಾಕಷ್ಟು ಚಿಂತನೆ ನಡೆದಿದೆ. ನಾವು ಏನು ಈ ೮೯ ಜನಕ್ಕೆ ಬಾಟ್ಲಿಂಗ್ ಗುತ್ತಿಗೆಯನ್ನು ಕೊಟ್ಟಿದ್ದೇವೆ, ಅದು ಹಂಗಾಮಿಯಾಗಿ ಇದೆ. ಈಗ ಆ ಕುರಿತು ಇರುವ ನಿಯಮಗಳಿಗೆ ತಿದ್ದುಪಡಿ ಮಾಡಿ, ಸುವ್ಯವಸ್ಥಿತ ರೀತಿಯಲ್ಲಿ ಮತ್ತು ಲೋಪದೋಷಗಳಿಂದ ಹೊರತಾಗಿರುವಂತಹ ರೀತಿಯಲ್ಲಿ ಒಂದು ನಿಯಮಗಳನ್ನು ಮಾಡಬೇಕೆಂದು ಈಗಾಗಲೇ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ಒಂದು ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ದಾಸಪ್ಪ ಮತ್ತು ಅವರ ಮಕ್ಕಳು ಸುಸ್ತಿದಾರರಾಗಿದ್ದರೂ ಕೂಡ ಅವರಿಗೆ ಗುತ್ತೆ ಕೊಟ್ಟಿದ್ದೀರಿ ಅದರಿಂದ ಕೋರ್ಟಿನ ನಿಯಮಾವಳಿಯನ್ನು ಉಲ್ಲಂಘನೆ ಮಾಡಿದ್ದೀರಿ ಎಂದು. ೧೯೬೦ ರಿಂದಲೂ ಕೂಡ ಸುಸ್ತಿದಾರರಾದಂತಹವರಿಗೆ ಕೆಲವು ಸಂದರ್ಭಗಳಲ್ಲಿ ಸರಕಾರ ತನ್ನ ವಿವೇಚನೆಯನ್ನು ಉಪಯೋಗಿಸಿ ಅವರಿಗೆ ಈ ಗುತ್ತೆಯನ್ನು ಕೊಡತಕ್ಕಂತಹ ಅವಕಾಶವನ್ನು ಮಾಡಿಕೊಂಡು ಬಂದಿದೆ, ಇದರ ಉದ್ದೇಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ಅಬ್ಕಾರಿ ಗುತ್ತೇದಾರರಲ್ಲಿ ಕೆಲವರು ರಹಸ್ಯವಾಗಿ ಒಪ್ಪಂದಕ್ಕೆ ಬಂದು ಮೂರು ಕೋಟಿ ಹರಾಜಾಗತಕ್ಕಂಥಾದ್ದನ್ನು ಕಡಿಮೆ ಬೆಲೆಗೆ ಹರಾಜು ಮಾಡಿಕೊಂಡು ಉಳಿದುದನ್ನು ಹಂಚಿಕೊಂಡು ತಿಂದರು. ನಾನು ಇವತ್ತು ಘಂಟಾಘೋಷವಾಗಿ ಹೇಳುತ್ತೇನೆ. ದಾಸಪ್ಪನವರು ಏನಾದರೂ ಮಧ್ಯ ಪ್ರವೇಶ ಮಾಡದೇ ಹೋಗಿದ್ದರೆ, ನಮಗೆ ಬರತಕ್ಕಂತಹ ಶೇಕಡ ೩೦ ಪರ್ಸೆಂಟ್ ಆದಾಯ ಕಡಿಮೆಯಾಗುತ್ತಿತ್ತು. ಪೈಪೋಟಿಯನ್ನು ಸೃಷ್ಟಿ ಮಾಡತಕ್ಕಂತಹ ಉದ್ದೇಶದಿಂದಲೇ ಈ ನಿಯಮದಲ್ಲಿ ಬದಲಾವಣೆ ಮಾಡತಕ್ಕಂತಹ ಪ್ರಯತ್ನವನ್ನು ಮಾಡುತ್ತೇವೆ. ಕೆಲವು ಸಂದರ್ಭದಲ್ಲಿ ಸಮರ್ಥರಾಗಿರತಕ್ಕಂತಹ ಕ್ರೆಡಿಬಲಿಟಿ ಇರತಕ್ಕಂತಹ ಕಂಟ್ರಾಕ್ಟ್‌ದಾರರು ಸುಸ್ತಿದಾರರಾಗಿದ್ದರೂ ಕೂಡ ಸರಕಾರ ತನ್ನ ವಿವೇಚನೆಯನ್ನು ಉಪಯೋಗಿಸಿ ಅಂತಹವರು ಬಿಡ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಮಾನ್ಯ ಸಚಿವರು ಗಂಡಸರಾಗಿದ್ದರೆ ಹಾಗೆ ಮಾಡಬೇಕೆಂದು ಹೇಳುತ್ತಿದ್ದಾರೆ......

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದರ ಬಗ್ಗೆ ಪುನಃ ಸ್ವಲ್ಪ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕೋರ್ಟಿನ ತೀರ್ಮಾನವನ್ನು ಉಲ್ಲಂಘನೆ ಮಾಡಿಲ್ಲ ಅಕ್ಷರಶಃ ಅದನ್ನು ಪರಿಪಾಲನೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಜನರನ್ನು ಸಂರಕ್ಷಣೆ...

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸಂರಕ್ಷಣೆ ಮಾಡುವುದಕ್ಕೆ ನಮಗೆ ಎಷ್ಟು ಜವಾಬ್ದಾರಿ ಇದೆಯೋ ನಿಮಗೂ ಅಷ್ಟೇ ಜವಾಬ್ದಾರಿ ಇದೆ.

ಅಧ್ಯಕ್ಷರು.—ನಾನು ನಿಮಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುತ್ತೇನೆ. ಇದು ಪದ್ಧತಿ ಅಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಯೋಚನೆ ಮಾಡತಕ್ಕಂತಹ ಸರಪಣಿಯು ತುಂಡಾದರೆ ಮತ್ತೆ ಸೇರಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಸರಕಾರದ ಬೊಕ್ಕಸಕ್ಕೆ ಎಷ್ಟು ಹಣವನ್ನು ಸೇರಿಸುವುದಕ್ಕೆ ಸಾಧ್ಯವೋ ಅಷ್ಟು ಹಣವನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವುದೇ ಸರಕಾರ ಇದ್ದರೂ ಕೂಡ ಮಾಡಬೇಕಾಗುತ್ತದೆ. ಬೇರೆ ಯಾವ ಉದ್ದೇಶವೂ ಕೂಡ ಇದರಲ್ಲಿ ಅಡಕವಾಗಿಲ್ಲವೆಂದು ಸ್ಪಷ್ಟವಾಗಿ ಒಂದಲ್ಲಾ ಹತ್ತು ಸಾರಿ ಹೇಳಲು ಇಷ್ಟಪಡುತ್ತೇನೆ. ದಾಸಪ್ಪನವರ ಜೊತೆಯಲ್ಲಿದ್ದಂತಹ ಜನರು ಅವರಿಗೆ ಸಿಗಲಿಲ್ಲವೆಂದು ಹೇಳಿ ಕೇಸ್ ಹಾಕಿಕೊಂಡು ಹೋದರು. ಈಗ ಹೆಂಡ ಸಾರಾಯಿ ಮಾರುವುದಕ್ಕಾಗುತ್ತಿಲ್ಲ. ಅಷ್ಟು ನಷ್ಟವಾಗುತ್ತಿದೆ ಆದರೂ ಕೂಡ ಕೋರ್ಟಿನ ತೀರ್ಮಾನ ಏನಿದೆ ಅದನ್ನು ಪಾಲನೆ ಮಾಡುತ್ತೇವೆ, ಎಷ್ಟೇ ನಷ್ಟವಾಗಲೀ, ಇದಕ್ಕೆ ಒಂದು ಪರ್ಯಾಯ ವ್ಯವಸ್ಥೆಯಾಗುವ ತನಕ ಮಾಡಿಕೊಂಡು ಹೋಗುತ್ತಿದ್ದೇವೆ. ಆಡಳಿತ ನಡೆಸತಕ್ಕಂತಹವರಿಗೆ ಇರುವ ಕೆಲವು ಸಂಕಷ್ಟಗಳನ್ನು ಅರ್ಥ ಮಾಡಿಕೊಂಡು ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಮ್ ಇದೆ, ಎಲ್ಲಾ ಜಿಲ್ಲೆಯ ಮಂತ್ರಿಗಳಿಗೆ ವಹಿಸಿಕೊಡಿ, ಎಲ್ಲಿ ಸಾರಾಯಿ, ಸೇಂದಿಯನ್ನು ಮಾರಬೇಕೆಂದು ಹೇಳಿ ಕೊಡುತ್ತಾರೆ.

೬-೩೦ ಪಿ.ಎಂ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಟೀಕೆಗಳನ್ನು ಮಾಡಬೇಕು, ಮಾಡಿದ್ದಾರೆ. ಟೀಕೆಗಳನ್ನು ಮಾಡಲೇಬೇಕಾದಂಥ ಇಲಾಖೆ ಇದು ಎಂದು ನಾನು ಅಂದುಕೊಂಡುಬಿಟ್ಟಿದ್ದೇನೆ. ಯಾವುದೇ ಕಾಲದಲ್ಲೂ ಕೂಡಾ ಟೀಕೆಗಳಿಂದ ಮುಕ್ತವಾದ ಇಲಾಖೆ ಇದಲ್ಲ. ಆದ್ದರಿಂದ ಟೀಕೆಯನ್ನು ಮಾಡಿಯೇ ಮಾಡುತ್ತಾರೆ. ಅದಕ್ಕಾಗಿಯೇ ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಟೀಕೆ ಮಾಡಿದರೂ ಕೂಡಾ ನಾನು ಅದನ್ನು ಸ್ವಾಗತಿಸುತ್ತೇನೆ ಎಂದು. ಅದನ್ನು ತಾವು ಸದುದ್ದೇಶದಿಂದ ಹೇಳಿದ್ದೀರಿ ಎಂದುಕೊಂಡಿದ್ದೇನೆ. ನಾನು ಸಾಕಷ್ಟು ಹೇಳಿದ್ದೇನೆ, ಏನೂ ಹೇಳಬೇಕಾದ್ದಿಲ್ಲ. ನನ್ನ ಬೇಡಿಕೆಗಳನ್ನು ತಾವು ಮತಕ್ಕೆ ಹಾಕಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ಕೇಳಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಸುಮಾರು ಒಂದು ತಾಸು ಮೇಲೆ ಉತ್ತರ ಕೊಟ್ಟರು. ಅವರಿಂದ ಸಮಾಧಾನಕರವಾದಂಥ ಉತ್ತರ ಬರಲಿಲ್ಲ. ಹುಡ್ಕೋ ಯೋಜನೆಯಲ್ಲಿ ಸುಮಾರು ನಾಲ್ಕು ಜಿಲ್ಲೆಯಲ್ಲಿ ಮನೆಗಳನ್ನು ಕಟ್ಟಿಸುತ್ತೇವೆ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಆದರೆ ಅದಕ್ಕೆ ಎಷ್ಟು ಪ್ರಾವಿಷನ್ ಮಾಡಿದರು, ಎಷ್ಟು ಮನೆಗಳನ್ನು ಕಟ್ಟಿಸುತ್ತೀರಿ, ಟಾರ್ಗೆಟ್ ಏನು ಇದೆ, ಅದೆಲ್ಲವನ್ನೂ ಸ್ಪಷ್ಟವಾಗಿ ಹೇಳಲಿಲ್ಲ. ಎರಡನೆಯದಾಗಿ, ಈ ಮೆಡಿಕಲ್ ಯೂನಿವರ್ಸಿಟಿ ಮಾಡಬೇಕು

ಎನ್ನತಕ್ಕಂಥ ತಾವು ನಿರ್ಧಾರ ಮಾಡಿದ್ದೀರಿ. ಅದಕ್ಕೆ ಬಜೆಟ್ ಪ್ರಾವಿಷನ್ ಏನು ಇದೆ, ಅದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಲಿಲ್ಲ. ಬಾಟ್ಲಿಂಗ್ ಬಗ್ಗೆ ತಾವು ಹೇಳುವಾಗ ನಾವು ರೂಲ್ಸ್ ಏನೂ ಮಾಡಿಲ್ಲ, ಟೆಂಪೊರರಿ ಅರೇಂಜ್‌ಮೆಂಟ್ಸ್ ಮಾಡಿ ಎಂಟು-ಒಂಭತ್ತು ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿದಿರಿ. ನಿಮಗೆ ರೂಲ್ಸ್ ಮಾಡುವುದಕ್ಕೆ ಎಷ್ಟು ದಿವಸ ಹಿಡಿಯುತ್ತದೆ ? ಏಕೆಂದರೆ ಹೋದಸಲ ಬಾಟ್ಲಿಂಗ್ ಬಗ್ಗೆ ಒಂದು ದೊಡ್ಡ ಹಗರಣವಾಗಿ ಪುನಃ ಅದೇ ಸ್ಥಿತಿಯಲ್ಲಿ ದೊಡ್ಡ ಗಲಾಟೆಯಾಯಿತು. ತಾವು ಇದನ್ನು ಕೂತು ಎಂಟು-ಹತ್ತು ದಿವಸಗಳಲ್ಲಿ ಸರಿಪಡಿಸಬಹುದಾಗಿತ್ತು. ಇವತ್ತು ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ಬಗ್ಗೆ ತರಾತುರಿಯಾಗಿ ಅಮೆಂಡ್‌ಮೆಂಟನ್ನು ತಂದು ಎಂಟು-ಹತ್ತು ರೂಲ್ಸ್‌ಗಳನ್ನು ಮಾಡುವುದಕ್ಕಾಗುತ್ತದೆ, ಕೋಟ್ಯಾಂತರ ರೂಪಾಯಿ ಅವ್ಯವಹಾರ ಇದ್ದಾಗ, ರೆವಿನ್ಯೂ ಬರತಕ್ಕಂಥದ್ದರ ಬಗ್ಗೆ ನೀವು ಏತಕ್ಕೆ ರೂಲ್ಸ್ ಮಾಡಿಲ್ಲ ? ಬಹಳ ದಿವಸದಿಂದ ಈ ರೂಲ್ಸ್‌ನ್ನು ಬೇಕೆಂದೇ ಮಾಡಿಲ್ಲವೋ ಅಥವಾ ಸದುದ್ದೇಶದಿಂದ ಮಾಡಿಲ್ಲವೋ ? ಎಂದು ಹೇಳಬೇಕು. ಇಷ್ಟು ಸಮಯ ಇದ್ದರೂ ಕೂಡಾ ಸಾಕಷ್ಟು ಸಮಯ ಇದ್ದರೂ ಕೂಡಾ ಮಾಡಿಲ್ಲ. ಇದಕ್ಕೆ ಏನು ಕಾರಣ ? ದಾಸಪ್ಪ ಅಂಡ್ ಕಂಪೆನಿಗೆ, ಪೈಪೋಟಿಗೆ ವಿರುದ್ಧವಾಗಿ, ಕಾನೂನಿಗೆ ವಿರುದ್ಧವಾಗಿ, ರೂಲ್ಸ್‌ಗೆ ವಿರುದ್ಧವಾಗಿ ನೀವು ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ಎಲ್ಲರೂ ಹೇಳಿದರು. ಪೈಪೋಟಿ ಮಾಡಿಸಬೇಕು ಎನ್ನತಕ್ಕಂಥ ಮಾತು ಇದ್ದರೆ, ಉದ್ದೇಶ ಇದ್ದರೆ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿ. ಅದಕ್ಕೆ ಮೂವತ್ತು ದಿವಸದ ನೋಟೀಸ್ ಕೊಡಿ. ಒಂದು ವರ್ಷದಿಂದ ಎಲ್ಲರೂ ಕೂಡಾ ಹೇಳುತ್ತಿದ್ದಾರೆ. ಈ ಸದನದಲ್ಲಿ, ಆ ಸದನದಲ್ಲಿ ಚರ್ಚೆ ನಡೆದಿದೆ. ೪-೫ ಕೋಟಿ ರೂಪಾಯಿ ಲುಕ್ಸಾನು ಆಗಿದೆ. ಇದನ್ನು ಸದುದ್ದೇಶದಿಂದ ಮಾಡಬೇಕಾದರೆ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ನಿಮಗೆ ತಾಪತ್ರಯ ಏನಾಗಿತ್ತು ? ನೀವು ಮಂತ್ರಿಗಳಾಗಿ ಒಂದು ವಿಲೆಂಟು ತಿಂಗಳಾಯಿತು. ಇಷ್ಟೊಂದು ದೊಡ್ಡ ಹಗರಣ ಆಗಿದ್ದರೂ ಕೂಡಾ ಏತಕ್ಕೆ ಮಾಡಿಲ್ಲ. ಈ ಸಣ್ಣ ನಾಲ್ಕು ಪ್ರಶ್ನೆಗಳಿಗೆ ನಾವು ಉತ್ತರ ಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮೊದಲನೇ ಪ್ರಶ್ನೆಗೆ, ಹುಡ್ಕೋ ಯೋಜನೆ ಕೆಳಗೆ ನೀವು ಹಣವನ್ನು ಎಷ್ಟು ಇಟ್ಟಿದ್ದೀರಿ ? ಬೇರೆ ಹಣ ಎಲ್ಲಿಂದ ಬರುತ್ತದೆ ? ಎಂದರೆ ೫೦ ಲಕ್ಷ ಹಣವನ್ನು ಇಟ್ಟಿದ್ದೇವೆ. ಮೂರನೇ ಒಂದು ಭಾಗದಷ್ಟು ಇಟ್ಟಿದ್ದೇವೆ. ಸುಮಾರು ೧.೨೦ ಲಕ್ಷ ರೂಪಾಯಿ ಮೊದಲ ಹಂತದಲ್ಲಿ ನಾವು ಖರ್ಚು ಮಾಡುವವರಿದ್ದೇವೆ.

ಮೆಡಿಕಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮಾನ್ಯ ಸದಸ್ಯರು ನೀವು ಎಷ್ಟು ಹಣ ಖರ್ಚು ಮಾಡುತ್ತೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಖರ್ಚು ಮಾಡುವುದಕ್ಕೆ ಪ್ರಾವಿಷನ್ ಇಲ್ಲದಿದ್ದರೂ ಕೂಡ ಮೆಡಿಕಲ್ ಎಜುಕೇಷನ್ ಅಡಿಯಲ್ಲಿ ಇದು ಬರುತ್ತದೆ. ಅದರ ಡಿಟೇಲ್ಸ್ ಈಗ ಇಲ್ಲ.

ಇನ್ನು ಬಾಟ್ಲಿಂಗ್ ಬಗ್ಗೆ ರೂಲ್ಸ್ ಮಾಡುವುದಕ್ಕೆ ಏತಕ್ಕೆ ನಿಧಾನ ಮಾಡಿದಿರಿ ಎಂದು ಕೇಳಿದ್ದಾರೆ. ಈ ಬಾಟ್ಲಿಂಗ್ ಬಗ್ಗೆ ಬೇರೆ ಬೇರೆ ರಾಜ್ಯದಲ್ಲಿ ಯಾವ ರೀತಿಯಾದ ಒಂದು ವ್ಯವಸ್ಥೆ ಇದೆ ಅದರ ವಿವರಣೆ ಬೇಕು ಎಂದು ಪತ್ರ ಬರೆದಿದ್ದೆವು. ಅದರಲ್ಲಿ ಕೆಲವು ರಾಜ್ಯದವರು ಕಳುಹಿಸಿದರು, ಇನ್ನೂ ಕೆಲವು ರಾಜ್ಯದವರು ಕಳುಹಿಸಲಿಲ್ಲ. ಈಗ ನಮಗೆ ಲಭ್ಯವಾಗಿರತಕ್ಕಂಥಾ ಸಾಹಿತ್ಯದ ಬಗ್ಗೆ ಅದರ ಒಂದು ಆಧಾರದ ಮೇಲೆ ಒಂದು ರೂಲ್ಸ್ ಮಾಡಿದ್ದೇವೆ. ನಾವು ಅದರ ಬಗ್ಗೆ ಇಷ್ಟು ಅವಸರವಾಗಿ ಏತಕ್ಕೆ ತೀರ್ಮಾನ ತೆಗೆದುಕೊಳ್ಳಲಿಲ್ಲ ಎಂದರೆ ಯಾವುದಾದರೂ ಆಗಲಿ ಅವಸರವಾಗಿ ತೀರ್ಮಾನ ತೆಗೆದು ಕೊಳ್ಳುವುದಾದರೆ ಅದು ಅಪಾಯಕಾರಿಯಾಗಿ ಮುಂದೇನಾದರೂ ಆಗುತ್ತದೋ ಎನ್ನುವ ಒಂದು ಎಚ್ಚರಿಕೆಯಿಂದ ಒಂದು ತೀರ್ಮಾನ ತೆಗೆದುಕೊಂಡಿಲ್ಲ. ಇದರಲ್ಲಿ ದುರುದ್ದೇಶ ಏನೂ ಇಲ್ಲ. ಸಾಧ್ಯವಾದರೆ ಈ ವರ್ಷ ಮಾಡುತ್ತೇವೆ ಇಲ್ಲದೇ ಇದ್ದರೆ ಮುಂದಿನ ವರ್ಷ ಹೇಗಾದರೂ ಆಗುತ್ತದೆ. ಇನ್ನು ದಾಸಪ್ಪ ಅಂಡ್ ಸನ್ಸ್ ಅವರಿಗೆ ಗುತ್ತಿಗೆಗೆ ಕೊಟ್ಟಿರುವುದರ ಬಗ್ಗೆ ಹೇಳಿದ್ದಾರೆ. ನಾವು ಅವರ ಗೊಬ್ಬರಿಗೇ ಕೊಟ್ಟಿಲ್ಲ ಇನ್ನೂ ಕೆಲವಾರು ಜನರಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಅವರಿಗೆ ಹಾಗೆ ಕೊಡಬೇಕಾಗಿದ್ದರೆ, ರೂಲ್ಸ್‌ನ ವಿರುದ್ಧವಾಗಿ ಕೊಟ್ಟಿದ್ದೇವೆ ಎಂದು ಹೇಳಿದರಲ್ಲಾ, ನೀವು ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿ ಕೊಡಬಹುದಾಗಿತ್ತಲ್ಲಾ.

ಶ್ರೀ ಹೆಚ್. ಡಿ. ಕೃಷ್ಣಪ್ಪ.— ಇದು ೧೯೮೦ ರಿಂದಲೂ ನಿಮ್ಮ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅದು ಈವೊತ್ತು ನಡೆದುಕೊಂಡು ಬಂದದ್ದಲ್ಲ. ಆವಾಗ ಇದನ್ನು ಯಾರೂ ಪ್ರಶ್ನೆ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆವಾಗ ನೀವು ಕೇಳಲಿಲ್ಲ, ನಾವು ಆದಕ್ಕೆ ಹೋಗಲಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಈಗ ಅವರು ಕೋರ್ಟಿಗೆ ಹೋಗಿದ್ದಾರೆ. ಆದುದರಿಂದ ಈಗ ಅದರ ಬಗ್ಗೆ ಒಂದು ತೀರ್ಮಾನ ಮಾಡುವುದಕ್ಕೆ ಸಾಧನೆ ಮಾಡುತ್ತಿದ್ದೇವೆ.

ಶ್ರೀ ಕೆ ಎಸ್. ನಾಗರತ್ನಮ್ಮ.— ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಯಾವುದನ್ನೂ ಕೂಡ ಅವಸರ ಅವಸರವಾಗಿ ಮಾಡಬಾರದು ಅಂತ ಹೇಳಿದರು. ನೀವು ನಿಧಾನ ಮಾಡಿದಷ್ಟೂ ಕೂಡ ಏನಾದರೂ ಹಾರ್ಟ್ ಅಟ್ಯಾಕ್ ಆಗಿಬಿಟ್ಟರೆ ಕಷ್ಟವಾಗುತ್ತದೆ, ಆದುದರಿಂದ ಯಾವುದನ್ನೂ ಕೂಡ ನಿಧಾನ ಮಾಡುವುದಕಾಗುವುದಿಲ್ಲ.

ಎರಡನೆಯದಾಗಿ. ಇನ್ನು ಡ್ರಗ್ಸ್ ವಿಚಾರದಲ್ಲಿ ನಾನು ಹೇಳಿದ್ದ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಾನು ಹೊರಗೆ ಇದ್ದೆ. ಈ ಹಾನಿಕಾರಕವಾದಂಥ ಔಷಧಿಗಳ ಬಗ್ಗೆ ಹೊರಗಡೆ ಯಿಂದ ಬೇಕಾದಷ್ಟು ಕಾಮೆಂಟ್ ಬರುತ್ತಾ ಇದೆ. ಇದರ ಬಗ್ಗೆ ಲ್ಯಾಬರೇಟರಿ ಮತ್ತು ಟೆಸ್ಟ್ ಏನು ಇವೆ ಇವೆಲ್ಲಾ ಬಹಳ ಹಳೇ ಕಾಲದ್ದು. ಪ್ರತಿಯೊಂದನ್ನೂ ಎಕ್ಸ್‌ಪೆರಿಮೆಂಟ್ ಸರಿಯಾಗಿ ಮಾಡುವುದಿಲ್ಲ. ದಯವಿಟ್ಟು ಪ್ರತಿಯೊಬ್ಬ ಪೇಷಂಟನ್ನೂ ಕೂಡ ಗಿನಿಪಿಗ್ ತರಹ ಮಾಡಬೇಡಿ. ಬೇರೆ ರಾಜ್ಯದಲ್ಲಿ ಗ್ರೂಪ್ ಆಫ್ ಡಾಕ್ಟರ್‌ಗಳು ಈ ಔಷಧಿ ಕೊಡುವಾಗ ಇದು ಆ ಪೇಷೆಂಟ್‌ಗೆ ಸರಿ ಯಾಗಿ ಎಫೆಕ್ಟ್ ಆಗುತ್ತದೆಯೇ, ಈ ಔಷಧಿಯಿಂದ ಅವನು ವಾಸಿಯಾಗುತ್ತಾನೆಯೇ ಇದನ್ನೆಲ್ಲ. ಅವರು ನೋಡುತ್ತಾರೆ ಅಲ್ಲದೆ ಎಲ್ಲರ ಪ್ರಕೃತಿಯೂ ಕೂಡ ಒಂದೇ ತರಹವಾಗಿರುವುದಿಲ್ಲ ಒಬ್ಬೊಬ್ಬರದ್ದು ಒಂದೊಂದು ತರಹ ಇದೆ ಒಬ್ಬೊಬ್ಬರಿಗೆ ಒಂದೊಂದು ತರಹ ಮೆಡಿಸನ್ ಕೊಡ ಬೇಕಾಗುತ್ತದೆ. ಯಾರೋ ಹೇಳಿದರು ಕೆಮ್ಮಣ್ಣು ಮುದ್ದೆ ಹಾಗೆ ಅವರು ಔಷಧಿಯನ್ನು ಕೊಡು ತ್ತಾರೆಂದು. ಈ ತರಹ ಔಷಧಿಯನ್ನು ಆ ಪೆಷಂಟ್‌ಗೆ ಕೊಡುವುದಾದರೆ, ಅವನಿಗೆ ಹೇಗೆ ವಾಸಿಯಾಗು ತ್ತದೆ. ಆದುದರಿಂದ ಡ್ರಗ್ಸ್ ಬಗ್ಗೆ ತಾವು ಎಚ್ಚರಿಕೆ ವಹಿಸಬೇಕು. ದಯವಿಟ್ಟು ಗಿನಿಪಿಗ್ ತರಹ ಮಾಡಬೇಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಮಾನ್ಯ ವಿರೋಧ ಪಕ್ಷದ ನಾಯಕಿಯರು ಖೋಟಾ ಔಷಧಿ ಯನ್ನು ಮಾರಾಟ ಮಾಡುತ್ತಿದ್ದಾರೆಂದು ಹೇಳಿದರು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಸರ್ಕಾರದವರು ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಇದಕ್ಕೆ ಸಂಬಂಧ ಪಟ್ಟ ಅಧಿಕಾರಿ ಗಳು ಎಲ್ಲಾ ಕಡೆಯೂ ಹೋಗಿ ಅದರ ಸ್ಯಾಂಪಲ್ಸನ್ನು ತಂದು ಪರೀಕೆ ಮಾಡಿ ಅದು ಯಾವ್ಯಾವ ರೀತಿಯಲ್ಲಿ ಇದೆ ಅದರ ಗುಣಮಟ್ಟ ಹೇಗಿದೆ ಅದರಿಂದ ಮನುಷ್ಯ ವಾಸಿಯಾಗುತ್ತಾನೆಯೇ, ಇಲ್ಲವೇ ಅದು ಅಪಾಯಕಾರಿ ಔಷಧಿಯೇ ಅಲ್ಲವೇ ಇವೆಲ್ಲವನ್ನೂ ಪರೀಕ್ಷಿಸುತ್ತಾರೆ' ಔಷಧಿಗಳೇನಾದರೂ ಸರ್ಕಾರದ ವತಿಯಿಂದ ಕೊಂಡುಕೊಳ್ಳುವಾಗ ಇದರ ಬಗ್ಗೆ ಎಚ್ಚರಿಕೆ ವಹಿಸುತ್ತೇವೆ. ಅದರಲ್ಲಿ ಏನಾದರೂ ದೋಷಗಳು ಕಂಡು ಬಂದಲ್ಲಿ ಅಂಥಾವರ ಮೇಲೆ ಕ್ರಮಗಳನ್ನು ಜರುಗಿಸುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ. ನಾನು ಒಂದು ಮಾತು ಕೇಳಿದೆ. ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರ್‌ಗಳನ್ನು ಯಾವಾಗ ಪೋಸ್ಟ್ ಮಾಡುತ್ತೀರಾ ಎಂಬುದನ್ನು ಹೇಳಬೇಕು. ಮತ್ತೆ ಈಗ ಆರೋಗ್ಯ ಮಾರ್ಗದರ್ಶಿಗಳು ಏನಿದ್ದಾರೆ ಅವರಿಗೆ ತಿಂಗಳಿಗೆ ಕೊಡು ತ್ತಿರುವ ೫೦ ರೂಪಾಯಿಗಳನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಈ ಬಾಟ್ಲಿಂಗ್ ವ್ಯವಹಾರವನ್ನು ನೀವು ಮೈ—ಶುಗರ್ ಕಂಪನಿಗೆ ಕೊಟ್ಟಿದ್ದರೆ ಈ ಡಿಸ್‌ಪ್ಯೂಟ್ ಬರುತ್ತಿರಲಿಲ್ಲ. ಆದರೆ ನೀವು ಈ ಕೆಲಸ ಮಾಡದೆ ತಮಗೆ ಬೇಕಾದವರಿಗೆಲ್ಲಾ ಈ ಕೆಲಸವನ್ನು ವಹಿಸಿದ್ದರಿಂದ ಇದರಲ್ಲಿ ಮಾಲಾಫೈಡ್ಸ್ ಇದೆ ಎಂದು ಅರ್ಥ ಬರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಈಗ ನಾವು ಈ ಕೆಲಸವನ್ನು ರೆಕಗನೈಸ್ಡ್ ಡಿಸ್ಟಿಲರಿಗಳವರಿಗೆ ಮಾತ್ರ ವಹಿಸಿದ್ದೇವೆ. ಬಾಟಲಿಂಗ್ ಮಾಡುವ ಸಾಮರ್ಥ್ಯ ಯಾರಿಗೆ ಇದೆಯೋ ಅಂತಹವರನ್ನು

ಗುರುತು ಮಾಡಿ ಈ ಕೆಲಸ ವಹಿಸಿದ್ದೇವೆ. ಈ ಕೆಲಸವನ್ನು ಇಂಡಿವಿಜ್ಯುಯಲ್ ಕಂಟ್ರಾಕ್ಟರ್‌ಗಳಿಗೆ ನಾವು ಕೊಟ್ಟಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ದಾಸಪ್ಪ ಅಂಡ್ ಕಂಪನಿಯವರಿಗೆ ಕಂಟ್ರಾಕ್ಟ್ ಕೊಟ್ಟಿರುವ ವಿಚಾರದಲ್ಲಿ ಹೈಕೋರ್ಟಿನವರು ನಿಮ್ಮ ಅಧಿಕಾರಿಗಳು ಮೋಸ್ಟ್ ಇನ್—ಎಫಿಷಿಯೆಂಟ್ ಮತ್ತು ಅವರ ಮೇಲೆ ನಿಮ್ಮ ಅಧಿಕಾರಿಗಳು ಸರಿಯಾದ ಕಂಟ್ರೋಲ್ ಇಟ್ಟುಕೊಂಡಿಲ್ಲ ಎಂದು ಏನು ಅಪಾದನೆ ಮಾಡಿದ್ದಾರೆ, ಅದನ್ನು ಈಗಲಾದರೂ ಸರಿಪಡಿಸುತ್ತೀರಾ ? ಮತ್ತೆ ನಾನು ಭಾಷಣ ಮಾಡುವಾಗ ಹೆಂಡಕ್ಕೆ ಕ್ಲೋರೋ ಹೈಡ್ರೇಟ್ ಬೆರೆಸುತ್ತಿದ್ದಾರೆ, ಇದನ್ನು ಕಂಟ್ರೋಲ್ ಮಾಡಿ ಎಂದು ಹೇಳಿದ್ದೆ. ಇದಕ್ಕೆ ತಾವು ಏನೂ ಉತ್ತರ ಕೊಡಲಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಇಂತಹ ದೂರುಗಳು ಇವೆ. ಸರ್ಕಾರದ ಗಮನಕ್ಕೆ ಇಂತಹ ಪ್ರಕರಣಗಳು ಬಂದಾಗಲೆಲ್ಲಾ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ ಎಷ್ಟು ಮೊಕದ್ದಮೆಗಳನ್ನು ಹಾಕಿದ್ದೇವೆಂಬ ಬಗ್ಗೆ ನನ್ನ ಬಳಿ ಈಗ ವಿವರಗಳು ಇಲ್ಲ ಅದನ್ನು ನಂತರ ತಮಗೆ ಒದಗಿಸಿಕೊಡುತ್ತೇನೆ. ಇದಕ್ಕೆ ಸಂಬಂಧ ಪಟ್ಟಂತೆ ನಾವು ಹಾಕುವಂತಹ ಕೇಸ್‌ಗಳ ಪೈಕಿ ಶೇಕಡಾ ಹತ್ತರಷ್ಟು ಕೇಸ್‌ಗಳಲ್ಲಿ ಮಾತ್ರ ಕನ್‌ವಿಕ್ಷನ್ ಆಗಿದೆ. ಇಷ್ಟೊಂದು ಕಡಿಮೆ ಕೇಸ್‌ಗಳಲ್ಲಿ ಕನ್‌ವಿಕ್ಷನ್ ಆಗುವುದಕ್ಕೆ ನಾನಾ ಕಾರಣಗಳು ಇರುತ್ತವೆ.

ಶ್ರೀ ಬಿ. ಯಸ್. ಯಡಿಯೂರಪ್ಪ.— ಈ ರೆಕ್ಟಿಫೈಡ್ ಸ್ಪಿರಿಟ್‌ನ್ನು ಡೀನೇಚರ್ಡ್ ಸ್ಪಿರಿಟ್ ಎಂದು ಹೆಸರು ಬದಲಾಯಿಸಿ ಲೀಟರ್ ಒಂದಕ್ಕೆ ೫೦ ಪೈಸೆ ಪ್ರಕಾರ ಕೊಡೇಸ್ ಕಂಪನಿಯವರಿಗೆ ಕೊಡುತ್ತಿರುವುದು ಸರಿಯೇ ? ದಾಸಪ್ಪ ಅಂಡ್ ಕಂಪನಿ ಅವರು ಸೇಂದಿ ವ್ಯಾಪಾರ ಮಾಡಬಾರದೆಂದು ಕೋರ್ಟಿನ ಆದೇಶ ಬಂದ ಮೇಲೆ ಈಗ ಯಾರು ಸೇಂದಿಯನ್ನು ಸರಬರಾಜು ಮಾಡುತ್ತಿದ್ದಾರೆ ? ನಮಗೆ ತಿಳಿದುಬಂದ ಪ್ರಕಾರ ಕೋರ್ಟಿನ ಆದೇಶವಿದ್ದರೂ ಸಹ ದಾಸಪ್ಪ ಅಂಡ್ ಕಂಪನಿಯವರೇ ಸೇಂದಿ ವ್ಯಾಪಾರವನ್ನು ಮುಂದುವರಿಸಿದ್ದಾರೆ. ಇದಕ್ಕೆ ಕಾರಣವೇನು ?

ಇನ್ನು ಪಿ. ಜಿ. ಕೋರ್ಸ್‌ಗೆ ಸಂಬಂಧ ಪಟ್ಟಂತೆ ಖಾಸಗಿ ಮೆಡಿಕಲ್ ಕಾಲೇಜ್‌ಗಳಲ್ಲಿ ಸರ್ಕಾರದ ಸೀಟ್‌ಗಳನ್ನು ಹಂಚಿಕೆ ಮಾಡಿ ದಿನಾಂಕ ೭--೧--೧೯೮೭ ರಂದು ಸರ್ಕಾರ ಒಂದು ಪ್ರಕಟಣೆ ಹೊರಡಿಸಿದ ಮೇಲೆ ದಾವಣಗೆರೆ ಮೆಡಿಕಲ್ ಕಾಲೇಜಿನವರು ಮತ್ತು ಮಣಿಪಾಲ್ ಮೆಡಿಕಲ್ ಕಾಲೇಜಿನವರು ಸರ್ಕಾರಕ್ಕೆ ಒಂದು ಪತ್ರ ಬರೆದು ಸರ್ಕಾರ ಈ ಪ್ರಕಟಣೆಯನ್ನು ಸೆಪ್ಟೆಂಬರ್ ತಿಂಗಳಲ್ಲಿಯೇ ಹೊರಡಿಸದ ಕಾರಣ ಸರ್ಕಾರದ ಸೀಟ್‌ಗಳನ್ನು ನಾವೇ ಭರ್ತಿ ಮಾಡಿದ್ದೇವೆಂದು ಹೇಳಿರುವುದು ನಿಜವೇ? ಅವರು ಸರ್ಕಾರದ ಸೀಟ್‌ಗಳನ್ನು ೮--೧೦ ಲಕ್ಷ ರೂಪಾಯಿಗಳಿಗೆ ಹೊರಗಿನ ರಾಜ್ಯದವರಿಗೆ ಮಾರಾಟ ಮಾಡಿರುವುದು ನಿಜವಲ್ಲವೇ ? ಸರ್ಕಾರದ ಪ್ರಕಟಣೆಯನ್ನು ಹೊರಡಿಸುವುದನ್ನು ನಿಧಾನ ಮಾಡಿ, ಅವರು ಸರ್ಕಾರದ ಸೀಟ್‌ಗಳನ್ನು ಸಹ ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ಸರಿಯೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.— ಸರ್ಕಾರದ ಸೀಟ್‌ಗಳನ್ನು ಮಾರಾಟ ಮಾಡಿಕೊಳ್ಳಿ ಎಂದು ನಾವು ಅವರಿಗೆ ಹೇಳಲಿಲ್ಲ. ಮೊದಲಿನಿಂದಲೂ ಅವರು ಮತ್ತು ನಾವು ಒಂದು ಒಪ್ಪಂದಕ್ಕೆ ಬರುತ್ತಿದ್ದೆವು. ಏನೆಂದರೆ, ಅವರು ಸರ್ಕಾರಕ್ಕೆ ಇಷ್ಟು ಸೀಟ್‌ಗಳನ್ನು ಬಿಟ್ಟುಕೊಡಬೇಕು. ಅವರು ಇಷ್ಟು ಸೀಟ್‌ಗಳನ್ನು ಇಟ್ಟುಕೊಳ್ಳಬೇಕು ಎಂದು ಒಂದು ಒಪ್ಪಂದವನ್ನು ಪ್ರತಿವರ್ಷವೂ ಮಾಡಿಕೊಳ್ಳುತ್ತಿದ್ದೆವು ಆದರೆ ಈ ವರ್ಷ ವೆಂಕಟಸ್ವಾಮಿ ಆಯೋಗದ ಚಳುವಳಿಯ ಕಾರಣದಿಂದ ನಾವು ಈ ಬಗ್ಗೆ ಪ್ರಕಟಣೆ ಹೊರಡಿಸುವುದು ನಿಧಾನವಾಯಿತು. ಇದೇ ಕಾರಣದಿಂದ ಅವರು ಇಲ್ಲಸಲ್ಲದ ಸಬೂಬು ಹೇಳುತ್ತಿದ್ದರು. ಆದರೆ ನಮ್ಮ ಮುಖ್ಯ ಮಂತ್ರಿಗಳು ಈ ಸಲ ಕೊರತೆ ಬಂದಿರುವ ಸೀಟ್‌ಗಳನ್ನು ಮುಂದಿನ ವರ್ಷ ತುಂಬಿಕೊಡಬೇಕೆಂದು ಅವರಿಗೆ ತಿಳಿಸಿದ್ದಾರೆ. ಖಾಸಗಿ ಮೆಡಿಕಲ್ ಕಾಲೇಜ್‌ನವರು ಇಂತಹ ತಪ್ಪುಗಳನ್ನು ಮಾಡಿದಾಗ ಅವರ ಮೇಲೆ ಪ್ರಯೋಗ ಮಾಡಬಹುದಾದಂಥ ಶಿಕ್ಷೆ ಎಂದರೆ, ನಾವು ಅವರಿಗೆ ಏನು ಕ್ಲಿನಿಕಲ್ ಫೆಸಿಲಿಟೀಸ್‌ನ್ನು ಕಲ್ಪಿಸಿಕೊಟ್ಟಿದ್ದೇವೆ, ಅದನ್ನು ವಿತ್‌ಡ್ರಾ ಮಾಡಬಹುದು. ಈ ರೀತಿ ಏನಾದರೂ ಮಾಡಿದರೆ ಸರ್ಕಾರದಿಂದ ಶೇಕಡಾ ೫೫ರವರೆಗೆ ಸೀಟ್‌ಗಳನ್ನು ಪಡೆದು ಅಲ್ಲಿ ವ್ಯಾಸಂಗ ಮಾಡುತ್ತಿರುವ ಎಂ. ಬಿ. ಬಿ. ಎಸ್. ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ನಾವು ಇಲ್ಲಿ ಇವರ ಹಿತವನ್ನು ಸಹ ನೋಡಬೇಕಾಗುತ್ತದೆ. ಇಲ್ಲಿ ಕೆಲವು ತೊಡಕುಗಳು

ಇವೆ. ಈ ತೊಡಕುಗಳನ್ನೆಲ್ಲಾ ಹೋಗಲಾಡಿಸಲು ಇರುವಂಥ ಒಂದು ಸಿದ್ಧೌಷಧವೆಂದರೆ, ವೈದ್ಯಕೀಯ ವಿಶ್ವವಿದ್ಯಾನಿಲಯದ ಸ್ಥಾಪನೆ.

ಆ ಮೇಲೆ ಎಷ್ಟು ಮರಗಳನ್ನು ಟ್ಯಾಪ್ ಮಾಡುತ್ತೀರಿ ಎಂದು ಕೇಳಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ದಾಸಪ್ಪ ಅಂಡ್ ಕಂಪನಿಯು ಆದ ಮೇಲೆ ಈ ಶೇಂದಿ ವ್ಯವಹಾರ ಯಾರು ಮಾಡುತ್ತಾ ಇದ್ದಾರೆ, ಕೋರ್ಟಿನ ಆದೇಶ ಬಂದ ಮೇಲೂ ಅವರೇ ಮಾಡುತ್ತಾ ಇದ್ದಾರೆ ಎಂದು ತಿಳಿದಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಡಿನೇಚರ್ಡ್ ಸ್ಪಿರಿಟ್ ಬಗ್ಗೆ ಕೇಳಿದರಲ್ಲಾ, Rectified spirit is different from denatured spirit. ಡಿನೇಚರ್ಡ್ ಸ್ಪಿರಿಟ್ ಶುದ್ಧವಾದಂಥ ಆಲ್ಕೊಹಾಲ್. ಇದು ಮಲಿನವಾದಂಥ ಆಲ್ಕೊಹಾಲ್. ಇದು ಆಗಲೇ ಒಂದು ಸಾರಿ ಉಪಯೋಗವಾಗಿರತಕ್ಕಂತಾದ್ದು, ಆದುದರಿಂದ ಬೆಲೆ ಕಡಿಮೆ. ಮುಂದೆ ರೆಕ್ಟಿಫೈಡ್ ಸ್ಪಿರಿಟ್ ಬೇಸ್ಡ್ ಇಂಡಸ್ಟ್ರೀಸ್‌ಗೆ ಯಾವುದಕ್ಕೂ ನಾವು ಲೈಸೆನ್ಸ್ ಕೊಡುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ

ಶ್ರೀ ಬಿ ಎಸ್. ಯಡಿಯೂರಪ್ಪ.—ತಮ್ಮ ಬುದ್ಧಿವಂತಿಕೆಯಿಂದ ನಮ್ಮನ್ನು ಮರುಳು ಮಾಡುವ ಶಕ್ತಿ ನಿಮಗೆ ಇದೆ. ನನ್ನ ನೇರವಾದ ಪ್ರಶ್ನೆ ಏನೆಂದರೆ ಅದರ ಹೆಸರು ಏನಾದರೂ ಕರೆಯಿರಿ, ಈ ಡಿನೇಚರ್ಡ್ ಸ್ಪಿರಿಟ್ ೫೦ ಪೈಸೆಗೆ ಕೊಡುತ್ತಿದ್ದರು. ತಾವು ಅಧಿಕಾರಕ್ಕೆ ಬಂದಮೇಲೆ ಖೋಡೇಸ್‌ಗೆ ಕೊಡುತ್ತಿದ್ದೀರಿ. ರಾಜ್ಯದಲ್ಲಿ ಬೇರೆ ಯಾರಿಗೂ ಕೊಟ್ಟಿಲ್ಲ ಏಕೆ. ಅವರಿಗೆ ಕೊಡುವುದಕ್ಕೆ ಕಾರಣ ಏನು? ಈ ಒಂದು ರೆಕ್ಟಿಫೈಡ್ ಸ್ಪಿರಿಟ್ ತಯಾರು ಮಾಡುವವರ ಗತಿ ಏನು? ಯಾವ ತಜ್ಞರ ಅಭಿಪ್ರಾಯ ತೆಗೆದುಕೊಂಡು ಕೆಲಸ ಮಾಡುತ್ತಿದ್ದೀರಿ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಖೋಡೇಯವರಿಗೆ ಡಿನೇಚರ್ಡ್ ಸ್ಪಿರಿಟ್ ಕೊಡುತ್ತಾ ಇದ್ದೀರಿ ಎಂದರು. ನಾನು ಒಪ್ಪುವುದಿಲ್ಲ. ಯಾರ್ಯಾರು ಆ ಇಂಡಸ್ಟ್ರೀಸ್ ಮಾಡುತ್ತಾ ಇದ್ದಾರೋ ಅವರಿಗೆ ಕೊಡುತ್ತಾ ಇದ್ದೇವೆ. ಡಿನೇಚರ್ಡ್ ಸ್ಪಿರಿಟ್‌ನಲ್ಲಿ ಕೂಡ ಇಂಡಸ್ಟ್ರೀಸ್ ಮಾಡತಕ್ಕಂಥ ವ್ಯವಸ್ಥೆ ಇದೆ. ಅವರು ಅರ್ಜಿ ಕೊಟ್ಟರೆ ಕೊಡುತ್ತೇವೆ. ಆ ಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಹೇಳಿಬಿಡುತ್ತೇನೆ, ಈಗ ಮನುಷ್ಯನ ಮೇಲೆ ಪ್ರಯೋಗ ಮಾಡುವುದಕ್ಕೆ ಮುಂಚಿತವಾಗಿ ಪರೀಕ್ಷೆ ಮಾಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಮಾಡಬೇಕು. ಗ್ರೂಪ್ ಡಾಕ್ಟರ್ಸ್‌ನ್ನು ಬಿಟ್ಟು ಅವರ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನಾನು ದಾಸಪ್ಪನವರ ಬಗ್ಗೆ ಕೇಳಿದ್ದೆ.

ಅಧ್ಯಕ್ಷರು.—ತಾವು ದಯವಿಟ್ಟು ಕೂಡಿ. ಸ್ವಾಮಿರಾವ್‌ರವರೇ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಮಂಗನ ಕಾಯಿಲೆ ಮತ್ತು ಹಂದಿಗೋಡು ಕಾಯಿಲೆ ಬಂದು ಸರ್ಕಾರ ಅವರಿಗೆ ವೈದ್ಯಕೀಯ ಸೌಲಭ್ಯ ಕೊಡುವುದಕ್ಕೆ ಫೇಲಾಗಿ ಸತ್ತವರ ಕುಟುಂಬಕ್ಕೆ ಪರಿಹಾರ ಕೊಡಬೇಕು ಎಂದು ಹೇಳಿದ್ದೆ ಅದಕ್ಕೆ ಉತ್ತರ ಕೊಡಲಿಲ್ಲ. ಮೇಲಾಗಿ ಆಸ್ಪತ್ರೆಯ ಡಾಕ್ಟರಿಗೆ ವಸತಿ ಸೌಕರ್ಯ ಕೊಡುವಾಗ ಇಲ್ಲಿ ಒಂದು ಅವ್ಯವಹಾರ ನಡೆದಿದೆ ಎಂದು ಹೇಳಿದೆ. ಬೋರಿಂಗ್ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರಿಗೆ ಕ್ವಾರ್ಟರ್ಸ್ ಕೊಡದೆ, ಬೇರೆ ಖಾಸಗಿ ಡಾಕ್ಟರಿಗೆ ಕೊಟ್ಟಿದ್ದಾರೆ. ಇಂದಿರಾ ನರಸಿಂಹನ್‌ರವರು ಬೇರೆ ಖಾಸಗಿ ಕಾಲೇಜಿನಲ್ಲಿ ಪಾಠ ಹೇಳತಕ್ಕವರು ಒಳ್ಳೆಯ ಇನ್‌ಫ್ಲುಯನ್ಸ್ ಮಾಡಿರುವುದರಿಂದ ಅವರಿಗೆ ಕ್ವಾರ್ಟರ್ಸ್ ಕೊಟ್ಟಿದ್ದಾರೆ ಎಂದು ಹೇಳಿದೆ. ಅದಕ್ಕೆ ಉತ್ತರ ಹೇಳಬೇಕು. ಆ ಮೇಲೆ ಅಸಿಸ್ಟೆಂಟ್ ಸರ್ಜನರಿಗೆ ಡೆಪ್ಯುಟಿ ಸರ್ಜನ್ ಪೋಸ್ಟ್‌ಗೆ ಪ್ರಮೋಷನ್ ಆಗತಕ್ಕವರಿಗೆ ತಡೆಹಿಡಿದಿದ್ದಾರೆ. ಯಾವ ಕಾರಣಕ್ಕೆ ತಡೆಹಿಡಿದಿದ್ದಾರೆ ಎಂದು ಕೇಳಿದೆ ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ ತಡೆಹಿಡಿದಿಲ್ಲ. ಅದು ಪ್ರೊಸೆಸ್ ಆಗುತ್ತಿದೆ. ಡೆಪ್ಯುಟಿ ಸರ್ಜನ್ ಆಗಿ ಅವರಿಗೆ ಪ್ರಮೋಷನ್ ಮಾಡುತ್ತೇವೆ ಆಮೇಲೆ ವೈಯುಕ್ತಿಕವಾದ ವಿಚಾರ ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಅವರಿಗೆ ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಂಗನ ಕಾಯಿಲೆ ಮತ್ತು ಹಂದಿಗೋಡು ಕಾಯಿಲೆ ಬಂದು ಸತ್ತವರ ಕುಟುಂಬಕ್ಕೆ ಪರಿಹಾರ ಕೊಡುವ ಬಗ್ಗೆ ಹೇಳಿದೆ, ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಎಂ. ಮೊಯ್ದಿನ್.—ಮಾನ್ಯ ಅಧ್ಯಕ್ಷರೇ ಬೆಂಗಳೂರು ಸಿಟಿಯಲ್ಲಿ ೪-೫ ಫ್ಯಾಕಲ್ಟಿಸ್‌ನಲ್ಲಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಷನ್ಸ್ ಇದೆ. All India Institute of Nehru Sciences, All India Institute of Medical Sciences, All India Institute of Opthomology, All India Cancer Institute ಎಂಬುದಾಗಿ ಆಲ್ ಇಂಡಿಯ ದರ್ಜೆಯಲ್ಲಿ ಇನ್‌ಸ್ಟಿಟ್ಯೂಷನ್ಸ್ ಸ್ಥಾಪನೆ ಇದೆ. ಅದೇ ರೀತಿ All India Child Health Welfare Institute, ಸೊಸೈಟಿ ಪ್ರಕಾರ ಆಗಿದೆ. ಅದಕ್ಕೆ ನಾವು ೮ ಎಕರೆ ಸರ್ಕಾರಿ ಜಮೀನು ಕೇಳಿದ್ದೇವೆ. ದಯವಿಟ್ಟು ಮಾನ್ಯ ಮಂತ್ರಿಗಳು All India Child Health Welfare Institutionಗೆ ಜಮೀನು ಮಂಜೂರು ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದು ಪರಿಶೀಲನೆಗೆ ಯೋಗ್ಯವಾದ ಸಲಹೆ. ಖಂಡಿತವಾಗಿ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಹಮ್ಮದ್ ಮೊಯ್ದಿನ್.—ಕೊಡುತ್ತೇನೆ ಅಂತ ಹೇಳಬೇಕು. ಆರು ತಿಂಗಳ ಹಿಂದೆಯೇ ಪರಿಶೀಲನೆ ಮಾಡುತ್ತೇನೆಂದು ಹೇಳಿದಾಗಿದೆ. ಕೊಡುತ್ತೇವೆಂದು ಹೇಳಿಬಿಡಿ. ಅದು ಸರ್ಕಾರದ ಜಮೀನು. ಖಾಸಗಿಯವರ ಜಮೀನು ಏನೂ ಅಲ್ಲ. ೮ ಎಕರೆ ಕೇಳುತ್ತಿದ್ದೇವೆ.

ಅಧ್ಯಕ್ಷರು.—ಸಲಹೆ ಯೋಗ್ಯ ಇದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕೊಡಬಹುದು.

ಶ್ರೀ ಆರ್. ಎನ್ ನಾಯಕ್.—ಹಿಂದಿನ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದಾಗ ಹೆಂಡ ಮತ್ತು ಸಾರಾಯಿ ಕುಡಿಯುವುದು ಆರೋಗ್ಯಕ್ಕೆ ಹಾನಿಕಾರಕ ಎಂಬಂದಾಗಿ ಆರೋಗ್ಯ ಖಾತೆಯಿಂದ ಉತ್ತರ ಬಂತು, ಹಾಗಾದರೆ ಆ ರೀತಿ ಬಂದಿರುವಂತಹ ಉತ್ತರ ತಪ್ಪೇ? ಹಾನಿಕಾರಕ ಅಂತ ಹೇಳುವುದಾದರೆ, ಆ ರೀತಿ ಪ್ರತಿಯೊಂದು ಬಾಟ್ಲ್ ಮೇಲೂ ಹೆಂಡ ಮತ್ತು ಸಾರಾಯಿ ಕುಡಿಯುವುದು ಆರೋಗ್ಯಕ್ಕೆ ಹಾನಿಕಾರಕ ಎಂಬುದಾಗಿ ಬರೆಯುವ ವ್ಯವಸ್ಥೆ ಮಾಡುತ್ತೀರಾ? ನಂತರ ಈ ಹಿಂದೆ ಮಂಗನ ಕಾಯಿಲೆ ಬಂದು ಸತ್ತಂತಹವರ ಕುಟುಂಬಕ್ಕೆ ಪರಿಹಾರವನ್ನು ಒದಗಿಸಿದ್ದೀರಿ. ಅದೂ ಕೇಂದ್ರ ಸರ್ಕಾರದ ಸಹಾಯದಿಂದ ಬಂದಂತಹ ಹಣದಿಂದ. ಇನ್ನೂ ಆ ಒಂದು ಕಾಯಿಲೆ ಯಿಂದ ಸತ್ತಂತಹವರು ಇದ್ದಾರೆ. ಅವರ ಕುಟುಂಬಕ್ಕೆ ಏನಾದರೂ ಪರಿಹಾರವನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ? ನಂತರ ಸಿ.ಎಲ್-೨ ಅನ್ನು ಸಿ.ಎಲ್-೪ ಎಂಬುದಾಗಿ ಮಾರುತ್ತಿರುವ ಬಗ್ಗೆ ಮುಂಚೆಯೇ ಹೇಳಿದ್ದೆ. ಅದು ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಟ್ಕಲ್ ಹಾಗೂ ಹೊನ್ನಾವರ ಈ ಸ್ಥಳಗಳಲ್ಲಿ ಲಿಕ್ಕರ್ ಶಾಪುಗಳಲ್ಲಿ ಹೇರಳವಾಗಿ ಮಾರಾಟ ಮಾಡುತ್ತಿದ್ದಾರೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೆ ಅದಕ್ಕೆ ಅವರಿಂದ ಇನ್ನೂ ಉತ್ತರ ಬಂದಿಲ್ಲ. ಆದರೆ ನೀವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಹೆಂಡ, ಸಾರಾಯಿ ಮಾನಂಪ್ಪ ಆರೋಗ್ಯಕ್ಕೆ ಹಾನಿಕಾರಕ ಎನ್ನ ತಕ್ಕಂತಹ ವಿಚಾರದಲ್ಲೂ ಕೂಡ ಅಭಿಪ್ರಾಯ ಭೇದ ಇದೆ. ಔಷಧಿಯಲ್ಲೂ ಕೂಡ ಆಲ್ಕೋಹಾಲ್‌ನ್ನು ಸೇರಿಸಲಾಗುತ್ತಿದೆ. ಅದು ಗೊತ್ತಿದೆಯೇ? ಇದು ಹಾನಿಕಾರಕ ಅಲ್ಲ. ಆದರೂ ಯಾರ್‍ಯಾರ ದೇಹಕ್ಕೆ ಯಾವ್ಯಾವುದು ಒಗ್ಗುತ್ತೋ ಅದನ್ನು ಅವರು ತೆಗೆದುಕೊಳ್ಳಬಹುದು. ನಂತರ ಮಂಗನ ಕಾಯಿಲೆಯಿಂದ ಸತ್ತಂತಹವರಿಗೆ ಪರಿಹಾರವನ್ನೇನು ಕೊಡತಕ್ಕಂತದ್ದು ಇಲ್ಲ. ಆ ಬಗ್ಗೆ ಯಾವ ವಿಧವಾದ ಯೋಜನೆ ಕೂಡ ಇಲ್ಲ. ಅದರ ಬಗ್ಗೆ ಮುಂದೆ ಪರ್ಯಾಲೋಚನೆ ಮಾಡಲಾಗುತ್ತದೆ.

ಶ್ರೀ ಎನ್. ಎಸ್. ಖೇಡ್.—ಆಸ್ಪತ್ರೆ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಕೊಡತಕ್ಕಂತಹದ್ದರಲ್ಲಿ ಉತ್ತರ ಕರ್ನಾಟಕಕ್ಕೂ, ಹಳೇ ಮೈಸೂರು ಭಾಗಕ್ಕೂ ಬಹಳಷ್ಟು ಅಂತರ ಇದೆ. ತಾರತಮ್ಯ ಇದೆ ಉತ್ತರ ಕರ್ನಾಟಕ ಭಾಗದಲ್ಲಿ ನೂರಾರು ವೇಕೆಂಟ್ ಬ್ಲಾಕ್ ಇವೆ. ಅವುಗಳನ್ನು ಗಮನಕ್ಕೆ

ತೆಗೆದುಕೊಂಡು ಆ ಭಾಗದಲ್ಲೂ ಆಸ್ಪತ್ರೆಗಳನ್ನು ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಏನಾದರೂ ವಿಚಾರ ಮಾಡುತ್ತಾರೆಯೇ ? ಕಳೆದ ಎರಡು ವರ್ಷಗಳಿಂದಲೂ ಪೆಂಡಿಂಗ್‌ನಲ್ಲಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ —ಈಗ ನಾನು ಬಹಳ ವಿಷಾದದಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ಖೇಡ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈ ವರ್ಷದ ಆಯವ್ಯಯದಲ್ಲಿ ಆ ಬಾಬ್ತು ಸಾಕಷ್ಟು ಹಣವನ್ನು ಇಟ್ಟಿಲ್ಲ. ಆದ್ದರಿಂದ ನಾವು ಇರತಕ್ಕ ಆಸ್ಪತ್ರೆಗಳನ್ನೇ ಚೆನ್ನಾಗಿ ನಡೆಸತಕ್ಕಂತಹ ಕಾರ್ಯದಲ್ಲಿ ನಿರತರಾಗಬೇಕಾಗಿದೆ. ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ಮಂಜೂರು ಮಾಡಿ, ಎಲ್ಲಾ ಕಡೆ ಡಾಕ್ಟರ್ ಇಲ್ಲ, ದಾದಿಯರು ಇಲ್ಲ ಎನ್ನುವುದಕ್ಕಿಂತ ಇರತಕ್ಕಂತಹ ಆಸ್ಪತ್ರೆಗಳನ್ನೇ ಚೆನ್ನಾಗಿ ನೋಡಿಕೊಳ್ಳುವ ಕಡೆ ಹೆಚ್ಚು ಗಮನ ನೀಡಬೇಕಾಗಿದೆ. ನಾನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಎಲ್ಲಿ ತೀರ ಅವಶ್ಯಕತೆ ಇದೆಯೋ ಅಂತಲ್ಲಿ ಕೆಲವು ಆಸ್ಪತ್ರೆಗಳನ್ನು ಕೊಡಬೇಕು ಅಂತ ಕೇಳಿದ್ದೇನೆ. ಅದಕ್ಕೆ ಅವರು ಯೋಚನೆ ಮಾಡೋಣ ಅಂತ ಹೇಳಿದ್ದಾರೆ. ಆ ನಂತರ ತಿಳಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ. —ಸೋಮವಾರಪೇಟೆಯಲ್ಲಿ ಹೋಮಿಯೊಪತಿ ಕಾಲೇಜು ಸ್ಥಾಪನೆ ಮಾಡಿ ಒಬ್ಬ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಕಳುಹಿಸಿಲ್ಲ. ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡಿದ್ದರು, ಆದರೆ ಆ ಕಾಲೇಜಿನಿಂದ ಒಬ್ಬ ವಿದ್ಯಾರ್ಥಿಯನ್ನು ಕಳುಹಿಸಲಿಲ್ಲ. ಈಗ ಅಲ್ಲಿಂದ ಆ ಕಾಲೇಜು ವರ್ಗಾವಣೆ ಮಾಡತಕ್ಕ ಅಭಿಪ್ರಾಯ ಅಫಿಷಿಯಲ್ ಲೆವೆಲ್‌ನಲ್ಲಿ ನಡೆಯುತ್ತಿರುವುದು ನಿಜವೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ. —ಮಾನ್ಯ ಚಿನ್ನಪ್ಪನವರು ಹೇಳಿದ್ದು ನಿಜ. ಅಲ್ಲಿ ೫ ಜನ ವಿದ್ಯಾರ್ಥಿಗಳು ಇದ್ದಾರೆ. ೫ ಜನ ವಿದ್ಯಾರ್ಥಿಗಳಿಗೆ ಒಂದು ಕಾಲೇಜು ಮಾಡಲಿಕ್ಕೆ ಆಗುತ್ತದೆಯೇ ? ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಲಿ, ಇನ್ನೂ ದೊಡ್ಡದಾಗಿ ಬೆಳೆಸೋಣ. ವಿದ್ಯಾರ್ಥಿಗಳು ಬರದೇ ಇದ್ದರೇ ನಾವು ಏನು ಮಾಡಲಿಕ್ಕೆ ಆಗುತ್ತದೆ ? ಆ ವಿದ್ಯಾರ್ಥಿಗಳನ್ನು ಬೆಂಗಳೂರಿಗೆ ತಂದು ಸೇರಿಸೋಣ ಎಂದು ಆಲೋಚನೆ ಮಾಡಿದ್ದೇವೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ —ನಮ್ಮ ತರೀಕೆರೆ ತಾಲ್ಲೂಕಿನಲ್ಲಿ ಮೂರು ಆಸ್ಪತ್ರೆಗಳಿಗೆ ಹಣ ಕಟ್ಟಿದ್ದೇವೆ. ಇದೇ ರೀತಿ ರಾಜ್ಯಾದ್ಯಂತ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಘಟಕಗಳು ಬೇಕೆಂದು ಹಣ ಕಟ್ಟುತ್ತಿದ್ದಾರೆ, ಇವೊತ್ತು ಸಾರ್ವಜನಿಕರು ಹಣ ಕಟ್ಟುವುದು ಜಮೀನು ಕೊಡುವುದಕ್ಕಿಂತಲೂ ಮುಂಚೆ ತಾವು ಇಷ್ಟು ಆಸ್ಪತ್ರೆಗಳನ್ನು ಕೊಡುತ್ತೇವೆಂದು ಹೇಳಿದರೆ ಅನುಕೂಲ ಇಲ್ಲದೇ ಹೋದರೆ ನಾವು ಕಟ್ಟತಕ್ಕ ಹಣ ಬ್ಯಾಂಕಿನಲ್ಲಿಯೇ ಉಳಿದುಕೊಳ್ಳುವುದು ಆಗುತ್ತದೆ. ಇನ್ನೊಂದು ವಿಷಯ, ಅಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಪಾನನಿರೋಧ ಇಲ್ಲದೇ ಇರುವುದರಿಂದ ಎಲ್ಲಾ ನೌಕರವರ್ಗದವರು ಕುಡಿಯುವಂತಾದ್ದು ಇದೆ. ಅದರ ಬಗ್ಗೆ ಯಾವುದೇ ಕಟ್ಟುನಿಟ್ಟಾದ ಆದೇಶ ಇಲ್ಲ. ಈ ರೀತಿ ಇರುವುದರಿಂದ ಯಾವರೀತಿ ಆರ್ಡರ್ಸ್ ಮಾಡುತ್ತೇವೆ, ನಾವು ಏನು ಮಾಡುತ್ತವೆ ಎನ್ನುವುದು ನೌಕರ ವರ್ಗದವರಿಗೆ ಗೊತ್ತಾಗುವುದಿಲ್ಲ. ತಾವು ಆರೋಗ್ಯ ಇಲಾಖೆಯನ್ನು ಇಟ್ಟುಕೊಂಡಿದ್ದೀರಿ, ಕುಡಿಸುವ ಇಲಾಖೆಯನ್ನು ಇಟ್ಟುಕೊಂಡಿದ್ದೀರಿ. ಇದರ ಬಗ್ಗೆ ತಾವು ಏನು ಹೇಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್ ಟಿ. ಕೃಷ್ಣಪ್ಪ. —ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು. ಅದರ ಬಗ್ಗೆ ನಾನು ಏನೂ ಹೇಳಲಿಕ್ಕೆ ಹೋಗುವುದಿಲ್ಲ. ಇನ್ನು ಆಸ್ಪತ್ರೆಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಸದಸ್ಯರಾದ ಖೇಡ್ ಅವರ ಪ್ರಶ್ನೆಗೆ ಏನು ಉತ್ತರ ಹೇಳಿದ್ದೇನೋ ಅದನ್ನೇ ಇವರಿಗೂ ಹೇಳಬೇಕಾಗುತ್ತದೆ ಸುಮಾರು ೧೦೭ ಊರಿನವರು ದುಡ್ಡು ಕೊಟ್ಟಿದ್ದಾರೆ, ಅವರೆಲ್ಲಾ ಚಾತಕ ಪಕ್ಷಿಗಳಂತೆ ನಮಗೆಲ್ಲಾ ಕೊಡುತ್ತಾರೆಂದು ಕಾಯುತ್ತಿದ್ದಾರೆ. ಅವರ ಮನಸ್ಸು ಸಂತೈಸಬೇಕಾದ್ದು ಇದೆ. ಆದ್ದರಿಂದ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಅದಕ್ಕಿಂತಲೂ ದೊಡ್ಡ ಆಶ್ವಾಸನೆ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಪಠಮಕ್ಕಿ ರತ್ನಾಕರ್, —ಮಾನ್ಯ ಸದಸ್ಯರಾಗಿರತಕ್ಕ ಆರ್. ಎನ್. ನಾಯಕ್ ಅವರು ಮದ್ಯದ ಬಾಟಲಿನ ಮೇಲೆ ಮದ್ಯಪಾನ ಮಾಡುವುದು ಒಳ್ಳೆಯದಲ್ಲ ಎಂದು ಮುದ್ರಿಸಿ ಎಂದು ಹೇಳಿದರು. ಅದಕ್ಕಿಂತಲೂ ಮುಂದೆ ಒಂದು ವಿಚಾರವನ್ನು ಹೇಳುತ್ತೇನೆ. ಮದ್ಯ ಕುಡಿಯಬೇಡಿ ಎಂದು ೧೯೮೦ಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಜನತೆಗೆ ಕೊಟ್ಟಿರುವ ಸಂದೇಶ ಇದೆ. ಅದನ್ನು ತಾವು ಹೆಚ್ಚು ಸ್ವೀಕಾರ ಮಾಡಲಿಲ್ಲ. ಹೆಚ್ಚು ಮದ್ಯಪಾನ ಆರೋಗ್ಯಕ್ಕೆ ಹಾನಿಕರ ಎಂದು ಏತಕ್ಕೆ ಮುದ್ರಿಸಬಾರದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಒಪ್ಪಿಕೊಂಡಿದ್ದೇನೆ.

ಶ್ರೀ ಪರಮಕ್ಕಿ ರತ್ನಾಕರ್.—ನೀವು ಒಪ್ಪಿಕೊಂಡಿದ್ದೀರಿ, ಮುಂದುವರಿಸುತ್ತೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ರತ್ನಾಕರ್ ಅವರು ಕೊಟ್ಟಿರತಕ್ಕ ಸಲಹೆಗಳನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ.

ಶ್ರೀ ರಾಜುಗೌಡ.—ಸಿ. ಎಲ್. ೯ ಲೈಸೆನ್ಸ್‌ಗೆ ಮೊದಲು ಇರುವುದಕ್ಕೆ ಆಕ್ಷೇಪಣಾರಹಿತ ಪತ್ರವನ್ನು ಕೊಟ್ಟು ಅನಂತರ ಸಂಬಂಧಪಟ್ಟ ಅಧಿಕಾರಿಗಳು ಮತ್ತೆ ಆಕ್ಷೇಪಣಾ ಪತ್ರದ ಶಿಫಾರಸ್ಸು ಇದ್ದರೂ ಕೂಡ ಆ ಲೈಸೆನ್ಸ್ ಮುಂದುವರಿಸಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದರೆ ಅಥವಾ ಮಾಹಿತಿಯನ್ನು ಕೊಟ್ಟರೆ, ತಾವು ಪರವಾನಿಗೆಯನ್ನು ರದ್ದು ಮಾಡುತ್ತೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಿಯಮಗಳ ಪ್ರಕಾರ ಪರವಾನಿಗೆ ಕೊಡದೇ ಹೋಗಿದ್ದರೆ, ನಿಯಮಗಳನ್ನು ಉಲ್ಲಂಘನೆ ಮಾಡುವುದು ನಮ್ಮ ಗಮನಕ್ಕೆ ಬಂದರೆ, ಆ ಬಗ್ಗೆ ಖಂಡಿತ ಗಮನ ಹರಿಸಿ, ಅಂತಹ ಪರವಾನಿಗೆಯನ್ನು ರದ್ದು ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ರಾಜ್ಯಾದ್ಯಂತ ಇನ್ನು ಮೇಲೆ ರಾತ್ರಿ ೮ ಗಂಟೆಗೆ ಬ್ರಾಂದಿ ಅಂಗಡಿಗಳನ್ನು ಮುಚ್ಚಲಾಗುವುದು, ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ೯ ಗಂಟೆಗೆ ಮುಚ್ಚಲಾಗುವುದು ಎಂದು ಹೇಳಿದ್ದೀರಿ. ಬಾರ್ ಕಮ್ ರೆಸ್ಟೋರೆಂಟ್‌ಗಳಿಗೆ ಎಷ್ಟು ಸಮಯ ನಿಗದಿ ಮಾಡುತ್ತೀರಾ ? ಇನ್ನೊಂದು ವಿಚಾರ ಅಂದರೆ, ಎಕ್ಸೈಜ್ ಇಲಾಖೆಯಲ್ಲಿ ಸಿಬ್ಬಂದಿ ಕಡಿಮೆಯಾಗಿ ಕಳ್ಳಭಟ್ಟಿ ತಯಾರು ಮಾಡುವುದನ್ನು ಹಿಡಿಯಲಿಕ್ಕೆ ಹೋದ ಸಂದರ್ಭದಲ್ಲಿ ಅನಾಹುತವನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನವರು ಅನುಭವಿಸಿದ್ದಾರೆ. ಆದ್ದರಿಂದ, ಸರ್ಕಾರದ ದೃಷ್ಟಿಯಿಂದ ಅಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ?

೨-೦೦ ಪಿ. ಎಂ.

ಈ ಅರಣ್ಯ ರಕ್ಷಣೆ ಮಾಡತಕ್ಕಂಥವರಿಗೆ ಯಾವ ರೀತಿಯಲ್ಲಿ ಒಂದು ಸೌಲಭ್ಯಗಳು, ರಕ್ಷಣೆಯ ಕುರಿತಾಗಿ ಒದಗಿಸಿದ್ದಾರೋ ಅದೇ ರೀತಿಯಲ್ಲಿ ಅಬಕಾರಿ ಇಲಾಖಾ ದಳದವರಿಗೂ ಒದಗಿಸಿ ಅವರಿಗೆ ರಕ್ಷಣೆ ಕೊಡಲಿಕ್ಕೆ ಮುಂದೆ ಬರುತ್ತೀರಾ ಎಂದು ಕೇಳ ಬಯಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಮ್ಮ ಅಬ್ಕಾರಿ ಸ್ಕ್ವಾಡ್‌ನಲ್ಲಿ ಕೆಲಸ ಮಾಡತಕ್ಕಂಥವರಿಗೆ ಆರ್ಮ್ಸ್ ಕೊಡುತ್ತಾ ಇದ್ದೇವೆ. ಅವರಿಗೆ ರಕ್ಷಣೆಯ ಬಗ್ಗೆ ಸೂಕ್ತ ಟ್ರೈನಿಂಗ್ ಕೊಡುತ್ತಾ ಇದ್ದೇವೆ. ಅವರಿಗೆ ವೈರ್‌ಲೆಸ್ ಸೆಟ್ಸ್‌ಗಳನ್ನು ಕೊಡುತ್ತಾ ಇದ್ದೇವೆ ಅಂತೆಯೇ ಅವರವರ ಸ್ವಯಂ ರಕ್ಷಣೆಗೆ ಏನೇನು ಅನುಕೂಲತೆಗಳು ಬೇಕೋ ಅದನ್ನು ಮಾಡುತ್ತಾ ಇದ್ದೇವೆ. ಕೆಲವು ಕಡೆಗಳಲ್ಲಿ ಸ್ಕ್ವಾಡ್‌ನವರಿಗೆ ಈಗಾಗಲೇ ಈ ರಕ್ಷಣಾ ವ್ಯವಸ್ಥೆಗಳನ್ನು ಒದಗಿಸಲಾಗಿದೆ. ಅದರಲ್ಲಿಯೂ ಅರಣ್ಯ ಪ್ರದೇಶದಲ್ಲಿ ಓಡಾಡತಕ್ಕಂಥವರಿಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು ಮಾಡಿದ್ದೇವೆ.

ಶ್ರೀ ಬಿ. ಎ. ಉಮರಬ್ಬ.—ಈಗ ಎಷ್ಟು ಬಾಟಲ್‌ಗಳು ಹೊರಗೆ ಬರುತ್ತವೆಯೊ ಅಷ್ಟೇ ಸೆಕೆಂಡ್ಸ್‌ಗಳನ್ನು ಹೊರಬರುತ್ತವೆ ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರಾದ ಅಡ್ಯಂತಾಯರವರು ಹೇಳಿದ ಹಾಗೆ, ಬೆಂಕಿಪೆಟ್ಟಿಗೆಗಳ ಮೇಲೆ ಯಾವ ರೀತಿಯಲ್ಲಿ ಎಕ್ಸೈಸ್ ಲೇಬಲ್ ಹೇಗೆ ಹಾಕುತ್ತಿದ್ದರೋ ಹಾಗೆಯೇ ಈ ಬಾಟಲ್‌ಗಳ ಮೇಲೆ ಕೂಡ ಲೇಬಲ್ ಹಚ್ಚತಕ್ಕಂಥ, ಒಂದು ಪದ್ಧತಿಯನ್ನು ಜಾರಿಗೆ ತಂದು ಈ ಸೆಕೆಂಡ್ಸ್‌ಗಳನ್ನು ತಪ್ಪಿಸುತ್ತೀರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ತಾಲ್ಲೂಕು ಬೋರ್ಡ್‌ಗಳಿಂದ ಪಡೆದಿರತಕ್ಕಂಥ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ವಿಚಾರದಲ್ಲಿ ೨-೩ ವರ್ಷಗಳಿಂದ ಆಶ್ವಾಸನೆಗಳನ್ನು ಕೊಡುತ್ತಾ ಬಂದಿದ್ದಾರೆ. ಹೀಗೆ ಪ್ರತಿ ವರ್ಷ ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿದ್ದೀರಿ ಮತ್ತು ಈ ವರ್ಷ ಎಷ್ಟನ್ನು ಹಾಗೆ ಮಾಡಿದ್ದೀರಿ ? ಇವೊತ್ತು ಅಬಕಾರಿ ಕರ

ವನ್ನು ತಪ್ಪಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಪ್ರತಿಯೊಂದು ಸಿಎಲ್‌ಟಿ ಲೈಸನ್ಸ್‌ನವರು ತಿಂಗಳಿಗೆ ೧೫೦ ಲೀಟರ್‌ಗಳಷ್ಟು ಮಾರಾಟ ಮಾಡಬೇಕೆಂದು ಕಾಣುತ್ತದೆ. ಹಾಗೆ ಮಾಡದಿದ್ದರೆ ಅವರಿಗೆ ಲೈಸನ್ಸ್‌ನ್ನು ಫೀಯನ್ನು ತುಂಬಲಿಕ್ಕೆ ಆಗುವುದಿಲ್ಲ. ಒಂದು ವೇಳೆ ೧೫೦ ಲೀಟರ್‌ಗಳಷ್ಟು ಮಾರದಿದ್ದರೆ, ಮುಂದಿನ ವರ್ಷ ಅವರನ್ನು ನವೀಕರಣ ಮಾಡಲಾಗುವುದಿಲ್ಲ ಎಂಬ ನಿರ್ಬಂಧವನ್ನು ಹಾಕಲಿಕ್ಕೆ ಸರ್ಕಾರ ಇಚ್ಛಿಸುತ್ತದೆಯೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಲೈಸನ್ಸ್ ಕೊಡತಕ್ಕಂಥ ವಿಚಾರದಲ್ಲಿ ಧಾರಾಳ ನೀತಿಯನ್ನು ತೋರಿಸಿದ್ದೇವೆ. ಹೀಗೆ ಮಾಡಿದ್ದರ ಉದ್ದೇಶವನ್ನು ಕೂಡ ಹೇಳುತ್ತೇನೆ. ಯಾರ್ಯಾರಿಗೆ ಅಂಗಡಿಗಳನ್ನು ಲಾಭದಾಯಕವಾಗಿ ನಡೆಸತಕ್ಕಂಥ ಶಕ್ತಿ ಇದೆ, ಅಂಥಹವರು ಮಾತ್ರ ಪರವಾನಿಗೆಯನ್ನು ಕೇಳುತ್ತಾ ಇರುತ್ತಾರೆ. ನಾವು ಕೂಡ ಲೈಸನ್ಸ್ ಫೀಯನ್ನು ಜಾಸ್ತಿ ಮಾಡುತ್ತಾ ಇದ್ದೇವೆ. ಹಾಗಾಗಿ ಪೈಪೋಟಿ ತಾನಾಗಿಯೇ ನಿಂತು ಹೋಗುತ್ತದೆ. ಯಾರು ಯಶಸ್ವಿಯಾಗಿ ನಡೆಸುತ್ತಾರೋ ಅವರು ಮಾತ್ರ ಉಳಿದುಕೊಳ್ಳುತ್ತಾರೆ. ಉಳಿದವರು ತಾವಾಗಿಯೇ ಮುಚ್ಚಲೇ ಬೇಕಾಗುತ್ತದೆ. ಪರಿಣಾಮ ಒಂದೇ ಆಗಿರುತ್ತದೆ. ಹೇಗಿದ್ದರೂ ಕುಡಿಯುವವರ ಸಂಖ್ಯೆಯ ಆಧಾರದ ಮೇಲೆ ಅಂಗಡಿಗಳು ಇರುತ್ತವೆ. ಆದುದರಿಂದ ಯಾವುದೇ ತರಹದ ಅನಾಹುತ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಯ್ಯ ಸ್ವಾಮಿ.—ಟಾಡಿ ಕಂಟ್ರಾಕ್ಟರ್‌ಗಳು ಈಚಲು ಮರಗಳನ್ನು ಹೊಂದಿರುವ ರೈತರುಗಳಿಗೆ ಮರ ಒಂದಕ್ಕೆ ೨೫ ರೂಪಾಯಿಗಳಂತೆ ಕೊಡುತ್ತಾರೆ ಅದನ್ನು ಹೆಚ್ಚಿಸುವ ಬಗ್ಗೆ ಏನಾದರೂ ಮಾಡುತ್ತೀರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಟಾಡಿಗಾಗಿ ಪಡೆದ ಈಚಲು ಮರಕ್ಕೆ ಪರಿಹಾರವನ್ನು ಕೊಡಲು ಸರಕಾರಕ್ಕೆ ಬರುವುದಿಲ್ಲ ಅದು ಕಂಟ್ರಾಕ್ಟರ್ ಮತ್ತು ರೈತನಿಗೆ ಬಿಟ್ಟ ವಿಚಾರವಾಗಿದೆ. ಅದರಲ್ಲಿ ನಮ್ಮ ಹಸ್ತಕ್ಷೇಪ ನಿಯಮಗಳ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ. ಇರತಕ್ಕಂತಹ ನಿಯಮಗಳ ಪ್ರಕಾರ ಕಂಟ್ರಾಕ್ಟರ್ ಮತ್ತು ರೈತರ ಮಧ್ಯೆ ತೀರ್ಮಾನವಾಗಬೇಕೇ ವಿನಹ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೆ, ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾದಂಥ ಔಷಧಿ ಸಾಮಗ್ರಿಗಳನ್ನು ಚಿಲ್ಲರೆ ಅಂಗಡಿಗಳಿಂದ ಕೊಂಡುಕೊಳ್ಳುವ ಬದಲಾಗಿ ತಯಾರು ಮಾಡುವಂಥ ಕಂಪನಿಗಳಿಂದಲೇ ನೇರವಾಗಿ ಸರ್ಕಾರದವರು ಏತಕ್ಕೆ ಖರೀದಿ ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಸಲಹೆ ಒಳ್ಳೆಯ ಸಲಹೆಯಾಗಿರುತ್ತದೆ ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ಮುಕ್ತಾರ್ ಉನ್ನಿಸ್ಸಬೇಗಂ.—ಮಾನ್ಯ ಸಭಾಪತಿಯವರೇ ಜೆ.ಎಸ್.ಎಸ್. ಕಾಲೇಜನ್ನು ಗೌವರ್ನ್‌ಮೆಂಟ್ ಆಸ್ಪತ್ರೆಗೆ ಅಟ್ಯಾಚ್ ಮಾಡುತ್ತೇವೆ ಹಾಗೂ ಮೈಸೂರು ಆಸ್ಪತ್ರೆಗಳಿಗೆ ಎಲ್ಲಾ ಫೆಸಿಲಿಟೀಸ್‌ಗಳನ್ನು ಎಷ್ಟೇ ಆಗಲಿ ಕೊಡುತ್ತೇವೆಂದು ಒಪ್ಪಿಕೊಂಡುದುದಕ್ಕೆ ಬಹಳ ಸಂತೋಷ ಮತ್ತೆ ನಾನು ಈಗ ಕೇಳತಕ್ಕಂಥದ್ದು ಏನೆಂದರೆ ಲೆಪ್ರಸಿ ಎರಾಡಿಕೇಷನ್ ಪ್ರೋಗ್ರಾಮ್‌ನಲ್ಲಿ ೧೯ ಪೋಸ್ಟ್ ಖಾಲಿ ಇದೆ. ೩೯ ಫಿಜಿಯೋ ಥೆರಫಿಸ್ಟ್ ಪೋಸ್ಟ್‌ಅನ್ನು ಏತಕ್ಕೆ ಭರ್ತಿ ಮಾಡಲಿಲ್ಲ ? ಬೀಡಿ ವರ್ಕರ್ಸ್‌ಗಳಿಗೆ ಟಿ. ಬಿ. ಖಾಯಿಲೆ ಬರತಕ್ಕಂಥದ್ದು ಜಾಸ್ತಿ ಇರುತ್ತದೆ ೮೦ ಪರ್ಸೆಂಟ್ ಟಿ.ಬಿ. ಖಾಯಿಲೆಯಿಂದ ನರಳುತ್ತಿದ್ದಾರೆ ಕರ್ನಾಟಕದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಅಂದರೆ ಬೀದರ್, ಧಾರವಾಡ ಮತ್ತು ಬೆಳಗಾಮ್ ಜಿಲ್ಲೆಗಳಲ್ಲಿ ಬರ್ಡ್ ಪ್ರಾಜೆಕ್ಟ್ ಎಂದು ಇಂಪ್ಲಿಮೆಂಟ್ ಮಾಡಿದ್ದೀರಿ. ಮೈಸೂರಿನಲ್ಲೂ ಅದೇ ರೀತಿ ಯಾವಾಗ ಮಾಡುತ್ತೀರಿ ? ಈ ಮೂರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ. ಮತ್ತೆ ತಾಲ್ಲೂಕ್ ಆಸ್ಪತ್ರೆಗಳನ್ನು ರಿಪೇರಿ ಮಾಡತಕ್ಕಂಥ ವಿಷಯದಲ್ಲಿ ಪಿ. ಡಬ್ಲ್ಯೂಡಿ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್‌ಗೂ ತಕರಾರು ಇರುತ್ತದೆ ಅದನ್ನು ಏನು ಮಾಡುತ್ತೀರಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಫಿಸಿಯೋಥೆರಫಿಸ್ಟ್ ಹುದ್ದೆಗಳನ್ನು ತುಂಬುವ ಬಗ್ಗೆ ಮಾನ್ಯ ಸದಸ್ಯಣಿಯವರು ಕೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದಿಂದ ತುಂಬಬಾರದೆಂದು ಆದೇಶ ಬಂದಿದೆ. ಆದ್ದರಿಂದ ತುಂಬಲಾಗಿಲ್ಲ.

ಶ್ರೀಮತಿ ಮುಕ್ತಾರ್ ಉನ್ನಿಸ್ಸಬೇಗಂ.—ಏತಕ್ಕೆ ಎಂದು ಕೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅವರನ್ನೇ ಕೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ ಹೇಗೆ ? ಅವರು ಬಹಳ ಸೀರಿಯಸ್ ಆಗಿ ಕೇಳುತ್ತಿದ್ದರೆ, ಅಲ್ಲೇ ಹೋಗಿ ಕೇಳಿ ಎಂದರೆ ಏನು ಅರ್ಥ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದಕ್ಕೆ ರೀಸನ್ ಏನೆಂದರೆ ಮೈಸೂರಿನಲ್ಲಿ ಬಹಳ ದೊಡ್ಡ ಸ್ಯಾನಿಟೋರಿಯಮ್ ಇದೆ. ಇದು ರಾಜ್ಯದಲ್ಲೇ ಬಹಳ ದೊಡ್ಡದು. ಆದ್ದರಿಂದ ಅಲ್ಲಿ ಎಲ್ಲ ಅನುಕೂಲತೆಗಳು ಇರುವುದರಿಂದ ಅನಾವಶ್ಯಕವೆಂಬುದು ಅವರ ಅಭಿಪ್ರಾಯ.

ಶ್ರೀಮತಿ ಮುಖ್ತರ್ ಉನ್ನಿಸ್ಸ ಬೇಗಂ.—ಲೆಪ್ರಸಿಯೇ ಬೇರೆ ಟಿ.ಬಿ.ಯೇ ಬೇರೆ ಖಾಯಿಲೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಲೆಪ್ರಸಿಗೆ ನಾನು ಹೇಳಿದ್ದು ನಾನು ಕೊಟ್ಟಿರುವ ಉತ್ತರ ಸರಿಯಾಗಿ ಇದೆ ಏತಕ್ಕೆಂದರೆ ಶೇಕಡಾ ೧೦೦ ಭಾಗ ಹಣವನ್ನು ಕೇಂದ್ರ ಸರ್ಕಾರದಿಂದ ಕೊಡುತ್ತಿದ್ದಾರೆ. ನಮಗೆ ಇಷ್ಟೊಂದು ಹಣವನ್ನು ಕೊಡುವಾಗ ನಾವು ಅವರು ಕೊಡತಕ್ಕಂಥ ಮಾರ್ಗಸೂಚಿಗಳನ್ನು ಅನುಸರಿಸಿ ನಡೆಯಬೇಕಾಗುತ್ತದೆ.

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಸಚಿವರು ಉತ್ತರವನ್ನು ಕೊಡುವಾಗ ರಾಜ್ಯಾದ್ಯಂತ ಆಸ್ಪತ್ರೆಗಳನ್ನು ತೆಗೆದು ಜನರ ಆರೋಗ್ಯವನ್ನು ಉತ್ತಮ ಮಾಡುತ್ತೇವೆಂದು ಹೇಳಿದರು. ಆದರೆ ದೇಶಾದ್ಯಂತ ಹೆಂಡದ ಅಂಗಡಿಗಳನ್ನು ತೆಗೆಯುವುದು ಒಳ್ಳೆಯದೇ ಎಂದು ಕೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ವಾಮಿ, ನಾನಂತು ಆ ರೀತಿ ಉತ್ತರವನ್ನು ಕೊಟ್ಟಿಲ್ಲ ಇದು ಹೇಗೆ ಅರ್ಥಮಾಡಿಕೊಂಡರೋ ನನಗೆ ಗೊತ್ತಿಲ್ಲ. ಹೆಂಡ ಸಾರಾಯಿ ಕುಡಿಯತಕ್ಕಂಥದ್ದು ಜನರ ಅಭಿರುಚಿಗೆ ಬಿಟ್ಟಿರತಕ್ಕಂಥದ್ದು ವಿರೋಧಿಸದೆ ಹೋದರೆ ಬೇಕಾದ ಹಾಗೆ ಮಾಡಿಕೊಂಡು ಹೋಗುತ್ತಾರೆ. ಸರ್ಕಾರದ ನೀತಿ ಇದ್ದರೂ ಕೂಡ ತಪ್ಪು ಎಂದು ಹೇಳತಕ್ಕಂಥದ್ದಲ್ಲ. ಸಾರಾಯಿ ಮತ್ತು ಹೆಂಡವನ್ನು ಕೊಡದೆ ಹೋದರೆ ಬಟ್ಟಿಸಾರಾಯಿ ಕುಡಿದು ಸಾಯುತ್ತಾರೆ ಏತಕ್ಕೆ ನೀವು ಒಳ್ಳೆಯ ಸಾರಾಯಿ ಕೊಡಲಿಲ್ಲವೆಂದು ನೀವೇ ಕೇಳುತ್ತೀರಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಸಿವಿಲ್ ಆಸ್ಪತ್ರೆಗಳಿಗೆ ೨೫೦ ಹಾಸಿಗೆಗಳನ್ನು ಕೊಡಬೇಕಾಗಿದೆ. ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಈಗಾಗಲೇ ೨೦೦ ಹಾಸಿಗೆ ಸೌಲಭ್ಯವನ್ನು ಕೊಟ್ಟಿದ್ದು ಇದು ಸುಮಾರು ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಆದ್ದರಿಂದ ಈಗ ಜಿಲ್ಲಾ ಆಸ್ಪತ್ರೆಗಳಿಗೆ ೨೫೦ ಹಾಸಿಗೆಗಳನ್ನು ಮಾಡಬೇಕೆಂದು ಮತ್ತು ಎಲ್ಲಿ ಸ್ಥಳದ ಅಭಾವ ಇರುತ್ತದೋ ಅಲ್ಲಿ ಸ್ಥಳದ ಅಭಾವವನ್ನು ನೀಗಲು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತು ಉತ್ತರ ಕರ್ನಾಟಕದಲ್ಲಿಯೇ ಅತಿ ಹಳೆಯದಾದ, ೧೪೫ ವರ್ಷಗಳ ಹಿಂದೆ ಪ್ರಾರಂಭವಾದಂಥ ಮಾನಸಿಕ ಆಸ್ಪತ್ರೆ ಸರ್ಕಾರದಿಂದ ನಡೆಯುತ್ತಿದೆ. ಇದನ್ನು ರಾಷ್ಟ್ರೀಯ ಮಾನಸಿಕ ಆಸ್ಪತ್ರೆ ಮತ್ತು ನರವಿಜ್ಞಾನದ ಆಸ್ಪತ್ರೆ, ನಿಮ್ಹಾನ್ಸ್ ಅಂತ ಏನಿದೆ ಬೆಂಗಳೂರಿನಲ್ಲಿ, ಅದರಂತೆ ಇದನ್ನು ಸ್ವಾಯತ್ತ ಸಂಸ್ಥೆಯಾಗಿ ಮಾಡಬೇಕು. ಇಲ್ಲದೇ ಹೋದರೆ ಅದರ ಅಧೀನದಲ್ಲಿ ಕೊಡಬೇಕು. ಇದಕ್ಕೆ ಸರ್ಕಾರ ಸಾಕಷ್ಟು ದುಡ್ಡು ಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಜಿಲ್ಲಾ ಆಸ್ಪತ್ರೆಯನ್ನು ೨೫೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಮಾನ್ಯ ಸದಸ್ಯರ ಸಲಹೆ ಏನಿದೆ, ಈಗಾಗಲೇ ನಾವು ಮಾತನಾಡಿಕೊಂಡಿದ್ದೇವೆ. ಹತ್ತು ಲಕ್ಷ ರೂಪಾಯಿಯಲ್ಲಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದೆ. ಆದರೂ ಸದನದಲ್ಲಿ ಆಶ್ವಾಸನೆ ಬೇಕೆಂದು ಇಲ್ಲಿ ಕೇಳಿದ್ದಾರೆ. ಅದೇ ಉತ್ತರವನ್ನು ಇಲ್ಲಿಯೂ ಕೊಡುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್.— ಈಗ ಬೆಳಗಾವಿಯಲ್ಲಿ ರೀಜನಲ್ ಮೆಡಿಕಲ್ ರೀಸರ್ಚ್ ಸೆಂಟರ್ ಇದೆ. ಇದು ಪ್ರಾರಂಭವಾಗುವುದಕ್ಕೆ ಇನ್ನೆಷ್ಟು ಸಮಯ ಬೇಕು? ಇದಕ್ಕೆ ಬೇಕಾದ ಹಣವನ್ನು ಯಾರು ಕೊಡುತ್ತಾರೆ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಬೆಳಗಾವಿಯಲ್ಲಿ ರೀಜನಲ್ ರೀಸರ್ಚ್ ಮೆಡಿಕಲ್ ಸೆಂಟರ್ ಸ್ಥಾಪನೆ ಮಾಡತಕ್ಕದ್ದು ನಮ್ಮ ಕಾರ್ಯಕ್ರಮ ಅಲ್ಲ. ಅದು ಬಹುಶಃ ಕೇಂದ್ರ ಸರ್ಕಾರದ್ದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಹುಬ್ಬಳ್ಳಿಯಲ್ಲಿರತಕ್ಕಂಥ ಕರ್ನಾಟಕ ಮೆಡಿಕಲ್ ಕಾಲೇಜಿಗೆ ಕಳೆದ ಒಂದು ವರ್ಷದಿಂದ ಪ್ರಾಚಾರ್ಯರು ಇಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಜೊತೆಗೆ ಕರ್ನಾಟಕದ ತುಂಬಾ ಬಿರುಗಾಳಿಯನ್ನು ಎಬ್ಬಿಸಿದಂಥ ಶ್ರೀಮತಿ ರಮಾಭಂಡಾರಿ ವಿಷಯದಲ್ಲಿ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಶ್ರೀಮತಿ ರಮಾಭಂಡಾರಿ ವಿರುದ್ಧವಾಗಿ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೇನೆ. ಈಗಾಗಲೇ ಅವರನ್ನು ಅರೆಸ್ಟ್ ಮಾಡಿ ಜಾಮೀನಿನ ಮೇಲೆ ಬಿಟ್ಟಿದ್ದಾರೆಂದು ಕಾಣುತ್ತದೆ. ತನಿಖೆ ಆಗುತ್ತಿದೆ ಮತ್ತು ಕೇಸು ರುಜುವಾತು ಆದರೆ ಕೋರ್ಟಿನಲ್ಲಿ ಮೊಕದ್ದಮೆ ಹೂಡುತ್ತೇವೆ.

ಶ್ರೀ ಕೃಷ್ಣ.—ಅಧ್ಯಕ್ಷರೇ, ...

ಶ್ರೀ ಬಾಬುರೆಡ್ಡಿ ತುಂಗಳ್.—ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಕಳೆದ ಒಂದು ವರ್ಷದಿಂದ ಪ್ರಿನ್ಸಿಪಾಲರಿಲ್ಲ. ಇದರ ಬಗ್ಗೆ ಹೇಳಿ.

(ಮಂತ್ರಿಗಳಿಂದ ಉತ್ತರ ಇಲ್ಲ)

ಶ್ರೀ ಕೃಷ್ಣ.—ನಮ್ಮ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಮೂರು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಿಲ್ಲ. ಅನೇಕ ಬಾರಿ ಈ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿದ್ದೇನೆ. ಆದ್ದರಿಂದ ಈ ವೈದ್ಯರನ್ನು ನೇಮಕ ಮಾಡುತ್ತೀರಾ? ಅನೇಕ ವೈದ್ಯರು ಕನಿಷ್ಟ ಅವಶ್ಯಕತೆ ಯಾದ ವಸತಿ ಸೌಕರ್ಯ ಇಲ್ಲವೆಂದು ನೇಮಕ ಮಾಡಿದರೂ ಕೂಡ ಬರುವುದಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಈ ೮೦ ಜನ ವೈದ್ಯರನ್ನು ಕೆಲಸದ ಮೇಲೆ ಹಾಜರಾಗಿಲ್ಲ ಎಂಬ ಕಾರಣದಿಂದ ಅವರನ್ನು ಕೆಲಸದಿಂದ ಬರ್ತ್‌ಫ್ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮೊದಲು ಕೆಲಸ ಬೇಕು ಅಂತ ಬರುತ್ತಾರೆ ನೇಮಕ ಮಾಡಿದ ಮೇಲೆ ಈ ರೀತಿ ಆಟವಾಡುತ್ತಾರೆ. ಈಗ ವಸತಿ ಸೌಲಭ್ಯ ಕೊಟ್ಟರೂ ಕೂಡ ಅವರು ಹೋಗುತ್ತಿಲ್ಲ. ಮಾನ್ಯ ಸದಸ್ಯರು ಏನು ವೈದ್ಯರಿಲ್ಲ ಎಂದು ಹೇಳಿದ್ದಾರೆ. ಆದಷ್ಟು ಬೇಗ ಈ ಆಸ್ಪತ್ರೆಗಳಿಗೆ ವೈದ್ಯರನ್ನು ಕಳಿಸಿಕೊಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಉಪಕರಣಗಳಿದ್ದರೂ ದಂತ ವೈದ್ಯರಿಲ್ಲ. ರೋಣ ಆಸ್ಪತ್ರೆಯಲ್ಲಿ ಈ ಪರಿಸ್ಥಿತಿ ಇದೆ. ಮೂರು ನಾಲ್ಕು ವರ್ಷಗಳಿಂದಲೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಶ್ರೀ ಹೆಚ್.ಟಿ ಕೃಷ್ಣಪ್ಪ.—ಬೆಳಿಗ್ಗೆಯಿಂದ ರಾಮಾಯಣ ಹೇಳಿದ ಕಥೆಯಾಯಿತು ಇದು. ಡಾಕ್ಟರುಗಳು ಇಲ್ಲವೆಂದು ಒಪ್ಪಿಕೊಂಡಿದ್ದೇವೆ. ಅವರ ನೇಮಕವಾದ ಕೂಡಲೇ ಹಾಕಿಕೊಡುತ್ತೇನೆ. ಹೈಕೋರ್ಟ್ ತೀರ್ಮಾನದ ಕಾರಣದಿಂದ ಲೆಕ್ಚರರ್ಸ್ ಅಪಾಯಿಂಟ್‌ಮೆಂಟ್ ನಿಂತುಹೋಗಿತ್ತು.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ.

"ದಿನಾಂಕ ೩೧-೩-೧೯೮೮ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೩, ೨೯ ಮತ್ತು ೩೦ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೨೩–ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಿಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೨೬,೯೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕು.

ಅಭಿಯಾಚನೆ ಕ್ರಮಾಂಕ ೨೯–ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬೭೭೧೩೬೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಬೇಕು.

ಅಭಿಯಾಚನೆ ಕ್ರಮಾಂಕ ೩೦–ಜನಾರೋಗ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೭,೪೩,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ರೂ. ೧೨,೦೦,೦೦,೦೦೦ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕು.

ಅಧ್ಯಕ್ಷರು.—ಈಗ ಸಭೆ ಮುಕ್ತಾಯವಾಗಿದೆ. ನಾಳೆ ಬೆಳಿಗ್ಗೆ ೯ ಗಂಟೆಗೆ ಮತ್ತೆ ಸಮಾವೇಶಗೊಳ್ಳಲಿದೆ.

ಸದನವು ರಾತ್ರಿ ೭–೧೬ಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧೩–೩–೧೯೮೭ರಂದು ಬೆಳಿಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಿತು.)